ಭಾನುವಾರ, ಸೆಪ್ಟೆಂಬರ್ 4, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 245 | ಪುಟ 18
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಶಿಕ್ಷಕರ ದಿನಾಚರಣೆ ಹೊತ್ತಿನಲ್ಲಿ ಗುರುಪರಂಪರೆಯ ಹಿನ್ನೋಟ ಮತ್ತು ಪ್ರಯೋಗಶೀಲತೆಯ ಮುನ್ನೋಟ

ಸ್ತ್ರೀ ನಿಂದನೆ: ಶಾಸಕ ಅರವಿಂದ ಲಿಂಬಾವಳಿ ವಿರುದ್ಧ ತೀವ್ರ ಆಕ್ರೋಶ 5
ವಿರೋಧ ಪಕ್ಷಗಳ ನಡುವೆ ಒಗ್ಗಟ್ಟು: ನಿತೀಶ್‌ಗೆ ಹೊಣೆ ವಹಿಸಿದ ಜೆಡಿಯು 7
ಪುರುಷತ್ವ ಪರೀಕ್ಷೆಗೆ ಒಳಗಾದ ಶರಣರು 5

ಶೇ 40 ಕಮಿಷನ್ ಆರೋಪ • ಪ್ರಧಾನಿ ಕಚೇರಿಗೆ ದೂರು ಕೊಟ್ಟ 'ರುಪ್ಸಾ'

ಶಿಕ್ಷಣ: ಲಂಚವೇ 'ಭೂಷಣ'!

• ಚಂದ್ರಹಾಸ ಹಿರೇಮಳಲಿ

47,384	16,735	6,495
ಸರ್ಕಾರಿ ಶಾಲೆಗಳು	ಖಾಸಗಿ ಶಾಲೆಗಳು	ಅನುದಾನಿತ ಶಾಲೆಗಳು

ಒಳನೋಟ
ವಿದ್ಯಾ ಕ್ಷೇತ್ರದಲ್ಲೂ ಲಂಚ
ಪ್ರತಿಕ್ರಿಯಿಸಿ: 9606038256
feedback@prajavani.co.in

ಬೆಂಗಳೂರು: ಕಾಮಗಾರಿ ಗುತ್ತಿಗೆಯಲ್ಲಿ ಶೇ 40ರಷ್ಟು ಲಂಚದ ಆರೋಪ ಸರ್ಕಾರವನ್ನು ಮುಜುಗರಕ್ಕೆ ದೂಡಿರುವ ಮಧ್ಯೆಯೇ, ದೇಶಕ್ಕೆ ಸತ್ಪ್ರಜೆಗಳನ್ನು ರೂಪಿಸುವ ಶಿಕ್ಷಣ ವ್ಯವಸ್ಥೆಯಲ್ಲೂ ಭಾರಿ ಪ್ರಮಾಣದ ಲಂಚದ ಹಾವಳಿ ಇದೆ ಎಂಬ ದೂರುಗಳೀಗ ಮುನ್ನೆಲೆಗೆ ಬಂದಿವೆ.

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಂತದಲ್ಲಿ ಲಂಚದ ಪ್ರಮಾಣ ದಿನದಿಂದ ದಿನಕ್ಕೆ ಏರುತ್ತಲೇ ಇರುವ ಬಗ್ಗೆ ರಾಜ್ಯ ಸರ್ಕಾರದ ಸಚಿವರು, ಇಲಾಖೆಯ ಉನ್ನತ ಅಧಿಕಾರಿಗಳಿಗೆ ದೂರು ಕೊಟ್ಟು ಬಸವಳಿದಿದ್ದ ಅನುದಾನರಹಿತ ಖಾಸಗಿ ಶಾಲೆಗಳ ಆಡಳಿತ ಸಂಘವು (ರುಪ್ಸಾ) ಪ್ರಧಾನಿ ನರೇಂದ್ರ ಮೋದಿ ಅವರ ಕಚೇರಿಗೆ ಈ ಬಗ್ಗೆ ಪತ್ರ ಬರೆದು ಅಳಲು ತೋಡಿಕೊಂಡಿದೆ. ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಬಿ.ಸಿ. ನಾಗೇಶ್ ಅವರು ಈ ಆರೋಪವನ್ನು ಸ್ಪಷ್ಟ ಮಾತುಗಳಿಂದ ಅಲ್ಲಗಳೆದಿದ್ದಾರೆ. ಅಲ್ಲದೇ, ರುಪ್ಸಾ ಅಧ್ಯಕ್ಷರ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡುವುದಾಗಿಯೂ ಎಚ್ಚರಿಕೆ ನೀಡಿದ್ದಾರೆ.

ಕಾಮಗಾರಿ ನಡೆಸುವ ಇಲಾಖೆಗಳಲ್ಲಿ ಹಾಸು ಹೊಕ್ಕಾಗಿದ್ದ ಭ್ರಷ್ಟಾಚಾರದ ಕರಾಳಮುಖ, ಶಿಕ್ಷಣಕ್ಕೂ ತನ್ನ ಕೆನ್ನಾಲಿಗೆ ಚಾಚಿರುವುದು ನಾಡಿನ ಭವಿಷ್ಯವನ್ನೆ ಅಂಧಕಾರಕ್ಕೆ ತಳ್ಳಲಿದೆ ಎಂಬ ಆತಂಕವನ್ನು ಶೈಕ್ಷಣಿಕ ವಲಯದಲ್ಲಿ ಮೂಡಿಸಿದೆ.

ಇಲಾಖೆಯ ಅಧಿಕಾರಿಗಳು ಯಾವುದಕ್ಕೆ ಎಷ್ಟೆಲ್ಲ ಲಂಚ ಪಡೆಯುತ್ತಾರೆ ಎನ್ನುವುದನ್ನು ರುಪ್ಸಾ ಪ್ರಧಾನಮಂತ್ರಿಗೆ ಬರೆದ ಪತ್ರ ದಲ್ಲಿ ಎಳೆಎಳೆಯಾಗಿ ಬಿಚ್ಚಿಡಲಾಗಿದೆ. ಕೋವಿಡೋತ್ತರ ಅವಧಿಯಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯನ್ನು ನಿರ್ವಹಿಸುವ ಅಧಿಕಾರಿಗಳ ಭ್ರಷ್ಟಾಚಾರ ದುಪ್ಪಟ್ಟಾಗಿದೆ.

'ಮೂಲ ಸೌಕರ್ಯ ಇಲ್ಲದಿದ್ದರೂ, ಹಣ ಪಡೆದು ಈ ಹಿಂದೆಯೇ ಖಾಸಗಿ ಶಾಲೆಗಳ ಆರಂಭಕ್ಕೆ ಬೇಕಾಬಿಟ್ಟಿ ಅನುಮತಿ ನೀಡಿದ್ದ ಶಿಕ್ಷಣ ಇಲಾಖೆಯ ಅಧಿಕಾರಿಗಳು ಈಗ ಕಟ್ಟಡ ಸುರಕ್ಷತೆ, ಅಗ್ನಿ ಅವಘಡಗಳ ಸುರಕ್ಷತೆಯ ಖಾತರಿ ನಿಯಮಗಳ ಪಾಲನೆ ಹೆಸರಿನಲ್ಲಿ ಅಡ್ಡ ವ್ಯವಹಾರ ನಡೆಸುತ್ತಿದ್ದಾರೆ' ಎಂದು ರುಪ್ಸಾ ಆರೋಪಿಸಿದೆ.

ಖಾಸಗಿ ಶಾಲೆಗಳಿಂದ ಎತ್ತುವಳಿ ಮಾಡುವ ಬಿಇಒ, ಡಿಡಿಪಿಐ ಮತ್ತಿತರ ಅಧಿಕಾರಿಗಳು ತಮಗೆ ಬೇಕಾದ ಜಿಲ್ಲೆ, ತಾಲ್ಲೂಕು, ಆಯಕಟ್ಟಿನ ಸ್ಥಳಗಳಿಗೆ ವರ್ಗಾವಣೆ ಮಾಡಿಸಿಕೊಳ್ಳಲು ಮೇಲಧಿಕಾರಿಗಳಿಗೆ, ಕೆಲವು ಜನಪ್ರತಿನಿಧಿಗಳಿಗೆ ದೊಡ್ಡಮೊತ್ತವನ್ನೇ ಪಾವತಿಸುತ್ತಾರೆ. ಒಂದು ಸ್ಥಳದಲ್ಲಿನ ಗರಿಷ್ಠ ಸೇವಾವಧಿ ಮೊದಲು ಎರಡು ವರ್ಷ ಇತ್ತು. ಆ ನಿಯಮ ಮುರಿದ ಹಿಂದಿನ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಅದನ್ನು ಒಂದು ವರ್ಷಕ್ಕೆ ಇಳಿಸಿದರು. ವರ್ಷಕ್ಕೊಮ್ಮೆ ವರ್ಗಾವಣೆ ನಡೆಯತೊಡಗಿದ್ದರಿಂದಾಗಿ, ಆಯಕಟ್ಟಿನ ಹುದ್ದೆ ಬೇಕಾದ ಅಧಿಕಾರಿಗಳು ವರ್ಗಾವಣೆಗೆ ಖರ್ಚು ಮಾಡಲು ತಾವು ಪಡೆಯುವ ಲಂಚದ ಮೊತ್ತವನ್ನು ಹೆಚ್ಚಿಸಿದರು ಎಂದು ಹೆಸರು ಹೇಳಬಯಸದ ಶಿಕ್ಷಣಾಧಿಕಾರಿಗಳು ತಮ್ಮ ಅಂತರಂಗದ ಮಾತುಗಳನ್ನು ಬಿಚ್ಚಿಡುತ್ತಾರೆ.



ಶಿಕ್ಷಣ ಇಲಾಖೆಯಲ್ಲಿ ಭ್ರಷ್ಟಾಚಾರ ಮಿತಿ ಮೀರಿದೆ ಎಂಬ 'ರುಪ್ಸಾ' ಆರೋಪ ಆಧಾರರಹಿತ. ಈ ಕುರಿತು ಇಲಾಖೆಯ ಅಧಿಕಾರಿಗಳು ಶೀಘ್ರ ಮಾಹಿತಿ ನೀಡುವರು
ಬಿ.ಸಿ.ನಾಗೇಶ್, ಶಾಲಾ ಶಿಕ್ಷಣ, ಸಾಕ್ಷರತಾ ಸಚಿವ

ಭ್ರಷ್ಟ ಅಧಿಕಾರಿಗಳ ವಿರುದ್ಧ ದಾಖಲೆ ಸಹಿತ ದೂರು ನೀಡಿದರೂ, ಅವರಿಂದಲೇ ಮತ್ತಷ್ಟು ಲಾಭ ಮಾಡಿಕೊಳ್ಳುವ ವ್ಯವಸ್ಥೆ ಶಿಕ್ಷಣ ಇಲಾಖೆಯಲ್ಲಿ ಇದೆ.
ಲೋಕೇಶ್ ತಾಳಿಕಟ್ಟೆ, ಅಧ್ಯಕ್ಷ, ರುಪ್ಸಾ

ಹೊಸ ಶಾಲೆಗಳಿಗೆ ತ್ರಿಸದಸ್ಯ ಸಮಿತಿ

ರಾಜ್ಯದಲ್ಲಿ ಹೊಸ ಶಾಲೆಗಳನ್ನು ಆರಂಭಿಸಲು ಅರ್ಜಿ ಸಲ್ಲಿಸುವ ಶಾಲೆಗಳಿಗೆ ಭೇಟಿ ನೀಡಿ ತಪಾಸಣೆ ನಡೆಸಲು ಶಿಕ್ಷಣ ಇಲಾಖೆ ತ್ರಿಸದಸ್ಯ ಸಮಿತಿ ನೇಮಿಸಿದೆ.

ಆಯಾ ಜಿಲ್ಲೆಯ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರ ಕಚೇರಿಯ ಒಬ್ಬ ಅಧಿಕಾರಿ, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಪ್ರಾಂಶುಪಾಲರು, ಹಿರಿಯ ಮುಖ್ಯ ಶಿಕ್ಷಕರೊಬ್ಬರು ಸಮಿತಿಯಲ್ಲಿರುತ್ತಾರೆ. ಸಮಿತಿಯ ಸದಸ್ಯರ ಮನಸ್ಥಿತಿಯ ಆಧಾರದಲ್ಲಿ ಭ್ರಷ್ಟಾಚಾರ ಅಥವಾ ಭ್ರಷ್ಟಾಚಾರರಹಿತವಾಗಿ ಅನುಮತಿ ಪಡೆಯುವ ಪ್ರಕ್ರಿಯೆಗಳು ನಡೆಯುತ್ತವೆ. ನಂತರ ಬಿಇಒ, ಡಿಡಿಪಿಐ ಕಚೇರಿಗಳಲ್ಲಿ ಮಾಮೂಲಿ ಕೊಡಲೇಬೇಕಾಗುತ್ತದೆ ಎನ್ನುತ್ತಾರೆ ಈಚೆಗಷ್ಟೆ ಹೊಸ ಶಾಲೆ ಆರಂಭಕ್ಕೆ ಅನುಮತಿ ಪಡೆದಿರುವ ಓರ್ವ ವ್ಯಕ್ತಿ.

6ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 6

ಇ.ಡಿ ದಾಳಿ: ₹ 17 ಕೋಟಿ ಜಪ್ತಿ

ಬೆಂಗಳೂರು: ಹಣದ ಅಕ್ರಮ ವರ್ಗಾವಣೆ ಆರೋಪದ ಮೇಲೆ ರೇಜರ್ ಪೇ, ಕ್ಯಾಶ್ ಫ್ರೀ ಮತ್ತು ಪೇಟಿಎಂ ಪೇಮೆಂಟ್ ಸರ್ವಿಸಸ್ ಕಚೇರಿಗಳಲ್ಲಿ ಶುಕ್ರವಾರ ಶೋಧ ನಡೆಸಿರುವ ಜಾರಿ ನಿರ್ದೇಶನಾಲಯ (ಇ.ಡಿ), ಈ ಕಂಪನಿಗಳ ವಿವಿಧ ಬ್ಯಾಂಕ್ ಖಾತೆಗಳಲ್ಲಿದ್ದ ₹17 ಕೋಟಿಯನ್ನು ಜಪ್ತಿ ಮಾಡಿದೆ.

ಮೊಬೈಲ್ ಅಪ್ಲಿಕೇಷನ್ ಮೂಲಕ ಸಾಲ ನೀಡಿ, ಕಿರುಕುಳ ನೀಡುತ್ತಿರುವ ಸಂಸ್ಥೆಗಳ ವಿರುದ್ಧ ನಗರದ ಸಿಸಿಬಿ ಪೊಲೀಸರು ದಾಖಲಿಸಿರುವ 18 ಎಫ್‌ಐಆರ್‌ಗಳ ಅಡಿಯಲ್ಲಿ ನಡೆದಿರುವ ತನಿಖೆಯಲ್ಲಿ ಪತ್ತೆಯಾಗಿರುವ ಅಂಶವನ್ನು ಆಧರಿಸಿ ಇ.ಡಿ ಪ್ರತ್ಯೇಕ ತನಿಖೆ ಆರಂಭಿಸಿದೆ. ಅದರ ಭಾಗವಾಗಿ ನಗರದಲ್ಲಿರುವ ರೇಜರ್ ಪೇ, ಕ್ಯಾಶ್ ಫ್ರೀ ಮತ್ತು ಪೇಟಿಎಂ ಕಚೇರಿಗಳಲ್ಲಿ ಶೋಧ ನಡೆಸಲಾಗಿದೆ ಎಂದು ತನಿಖಾ ಸಂಸ್ಥೆ ತಿಳಿಸಿದೆ.

8ನೇ ಪುಟ ನೋಡಿ

ಭೂ ಕಬಳಿಕೆ: ಸರ್ಕಾರಕ್ಕೆ ಕೊನೆಗೂ ವರದಿ ಸಲ್ಲಿಸಿದ ಬಿಬಿಎಂಪಿ

ಬೇಗ್ ಅಕ್ರಮಕ್ಕೆ ಜೈರಾಜ್ ಸಹಕಾರ!

• ಮಂಜುನಾಥ ಹೆಬ್ಬಾರ್

ನವದೆಹಲಿ: ಕರ್ನಾಟಕದ ರಾಜಕಾರಣಿ ಆರ್. ರೋಷನ್ ಬೇಗ್ ಭೂ ಕಬಳಿಕೆ ಪ್ರಕರಣದಲ್ಲಿ ಕೈಜೋಡಿಸಿದ ಅಧಿಕಾರಿಗಳ ಪಟ್ಟಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು (ಬಿಬಿಎಂಪಿ) ಕರ್ನಾಟಕ ಸರ್ಕಾರಕ್ಕೆ ಕೊನೆಗೂ ನೀಡಿದ್ದು, ಅದರಲ್ಲಿ ನಿವೃತ್ತ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಕೆ.ಜೈರಾಜ್ ಸೇರಿ ಐದು ಅಧಿಕಾರಿಗಳ/ನೌಕರರ ಹೆಸರು ಇದೆ.

ಮುಖ್ಯಾಂಶಗಳು

- ₹30 ಕೋಟಿ ಜಾಗವನ್ನು ₹1.68 ಕೋಟಿಗೆ ಹಂಚಿಕೆ ಮಾಡಿದ್ದ ಪ್ರಕರಣ
- ತನಿಖೆಗೆ ಪೂರ್ವಾನುಮತಿ ನೀಡುವಂತೆ ಕೋರಿದ್ದ ಎಸಿಬಿ
- ಆರು ತಿಂಗಳು ಕಳೆದರೂ ಮಾಹಿತಿ ಕೊಡದೆ ಸತಾಯಿಸಿದ್ದ ಬಿಬಿಎಂಪಿ

ಪ್ರಜಾವಾಣಿ ವಿಶೇಷ

'ರೋಷನ್ ಬೇಗ್ ಮಾಲೀಕತ್ವದ ಡ್ಯಾನಿಷ್ ಪಬ್ಲಿಕೇಷನ್ ಸಂಸ್ಥೆಗೆ 2007ರ ಫೆಬ್ರುವರಿ 22ರಂದು ಕ್ರಯಪತ್ರ ಮಾಡಿಕೊಟ್ಟ ಬಿಬಿಎಂಪಿ ಅಧಿಕಾರಿಗಳು ನಿವೃತ್ತಿ ಹೊಂದಿದ್ದಾರೆ. ಅವರ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಅವರ ವಿರುದ್ಧ ಕ್ರಮ ಕೈಗೊಳ್ಳಬಹುದು' ಎಂದು ಬಿಬಿಎಂಪಿ ಉಪ ಆಯುಕ್ತರು (ಆಡಳಿತ) ವರದಿಯಲ್ಲಿ ಉಲ್ಲೇಖಿಸಲಾಗಿದ್ದಾರೆ. 'ಬಿಬಿಎಂಪಿ ಆಯುಕ್ತರಾಗಿದ್ದ ಕೆ.ಜೈರಾಜ್, ಪೂರ್ವ ವಲಯದ ಜಂಟಿ ಆಯುಕ್ತರಾಗಿದ್ದ ಎಸ್.ಎನ್.ನಾಗರಾಜ್, ಕಂದಾಯ ಅಧಿಕಾರಿಯಾಗಿದ್ದ (ಶಿವಾಜಿನಗರ) ಎ. ಲಕ್ಷ್ಮಯ್ಯ, ಸಹಾಯಕ ಕಂದಾಯ ಅಧಿಕಾರಿಯಾಗಿದ್ದ ಶ್ರೀನಿವಾಸಮೂರ್ತಿ, ಕಂದಾಯ ಪರಿವೀಕ್ಷಕರಾಗಿದ್ದ ಎನ್.ನರಸಪ್ಪ ಕ್ರಯಪತ್ರ ಮಾಡಿಕೊಟ್ಟವರು. ಜೈರಾಜ್ ಹಾಗೂ ಎಸ್.ಎನ್.ನಾಗರಾಜ್ ಅವರು ಐಎಎಸ್/ಕೆಎಎಸ್ ಅಧಿಕಾರಿಗಳಾಗಿ ನಿವೃತ್ತರಾಗಿದ್ದು, ಅವರ ವಿರುದ್ಧ ತನಿಖೆಗೆ ಪೂರ್ವಾನುಮತಿಯನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯಿಂದ ಪಡೆಯಬಹುದು' ಎಂದು ಉಪ ಆಯುಕ್ತರು ತಿಳಿಸಿದ್ದಾರೆ. ಈ ಬಗ್ಗೆ ಪ್ರತಿಕ್ರಿಯೆಗೆ ಕೆ.ಜೈರಾಜ್ ಲಭ್ಯರಾಗಲಿಲ್ಲ.

ಡ್ಯಾನಿಷ್ ಪಬ್ಲಿಕೇಷನ್ ಸಂಸ್ಥೆಗೆ ಬೆಂಗಳೂರಿನಲ್ಲಿ ₹30 ಕೋಟಿ ಬೆಲೆ ಬಾಳುವ ಜಾಗವನ್ನು ₹1.68 ಕೋಟಿಗೆ ಹಂಚಿಕೆ ಮಾಡಿ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟು ಮಾಡಿದ ಪ್ರಕರಣ ಇದಾಗಿದೆ.

ಐಎಂಎ ಪ್ರಕರಣದಲ್ಲಿ ರೋಷನ್ ಬೇಗ್ ಅವರನ್ನು ಬಂಧಿಸಲಾಗಿತ್ತು. ಆ ಬಳಿಕ ಬೇಗ್ ಮನೆ ಮೇಲೆ ಜಾರಿ ನಿರ್ದೇಶನಾಲಯದ (ಇ.ಡಿ.) ಅಧಿಕಾರಿಗಳು ದಾಳಿ ನಡೆಸಿದ್ದರು.

5ನೇ ಪುಟ ನೋಡಿ

ಚಿನಕುರಳಿ
ಪ್ರಕಾಶ್ ಶೆಟ್ಟಿ

ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಆದೇಶ ರದ್ದುಪಡಿಸಿದ ಹೈಕೋರ್ಟ್

ಸಿಇಟಿ: ಹೊಸದಾಗಿ ರ್‍ಯಾಂಕ್ ಪಟ್ಟಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ, '2020-21ನೇ ಸಾಲಿನಲ್ಲಿ ದ್ವಿತೀಯ ಪಿಯು ತೇರ್ಗಡೆಯಾದ ವಿದ್ಯಾರ್ಥಿಗಳು ಗಳಿಸಿದ ಶೇ 50 ಹಾಗೂ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ (ಸಿಇಟಿ) ಪಡೆದ ಶೇ 50ರಷ್ಟು ಅಂಕಗಳನ್ನು ಪರಿಗಣಿಸಿ ಹೊಸದಾಗಿ ರ್‍ಯಾಂಕ್ ಪಟ್ಟಿ ಪ್ರಕಟಿಸಬೇಕು' ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ (ಕೆಇಎ) ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಚಿಕ್ಕಮಗಳೂರಿನ ಆರ್. ಈಶ್ವರ್ ಸೇರಿದಂತೆ 50 ವಿದ್ಯಾರ್ಥಿಗಳು ಸಲ್ಲಿಸಿದ್ದ ಏಳು ಪ್ರತ್ಯೇಕ ರಿಟ್ ಅರ್ಜಿಗಳ ಮೇಲಿನ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಎಸ್. ಆರ್. ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶನಿವಾರ ಪ್ರಕಟಿಸಿದ್ದು ವಿದ್ಯಾರ್ಥಿಗಳ ಮನವಿಯನ್ನು ಪುರಸ್ಕರಿಸಿದೆ. 'ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ 2020-21ನೇ ಸಾಲಿನ ಪಿಯು ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಪರಿಗಣಿಸಲಾಗದು' ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ 2022 ಜುಲೈ 30ರಂದು ಹೊರಡಿಸಿದ್ದ ಆದೇಶವನ್ನು ರದ್ದುಗೊಳಿಸಿದೆ.

'ಕೆಇಎ ಆದೇಶವು ಸ್ವೇಚ್ಛೆಯಿಂದ ಕೂಡಿದ್ದು, ಅತಾರ್ಕಿಕವಾಗಿದೆ ಮತ್ತು ವಿವೇಚನಾಯುತವಾಗಿಲ್ಲ. ಸಿಇಟಿ-2022ರ ಮೌಲ್ಯಮಾಪನವು ಪುನರಾವರ್ತಿತ ವಿದ್ಯಾರ್ಥಿಗಳಿಗೆ ತಾರತಮ್ಯ ಎಸಗುವಂತಿದೆ' ಎಂಬ ಅರ್ಜಿದಾರರ ವಾದವನ್ನು ಎತ್ತಿ ಹಿಡಿದಿರುವ ನ್ಯಾಯಪೀಠ, 'ವೃತ್ತಿಪರ ಶಿಕ್ಷಣ ಸಂಸ್ಥೆಗಳಲ್ಲಿನ ಸರ್ಕಾರಿ ಸೀಟುಗಳ ಪ್ರವೇಶಕ್ಕಾಗಿ ಕರ್ನಾಟಕ ಅಭ್ಯರ್ಥಿಗಳ ಆಯ್ಕೆ ನಿಯಮಗಳು-2006ರ ಅನುಸಾರ ರಿ-ಡೂ ಮಾಡಬೇಕು' ಎಂದು ನಿರ್ದೇಶಿಸಿದೆ.

'ಪುನರಾವರ್ತಿತ ವಿದ್ಯಾರ್ಥಿಗಳ ಪಿಯುಸಿ ಅಂಕಗಳನ್ನು ಪರಿಗಣಿಸದೇ ಸಿಇಟಿ ರ್‍ಯಾಂಕ್ ಪಟ್ಟಿ ಪ್ರಕಟಿಸಿರುವುದು ಸಿಇಟಿ-2006ರ ಪ್ರವೇಶ ನಿಯಮಗಳ ಉಲ್ಲಂಘನೆಯಾಗಿದೆ. ಇದರಿಂದ, ಪುನರಾವರ್ತಿತ ವಿದ್ಯಾರ್ಥಿಗಳ ರ್‍ಯಾಂಕಿಂಗ್ ಶ್ರೇಣಿ ಕಡಿಮೆಯಾಗಲಿದೆ' ಎಂದು ಅರ್ಜಿದಾರ ವಿದ್ಯಾರ್ಥಿಗಳು ಆಕ್ಷೇಪಿಸಿದ್ದರು.

6 ನೇ ಪುಟ ನೋಡಿ

ಹಿರಿಯ ದಂಪತಿಯ ವಿಶಿಷ್ಟ ಕಾರ್ಯ: 18 ಸಾವಿರ ಮಕ್ಕಳಿಗೆ ಉಚಿತ ಬೋಧನೆ

'ಫ್ರೀ ಕೋಚಿಂಗ್ ವಿದ್ಯಾ': ಬಡ ಮಕ್ಕಳಿಗೆ ಆಸರೆ

• ಸಚ್ಚಿದಾನಂದ ಕುರಗುಂದ

ಬೆಂಗಳೂರು: ಕೋವಿಡ್ ಸಮಯದಲ್ಲಿ ಬಡ ಮಕ್ಕಳಿಗೆ ಉಚಿತ ಶಿಕ್ಷಣ ನೀಡುವ ಸದಾಶಯದಿಂದ ಹಿರಿಯ ದಂಪತಿ ಆರಂಭಿಸಿದ 'ಫ್ರೀ ಕೋಚಿಂಗ್ ವಿದ್ಯಾ' ಇವತ್ತು 18 ಸಾವಿರ ಮಕ್ಕಳಿಗೆ ನೆರವಾಗುತ್ತಿದೆ.

ಇಬ್ಬರು ಮಕ್ಕಳಿಗೆ ಉಚಿತ ಶಿಕ್ಷಣ ನೀಡುವುದರ ಮೂಲಕ ಆರಂಭವಾದ ಈ ಯೋಜನೆ ಈಗ ದೇಶದಾದ್ಯಂತ ವಿಸ್ತರಿಸಿದೆ. ಆನ್‌ಲೈನ್ ಮತ್ತು ಆಫ್‌ಲೈನ್ ಮೂಲಕ ತರಗತಿಗಳನ್ನು ನಡೆಸಲಾಗುತ್ತದೆ.

ಬೆಂಗಳೂರಿನ ರಾಜರಾಜೇಶ್ವರಿ ನಗರದಲ್ಲಿ ವಾಸವಾಗಿರುವ ನಿವೃತ್ತ ಎಂಜಿನಿಯರ್ 84 ವರ್ಷದ ಬದರೀನಾಥ ವಿಠ್ಠಲ ಮತ್ತು ಅವರ ಪತ್ನಿ 78 ವರ್ಷದ ಇಂದಿರಾ ವಿಠ್ಠಲ ಅವರು, ಕೋವಿಡ್ ಸಂದರ್ಭದಲ್ಲಿ ಆರಂಭಿಸಿದ ಆನ್‌ಲೈನ್ ಮೂಲಕ ಶಿಕ್ಷಣ ನೀಡುವ ಕಾರ್ಯಕ್ಕೆ ಅಭೂತಪೂರ್ವ ಸ್ಪಂದನೆ ದೊರೆಯಿತು. ಇವರ ಕಾರ್ಯಕ್ಕೆ ಸ್ವಯಂ ಸೇವಕರ ದಂಡು ಕೈಜೋಡಿಸಿತು. ಕೋವಿಡ್ ಕಡಿಮೆಯಾದ ನಂತರವೂ ಈ ಕಾಯಕವನ್ನು ದಂಪತಿ ಮುಂದುವರಿಸಿದ್ದಾರೆ.

ಒಳ್ಳೆ ಸುದ್ದಿ

ಬದರೀನಾಥ ವಿಠ್ಠಲ ಮತ್ತು ಇಂದಿರಾ ವಿಠ್ಠಲ

ಪಿಯು ವಿದ್ಯಾರ್ಥಿಗಳಿಗೆ ವಾರಾಂತ್ಯದಲ್ಲಿ ಕಂಪ್ಯೂಟರ್ ಸೈನ್ಸ್ ತರಗತಿಗಳನ್ನು ಕಳೆದ ಒಂದೂವರೆ ವರ್ಷದಿಂದ ತೆಗೆದುಕೊಳ್ಳುತ್ತಿದ್ದೇನೆ. ವಿದ್ಯಾರ್ಥಿಗಳ ಶೈಕ್ಷಣಿಕ ಮಟ್ಟ ಸುಧಾರಿಸಿದ್ದು, ಉತ್ತಮ ಫಲಿತಾಂಶ ದೊರೆಯುತ್ತಿದೆ. ಬದರಿನಾಥ ಅವರ ಕಾರ್ಯ ಶ್ಲಾಘನೀಯ
ಸತೀಶ್, ಸಾಫ್ಟ್‌ವೇರ್ ಎಂಜಿನಿಯರ್, ವಿಪ್ರೊ

'ಫ್ರೀ ಕೋಚಿಂಗ್ ವಿದ್ಯಾ' ಸ್ಥಾಪಕರಾದ ಬದರೀನಾಥ್ ಅವರು ಬಾಂಬೆ ಐಐಟಿಯಲ್ಲಿ ಎಂ.ಟೆಕ್ ಪದವಿ ಪಡೆದು, ದೇಶದ ಹಲವೆಡೆ ಕಾರ್ಯನಿರ್ವಹಿಸಿ ನಿವೃತ್ತರಾಗಿದ್ದಾರೆ. ಇಂದಿರಾ ಅವರು ನಿವೃತ್ತ ಶಿಕ್ಷಕಿ ಮತ್ತು ಹೊಸಪೇಟೆಯಲ್ಲಿರುವ ಏಳು ಶಾಲೆಗಳ ಸ್ಥಾಪಕರಲ್ಲಿ ಒಬ್ಬರಾಗಿದ್ದಾರೆ.

ನಾಲ್ಕನೇ ತರಗತಿಯಿಂದ ಪದವಿ ವಿದ್ಯಾರ್ಥಿಗಳವರೆಗೆ ಬದರೀನಾಥ ವಿಠ್ಠಲ ಅವರ ನೇತೃತ್ವದ ತಂಡ ತರಬೇತಿ ನೀಡುತ್ತಿದೆ. ನೀಟ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೂ ತರಬೇತಿ ನೀಡುತ್ತಿರುವುದರಿಂದ ವಿದ್ಯಾರ್ಥಿಗಳ ಸಂಖ್ಯೆಯೂ ದಿನೇ ದಿನೇ ಹೆಚ್ಚುತ್ತಿದೆ.

ವಿವಿಧ ವಿಶ್ವವಿದ್ಯಾಲಯಗಳು, ಕಾಲೇಜುಗಳ 80ಕ್ಕೂ ಹೆಚ್ಚು ಶಿಕ್ಷಕರು ಮತ್ತು ವಿವಿಧ ಕಂಪನಿಗಳಲ್ಲಿ ಕಾರ್ಯನಿರ್ವಹಿಸುವ 200ಕ್ಕೂ ಹೆಚ್ಚು ಸ್ವಯಂಸೇವಕರು ಇವರ ವಿದ್ಯಾದಾನದ ಕಾರ್ಯಕ್ಕೆ ಕೈಜೋಡಿಸಿದ್ದಾರೆ. ಇವರಲ್ಲಿ ಹಲವರು ಸಾಫ್ಟ್‌ವೇರ್ ಎಂಜಿನಿಯರ್‌ಗಳು, ಲೆಕ್ಕ ಪರಿಶೋಧಕರು ಸೇರಿದ್ದಾರೆ.

6ನೇ ಪುಟ ನೋಡಿ

ಏಳು ಕಡೆ ಕಾರ್ಯಾಚರಣೆ ಮುಂದುವರಿಸಿದ ಬಿಬಿಎಂಪಿ

ರಾಜಕಾಲುವೆ ಒತ್ತುವರಿ ತೆರವು ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಕಾಲುವೆ ಒತ್ತುವರಿ ತೆರವು ಕಾರ್ಯವನ್ನು ಬಿಬಿಎಂಪಿ ಆರಂಭಿಸಿದ್ದು, ಏಳು ಕಡೆಗಳಲ್ಲಿ ಕಾರ್ಯಾಚರಣೆ ಮುಂದುವರಿದಿದೆ.

ಯಲಹಂಕ ವಲಯ ವ್ಯಾಪ್ತಿಯ ವಿದ್ಯಾರಣ್ಯಪುರದ ಬಸವಸಮಿತಿ ಲೇಔಟ್‌ನ ಹಲವೆಡೆ 195 ಅಡಿಯಷ್ಟು ಉದ್ದದ ಕಾಂಪೌಂಡ್‌ಗಳನ್ನು ತೆರವುಗೊಳಿಸಲಾಗಿದೆ. ಬೊಮ್ಮನಹಳ್ಳಿ ವಲಯದ ಅಂಜನಾಪುರ ವಾರ್ಡ್‌ನ 60 ಅಡಿ ರಸ್ತೆ ಬಳಿ ಒತ್ತುವರಿ ಯಾಗಿದ್ದ 2 ಗುಂಟೆಯಷ್ಟು ರಾಜಕಾಲುವೆ ಜಾಗ ವಶಕ್ಕೆ ಪಡೆಯಲಾಗಿದೆ ಎಂದು ಬಿಬಿಎಂಪಿ ತಿಳಿಸಿದೆ.

ವಸಂತಪುರ ವಾರ್ಡ್‌ನ ಸತ್ಯಮ್ಮನಕುಂಟೆಯಲ್ಲಿ 35 ಮೀಟರ್ ಉದ್ದದ ಕಾಂಪೌಂಡ್ ತೆರವುಗೊಳಿಸಿ, 4 ಗುಂಟೆ ಜಾಗ ವಶಕ್ಕೆ ಪಡೆಯಲಾಗಿದೆ. ಮಂಗಮ್ಮನಪಾಳ್ಯದ ರಸ್ತೆ ಬದಿಯ ರಾಜಕಾಲುವೆಯ ಮೇಲೆಯೇ ಅಳವಡಿಸಿದ್ದ ತಾತ್ಕಾಲಿಕ ಶೆಡ್ ತೆರವುಗೊಳಿಸಲಾಗಿದೆ ಎಂದು ಅಧಿಕಾರಿಗಳು ವಿವರಿಸಿದ್ದಾರೆ.

ರಾಜರಾಜೇಶ್ವರಿನಗರ ವಲಯದ ಲಿಂಗಧೀರನಹಳ್ಳಿಯ ನಾಟಕದ ಚೆನ್ನಪ್ಪ ಬಡಾವಣೆಯ15 ಅಡಿ ಉದ್ದ ಹಾಗೂ 6 ಅಡಿ ಎತ್ತರದ ಕಾಂಪೌಂಡ್ ತೆರವುಗೊಳಿಸಲಾಗಿದೆ. ದಾಸರಹಳ್ಳಿ ವಲಯದ ಹೆಗ್ಗನಹಳ್ಳಿಯ ಭೈರವೇಶ್ವರ ಇಂಡಸ್ಟ್ರಿಯಲ್ ಎಸ್ಟೇಟ್‌ನಲ್ಲಿ ರಾಜಕಾಲುವೆಯ ಮೇಲೆ ನಿರ್ಮಿಸಿದ್ದ 17 ಮೀಟರ್ ಉದ್ದ ಹಾಗೂ 8 ಅಡಿ ಎತ್ತರದ ತಡೆಗೋಡೆ ತೆರವುಗೊಳಿಸಲಾಗಿದೆ. 20 ಚದರ ಅಡಿ ಜಾಗ ವಶಕ್ಕೆ ಪಡೆಯಲಾಗಿದೆ ಎಂದು ಹೇಳಿದ್ದಾರೆ.

ಮಹದೇವಪುರ ವಲಯದ ವರ್ತೂರು ಕೋಡಿ ಬಳಿ ರಾಜಕಾಲುವೆ ಮೇಲೆಯೇ ನಿರ್ಮಿಸಿದ್ದ ಕಾಂಪೌಂಡ್ ತೆರವುಗೊಳಿಸಲಾಗಿದೆ. 8 ಮೀಟರ್ ಅಗಲದ ರಸ್ತೆ ಸೇರಿ ಸುಮಾರು 300 ಮೀಟರ್ ಒತ್ತುವರಿ ಇದ್ದು, ಈ ಪೈಕಿ 70 ಮೀಟರ್ ತೆರವು ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ಪೂರ್ವ ವಲಯದ ಇಂದಿರಾನಗರದ 80 ಅಡಿ ರಸ್ತೆಯಲ್ಲಿ (ಬಿಎಸ್‌ಎನ್‌ಎಲ್ ಕಚೇರಿ ಹತ್ತಿರ) ರಾಜಕಾಲುವೆ ಮೇಲೆ ಅಳವಡಿಸಿದ್ದ ಸುಮಾರು 5 ಮೀಟರ್ ಉದ್ದದ ಸ್ಲ್ಯಾಬ್‌ಗಳನ್ನು ತೆಗೆಯಲಾಗಿದೆ. ತೆರವಾಗಿರುವ ಜಾಗದಲ್ಲಿ ಮತ್ತೊಮ್ಮೆ ಒತ್ತುವರಿ ಮಾಡಿಕೊಳ್ಳದಂತೆ ಎಚ್ಚರಿಕೆ ನೀಡಲಾಗಿದೆ. ಬೇರೆಡೆಯೂ ಕಾರ್ಯಾಚರಣೆ ಮುಂದುವರಿಯಲಿದೆ ಎಂದು ಅಧಿಕಾರಿಗಳು ವಿವರಿಸಿದ್ದಾರೆ.



ಹೆಗ್ಗನಹಳ್ಳಿಯಲ್ಲಿ ರಾಜಕಾಲುವೆ ಮೇಲೆ ನಿರ್ಮಾಣವಾಗಿದ್ದ ತಡೆಗೋಡೆ ತೆರವುಗೊಳಿಸುತ್ತಿರುವುದು

‘ದೊಡ್ಡ ಕಟ್ಟಡಗಳ ತೆರವಿಗೆ ಮೊದಲ ಆದ್ಯತೆ’

ರಾಜಕಾಲುವೆ ಒತ್ತುವರಿ ಮಾಡಿ ಕಟ್ಟಿರುವ ದೊಡ್ಡ ಕಟ್ಟಡಗಳನ್ನು ತೆರವುಗೊಳಿಸುವುದು ಮೊದಲ ಆದ್ಯತೆ ಎಂದು ಪಾಲಿಕೆ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

‘ರಾಜಕಾಲುವೆಯ ಬಫರ್ ವಲಯದಲ್ಲಿ ಸಣ್ಣ ಗುಡಿಸಲು ಮತ್ತು ಟೆಂಟ್‌ಗಳನ್ನು ನಿರ್ಮಿಸಿಕೊಂಡಿರುವ ಬಡವರು ಮತ್ತು ಕಾರ್ಮಿಕರಿದ್ದಾರೆ. ಅವರನ್ನು ಕೂಡಲೇ ತೆರವು ಮಾಡುವುದಿಲ್ಲ. ಅವರಿಗೆ ಬದಲಿ ಜಾಗ ಕಲ್ಪಿಸಿದ ಬಳಿಕ ತೆರವು ಮಾಡಬೇಕಾಗುತ್ತದೆ’ ಎಂದು ಹೇಳಿದರು.

‘ರಾಜಕಾಲುವೆ ಮೇಲೆ ಮತ್ತು ಬಫರ್ ವಲಯದಲ್ಲಿರುವ ದೊಡ್ಡ ಕಟ್ಟಡಗಳಿರುವ 500ಕ್ಕೂ ಹೆಚ್ಚು ಸ್ಥಳಗಳನ್ನು ಗುರುತಿಸಿದ್ದೇವೆ. ಕಾರ್ಯಾಚರಣೆ ಆರಂಭವಾಗಿದ್ದು, ಹಂತ–ಹಂತವಾಗಿ ಎಲ್ಲಾ ಒತ್ತುವರಿಯೂ ತೆರವಾಗಲಿದೆ. ಕಂದಾಯ ಇಲಾಖೆ ದಾಖಲೆಗಳ ಪ್ರಕಾರ ರಾಜಕಾಲುವೆ ಎಷ್ಟು ಅಗಲ ಇದೆ ಎಂಬ ಮಾಹಿತಿ ಪಡೆದುಕೊಂಡು ಭೂಕಬಳಿಕೆ ನಿಷೇಧ ಕಾಯ್ದೆಯಡಿ ಕ್ರಮ ಜರುಗಿಸಲಾಗುವುದು’ ಎಂದರು.

ಚಿಕ್ಕನಾಗಮಂಗಲ ತ್ಯಾಜ್ಯ ಸಂಸ್ಕರಣ ಘಟಕ

ಶೀಘ್ರ ಲಿಚೆಟ್ ಘಟಕ ಕಾರ್ಯಾರಂಭ

ಪ್ರಜಾವಾಣಿ ವಾರ್ತೆ

ನವದೆಹಲಿ: ಆನೇಕಲ್ ತಾಲ್ಲೂಕಿನ ಚಿಕ್ಕನಾಗಮಂಗಲ ತ್ಯಾಜ್ಯ ನೀರು ಸಂಸ್ಕರಣ ಘಟಕದಲ್ಲಿ ಲಿಚೆಟ್ ಘಟಕ ನಿರ್ಮಾಣಕ್ಕೆ ಕಾರ್ಯಾದೇಶ ನೀಡಲಾಗಿದ್ದು, ಆರು ತಿಂಗಳಲ್ಲಿ ಘಟಕ ಕಾರ್ಯಾರಂಭ ಮಾಡಲಿದೆ ಎಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ತಿಳಿಸಿದೆ.

ಘಟಕದಿಂದ ಆಗುತ್ತಿರುವ ತೊಂದರೆಗಳ ಬಗ್ಗೆ ಗ್ರಾಮಸ್ಥರು ಬಿಬಿಎಂಪಿಗೆ ಮನವಿ ಸಲ್ಲಿಸಿದ್ದರು. ಈ ಬಗ್ಗೆ ಮಾಧ್ಯಮಗಳಲ್ಲಿ ವರದಿ ಪ್ರಕಟವಾಗಿತ್ತು. ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ ಪ್ರಧಾನ ಪೀಠವು (ಎನ್‌ಜಿಟಿ) ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿತ್ತು. ನ್ಯಾಯಮಂಡಳಿಯು ಬಿಬಿಎಂಪಿಗೆ ನೋಟಿಸ್ ನೀಡಿತ್ತು. ಈ ಸಂಬಂಧ ಪಾಲಿಕೆಯು ಎನ್‌ಜಿಟಿಗೆ ಪ್ರಮಾಣಪತ್ರ ಸಲ್ಲಿಸಿದೆ.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಒಪ್ಪಿಗೆ ಪಡೆದು ಈ ಘಟಕವನ್ನು 2015ರಲ್ಲಿ ಸ್ಥಾಪಿಸಲಾಗಿದೆ.

ಬೇಡಿಕೆಗಳೇನು?

- ಗ್ರಾಮಕ್ಕೆ ಕಾವೇರಿ ನೀರಿನ ವ್ಯವಸ್ಥೆ ಕಲ್ಪಿಸಬೇಕು.
- ಗ್ರಾಮಗಳ ರಸ್ತೆ ದುರಸ್ತಿ ಮಾಡಬೇಕು, ಹೊಸ ರಸ್ತೆಗಳ ನಿರ್ಮಾಣ ಮಾಡಬೇಕು
- ಆರೋಗ್ಯ ಕೇಂದ್ರ ಆರಂಭಿಸಬೇಕು.
- ಅಂಬೇಡ್ಕರ್ ಭವನ, ಗ್ರಂಥಾಲಯ, ಉದ್ಯಾನ ನಿರ್ಮಿಸಬೇಕು.
- ಸ್ಮಶಾನ ಅಭಿವೃದ್ಧಿಪಡಿಸಬೇಕು.
- ತ್ಯಾಜ್ಯ ನೀರು ದುರ್ವಾಸನೆ ಬರದಂತೆ ತಡೆಯಬೇಕು.

ಘಟಕದಲ್ಲಿ ಪ್ರತಿನಿತ್ಯ 300 ಟನ್ ಕಸ ಸಂಸ್ಕರಣೆ ಮಾಡಲಾಗುತ್ತಿದೆ. ಘನತ್ಯಾಜ್ಯ ನಿರ್ವಹಣೆ ನಿಯಮ 2016ರ ಪ್ರಕಾರ, ಈ ಘಟಕವನ್ನು 5 ಎಕರೆ ಘಟಕದಲ್ಲಿ ಸ್ಥಾಪಿಸಲಾಗಿದ್ದು, ಕಲುಷಿತ ನೀರು ಅಂತರ್ಜಲ ಸೇರದಂತೆ ತಡೆಯಲಾಗಿದೆ ಎಂದು ಪ್ರಮಾಣಪತ್ರದಲ್ಲಿ ತಿಳಿಸಲಾಗಿದೆ.

ಗ್ರಾಮಸ್ಥರ ಬೇಡಿಕೆಗಳ ಬಗ್ಗೆ ಚರ್ಚಿಸಲು 2022ರ ಆಗಸ್ಟ್ 22ರಂದು ಸಭೆ ನಡೆಸಲಾಗಿದೆ. ಈ ಗ್ರಾಮವು ಬಿಬಿಎಂಪಿ ವ್ಯಾಪ್ತಿಯಿಂದ ಹೊರಗೆ ಇದೆ. ಆದರೂ, ಗ್ರಾಮದ ಅಭಿವೃದ್ಧಿ ಕಾಮಗಾರಿಗಳಿಗೆ ಈವರೆಗೆ ₹18.3 ಕೋಟಿ ಅನುದಾನ ನೀಡಲಾಗಿದೆ ಎಂದೂ ತಿಳಿಸಲಾಗಿದೆ.

ಗ್ರಾಮಸ್ಥರ ಅಳಲು: ಈ ಘಟಕದಿಂದ ಉತ್ಪತ್ತಿಯಾಗುವ ಕಲುಷಿತ ದ್ರವ ಹಾಗೂ ಹಸಿ ತ್ಯಾಜ್ಯದಿಂದ ದುರ್ವಾಸನೆ ಬರುತ್ತಿದೆ. ಇದರಿಂದಾಗಿ, ಸ್ಥಳೀಯ ನಾಗರಿಕರು ಅನೇಕ ಕಾಯಿಲೆಗಳಿಂದ ಬಳಲುತ್ತಿದ್ದಾರೆ. ಈ ಘಟಕದ ಕಲುಷಿತ ನೀರು ರಾಜಕಾಲುವೆ ಮೂಲಕ ಕೆರೆಗೆ ಸೇರುತ್ತಿದೆ. ಆದರೆ, ಸಮಸ್ಯೆ ಬಗೆಹರಿಸಲು ಪಾಲಿಕೆ ಅಧಿಕಾರಿಗಳು ನಿರ್ಲಕ್ಷ್ಯ ತೋರುತ್ತಿದ್ದಾರೆ ಎಂದು ಗ್ರಾಮಸ್ಥರು ದೂರಿದ್ದಾರೆ.

ಘಟಕ ಸ್ಥಾಪಿಸುವ ಸಂದರ್ಭದಲ್ಲಿ ಪಾಲಿಕೆ ಅಧಿಕಾರಿಗಳು ಹಲವು ಭರವಸೆ ನೀಡಿದ್ದರು. ಯಾವುದೇ ಭರವಸೆಯನ್ನು ಈಡೇರಿಸಿಲ್ಲ. ಗ್ರಾಮವನ್ನು ಈಗ ಕಸದ ತಾಣವನ್ನಾಗಿ ಪರಿವರ್ತಿಸಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನಾಳೆ ಕಲಾ ಗಂಗೋತ್ರಿ 50ರ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲಾ ಗಂಗೋತ್ರಿ ರಂಗ ತಂಡವು ಸೆ.5ರಂದು ಸಂಜೆ 4ಗಂಟೆಗೆ ಜೆ.ಸಿ. ರಸ್ತೆಯಲ್ಲಿರುವ ರವೀಂದ್ರ ಕಲಾಕ್ಷೇತ್ರದಲ್ಲಿ 50ನೇ ವರ್ಷದ ರಂಗ ಹಬ್ಬದ ಅಂಗವಾಗಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

‘ಮುಖ್ಯಮಂತ್ರಿ’ ಹಾಗೂ ‘ಮತ್ತೆ ಮುಖ್ಯಮಂತ್ರಿ’ ರಾಜಕೀಯ ನಾಟಕಗಳ ವಿಶ್ಲೇಷಣೆ ರವೀಂದ್ರ ಕಲಾಕ್ಷೇತ್ರದ ಮಹಿಳೆಯರ ವಿಶ್ರಾಂತಿ ಕೊಠಡಿಯಲ್ಲಿ ಸಂಜೆ 4ರಿಂದ 5.30ರವರೆಗೆ ನಡೆಯಲಿದೆ. ಸಂಜೆ 6ರಿಂದ ‘ಮುಖ್ಯಮಂತ್ರಿ’ ಚಂದ್ರು ಅವರು ರಚಿಸಿದ ಅವರ ಜೀವನ ಪಯಣದ ಕೃತಿ ‘ರಂಗವನದ ಚಂದ್ರತಾರೆ’ ಬಿಡುಗಡೆಯಾಗಲಿದೆ.



‘ಮುಖ್ಯಮಂತ್ರಿ’ ಚಂದ್ರು

ಸಂಜೆ 7 ಗಂಟೆಗೆ ‘ಮತ್ತೆ ಮುಖ್ಯಮಂತ್ರಿ’ ನಾಟಕ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ. ಈ ನಾಟಕವನ್ನು ಕೆ.ವೈ. ನಾರಾಯಣಸ್ವಾಮಿ ರಚಿಸಿದ್ದು, ಬಿ.ವಿ. ರಾಜಾರಾಂ ನಿರ್ದೇಶಿಸಿದ್ದಾರೆ. ಪ್ರಧಾನ ಪಾತ್ರದಲ್ಲಿ ‘ಮುಖ್ಯಮಂತ್ರಿ’ ಚಂದ್ರು ಕಾಣಿಸಿಕೊಳ್ಳಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

‘ಮಂಗಳೂರಿನ ಜನರ ಪ್ರೀತಿಗೆ ವಿನಮ್ರ’

ಪ್ರಜಾವಾಣಿ ವಾರ್ತೆ

ಮಂಗಳೂರು: ‘ಮಂಗಳೂರಿನ ಜನರ ಪ್ರೀತಿ, ಅಕ್ಕರೆಗೆ ವಿನಮ್ರನಾಗಿರುವೆ. ಪ್ರಮುಖ ಅಭಿವೃದ್ಧಿ ಯೋಜನೆಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗಿಯಾದುದು ಸಂತಸ ತಂದಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಕನ್ನಡದಲ್ಲೇ ಟ್ವೀಟ್ ಮಾಡಿದ್ದಾರೆ. ಕಾರ್ಯಕ್ರಮದಲ್ಲಿ ಭಾಗವಹಿಸಲು ಬಂದಾಗ ಮಂಗಳೂರಿನ ಜನತೆಯಿಂದ ಸಿಕ್ಕ ಅದ್ದೂರಿ ಸ್ವಾಗತದ ನಾಲ್ಕು ಚಿತ್ರಗಳನ್ನೂ ಅವರು ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದಾರೆ.

ಅಂಬೇಡ್ಕರ್ ಕಾಲೇಜು ಘಟಿಕೋತ್ಸವ

9 ಚಿನ್ನದ ಪದಕಗಳ ಗಳಿಸಿದ ಲಕ್ಷ್ಮೀ ಜಾನಕಿ

ಪ್ರಜಾವಾಣಿ ವಾರ್ತೆ

ಕೆಂಗೇರಿ: ಅಂಬೇಡ್ಕರ್ ತಾಂತ್ರಿಕ ಕಾಲೇಜಿನ ಘಟಿಕೋತ್ಸವದಲ್ಲಿ ಎಂಜಿನಿಯರಿಂಗ್‌ನ ವಿವಿಧ ವಿಭಾಗಗಳ 895 ವಿದ್ಯಾರ್ಥಿಗಳಿಗೆ ಶನಿವಾರ ಪದವಿ ಪ್ರದಾನ ಮಾಡಲಾಯಿತು.

ಎಲೆಕ್ಟ್ರಾನಿಕ್ ಅಂಡ್ ಕಮ್ಯೂನಿಕೇಷನ್ ವಿಭಾಗದ ಲಕ್ಷ್ಮೀ ಜಾನಕಿ ಕೆ. ಅವರು 9 ಚಿನ್ನದ ಪದಕ ಮುಡಿಗೇರಿಸಿಕೊಂಡು, ವಿಭಾಗದಲ್ಲಿ ವರ್ಷದ ಅತ್ಯುತ್ತಮ ವಿದ್ಯಾರ್ಥಿನಿಯಾಗಿ ಹೊರಹೊಮ್ಮಿದರು. ರಕ್ಷಿತ್ ಗೌಡ ಈ ವಿಭಾಗದಲ್ಲಿ ಅತ್ಯುತ್ತಮ ವಿದ್ಯಾರ್ಥಿ ಪ್ರಶಸ್ತಿಗೆ ಭಾಜನರಾದರು.

ಲಕ್ಷ್ಮೀ ಜಾನಕಿ ಮಾತನಾಡಿ, ‘ಪೋಷಕರು, ಗುರುಗಳ ಮಾರ್ಗದರ್ಶನದಿಂದ ಯಶಸ್ಸು ಸಾಧಿಸಲು ಸಾಧ್ಯವಾಯಿತು’ ಎಂದರು. ಎಂ.ಟೆಕ್ ಪದವಿ ಪಡೆದು ತಾಂತ್ರಿಕ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡುವ ಹಂಬಲ ವ್ಯಕ್ತಪಡಿಸಿದರು.

ಅಂಬೇಡ್ಕರ್ ತಾಂತ್ರಿಕ ಕಾಲೇಜಿನ 9ನೇ ಘಟಿಕೋತ್ಸವದಲ್ಲಿ ಚಿನ್ನದ ಪದಕ ಪಡೆದ ವಿದ್ಯಾರ್ಥಿಗಳು ಪದಕಗಳೊಂದಿಗೆ ಸಂಭ್ರಮಿಸಿದರು

ಮಲ್ಲತ್ತಹಳ್ಳಿಯಲ್ಲಿ ಇರುವ ಅಂಬೇಡ್ಕರ್ ಕಾಲೇಜ್ ಆಫ್ ಟೆಕ್ನಾಲಜಿ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿದ್ದ ವೈಮಾನಿಕ ಅಭಿವೃದ್ಧಿ ಸಂಸ್ಥೆ ಮಹಾ ನಿರ್ದೇಶಕ ಡಾ.ಗಿರೀಶ್ ಎಸ್. ದಿಯೋಧರೆ ಮಾತನಾಡಿ, ‘ಪ್ರಸ್ತುತ ದೇಶದಲ್ಲಿ ಎಂಜಿನಿಯರಿಂಗ್ ಕ್ಷೇತ್ರವು ಅಭೂತಪೂರ್ವವಾಗಿ ಅಭಿವೃದ್ಧಿ ಹೊಂದುತ್ತಿದೆ. ಮುಂಬರುವ ದಿನಗಳಲ್ಲಿ ಸಾಂಪ್ರದಾಯಿಕ ಎಂಜಿನಿಯರಿಂಗ್ ವಿಭಾಗಗಳೊಂದಿಗೆ ವೈಮಾನಿಕ, ಬಾಹ್ಯಾಕಾಶ, ಪರಿಸರ, ಗಣಕ ಯಂತ್ರ, ಕೃತಕ ಬುದ್ಧಿಮತ್ತೆಯಂತಹ ಹಲವು ತಾಂತ್ರಿಕ ವಿಷಯಗಳಲ್ಲಿ ದೇಶವು ದಾಪುಗಾಲು ಹಾಕುತ್ತಿದೆ’ ಎಂದು ಹೇಳಿದರು.

ಪಾಂಚಜನ್ಯ ವಿದ್ಯಾಪೀಠ ಟ್ರಸ್ಟ್ ಕಾರ್ಯದರ್ಶಿ ಎ.ಆರ್.ಕೃಷ್ಣ ಮೂರ್ತಿ, ಪಿವಿಪಿ ಟ್ರಸ್ಟ್ ಅಧ್ಯಕ್ಷ ಎಸ್.ಮರಿಸ್ವಾಮಿ, ಖಜಾಂಚಿ ಡಾ.ಬಿ.ಎನ್.ಉಮೇಶ್, ಟ್ರಸ್ಟಿ ಎಸ್. ಶಿವಮಲ್ಲು ಹಾಗೂ ಪ್ರಾಂಶುಪಾಲೆ ಮೀನಾಕ್ಷಿ. ಉಪ ಪ್ರಾಂಶುಪಾಲ ಡಾ.ಎಂ.ವಿ.ವಿಜಯಕುಮಾರ್ ಉಪಸ್ಥಿತರಿದ್ದರು.

ಇದೇ 6ಕ್ಕೆ ಸರ್ವೋತ್ತಮ ಪ್ರಶಸ್ತಿ ಪ್ರದಾನ

ಬೆಂಗಳೂರು: ಉತ್ತಮ ಕೆಲಸ ಮಾಡಿದ ಸರ್ಕಾರಿ ಅಧಿಕಾರಿಗಳು, ನೌಕರರಿಗೆ ನೀಡುವ ರಾಜ್ಯಮಟ್ಟದ ‘ಸರ್ವೋತ್ತಮ ಸೇವಾ ಪ್ರಶಸ್ತಿ’ ಪ್ರದಾನ ಸಮಾರಂಭ ಸೆ.6ರಂದು ಬೆಳಿಗ್ಗೆ 10.30ಕ್ಕೆ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆಯಲಿದೆ.

ರಾಜ್ಯ ಸರ್ಕಾರ ಪ್ರತಿ ವರ್ಷ ನಾಗರಿಕ ಸೇವಾ ದಿನಾಚರಣೆ ಅಂಗವಾಗಿ ಹಮ್ಮಿಕೊಳ್ಳುವ ರಾಜ್ಯ ಸರ್ಕಾರಿ ನೌಕರರ ದಿನಾಚರಣೆಯಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಶಸ್ತಿ ಪ್ರದಾನ ಮಾಡುವರು. ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ, ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್.ಷಡಾಕ್ಷರಿ ಉಪಸ್ಥಿತರಿರುವರು.

ಕೋವಿಡ್ ಕಾರಣದಿಂದ ಹಿಂದಿನ ವರ್ಷ ಪ್ರಶಸ್ತಿಗಳನ್ನು ನೀಡಿರಲಿಲ್ಲ. ಹಾಗಾಗಿ, 2020-21ನೇ ಸಾಲಿಗೆ 10 ನೌಕರರಿಗೆ ₹ 25 ಸಾವಿರ, 2021-22ನೇ ಸಾಲಿನಲ್ಲಿ 30 ನೌಕರರಿಗೆ ₹50 ಸಾವಿರ ನಗದು ಹಾಗೂ ಸ್ಮರಣಿಕೆ ನೀಡಿ ಗೌರವಿಸಲಾಗುತ್ತಿದೆ. ಕಾರ್ಯಕ್ರಮದಲ್ಲಿ ಭಾಗವಹಿಸುವ ರಾಜ್ಯ ಸರ್ಕಾರಿ ನೌಕರರಿಗೆ ಸರ್ಕಾರ ಪೂರ್ವಾಹ್ನ ವಿಶೇಷ ಅನುಮತಿ ನೀಡಿರುತ್ತದೆ.

ಭ್ರಮರಿ ಡಾನ್ಸ್ ರೆಪರ್ಟರಿಯ ದ್ವಿದಶ ವಾರ್ಷಿಕೋತ್ಸವ

‘ದೇಸಿ ಕಲೆ ಮರೆಯಾಗುತ್ತಿದೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಂತರ ಶಾಲಾ ಮತ್ತು ಕಾಲೇಜು ಸ್ಪರ್ಧೆಗಳಲ್ಲಿ ದೇಸಿ ಕಲೆಗಳ ಸ್ಪರ್ಧೆ ಕಡಿಮೆ ಆಗುತ್ತಿದೆ’ ಎಂದು ಕರ್ನಾಟಕ ರಾಜ್ಯ ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಸಿ. ಸೋಮಶೇಖರ್ ಆತಂಕ ವ್ಯಕ್ತಪಡಿಸಿದರು.

ಭ್ರಮರಿ ಡಾನ್ಸ್ ರೆಪರ್ಟರಿಯ ದ್ವಿದಶ ವಾರ್ಷಿಕೋತ್ಸವ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ‘ಹೊಸ ತಲೆಮಾರಿನ ವಿದ್ಯಾರ್ಥಿಗಳ ಆಲೋಚನೆ ಮತ್ತು ಅಭಿರುಚಿ ಪಾಶ್ಚಾತ್ಯಗೊಳ್ಳುತ್ತಿದೆ. ದೇಸಿ ನೃತ್ಯ, ಗೀತೆ ಹಾಗೂ ಕಲೆಗಳಿಗೆ ಒತ್ತು ದೊರೆಯದಾಗಿರುವುದು ದುರಂತ’ ಎಂದು ಹೇಳಿದರು.

‘ಪ್ರತಿಯೊಬ್ಬರೂ ಕಲೆಯನ್ನು ಆಸ್ವಾದಿಸುವ ಪ್ರವೃತ್ತಿ ಬೆಳಸಿಕೊಳ್ಳಬೇಕು. ವೃತ್ತಿ ಜೀವನದಲ್ಲಿ ಎಷ್ಟೇ ಸಂಪತ್ತು ಮತ್ತು ಹಣ ಸಂಪಾದಿಸಿದರೂ ಜೀವನದಲ್ಲಿ ನೆಮ್ಮದಿ ಕಾಣಲು ಕಲೆ, ಸಾಹಿತ್ಯ, ಸಂಗೀತ ಆಸ್ವಾದಿಸುವುದು ಮುಖ್ಯ. ವೈಯಕ್ತಿಕ ಜೀವನದಲ್ಲಿಯೂ ಸಾಕಷ್ಟು ಖುಷಿ ನೀಡಲಿದೆ’ ಎಂದು ಅಭಿಪ್ರಾಯಪಟ್ಟರು.

ಭಾನುಮತಿ ನೃತ್ಯ ಕಲಾ ಮಂದಿರಮ್ ನಿರ್ದೇಶಕಿ ಶೀಲಾ ಚಂದ್ರಶೇಖರ್ ಮಾತನಾಡಿ, ‘ಪಾಶ್ಚಾತ್ಯ ಸಂಸ್ಕೃತಿ, ಕಲೆ ಮತ್ತು ಸಂಗೀತಕ್ಕೆ ಮನಸೋಲುತ್ತಿರುವ ಯುವ ಪೀಳಿಗೆಗೆ ದೇಸಿ ಸಂಗೀತ ಹೇಳಿಕೊಡುತ್ತಿರುವ ಭ್ರಮರಿ ಡಾನ್ಸ್ ಸಂಸ್ಥೆಯ ಕಾರ್ಯ ಪ್ರಶಂಸನೀಯ’ ಎಂದರು. ಸಂಸ್ಥೆಯ ಹಲವು ವಿದ್ಯಾರ್ಥಿಗಳು ಹತ್ತಾರು ಗೀತೆಗಳಿಗೆ ಆಕರ್ಷಕವಾಗಿ ನೃತ್ಯ ಪ್ರದರ್ಶಿಸಿದರು. ರಂಗಕರ್ಮಿ ಶ್ರೀನಿವಾಸ ಜಿ.ಕಪ್ಪಣ್ಣ, ಭ್ರಮರಿ ಡಾನ್ಸ್ ರೆಪರ್ಟರಿ ಸಂಸ್ಥೆಯ ನಿರ್ದೇಶಕಿ ಸ್ನೇಹಾ ಕಪ್ಪಣ್ಣ ಇದ್ದರು.

ಎಪಿಎಸ್‌ಪಿಯು ಕಾಲೇಜಿನ ವಿದ್ಯಾರ್ಥಿಗಳು ಜಾನಪದ ನೃತ್ಯ ಪ್ರದರ್ಶಿಸಿದರು

ಧ್ವನಿಸುರುಳಿಗಳ ಬಿಡುಗಡೆ ಸಮಾರಂಭ: ಎಚ್.ಎಸ್. ವೆಂಕಟೇಶಮೂರ್ತಿ ಅಭಿಮತ

‘ವಚನ ಸಾಹಿತ್ಯಕ್ಕೆ ಸಂಗೀತ ಸಂಯೋಜನೆ ಸವಾಲು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಚನ ಸಾಹಿತ್ಯಕ್ಕೆ ಸಂಗೀತ ಸಂಯೋಜನೆಯು ಸವಾಲಿನ ಕೆಲಸ’ ಎಂದು ಕವಿ ಎಚ್.ಎಸ್. ವೆಂಕಟೇಶಮೂರ್ತಿ ಹೇಳಿದರು.

ನಗರದಲ್ಲಿ ಶನಿವಾರ ಡಾ.ಸಿ. ಸೋಮಶೇಖರ, ಎಸ್.ಸರ್ವಮಂಗಳ ಸಾಹಿತ್ಯ ಸೇವಾ ಪ್ರತಿಷ್ಠಾನ ಹಾಗೂ ಲಹರಿ ಮ್ಯೂಸಿಕ್ ಸಹಯೋಗದಲ್ಲಿ ನಡೆದ ‘ವಚನ ದರ್ಶನ’ ಧ್ವನಿ ಸುರುಳಿಗಳ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದರು.

‘ವಚನ ಸಾಹಿತ್ಯ ಎಂಬುದು ಮಾತಿನ ಸಾಹಿತ್ಯ. ಆದರೆ, ಇತ್ತೀಚೆಗೆ ವಚನ ಸಾಹಿತ್ಯವನ್ನು ಲಯಬದ್ಧವಾಗಿ ಹಾಡಲಾಗುತ್ತಿದೆ. ಸಿನಿಮಾ ರಂಗದವರೂ ವಚನ ಸಾಹಿತ್ಯ ಬಳಸಿಕೊಂಡು ಜನರಿಗೆ ತಲುಪಿಸಿದರು. ಅನೇಕ ಗಾಯಕರು ವಚನ ಸಾಹಿತ್ಯವನ್ನು ಮತ್ತೊಂದು ಎತ್ತರಕ್ಕೆ ಕೊಂಡೊಯ್ದರು. ಸಿ. ಅಶ್ವತ್ಥ್ ಹೊಸ ಪ್ರಯೋಗದ ಮೂಲಕವೇ ಜನರ ಮನ ಗೆದ್ದಿದ್ದರು. ನ್ಯಾಷನಲ್ ಕಾಲೇಜು ಮೈದಾನದಲ್ಲಿ ಸಾವಿರ ಗಾಯಕರನ್ನು ಸೇರಿಸಿ ಹಾಡಿಸಿದ್ದರು’ ಎಂದು ಹೇಳಿದರು.

ನಗರದಲ್ಲಿ ಶನಿವಾರ ನಡೆದ ಧ್ವನಿಸುರುಳಿಗಳ ಬಿಡುಗಡೆ ಸಮಾರಂಭದಲ್ಲಿ ವಿಧಾನ ಪರಿಷತ್ ಸದಸ್ಯ ರವಿಕುಮಾರ್ (ಎಡದಿಂದ ಮೂರನೇಯವರು) ವಚನ ದರ್ಶನ ಧ್ವನಿಸುರುಳಿ ಬಿಡುಗಡೆ ಮಾಡಿದರು. (ಎಡದಿಂದ) ಸಾಹಿತ್ಯ ಸೇವಾ ಪ್ರತಿಷ್ಠಾನದ ಅಧ್ಯಕ್ಷ ಡಾ.ಸಿ.ಸೋಮಶೇಖರ, ಸಾಹಿತಿ ಎಚ್.ಎಸ್. ವೆಂಕಟೇಶ ಮೂರ್ತಿ, ರಮಣಶ್ರೀ ಸಮೂಹ ಸಂಸ್ಥೆಗಳ ಅಧ್ಯಕ್ಷ ಎಸ್.ಷಡಕ್ಷರಿ, ವಿಶ್ವವಾಣಿ ಪತ್ರಿಕೆ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ಲಹರಿ ಮ್ಯೂಸಿಕ್ಸ್ ನಿರ್ದೇಶಕ ಲಹರಿ ವೇಲು ಇದ್ದರು –ಪ್ರಜಾವಾಣಿ ಚಿತ್ರ

‘ಈಗ ಹೊರತಂದಿರುವ ಧ್ವನಿಸುರುಳಿಯಲ್ಲಿ 10 ಉತ್ಕೃಷ್ಟ ಹಾಡುಗಳಿವೆ. ಉಳಿದ 10 ವಚನ ಗಾಯನ ಕೇಳಿದರೆ ಮನಸ್ಸಿಗೆ ಸಂತೋಷ ಆಗಲಿದೆ’ ಎಂದು ಹೇಳಿದರು.

ಸಾಹಿತ್ಯ ಸೇವಾ ಪ್ರತಿಷ್ಠಾನದ ಅಧ್ಯಕ್ಷ ಡಾ.ಸಿ.ಸೋಮಶೇಖರ್ ಮಾತನಾಡಿ, ‘ವಚನ ಸಾಹಿತ್ಯ ವಿಶೇಷ ಕೊಡುಗೆ ನೀಡಿದೆ. ವಚನ ಸಾಹಿತ್ಯವು ಹೊಗಳಿಕೆ, ಪಾಂಡಿತ್ಯ ಪ್ರದರ್ಶನ, ಅಕ್ಷರದ ಚಮತ್ಕಾರ ಅಲ್ಲ. ಶರಣರ ಅನುಭವದ ರಸಧಾರೆ; ಶುದ್ಧರಸ ಗಂಗೆ. ವಚನ ಸಾಹಿತ್ಯವು ಕನ್ನಡ ಸಾಹಿತ್ಯದ ಭಾಗವಾಗದಿದ್ದರೆ ವಿಶ್ವ ಸಾಹಿತ್ಯಕ್ಕೆ ಅಪಾರ ನಷ್ಟ ಉಂಟಾಗುತ್ತಿತ್ತು’ ಎಂದು ಪ್ರತಿಪಾದಿಸಿದರು.

‘ವಚನ ಸಾಹಿತ್ಯದ ಉದ್ದೇಶವೇ ಮಾನವ ಕಲ್ಯಾಣ. ಶ್ರೇಷ್ಠ ಗುಣಾತ್ಮಕ ಮೌಲ್ಯವನ್ನೂ ಇಟ್ಟುಕೊಂಡಿದೆ. ವಚನ ಸಾಹಿತ್ಯವು ಜನಸಾಮಾನ್ಯರ ನಾಲಿಗೆಯ ಮೇಲೆ ಹರಿದಾಡಲಿ ಎಂಬ ಉದ್ದೇಶದಿಂದ ಎರಡು ಧ್ವನಿ ಸುರುಳಿ ಹೊರತರಲಾಗಿದೆ’ ಎಂದರು

ವಿಧಾನ ಪರಿಷತ್ ಸದಸ್ಯ ರವಿಕುಮಾರ್ ಮಾತನಾಡಿ, ‘ವಚನದಲ್ಲಿ ಸತ್ವ ಇದೆ. 12ನೇ ಶತಮಾನದ ಬಸವಣ್ಣ ಇಂದಿಗೂ ಪ್ರಸ್ತುತ. ಅವರ ವಚನಗಳು ಶಕ್ತಿಯುತವಾಗಿವೆ. ಅವುಗಳಲ್ಲಿ ಸತ್ವ ಹಾಗೂ ಅರ್ಥ ಇದೆ’ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ರಮಣಶ್ರೀ ಸೇವಾ ಪ್ರತಿಷ್ಠಾನದ ಅಧ್ಯಕ್ಷ ಎಸ್. ಷಡಕ್ಷರಿ, ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ಲಹರಿ ಮ್ಯೂಸಿಕ್‌ನ ಲಹರಿ ವೇಲು ಇದ್ದರು. ಇದಕ್ಕೂ ಮೊದಲು ವಚನ ನೃತ್ಯ ವೈಭವ ನಡೆಯಿತು.

ಸಮಾಜ ಕಲ್ಯಾಣ ಇಲಾಖೆ ಮತ್ತು
ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಸಮಾಜ ಕಲ್ಯಾಣ ಇಲಾಖೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯ ವ್ಯಾಪ್ತಿಯಡಿ ಬರುವ ವಿವಿಧ ನಿಗಮಗಳಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭಿವೃದ್ಧಿಗಾಗಿ ವಿವಿಧ ಕಲ್ಯಾಣ ಯೋಜನೆಗಳಿಗೆ ಅರ್ಜಿ ಆಹ್ವಾನ

- ಸ್ವಯಂ ಉದ್ಯೋಗ ಯೋಜನೆಗಳು
- ಭೂ ಒಡೆತನ ಯೋಜನೆ
- ಮೈಕ್ರೊ ಕ್ರೆಡಿಟ್ ಯೋಜನೆ
- ಗಂಗಾ ಕಲ್ಯಾಣ ಯೋಜನೆ
- ಕೌಶಲ್ಯಾಭಿವೃದ್ಧಿ ತರಬೇತಿ
- ವಸತಿ ಕಾರ್ಯಾಗಾರ ನಿರ್ಮಾಣ ಯೋಜನೆ

ವಿಶೇಷ ಸೂಚನೆ

- ಈ ಎಲ್ಲಾ ಯೋಜನೆಗಳಿಗೆ ಅರ್ಜಿಗಳು ಸೇವಾ ಸಿಂಧು ಪೋರ್ಟಲ್ https://sevasindhu.karnataka.gov.in/ ನಲ್ಲಿ ಲಭ್ಯವಿರುತ್ತವೆ.
- ಫಲಾಪೇಕ್ಷಿಗಳು ‘ಗ್ರಾಮಒನ್’, ‘ಬೆಂಗಳೂರುಒನ್’, ‘ಕರ್ನಾಟಕಒನ್’ ಕೇಂದ್ರಗಳಲ್ಲಿ ಅರ್ಜಿ ಸಲ್ಲಿಸುವುದು.
- ಈಗಾಗಲೇ ಸುವಿಧಾ ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಿರುವವರು ಮತ್ತೆ ಅರ್ಜಿ ಸಲ್ಲಿಸಬೇಕಾಗಿಲ್ಲ.
- ಸರ್ಕಾರದ ಸಾಂಸ್ಥಿಕ ಕೋಟ ಮತ್ತು ಮಂಡಳಿ ಕೋಟಾದಡಿ ಸೌಲಭ್ಯ ಪಡೆಯಲು ಇಚ್ಛಿಸುವ ಫಲಾಪೇಕ್ಷಿಗಳು ಸಹ ಸೇವಾ ಸಿಂಧು ಪೋರ್ಟಲ್‌ನಲ್ಲೆ ಅರ್ಜಿ ಸಲ್ಲಿಸುವುದು.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 15-09-2022

ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಎಸ್. ಬೊಮ್ಮಾಯಿ ಮತ್ತು ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿ ಅವರು ‘ಕಲ್ಯಾಣ ಮಿತ್ರ ಏಕೀಕೃತ ಎಸ್.ಸಿ./ಎಸ್.ಟಿ. ಸಹಾಯವಾಣಿ’ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಎಸ್. ಬೊಮ್ಮಾಯಿ ಮತ್ತು ಮಾನ್ಯ ಪರಿಶಿಷ್ಟ ಪಂಗಡಗಳ ಕಲ್ಯಾಣ ಮತ್ತು ಸಾರಿಗೆ ಇಲಾಖೆ ಸಚಿವರಾದ ಶ್ರೀ ಬಿ. ಶ್ರೀರಾಮುಲುರವರು ಇಲಾಖಾ ಕಾರ್ಯಕ್ರಮದಲ್ಲಿ ಭಾಗವಹಿಸಿರುವುದು.

ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಪರಿಶಿಷ್ಟ ಜಾತಿ ಅಲೆಮಾರಿ ಕೋಶ, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಪರಿಶಿಷ್ಟ ಪಂಗಡಗಳ ಅಲೆಮಾರಿ ಕೋಶ, ಡಾ॥ ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿ., ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ, ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ, ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ

ಹೆಚ್ಚಿನ ಮಾಹಿತಿಗಾಗಿ ನಿಗಮದ ಜಿಲ್ಲಾ ವ್ಯವಸ್ಥಾಪಕರುಗಳ ಕಛೇರಿ ಅಥವಾ ನಿಗಮಗಳ ವೆಬ್‌ಸೈಟ್ ಅಥವಾ ಕಲ್ಯಾಣಮಿತ್ರ ಏಕೀಕೃತ ಎಸ್.ಸಿ/ಎಸ್.ಟಿ ಸಹಾಯವಾಣಿ 9482300400 ಸಂಪರ್ಕಿಸುವುದು

ವ್ಯವಸ್ಥಾಪಕ ನಿರ್ದೇಶಕರು	ಆಯುಕ್ತರು	ಸರ್ಕಾರದ ಕಾರ್ಯದರ್ಶಿಗಳು
ಎಲ್ಲಾ ನಿಗಮಗಳು	ಸಮಾಜ ಕಲ್ಯಾಣ ಇಲಾಖೆ	ಸಮಾಜ ಕಲ್ಯಾಣ ಇಲಾಖೆ

“ನಮ್ಮ ವೈವಿಧ್ಯಮಯ ಸಂಸ್ಕೃತಿಯ ಶ್ರೇಷ್ಠ ಪರಂಪರೆಯನ್ನು ಗೌರವಿಸುವುದು ಮತ್ತು ರಕ್ಷಿಸುವುದು” – ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಈ ಹಬ್ಬದ ಋತುವಿನಲ್ಲಿ ಪೀಠೋಪಕರಣಗಳ ಮೇಲೆ ದೊಡ್ಡ ಡೀಲ್‌ಗಳನ್ನು ಪಡೆಯಿರಿ!

FURNITURE FAIR
LIFESTYLE & INTERIOR EXPO
Presented By HDFC BANK
ಕೊನೆಯ 2 ದಿನಗಳು

2 | 3 | 4 | 5 ಸೆಪ್ಟೆಂಬರ್ 2022
ಬೆಳಗ್ಗೆ 10.00 ರಿಂದ ರಾತ್ರಿ 8.30
ತ್ರಿಪುರವಾಸಿನಿ ಅರಮನೆ ಮೈದಾನ
(ಮೇಖ್ರಿ ಸರ್ಕಲ್ ಹತ್ತಿರ, ಬೆಂಗಳೂರು)

ಲಿವಿಂಗ್ ರೂಮ್ • ಡೈನಿಂಗ್ ಸೆಟ್ • ಬೆಡ್‌ರೂಮ್ • ಪಾಟರಿ • ಹೋಮ್ ಡೆಕೋರ್ • ಬ್ರಾಸ್ & ಆರ್ಟಿಕ್ರಾಫ್ಟ್ಸ್ • ರಿಕ್ಲೈನರ್ ಸೋಫಾ ಸೆಟ್ಸ್ • ಕಾರ್ಪೆಟ್ & ಕುಷನ್ಸ್ • ಮ್ಯಾಟ್ರೆಸ್ಸ್ • ಕರ್ಟನ್ಸ್ • ವಾಟರ್ ಫೌಂಟೇನ್ಸ್

exhibitions_iadsnevents
iadsnevents
ಎಲ್ಲಾ ಪ್ರಮುಖ ಕ್ರೆಡಿಟ್/ಡೆಬಿಟ್ ಕಾರ್ಡ್‌ಗಳನ್ನು ಸ್ವೀಕರಿಸಲಾಗುತ್ತದೆ
ಪ್ರವೇಶ ಉಚಿತ
+91 93425 77908
AN EVENT BY iads & events

INTERNATIONAL SHOPPING & LIFESTYLE FESTIVAL
Presented By HDFC BANK
ವಿಭಿನ್ನ ದೇಶಗಳ ಎಕ್ಸ್‌ಕ್ಲೂಸಿವ್ ಪೆವಿಲಿಯನ್
ಕೊನೆಯ 2 ದಿನಗಳು

INDONESIA MALAYSIA THAILAND AFGHANISTAN TURKEY

• ಜುವೆಲ್ಲರಿ • ಸ್ಪಾ ಪ್ರಾಡಕ್ಟ್ಸ್ • ಆಕ್ಸೆಸರೀಸ್ • ಥೈಲ್ಯಾಂಡ್ ಹೋಮ್ ಡೆಕೋರೇಶನ್ • ಥೈಲ್ಯಾಂಡ್ ಮಸಾಜ್ • ಥೈಲ್ಯಾಂಡ್ ಹ್ಯಾಂಡಿಕ್ರಾಫ್ಟ್ಸ್ • ಅರೋಮಾ ಪ್ರಾಡಕ್ಟ್ಸ್ • ಲೈಫ್‌ಸ್ಟೈಲ್ ಪ್ರಾಡಕ್ಟ್ಸ್ • ಮ್ಯಾಂಗೋ ವುಡ್ ಪ್ರಾಡಕ್ಟ್ಸ್ • ಇಂಡೋನೇಷ್ಯಾ ಫರ್ನಿಚರ್ • ಥೈಲ್ಯಾಂಡ್ ಹರ್ಬಲ್ ಪ್ರಾಡಕ್ಟ್ಸ್ • ಥೈಲ್ಯಾಂಡ್ ಗಿಫ್ಟ್ಸ್ • ಆಟೋಮೊಬೈಲ್ • ಥೈಲ್ಯಾಂಡ್ ಕಾಸ್ಮೆಟಿಕ್ ಪ್ರಾಡಕ್ಟ್ಸ್

2 | 3 | 4 | 5 ಸೆಪ್ಟೆಂಬರ್ 2022
ಬೆಳಗ್ಗೆ 10.00 ರಿಂದ ರಾತ್ರಿ 8.30
ತ್ರಿಪುರವಾಸಿನಿ ಅರಮನೆ ಮೈದಾನ
(ಮೇಖ್ರಿ ಸರ್ಕಲ್ ಹತ್ತಿರ, ಬೆಂಗಳೂರು)

exhibitions_iadsnevents
iadsnevents
ಎಲ್ಲಾ ಪ್ರಮುಖ ಕ್ರೆಡಿಟ್/ಡೆಬಿಟ್ ಕಾರ್ಡ್‌ಗಳನ್ನು ಸ್ವೀಕರಿಸಲಾಗುತ್ತದೆ
ಪ್ರವೇಶ ಉಚಿತ
+91 93425 77908
AN EVENT BY iads & events

ಬೆಂಗಳೂರು– ಮೈಸೂರು ರಸ್ತೆ ಅವ್ಯವಸ್ಥೆಗೆ ಶಾಸಕ ಮಂಜುನಾಥ್ ಆಕ್ರೋಶ

‘ಹೆದ್ದಾರಿ ಹಗರಣ’; ಸಿಬಿಐ ತನಿಖೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿ ಕಾಮಗಾರಿಯಲ್ಲಿ ದೊಡ್ಡ ಹಗರಣ ನಡೆದಿದ್ದು, ತನಿಖೆಯನ್ನು ಸಿಬಿಐಗೆ ವಹಿಸಬೇಕು ಎಂದು ಮಾಗಡಿ ಕ್ಷೇತ್ರದ ಜೆಡಿಎಸ್ ಶಾಸಕ ಎ.ಮಂಜುನಾಥ್ ಆಗ್ರಹಿಸಿದರು.

ಭೂ ಪರಿಹಾರ ಹಾಗೂ ಹೆದ್ದಾರಿ ಅವ್ಯವಹಾರ ಕುರಿತು ತನಿಖೆಗೆ ಒತ್ತಾಯಿಸಲು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ, ಶಾಸಕ ಎಚ್.ಡಿ.ರೇವಣ್ಣ ನೇತೃತ್ವದಲ್ಲಿ ಶಾಸಕರ ನಿಯೋಗ ಇದೇ 7ರಂದು ದೆಹಲಿಗೆ ತೆರಳಿ ಹೆದ್ದಾರಿ ಮತ್ತು ಭೂ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರನ್ನು ಭೇಟಿ ಮಾಡಿ, ಮನವಿ ಸಲ್ಲಿಸಲಿದೆ ಎಂದು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

‘ಮಳೆಯಿಂದ ಹೆದ್ದಾರಿ ಸಂಪೂರ್ಣ ಹಾಳಾಗಿದೆ. ಮಳೆ ನೀರು ತುಂಬಿದೆ. ರೈತರು, ಜನರಿಗೆ ಅನನುಕೂಲವಾಗಿದೆ. ನಾಲ್ಕು ವರ್ಷಗಳ ಹಿಂದೆಯೇ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳಿಗೆ ಎಚ್ಚರಿಸಿದ್ದೆವು. ಅವರ ಬೇಜವಾಬ್ದಾರಿ ಈ ಸ್ಥಿತಿಗೆ ಕಾರಣ. ಭೂ ಸ್ವಾಧೀನ ವೇಳೆ ರೈತರನ್ನು ಒಪ್ಪಿಸಿದ್ದೆವು. ಸೂಕ್ತ ಭೂ ಪರಿಹಾರ ನೀಡಲು ಮನವಿ ಮಾಡಿದ್ದೆವು. ಹಾಗಾಗಿ, ಎಲ್ಲ ರೈತರೂ ಸಹಕಾರ ನೀಡಿದ್ದರು. ಅವರಿಗೆ ಭೂ ಪರಿಹಾರ ಕೊಡದೆ ಇದ್ದರೆ ರಸ್ತೆಯಲ್ಲೇ ಪ್ರತಿಭಟನೆ ನಡೆಸುತ್ತೇವೆ’ ಎಂದು ಎಚ್ಚರಿಸಿದರು.

‘ಬಿಡದಿ ಪ್ರವೇಶಕ್ಕೆ ರಸ್ತೆಯಲ್ಲಿ ಅವಕಾಶ ನೀಡಿಲ್ಲ. 119 ಕಿ.ಮೀ ರಸ್ತೆಯಲ್ಲಿ ಇಂಟರ್ ಜಂಕ್ಷನ್ ಇಲ್ಲ. ಇದರಿಂದ ರೈತರ ಕೃಷಿ ಕೆಲಸಗಳಿಗೆ ಅಡ್ಡಿಯಾಗಿದೆ. ಪ್ರಯಾಣಿಕರಿಗೆ ಚಹಾ ಸೇವನೆಗೆ, ಪೆಟ್ರೋಲ್ ಹಾಕಿಸಿಕೊಳ್ಳಲು ವ್ಯವಸ್ಥೆಯೂ ಇಲ್ಲ. ಅಪಘಾತವಾದರೆ ತುರ್ತುಚಿಕಿತ್ಸಾ ಘಟಕಗಳಿಲ್ಲ. ಇದೇನಾ ನಿಮ್ಮ ರಸ್ತೆ’ ಎಂದು ಪ್ರತಾಪ್ ಸಿಂಹ ಅವರನ್ನು ಕೆಣಕಿದರು. ‘ರಾಮದೇವರ ಬೆಟ್ಟದಿಂದ ನೀರು ಬಂದಿದೆ ಎಂದು ಅಧಿಕಾರಿಗಳು ಉತ್ತರ ನೀಡುತ್ತಾರೆ. ಬೆಟ್ಟ ಈಗ ಹುಟ್ಟಿದೆಯಾ? ಒಂದು ಕಿ.ಮೀಗೆ ₹ 80 ಕೋಟಿ ರೂ. ಖರ್ಚು ಮಾಡಲಾಗಿದೆ. ಸಾರ್ವಜನಿಕರ ತೆರಿಗೆ ರೂಪದಲ್ಲಿ ನೀಡಿದ್ದ ₹1,300 ಕೋಟಿಯನ್ನು ಹೀಗೆ ವ್ಯಯಮಾಡುವುದು ಸರಿಯೇ’ ಎಂದು ಪ್ರಶ್ನಿಸಿದರು.

‘ಭೂ ಮಾಲೀಕರಲ್ಲದವರಿಗೂ ಪರಿಹಾರ’



ಎ.ಮಂಜುನಾಥ್

‘ಯಾರದೋ ಭೂಮಿ, ಮತ್ಯಾರಿಗೋ ಪರಿಹಾರ ಕೊಟ್ಟಿದ್ದಾರೆ. ಭೂ ಪರಿಹಾರ ಕೇಳಿದರೆ ಜೈಲಿಗೆ ಹಾಕಿಸುವುದಾಗಿ ಬೆದರಿಸುತ್ತಾರೆ. ಮೈಸೂರಿನಿಂದ ಬೆಂಗಳೂರಿಗೆ ಬರುವಾಗ ಪ್ರತಾಪ್ ಸಿಂಹ ಬಿಡದಿಗೆ ಬನ್ನಿ, ನಾವು ನೋಡಿಕೊಳ್ತೇವೆ’ ಎಂದು ಮಂಜುನಾಥ್ ಗುಡುಗಿದರು.

‘ಹೆದ್ದಾರಿ ಯೋಜನೆಯಲ್ಲಿ ₹ 800 ಕೋಟಿ ಲೂಟಿಯಾಗಿದೆ. ಇದರಲ್ಲಿ ಯೋಜನಾ ನಿರ್ದೇಶಕರ ಪಾತ್ರವಿದೆ. ಅವರಿಗೆ ಸಂಸದ ಪ್ರತಾಪ್ ಸಿಂಹ ಬೆಂಬಲವಿದೆ. ಹೆದ್ದಾರಿ ನಿರ್ಮಿಸುತ್ತಿರುವ ಸಂಸ್ಥೆಗೆ ಅವರೇ ಬ್ರ್ಯಾಂಡ್ ಅಂಬಾಸಿಡರ್ ಎಂದು ಲೇವಡಿ ಮಾಡಿದರು.

ಈ ಕುರಿತು ವಿಧಾನಸಭೆ ಅಧಿವೇಶನದಲ್ಲಿ ಎರಡು ಬಾರಿ ಪ್ರಶ್ನೆ ಕೇಳಲು ಪ್ರಯತ್ನ-ಪಟ್ಟರೂ, ಅವಕಾಶ ದೊರೆಯದಂತೆ ವಿಧಾನಸಭಾಧ್ಯಕ್ಷರ ಕಚೇರಿಯನ್ನು ಮ್ಯಾನೇಜ್ ಮಾಡಲಾಗಿದೆ’ ಎಂದು ಆರೋಪಿಸಿದರು.

ಹಂದಿ ಜ್ವರ ಪ್ರಕರಣ ಪತ್ತೆ

ರಬಕವಿ ಬನಹಟ್ಟಿ (ಬಾಗಲಕೋಟೆ): ರಬಕವಿ ಬನಹಟ್ಟಿ ನಗರಸಭೆ ವ್ಯಾಪ್ತಿಯಲ್ಲಿ ಹಂದಿ ಜ್ವರ ಪ್ರಕರಣ ಪತ್ತೆಯಾಗಿದೆ. ಜಿಲ್ಲೆಯಲ್ಲಿ ಪ್ರಥಮ ಪ್ರಕರಣ ಇದಾಗಿದೆ ಎಂದು ತಾಲ್ಲೂಕು ವೈದ್ಯಾಧಿಕಾರಿ ಡಾ.ಜಿ.ಎಚ್.ಗಲಗಲಿ ತಿಳಿಸಿದರು.

ಬಾಗಲಕೋಟೆ ಜಿಲ್ಲೆಯಲ್ಲಿ ಹಂದಿ ಜ್ವರ ಪತ್ತೆಯಾಗಿದ್ದು, ಆ ಪ್ರದೇಶದಲ್ಲಿ ಸಮೀಕ್ಷೆ ಕೈಗೊಳ್ಳಲಾಗುತ್ತಿದೆ. ಜ್ವರ ಪೀಡಿತ ಮಗುವಿನ ಆರೋಗ್ಯ ಸ್ಥಿರವಾಗಿದೆ. ಯಾವುದೇ ಸಮಸ್ಯೆ ಇಲ್ಲ ಎಂದರು.

ಒತ್ತಡ, ದುಷ್ಟತನಕ್ಕೆ ಬಲಿಯಾಗಬೇಡಿ: ವಿದ್ಯಾರ್ಥಿಗಳಿಗೆ ಕಿವಿಮಾತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯಾರ್ಥಿ ಜೀವನದಲ್ಲಿ ಉನ್ನತ ಸಾಧನೆ ಮಾಡಲು ಬಯಸುವವರು ತಮ್ಮ ಗೆಳೆಯರ ಒತ್ತಡ ಅರ್ಥಮಾಡಿಕೊಳ್ಳುವುದು ಹಾಗೂ ದುಷ್ಟತನಕ್ಕೆ ಬಲಿಯಾಗದಂತೆ ಎಚ್ಚರ ವಹಿಸುವುದು ಮುಖ್ಯ ಎಂದು ಬ್ರಿಟಿಷ್ ಟೆಲಿಕಾಂನ ಮುಖ್ಯ ಮಾಹಿತಿ ಅಧಿಕಾರಿ ದೋಷಿ ಜಯಕುಮಾರ್ ಕಿವಿಮಾತು ಹೇಳಿದರು.

ಪಿಇಎಸ್ ವಿಶ್ವವಿದ್ಯಾಲಯದ ಬಿ.ಟೆಕ್ ಮತ್ತು ಬಿ.ಡಿಸೈನ್‌ನ ಪ್ರಥಮ ವರ್ಷದ ತರಗತಿಗಳ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ವ್ಯಕ್ತಿತ್ವ ರೂಪಿಸಿಕೊಳ್ಳುವಲ್ಲಿ ಸಹಾಯ ಮಾಡುವ ಉತ್ತಮ ಕಾರ್ಯಕ್ಷಮತೆ ಮೈಗೂಡಿಸಿಕೊಳ್ಳಬೇಕು. ಗುರಿಗಳನ್ನು ಕೇಂದ್ರೀಕರಿಸಲು ಆಲಸ್ಯದ ವರ್ತನೆ ತೊರೆಯಬೇಕು. ಧೈರ್ಯದಿಂದ ಮುನ್ನುಗ್ಗಬೇಕು. ವೃತ್ತಿಜೀವನದಲ್ಲಿ ಯೋಜಿಸುವ ಪರಿಪಾಟ ರೂಢಿಸಿಕೊಳ್ಳಬೇಕು. ಡಿಜಿಟಲ್ ಸಂವಹನದ ಕಾಲದಲ್ಲಿರುವ ತಮ್ಮ ಮಕ್ಕಳನ್ನು ಪೋಷಕರು ಅರ್ಥಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಪಿಇಎಸ್ ವಿಶ್ವವಿದ್ಯಾಲಯದ ಕುಲಪತಿ ಡಾ.ಎಂ.ಆರ್.ದೊರೆಸ್ವಾಮಿ, ‘ಪಿಇಎಸ್ ವಿಶ್ವವಿದ್ಯಾನಿಲಯದಲ್ಲಿ ಶಿಕ್ಷಣ ಕೇವಲ ಪದವಿಗಳಿಗೆ ಸೀಮಿತವಾಗಿಲ್ಲ. ವಿದ್ಯಾರ್ಥಿಗಳಲ್ಲಿ ರಾಷ್ಟ್ರ ನಿರ್ಮಾಣ ಚಟುವಟಿಕೆಯ ಪ್ರಜ್ಞೆಯನ್ನು ಬೆಳೆಸುತ್ತಿದೆ’ ಎಂದು ಹೇಳಿದರು.

ಬೆಂಗಳೂರಿನ ಪಿಇಎಸ್ ವಿಶ್ವವಿದ್ಯಾಲಯದ ಬಿ.ಟೆಕ್ ಮತ್ತು ಬಿ.ಡಿಸೈನ್‌ನ ಪ್ರಥಮ ವರ್ಷದ ತರಗತಿಗಳ ಉದ್ಘಾಟನಾ ಸಮಾರಂಭದಲ್ಲಿ ಕುಲಪತಿ ಡಾ.ಎಂ.ಆರ್.ದೊರೆಸ್ವಾಮಿ, ದೋಷಿ ಜಯಕುಮಾರ್, ಡಿ.ಜವಹರ್, ಸೂರ್ಯ ಪ್ರಸಾದ್, ಕೆ.ಎಸ್.ಶ್ರೀಧರ್ ಇದ್ದರು.

ವಿಶ್ವವಿದ್ಯಾಲಯ 2014ರಿಂದ ಇಲ್ಲಿಯವರೆಗೆ ₹ 40 ಕೋಟಿ ವಿದ್ಯಾರ್ಥಿವೇತನ ವಿತರಿಸಿದೆ. ವಿಶ್ವವಿದ್ಯಾಲಯವು ಗುಣಮಟ್ಟ ಮತ್ತು ಮೌಲ್ಯಾಧಾರಿತ ಶಿಕ್ಷಣದ ಬದ್ಧತೆ ತೋರಿದೆ. ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಸರ್.ಎಂ.ವಿಶ್ವೇಶ್ವರಯ್ಯ, ಅಬ್ದುಲ್ ಕಲಾಂ ಅವರನ್ನು ಅನುಸರಿಸಬೇಕು. ಅದಕ್ಕಾಗಿ, ಇಬ್ಬರ ಜೀವನಚರಿತ್ರೆಯನ್ನು ಪಠ್ಯವಿಷಯವಾಗಿ ಸೇರಿಸಲಾಗಿದೆ ಎಂದು ಮಾಹಿತಿ ನೀಡಿದರು.

ಸಮಕುಲಪತಿ ಡಿ.ಜವಹರ್ ಅವರು ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು. ಉಪಕುಲಪತಿ ಜೆ.ಸೂರ್ಯ ಪ್ರಸಾದ್, ಸಿಇಒ ಅಜೋಯ್ ಕುಮಾರ್, ಕುಲಸಚಿವ ಕೆ.ಎಸ್.ಶ್ರೀಧರ್, ವಿಜ್ಞಾನ ಮತ್ತು ಮಾನವಿಕ ವಿಭಾಗದ ಅಧ್ಯಕ್ಷ ಎಸ್.ರಾಧಾಕೃಷ್ಣನ್ ಅವರು ಉಪಸ್ಥಿತರಿದ್ದರು.

ಆರಾಧನಾ ಸ್ಥಳಗಳ ಕಾನೂನು ಸಿಂಧುತ್ವ: ಪಿಐಎಲ್ ವಿರೋಧಿಸಿ ‘ಸುಪ್ರೀಂ’ಗೆ ಅರ್ಜಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಆರಾಧನಾ ಸ್ಥಳಗಳ (ವಿಶೇಷ ನಿಬಂಧನೆಗಳು) ಕಾನೂನು 1991 ರ ಸಿಂಧುತ್ವ ಪ್ರಶ್ನಿಸಿ ಸಲ್ಲಿಕೆಯಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ವಿರೋಧಿಸಿ ಮುಸ್ಲಿಂ ಸಂಘಟನೆಯೊಂದು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ.

ವಕೀಲರಾದ ಅಶ್ವಿನಿ ಕುಮಾರ್ ಉಪಾಧ್ಯಾಯ ಮತ್ತಿತರರು ಸಲ್ಲಿಸಿರುವ ಅರ್ಜಿಯ ವಿಚಾರದಲ್ಲಿ ನ್ಯಾಯಾಲಯ ಮಧ್ಯಪ್ರವೇಶಿಸಬೇಕು ಎಂದು ಲಖನೌನ ಭಾರತೀಯ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿ (ಎಂಪಿಎಲ್‌ಬಿಐ) ಕೋರಿದೆ.

ನೈಋತ್ಯ ರೈಲ್ವೆ
ಬೆಂಗಳೂರು ವಿಭಾಗದಲ್ಲಿ ವಾಣಿಜ್ಯ ಒಪ್ಪಂದಗಳ ಇ-ಹರಾಜು
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಹರಾಜುಗಳ ಇ-ಹರಾಜಿಗೆ ಬಿಡ್ಡುದಾರರನ್ನು ಆಹ್ವಾನಿಸಿದ್ದಾರೆ:
1. ಪಾರ್ಸೆಲ್ ಎಸ್‌ಎಲ್‌ಆರ್ ಮತ್ತು ವಿಪಿ ಗುತ್ತಿಗೆ: 7.9.22, 9.9.22,12.9.22,19.9.22,26.9.22
2. ಜಾಹೀರಾತು ಒಪ್ಪಂದಗಳು: 5.9.22, 14.9.22, 21.9.22, 28.9.22
3. ಪಾರ್ಕಿಂಗ್ ಒಪ್ಪಂದಗಳು: 12.9.22
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು
PUB/330/AAV/PRB/SWR/2022-23 ಬೆಂಗಳೂರು
S.W.Railways SWRRLY SWRRLY

ನೈಋತ್ಯ ರೈಲ್ವೆ
ಟೆಂಡರ್ ಸೂಚನೆ ಸಂ. CAO/CN/BNC/66/2022
ದಿನಾಂಕ: 29.08.2022
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಟೆಲಿಕಮ್ಯುನಿಕೇಷನ್ ಮತ್ತು ವಿದ್ಯುತ್ ಕಾಮಗಾರಿಗಳನ್ನು ಒಳಗೊಂಡಂತೆ ಪೆನುಕೊಂಡ ಜಂಕ್ಷನ್ (ಕಿಮೀ 136.694) ನಿಂದ ಧರ್ಮಾವರಂ (ಕಿಮೀ 176.600) ನಡುವೆ ವಿದ್ಯುದೀಕೃತ ಡಬಲ್ ಲೈನ್ ಟ್ರ್ಯಾಕ್ ನಿರ್ಮಾಣ. (ಟೆಂಡರ್ ಉಲ್ಲೇಖ ಸಂಖ್ಯೆ: W.496/PKD-DMM--EPC).	ರೂ. 214,06,00,000/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 24-11-2022, 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಮುಖ್ಯ ಸಾಮಗ್ರಿಗಳ ಪ್ರಬಂಧಕರು / ನಿರ್ಮಾಣ
ಬೆಂಗಳೂರು ಕಂಟೋನ್ಮೆಂಟ್
PUB/332/AAV/PRB/SWR/2022-23
S.W.Railways SWRRLY SWRRLY

ದಿ ಕಂಟ್ರೋಲರ್ಸ್ ಆಫೀಸ್ ಸಹಕಾರ ಬ್ಯಾಂಕ್ ನಿಯಮಿತ
(ಎಲ್.ಐ.ಸಿ ನೌಕರರ ಬ್ಯಾಂಕ್)
ನಂ. 209, ಮಹಾಲಕ್ಷ್ಮಿ ಕಬ್ಬನ್ ಪೇಟೆ ಮುಖ್ಯ ರಸ್ತೆ, ಬೆಂಗಳೂರು-560 002
ದೂ. : 22278462, 22216820
ಇ-ಮೇಲ್: cocb1916@gmail.com ವೆಬ್ ಸೈಟ್: www.cocb1916.com

105ನೇ ವಾರ್ಷಿಕ ಮಹಾಸಭೆ ತಿಳುವಳಿಕೆ ಪತ್ರ

ಮೇಲ್ಕಂಡ ಬ್ಯಾಂಕಿನ 2021-22ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ: 10-09-2022 ನೇ ಶನಿವಾರ ಮಧ್ಯಾಹ್ನ 2:00 ಗಂಟೆಗೆ **“ವೈ. ಹೆಚ್. ವೆಂಕಟರಮಣಪ್ಪನವರ ಕಲ್ಯಾಣ ಮಂಟಪ”** ಶ್ರೀ ಓಣಿ ಆಂಜನೇಯ ಸ್ವಾಮಿ ದೇವಸ್ಥಾನ. ನಂ, 36, ಪ್ಯಾಲೇಸ್ ರಸ್ತೆ, ಮಹಾರಾಣಿ ಕಾಲೇಜ್ ಹತ್ತಿರ, ಹೋಮ್ ಸೈನ್ಸ್ ಕಾಲೇಜ್ ಪಕ್ಕ, ಗಾಂಧಿನಗರ, ಬೆಂಗಳೂರು - 560 009 ಇಲ್ಲಿ ಬ್ಯಾಂಕಿನ ಅಧ್ಯಕ್ಷರಾದ **ಶ್ರೀ ಪಿ. ಟಿ. ಸತ್ಯನಾರಾಯಣ** ರವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿದೆ. ಮಾನ್ಯ ಸದಸ್ಯರುಗಳೆಲ್ಲಾ ಇದನ್ನು ತಿಳುವಳಿಕೆ ಪತ್ರವೆಂದು ಪರಿಗಣಿಸಿ ಸಕಾಲದಲ್ಲಿ ದಯಮಾಡಿಸಬೇಕೆಂದು ವಿನಂತಿ.

ಕಾರ್ಯ ನಿರ್ವಾಹಕ ಮಂಡಳಿಯ ಆದೇಶದ ಮೇರೆಗೆ
ಸಹಿ/-
(ಲಕ್ಷ್ಮಿ. ಎನ್)
ಮುಖ್ಯ ಕಾರ್ಯನಿರ್ವಹಣಾಧಿಕಾರಿ.
ದಿನಾಂಕ: 20-08-2022
ಸ್ಥಳ: ಬೆಂಗಳೂರು

ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,
ನಂ.17, ‘ವಾರ್ತಾ ಸೌಧ’, ಭಗವಾನ್ ಮಹಾವೀರ್ ರಸ್ತೆ
(ಇನ್‌ಫೆಂಟ್ರಿ ರಸ್ತೆ), ಬೆಂಗಳೂರು-560 001.
ಸಂ.: ವಾಸಾಸಂಇ/ಕ್ಷೇ.ಪ್ರ./ಮೈ.ದ.ವ/2022-23/4466-67 ದಿನಾಂಕ: 02.09.2022

ಮೈಸೂರು ದಸರಾ-2022ರ ಅಂಗವಾಗಿ ವಸ್ತುಪ್ರದರ್ಶನ ಮಳಿಗೆ ನಿರ್ಮಿಸಿ, ನಿರ್ವಹಿಸುವ ಕಾರ್ಯಗಳಿಗಾಗಿ ಅಲ್ಪಾವಧಿ ಇ-ಟೆಂಡರ್

ಮೈಸೂರು ದಸರಾ-2022ರ ಅಂಗವಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ವತಿಯಿಂದ ನಾಡಿನ ಕಲೆ, ಸಾಹಿತ್ಯ, ಸಂಸ್ಕೃತಿ ಹಾಗೂ ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳ ವಿಷಯಾಧಾರಿತ ವಸ್ತುಪ್ರದರ್ಶನ ಏರ್ಪಡಿಸಲು ಉದ್ದೇಶಿಸಲಾಗಿದೆ. ಅದರಂತೆ 60x60 ಅಡಿ ಅಳತೆಯ ವಸ್ತುಪ್ರದರ್ಶನ ಮಳಿಗೆಯನ್ನು ಬಾಡಿಗೆ ಆಧಾರದಲ್ಲಿ ನಿರ್ಮಿಸಿ, 90 ದಿನಗಳ ಕಾಲ ನಿರ್ವಹಿಸಿಕೊಡಲು ಇ-ಆಡಳಿತ ಇಲಾಖೆಯ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಹೆಸರನ್ನು ನೋಂದಾಯಿಸಿಕೊಂಡಿರುವ ಟೆಂಡರ್‌ದಾರರಿಂದ ಅಲ್ಪಾವಧಿ ಇ-ಟೆಂಡರ್ ಅನ್ನು ಆಹ್ವಾನಿಸಲಾಗಿದೆ. ಆಸಕ್ತ ಟೆಂಡರ್‌ದಾರರು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **http://www.eproc.karnataka.gov.in** ನಲ್ಲಿ ಲಾಗಿನ್ ಆಗಿ **ದಿನಾಂಕ: 03.09.2022ರ ಮಧ್ಯಾಹ್ನ 3.00 ಗಂಟೆ ನಂತರ** ಡೌನ್‌ಲೋಡ್ ಮಾಡಿಕೊಳ್ಳಬಹುದು. ಇ-ಟೆಂಡರ್‌ಗಳನ್ನು **ದಿನಾಂಕ: 12.09.2022ರ ಮಧ್ಯಾಹ್ನ 3.00 ಗಂಟೆಯೊಳಗೆ** ಸಲ್ಲಿಸಬಹುದು. ಟೆಂಡರ್‌ನಲ್ಲಿ ಭಾಗವಹಿಸಲಿಚ್ಛಿಸುವ ಟೆಂಡರ್‌ದಾರರು ಅರ್ಹತೆ, ಷರತ್ತುಗಳ ವಿವರ ಇತ್ಯಾದಿಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **http://www.eproc.karnataka.gov.in** ನಿಂದ ಪಡೆದುಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಹೆಲ್ಪ್‌ಡೆಸ್ಕ್ ಅನ್ನು ದೂರವಾಣಿ ಸಂಖ್ಯೆ : 8046010000/8068948777 ಮೂಲಕ ಸಂಪರ್ಕಿಸಬಹುದು.

ವಾಸಾಸಂಇ/ಉನಿ-ಸಿ.ಪಿ/2042/ಎಂಸಿಎ/2022-23

ಸ್ಥಾಪನೆ : 1966
ನೋಂದಣಿ ಸಂಖ್ಯೆ : ಡಿ.ವೈ.ಆರ್.443
ಪ್ರಧಾನ ಕಛೇರಿ : 080-23151204, 23152073
ಬಸವೇಶ್ವರನಗರ ಶಾಖೆ : 080-23231238, 23232587
ಅನ್ನಪೂರ್ಣೇಶ್ವರಿನಗರ ಶಾಖೆ : 080-23183734
e-mail : contact@rcbl.co Website: www.rcbl.co

ದಿ ರಾಜಾಜಿನಗರ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್
ನಂ-741, 3ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010

55ನೇ ಸರ್ವಸದಸ್ಯರ ಸಭೆಯ ಸೂಚನಾ ಪತ್ರ

2021-22ನೇ ಸಾಲಿನ 55ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯನ್ನು ದಿನಾಂಕ 11/09/2022 ರಂದು ಭಾನುವಾರ ಬೆಳಿಗ್ಗೆ 09-30 ಘಂಟೆಗೆ **“ಶ್ರೀ ರಾಜರಾಜೇಶ್ವರಿ ಕಲ್ಯಾಣ ಮಂಟಪ”** ಡಾ॥ ರಾಜ್‌ಕುಮಾರ್ ರಸ್ತೆ, 2ನೇ ವಿಭಾಗ, ರಾಜಾಜಿನಗರ, ಬೆಂಗಳೂರು-560010 ಇಲ್ಲಿ ನಡೆಸಲಾಗುವುದೆಂದು ತಿಳಿಸಿ ದಿನಾಂಕ 19/08/2022 ರಂದು, ಎಲ್ಲಾ ಸದಸ್ಯರುಗಳಿಗೆ ವೈಯಕ್ತಿಕ ನೋಟಿಸು ಕಳಿಸಲಾಗಿತ್ತು. ಪ್ರಸ್ತುತ ಕರ್ನಾಟಕ ಸರ್ಕಾರವು ತನ್ನ ಆದೇಶ ಸಂಖ್ಯೆ : ಸಇ 69 ಸಿಎಲ್‌ಎಮ್ 2022(ಇ) ಬೆಂಗಳೂರು, ದಿನಾಂಕ 25/08/2022ರ ಆದೇಶದಂತೆ Video Conference / Virtual Meeting ಮೂಲಕ ನಡೆಸಲು ಅನುಮತಿಸಿರುವುದನ್ನು ಪರಿಗಣಿಸಿದ ಬ್ಯಾಂಕಿನ ಆಡಳಿತ ಮಂಡಳಿಯು ದಿನಾಂಕ 31/03/2022ಕ್ಕೆ ಮುಕ್ತಾಯಗೊಂಡ ಬ್ಯಾಂಕಿನ (2021-22ನೇ ಸಾಲಿನ) 55ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯನ್ನು ದಿನಾಂಕ 11/09/2022 ರಂದು ಭಾನುವಾರ ಬೆಳಿಗ್ಗೆ 10-00 ಘಂಟೆಗೆ ಬ್ಯಾಂಕಿನ ಗೌರವ ಅಧ್ಯಕ್ಷರಾದ **ಶ್ರೀ ಕೆ. ಎಲ್. ತಿಮ್ಮಪ್ಪ** ಇವರ ಅಧ್ಯಕ್ಷತೆಯಲ್ಲಿ Video Conference / Virtual Meeting ಮೂಲಕ ನಡೆಸಲಾಗುವುದು. ಸದಸ್ಯರು ಅನುವು ಮಾಡಿಕೊಂಡು ಲಿಂಕ್ https://viewnow.in/rcbl.in.2022/ ಮುಖಾಂತರ ಸಭೆಗೆ ಸಕಾಲಕ್ಕೆ ಸೇರಿಕೊಳ್ಳಲು ಕೋರಲಾಗಿದೆ.

ಕಾರ್ಯಕಾರಿ ಮಂಡಳಿ ಆಜ್ಞೆಯ ಮೇರೆಗೆ
ಸಹಿ/-
(ಆರ್. ಗೋವಿಂದರಾಜು)
ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಸ್ಥಳ : ಬೆಂಗಳೂರು
ದಿನಾಂಕ : 02/09/2022

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರು, **ಬೆಂಗಳೂರು ಗ್ರಾಮಾಂತರ ಜಿಲ್ಲೆಯ, ದೊಡ್ಡಬಳ್ಳಾಪುರ ತಾಲೂಕು, ದೊಡ್ಡಬೆಲವಂಗಲ ಹೋಬಳಿ ಕೂಗೋನಹಳ್ಳಿ ಗ್ರಾಮದ** ಈ ಕೆಳಗೆ ಷೆಡ್ಯೂಲ್‌ನಲ್ಲಿ ವಿವರಿಸಿರುವ ಒಟ್ಟು 38 ಎಕರೆ 9.08 ಗುಂಟೆಗಳ ಕೃಷಿ ಭೂಮಿಯನ್ನು ಖರೀದಿಸಲು ಉದ್ದೇಶಿಸಿದ್ದು, ಇದನ್ನು ಇನ್ನು ಮುಂದಕ್ಕೆ **“ಷೆಡ್ಯೂಲ್ ಆಸ್ತಿ”** ಎಂದೂ ಹೇಳಲಾಗುತ್ತಿದ್ದು, ಕ್ರಮವಾಗಿ ಅದರ ಮಾಲೀಕರ ವಿವರವನ್ನು ಈ ಕೆಳಗೆ ನೀಡಲಾಗಿದೆ.
ಯಾವುದೇ ವ್ಯಕ್ತಿ / ವ್ಯಕ್ತಿಗಳು, ಘಟಕ, ಸಂಸ್ಥೆ (ಕಾರ್ಪೊರೇಟ್ ಅಥವಾ ಇತರೆ) ಯಾವುದೇ ಕ್ಲೈಮು, ಹಕ್ಕು, ಟೈಟಲ್ ಅಥವಾ ಆಸಕ್ತಿ ಹೊಂದಿದಲ್ಲಿ ಈ ದಿನಾಂಕದಿಂದ ಹದಿನೈದು (15) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಯನ್ನು ಸೂಕ್ತ ದಾಖಲೆಗಳೊಂದಿಗೆ ಲಿಖಿತ ಮೂಲಕ ಸಂಬಂಧಿಸಿದ ಸೂಕ್ತ ದಾಖಲೆಗಳ ಸಹಿತ ಕೆಳಸಹಿದಾರರಿಗೆ ಸಲ್ಲಿಸತಕ್ಕದ್ದು. ಇಲ್ಲವಾದಲ್ಲಿ, ನನ್ನ ಕಕ್ಷಿದಾರರು ಯಾರೂ ಕ್ಲೈಮುದಾರರು ಇಲ್ಲ ಎಂದು ಪರಿಗಣಿಸಿ, ಮುಂದಿನ ಕ್ರಮ ಕೈಗೊಳ್ಳುವರು. ಈ ಷೆಡ್ಯೂಲ್ ಆಸ್ತಿ ಬಗ್ಗೆ ಹದಿನೈದು (15) ದಿನಗಳ ನಂತರ ಬಂದ ಯಾವುದೇ ರೀತಿಯ ಕ್ಲೈಮುಗಳನ್ನು ಪರಿಗಣಿಸಲಾಗುವುದಿಲ್ಲ, ಇಲ್ಲವೇ ಅದು ನಮ್ಮ ಕಕ್ಷಿದಾರರಿಗೆ ಸಂಬಂಧಿಸಿದ್ದಾಗಿರುವುದಿಲ್ಲ.

ಷೆಡ್ಯೂಲ್ ಆಸ್ತಿ

ಕ್ರ.ಸಂ	ಪ್ರಸ್ತುತ/ಪ್ರಸಕ್ತ ಮಾಲೀಕರು	ಭೂಮಿ ವಿವರ	ಒಟ್ಟು ವಿಸ್ತೀರ್ಣ
1	ಶ್ರೀಮತಿ ಪುಲಿ ಪ್ರಮೀಳ ರೆಡ್ಡಿ ಕೋಂ ಡಾ. ಪಿ. ಗೋಪಾಲ್ ರೆಡ್ಡಿ	ಭೂಮಿಯ ಸರ್ವೆ ನಂ.: 66/ಪಿ17, 165, 72/1, 72/3, 76/1, 76/2,76/4, 76/6, 76/8, 77/2, 77/5 ಮತ್ತು 79/16.	28 ಎಕರೆ 04 ಗುಂಟೆಗಳು
2	ಶ್ರೀ ನಾರಾಯಣ ಸ್ವಾಮಿ ಸಿ., ಬಿನ್ ಲೇಟ್ ಚನ್ನಪ್ಪ	ಭೂಮಿಯ ಸರ್ವೆ ನಂ.: 76/5, 77/4, 78/5, 78/7ಬಿ, 78/8ಎ, 78/12 & 79/15	7 ಎಕರೆ 2.08 ಗುಂಟೆಗಳು
3	ಶ್ರೀ ಆಕರ್ಷ್ ಬಿನ್ ನಾರಾಯಣ ಸ್ವಾಮಿ ಸಿ.	ಭೂಮಿಯ ಸರ್ವೆ ನಂ.: 78/6, 78/7ಎ, 78/8ಬಿ, 78/10 & 78/11	1 ಎಕರೆ 33 ಗುಂಟೆಗಳು
4	ಶ್ರೀಮತಿ ನಾಗರತ್ನ ಎಸ್ ಬಿನ್ ನಾರಾಯಣ ಸ್ವಾಮಿ ಸಿ.	ಭೂಮಿಯ ಸರ್ವೆ ನಂ. 79/2	1 ಎಕರೆ 10 ಗುಂಟೆಗಳು

ಬೆಂಗಳೂರು
ದಿನಾಂಕ: 04.09.2022
ಸಹಿ.-
ಶ್ರೀಮತಿ ಎಲ್ ಎಸ್. ಕಿರಣ್ಮಯಿ / ಶ್ರೀಮತಿ ಸುಜಾತ ನಾಯಕ್
ವಕೀಲರು
M/s. ಕಿರಣ್ಮಯಿ ಲಾ ಫರ್ಮ್, ನಂ.10, ಜಿ-1, ನವೀನ್ ಅಪಾರ್ಟ್‌ಮೆಂಟ್, 13ನೇ ಮುಖ್ಯ ರಸ್ತೆ, ಅರಮನೆ ರಸ್ತೆ, ಬೆಂಗಳೂರು - 560052
ಇಮೇಲ್: kiranmayeelawfirm@gmail.com

ಸಾರ್ವಜನಿಕ ತಿಳುವಳಿಕೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಕೆಳಗೆ ತಿಳಿಸಿರುವ ಷೆಡ್ಯೂಲ್ ಸ್ವತ್ತನ್ನು ಶ್ರೀ ಶಿವಲಿಂಗಯ್ಯ ಬಿನ್ ಲೇಟ್ ಶ್ರೀ ಚನ್ನಬಸವಯ್ಯ ಮತ್ತು ಇತರರು ("ಮಾಲೀಕರು") ತಿಮೇಗೌಡನದೊಡ್ಡಿ ಗ್ರಾಮ, ರಾಮನಗರ ತಾಲ್ಲೂಕು ಮತ್ತು ಜಿಲ್ಲೆಯಲ್ಲಿ ವಾಸವಿದ್ದು ಇವರ ಮಾಲೀಕತ್ವದಲ್ಲಿರುವ ರಾಮನಗರ ಜಿಲ್ಲೆ, ರಾಮನಗರ ತಾಲ್ಲೂಕು, ಕಸಬಾ ಹೋಬಳಿ, ಮಾದಾಪುರ ಗ್ರಾಮದಲ್ಲಿರುವ ಸರ್ವೆ ನಂ.181 ರ 02 ಎಕರೆ 28 ಗುಂಟೆಗಳು ಮತ್ತು ಸರ್ವೆ ನಂ.119 ರ 02 ಎಕರೆ ವಿಸ್ತೀರ್ಣವಿರುವ ಎರಡೂ ಕೃಷಿ ಜಮೀನುಗಳನ್ನು ನಮ್ಮ ಕಕ್ಷೀದಾರರು ಖರೀದಿಸಲು ಆಸಕ್ತರಾಗಿರುತ್ತಾರೆ (ಕೆಳಗೆ ಷೆಡ್ಯೂಲ್ ನಲ್ಲಿ ವಿವರವಾಗಿ ತಿಳಿಸಲಾಗಿದ್ದು ಇನ್ನು ಮುಂದೆ "ಷೆಡ್ಯೂಲ್ ಸ್ವತ್ತು" ಎಂದು ಕರೆಯಲಾಗುವುದು.
ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಮೇಲ್ಕಂಡ ಮಾಲೀಕರನ್ನು ಹೊರತುಪಡಿಸಿ ಮತ್ತಾವುದೇ ವ್ಯಕ್ತಿ/ವ್ಯಕ್ತಿಗಳು, ಅವಿಭಾಜಿತ ಹಿಂದು ಕುಟುಂಬ, ಕಂಪನಿ, ಬ್ಯಾಂಕ್‌ಗಳು, ಹಣಕಾಸು ಸಂಸ್ಥೆ(ಗಳು), ಬ್ಯಾಂಕೇತರ ಹಣಕಾಸು ಸಂಸ್ಥೆ(ಗಳು), ಸಂಸ್ಥೆ, ವ್ಯಕ್ತಿಗಳ ಸಂಘ ಅಥವಾ ಸಂಘಟಿತ ಅಥವಾ ಅಸಂಘಟಿತ ವ್ಯಕ್ತಿಗಳು, ಸಾಲದಾತರು ಷೆಡ್ಯೂಲ್ ಸ್ವತ್ತಿನ ಮೇಲೆ ಅಧಿಕಾರವನ್ನು, ಹಕ್ಕುಗಳನ್ನು, ಚಾರ್ಜ್, ಲೀನ್ ಅಥವಾ ಮತ್ತಾವುದೇ ವಿಧದ ಹಿತಾಸಕ್ತಿಯನ್ನು ಹೊಂದಿದ್ದಲ್ಲಿ ಅಂತಹ ವ್ಯಕ್ತಿ/ವ್ಯಕ್ತಿಗಳು ಷೆಡ್ಯೂಲ್ ಸ್ವತ್ತಿನ ಮೇಲೆ ತಮ್ಮ ಮಾಲೀಕತ್ವವನ್ನು ರುಜುವಾತು ಮಾಡುವ ದಾಖಲೆಗಳು ಯಾವುದಾದರು ಇದ್ದಲ್ಲಿ ಮತ್ತು ಪ್ರಸ್ತಾಪಿತ ಮಾರಾಟಕ್ಕೆ ಅವರ ಆಕ್ಷೇಪಣೆಗಳನ್ನು ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ಅಂತಹ ಕ್ಲೇಮ್/ಕ್ಲೇಮ್‌ಗಳು, ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅವುಗಳನ್ನು ರುಜುವಾತು ಮಾಡುವ ದಾಖಲೆಗಳ ಸಹಿತ ಈ ಸಾರ್ವಜನಿಕ ತಿಳುವಳಿಕೆ ಪ್ರಕಟವಾದ 7 (ಏಳು ದಿನಗಳ) ಒಳಗಾಗಿ ಈ ಕೆಳಕಂಡ ವಿಳಾಸಕ್ಕೆ ತಲುಪುವಂತೆ ಸಲ್ಲಿಸುವುದು. ಒಂದು ವೇಳೆ ಅಂತಹ ಯಾವುದೇ ಆಕ್ಷೇಪಣೆಗಳನ್ನು ನಮಗೆ ಸಲ್ಲಿಸದಿದ್ದಲ್ಲಿ ಮೇಲ್ಕಾಣಿಸಿದ ಮಾಲೀಕರುಗಳು ಷೆಡ್ಯೂಲ್ ಸ್ವತ್ತಿನ ಮೇಲೆ ಅಧಿಕಾರ ಹಿತಾಸಕ್ತಿ ಮತ್ತು ಹಕ್ಕುಗಳನ್ನು ಹೊಂದಿದ್ದಾರೆ ಎಂದು ಪರಿಬಾವಿಸಲಾಗುವುದು. ತದನಂತರ ನಮ್ಮ ಕಕ್ಷೀದಾರರು ಷೆಡ್ಯೂಲ್ ಸ್ವತ್ತನ್ನು ಖರೀದಿಸಲು ಅನಿರ್ಬಂಧಿತವಾಗಿ ಮುಂದುವರೆಯಲಿದ್ದಾರೆ ಎಂದು ತಿಳಿಯುವುದು. ಷೆಡ್ಯೂಲ್ ಸ್ವತ್ತು ರಾಮನಗರ ಜಿಲ್ಲೆ ಮತ್ತು ತಾಲ್ಲೂಕು, ಕಸಬಾ ಹೋಬಳಿ, ಮಾದಾಪುರ ಗ್ರಾಮದಲ್ಲಿರುವ ಕೆಳಗೆ ವಿವರಿಸಿರುವ ಒಟ್ಟಾಗಿ ಎರಡೂ ಸರ್ವೆ ನಂಬರ್‌ಗಳಲ್ಲಿರುವ ಕೃಷಿ ಜಮೀನ ವಿಸ್ತೀರ್ಣ ಮತ್ತು ಅದರ ಚಕ್ಕುಬಂದಿ.

ಷೆಡ್ಯೂಲ್ ಸ್ವತ್ತು
ಐಟಂ ನಂ.1 : ಸರ್ವೆ ನಂ. 181, ವಿಸ್ತೀರ್ಣ 02 ಎಕರೆ 28 ಗುಂಟೆ, ಚಕ್ಕುಬಂದಿ **ಪೂರ್ವಕ್ಕೆ:** ಸರ್ವೆ ನಂ.173/1 ರಲ್ಲಿರುವ ಜಮೀನು; **ಪಶ್ಚಿಮಕ್ಕೆ:** ಸರ್ವೆ ನಂ.119 ರಲ್ಲಿರುವ ಜಮೀನು **ಉತ್ತರಕ್ಕೆ:** ಸರ್ವೆ ನಂ.173/5 ರಲ್ಲಿರುವ ಜಮೀನು; **ದಕ್ಷಿಣಕ್ಕೆ:** ಸರ್ವೆ ನಂ.173/1 ರಲ್ಲಿರುವ ಜಮೀನು
ಐಟಂ ನಂ.2 : ಸರ್ವೆ ನಂ.119, ವಿಸ್ತೀರ್ಣ 02 ಎಕರೆ ಗುಂಟೆ, ಚಕ್ಕುಬಂದಿ **ಪೂರ್ವಕ್ಕೆ:** ಸರ್ವೆ ನಂ.181 ರಲ್ಲಿರುವ ಜಮೀನು; **ಪಶ್ಚಿಮಕ್ಕೆ:** ಸರ್ವೆ ನಂ.119 ರಲ್ಲಿರುವ ಚಿಕ್ಕಬಸವಯ್ಯ ನವರಿಗೆ ಸೇರಿದ ಜಮೀನು; **ಉತ್ತರಕ್ಕೆ:** ಗೋಮಾಳದ ಜಮೀನು; **ದಕ್ಷಿಣಕ್ಕೆ:** ಸರ್ವೆ ನಂ.173/5 ರಲ್ಲಿರುವ ಜಮೀನು
Date : 04-09- 2022
ಮಂಜುನಾಥ ರೆಡ್ಡಿ. ಆರ್ ವನ್ಯ & ಅಸೋಸಿಯೇಟ್ಸ್, ವಕೀಲರು
ನಂ.1932, 15ನೇ ಎ ಕ್ರಾಸ್, 9ನೇ ಮುಖ್ಯ ರಸ್ತೆ, ಜುಡಿಶಿಯಲ್ ಲೇಔಟ್, ಜಿಕೆವಿಕೆ ಅಂಚೆ, ಬೆಂಗಳೂರು - 560065, ಇ-ಮೇಲ್: vanyaassociates@gmail.com

ಚಿತ್ರದುರ್ಗ ಮುರುಘಾ ಶ್ರೀಗಳ ವಿರುದ್ಧ ಮಕ್ಕಳಿಗೆ ಲೈಂಗಿಕ ಕಿರುಕುಳ ನೀಡಿದ ಪ್ರಕರಣ

ಪುರುಷತ್ವ ಪರೀಕ್ಷೆಗೆ ಒಳಗಾದ ಶರಣರು

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ ಆರೋಪದಲ್ಲಿ ಬಂಧಿತರಾಗಿರುವ ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರನ್ನು ಶನಿವಾರ ಪುರುಷತ್ವ ಪರೀಕ್ಷೆಗೆ ಒಳಪಡಿಸಲಾಯಿತು.

ಪೊಲೀಸ್ ವಶದಲ್ಲಿರುವ ಆರೋಪಿಯನ್ನು ತನಿಖಾ ತಂಡ ಜಿಲ್ಲಾ ಆಸ್ಪತ್ರೆಗೆ ಕರೆದೊಯ್ದು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿತು. ವೈದ್ಯರ ತಂಡವು ಶರಣರ ಪುರುಷತ್ವ ಪರೀಕ್ಷೆ ನಡೆಸಿ, ಕೂದಲು ಹಾಗೂ ಉಗುರು ಮಾದರಿಗಳನ್ನು ಸಂಗ್ರಹಿಸಿತು.

‘ಪ್ರಕರಣದ ಮೊದಲ ಆರೋಪಿ ಶಿವಮೂರ್ತಿ ಮುರುಘಾ ಶರಣರ ಪುರುಷತ್ವ ಪರೀಕ್ಷೆ ನಡೆಸಲಾಗಿದೆ. ಲೈಂಗಿಕ ಕ್ರಿಯೆ ನಡೆಸುವ ಸಾಮರ್ಥ್ಯ ಹೊಂದಿದ್ದಾರೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಈ ಪರೀಕ್ಷೆ ಮಾಡಲಾಗುತ್ತದೆ. ಆರೋಪಿ ಹೇಳಿಕೆ ದಾಖಲಿಸಿಕೊಂಡು, ವಿಚಾರಣೆ ಮುಂದುವರಿಸಲಾಗಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಪರಶುರಾಮ್ ತಿಳಿಸಿದ್ದಾರೆ.

ತನಿಖಾಧಿಕಾರಿ ಡಿವೈಎಸ್‌ಪಿ ಅನಿಲ್‌ಕುಮಾರ್ ಕಚೇರಿಯಲ್ಲಿ ವಿಚಾರಣೆ ಮುಂದುವರಿದಿದೆ. ಆರೋಪಿ ಅಸಹಕಾರ ತೋರಿದ್ದರಿಂದ ಶುಕ್ರವಾರ ರಾತ್ರಿ ವಿಶ್ರಾಂತಿ ನೀಡಲಾಗಿತ್ತು. ಚಾಪೆಯ ಮೇಲೆ ಅವರು ರಾತ್ರಿ ಕಳೆದರು. ಶನಿವಾರ ಬೆಳಿಗ್ಗೆ 6.30ಕ್ಕೆ ಎದ್ದು ನಿತ್ಯಕರ್ಮ ಮುಗಿಸಿದ ನಂತರ ತನಿಖಾಧಿಕಾರಿ ಎದುರು ಹಾಜರಾದರು ಎಂದು ಮೂಲಗಳು ಮಾಹಿತಿ ನೀಡಿವೆ.

ವಕೀಲರ ಸಮ್ಮುಖದಲ್ಲಿ ಆರೋಪಿ ವಿಚಾರಣೆಗೆ ಅವಕಾಶ ಕಲ್ಪಿಸುವಂತೆ ಮುರುಘಾ ಶರಣರ ಪರ ವಕೀಲರು ನ್ಯಾಯಾಲಯವನ್ನು ಕೋರಿಕೊಂಡಿದ್ದರು. ಸಿಆರ್‌ಪಿಸಿ ಸೆಕ್ಷನ್ 41–ಡಿ ಅಡಿಯಲ್ಲಿ ಸಲ್ಲಿಕೆಯಾದ ಅರ್ಜಿಯನ್ನು ನ್ಯಾಯಾಧೀಶೆ ಬಿ.ಕೆ. ಕೋಮಲಾ ಪರಿಗಣಿಸಿದರು. ಕೆಲ ಸಂದರ್ಭಗಳನ್ನು ಹೊರತುಪಡಿಸಿ ವಕೀಲರ ಸಮ್ಮುಖದಲ್ಲಿ ಆರೋಪಿಯ ವಿಚಾರಣೆ ನಡೆಸಲಾಯಿತು.

ಪೂಜೆ, ದಾಸೋಹ ನಿರಂತರ

ಮುರುಘಾ ಶರಣರ ಬಂಧನದಿಂದ ಮಠದಲ್ಲಿ ಚಟುವಟಿಕೆ ಸ್ತಬ್ಧವಾಗಿಲ್ಲ. ಕರ್ತೃಗದ್ದುಗೆ ಪೂಜೆ, ದಾಸೋಹ ನಿರಂತರವಾಗಿ ನಡೆಯಲಿದೆ ಎಂದು ಮಠ ತಿಳಿಸಿದೆ. ‘ಪ್ರತಿ ತಿಂಗಳು ನಡೆಯುವ ಸಾಮೂಹಿಕ ವಿವಾಹ ನಿಲ್ಲುವುದಿಲ್ಲ. ಇದೇ 5ರಂದು ಪ್ರತಿ ಬಾರಿಯಂತೆ ಸಾಮೂಹಿಕ ಕಲ್ಯಾಣ ಮಹೋತ್ಸವ ನಡೆಯಲಿದೆ.’ ಎಂದು ಮಠದ ಉಸ್ತುವಾರಿ ವಹಿಸಿಕೊಂಡಿರುವ ಮಹಾಂತ ರುದ್ರೇಶ್ವರ ಸ್ವಾಮೀಜಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಧ್ಯಕ್ಷ ಸ್ಥಾನದಿಂದ ಮುರುಘಾಶ್ರೀ ಅಮಾನತು

ಹೊಳಲ್ಕೆರೆ ತಾಲ್ಲೂಕಿನ ಮಲ್ಲಾಡಿಹಳ್ಳಿಯ ಅನಾಥ ಸೇವಾಶ್ರಮದ ಅಧ್ಯಕ್ಷ ಸ್ಥಾನ ಹಾಗೂ ವಿಶ್ವಸ್ಥ ಸಮಿತಿಯ ಸದಸ್ಯತ್ವದಿಂದ ಶಿವಮೂರ್ತಿ ಮುರುಘಾ ಶರಣರನ್ನು ಅಮಾನತುಗೊಳಿಸಲಾಗಿದೆ. ಶನಿವಾರ ನಡೆದ ವಿಶ್ವಸ್ಥ ಸಮಿತಿಯ ತುರ್ತು ಸಭೆಯಲ್ಲಿ ಈ ಬಗ್ಗೆ ತೀರ್ಮಾನಿಸಲಾಗಿದೆ.

‘ಪೋಕ್ಸೊ ಕಾಯ್ದೆಯಡಿ ಬಂಧನಕ್ಕೊಳಗಾಗಿ ಕ್ರಿಮಿನಲ್ ಆಪಾದನೆ ಎದುರಿಸುತ್ತಿರುವ ಶಿವಮೂರ್ತಿ ಮುರುಘಾ ಶರಣರ ವಿರುದ್ಧ ತಕ್ಷಣದಿಂದ ಜಾರಿಗೆ ಬರುವಂತೆ ಈ ಕ್ರಮ ಜರುಗಿಸಲಾಗಿದೆ’ ಎಂದು ವಿಶ್ವಸ್ಥ ಸಮಿತಿ ಗೌರವ ಕಾರ್ಯದರ್ಶಿ ಪ್ರೊ.ಕೆ.ಇ.ರಾಧಾಕೃಷ್ಣ ತಿಳಿಸಿದ್ದಾರೆ.

ಲೈಂಗಿಕ ದೌರ್ಜನ್ಯ ಆರೋಪ ಕೇಳಿಬಂದಿದ್ದರಿಂದ ಕುಪಿತಗೊಂಡ ಸ್ಥಳೀಯರು ಅನಾಥಸೇವಾಶ್ರಮಕ್ಕೆ ನುಗ್ಗಿ ದಾಂದಲೆ ನಡೆಸಿದ್ದರು. ಶಿವಮೂರ್ತಿ ಮುರುಘಾ ಶರಣರ ಪ್ರತಿಮೆ ಧ್ವಂಸಗೊಳಿಸಿ, ಅವರ ಭಾವಚಿತ್ರಕ್ಕೆ ಬೆಂಕಿ ಹಾಕಿದ್ದರು.

ಜಾಮೀನು ಕೋರಿ ಅರ್ಜಿ

ಮುರುಘಾ ಶರಣರಿಗೆ ಜಾಮೀನು ನೀಡುವಂತೆ ಕೋರಿ ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯಕ್ಕೆ ವಕೀಲ ಕೆ.ಎನ್.ವಿಶ್ವನಾಥಯ್ಯ ಅರ್ಜಿ ಸಲ್ಲಿಸಿದ್ದಾರೆ. ಅರ್ಜಿ ಪರಿಶೀಲನೆಯ ಹಂತದಲ್ಲಿದ್ದು, ಸೋಮವಾರ ನ್ಯಾಯಾಧೀಶರ ಮುಂದೆ ಬರುವ ಸಾಧ್ಯತೆ ಇದೆ.

ಪ್ರಕರಣದ ಮೂರನೇ ಆರೋಪಿ 17 ವರ್ಷದ ಬಾಲಕನ ನಿರೀಕ್ಷಣಾ ಜಾಮೀನು ಅರ್ಜಿಗೆ ತಕರಾರು ಸಲ್ಲಿಕೆಗೆ ಸೋಮವಾರ (ಇದೇ 5) ಅವಕಾಶ ನೀಡಲಾಗಿದೆ. ನಾಲ್ಕನೇ ಆರೋಪಿ ಪರಮಶಿವಯ್ಯ ಹಾಗೂ ಐದನೇ ಆರೋಪಿ ಗಂಗಾಧರ್ ಕೂಡ ನಿರೀಕ್ಷಣಾ ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದು, ತಕರಾರು ಸಲ್ಲಿಕೆಗೆ ಇದೇ 7ರವರೆಗೆ ಅವಕಾಶ ನೀಡಲಾಗಿದೆ. ಎರಡನೇ ಆರೋಪಿ ಹಾಸ್ಟೆಲ್ ವಾರ್ಡನ್ ನ್ಯಾಯಾಂಗ ಬಂಧನದಲ್ಲಿದ್ದು, ಶಿವಮೊಗ್ಗ ಜೈಲಿಗೆ ಸ್ಥಳಾಂತರಿಸಲಾಗಿದೆ.

‘ಬಾಲಕಿಯೊಂದಿಗೆ ಮಾತನಾಡಲು ಅವಕಾಶ ಕೊಡಿ’

ಚಿತ್ರದುರ್ಗ: ‘ಬಾಲಕಿಯೊಂದಿಗೆ ಮಾತನಾಡಲು ಅವಕಾಶ ನೀಡಿ. ಎಸ್.ಕೆ.ಬಸವರಾಜನ್ ಅವರನ್ನು ಕೂಲಂಕಷವಾಗಿ ವಿಚಾರಣೆ ನಡೆಸಿ’ ಎಂದು ಸಂತ್ರಸ್ತ ಬಾಲಕಿಯ ಪೋಷಣೆಯ ಹೊಣೆ ಹೊತ್ತಿರುವ ಚಿಕ್ಕಪ್ಪ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಗೆ ದೂರು ನೀಡಿದ್ದಾರೆ.

‘ಬಾಲಕಿ ಒಂದೂವರೆ ವರ್ಷದಿಂದ ಮುರುಘಾ ಮಠದಲ್ಲಿ ವ್ಯಾಸಂಗ ಮಾಡುತ್ತಿದ್ದಳು. ಮಠದ ಆಡಳಿತಾಧಿಕಾರಿಯಾಗಿದ್ದ ಎಸ್.ಕೆ.ಬಸವರಾಜನ್ ಅವರ ಮನೆಯಲ್ಲಿ ಜುಲೈ 27ರಂದು ಬಾಲಕಿ ಇರುವ ಮಾಹಿತಿ ತಿಳಿದು ಗಾಬರಿಯಾಯಿತು. ಮನೆಗೆ ಬರುವಂತೆ ಮಾಡಿಕೊಂಡ ಮನವಿಗೆ ಆಕೆ ಸ್ಪಂದಿಸಲಿಲ್ಲ. ಬಸವರಾಜನ್ ಹಾಗೂ ಸೌಭಾಗ್ಯ ಅವರ ಜೊತೆಗೆ ಇರುವುದಾಗಿ ಹೇಳಿದ್ದಳು. ಏಕಾಏಕಿ ಶಿವಮೂರ್ತಿ ಮುರುಘಾ ಶರಣರ ವಿರುದ್ಧ ಆರೋಪ ಮಾಡಿರುವುದನ್ನು ಕೇಳಿ ಅಚ್ಚರಿಯಾಗಿದೆ. ಬೆಂಗಳೂರಿನ ಕಾಟನ್‌ಪೇಟೆ ಪೊಲೀಸ್ ಠಾಣೆಯಿಂದ ಬಾಲಕಿಯನ್ನು ಕರೆತಂದ ಬಸವರಾಜನ್, ನನ್ನ ಮನೆಗೆ ಕಳುಹಿಸಿಲ್ಲ. ತಮ್ಮ ಬಳಿಯೇ ಇಟ್ಟುಕೊಂಡು ವಿನಾ ಕಾರಣ ಸುಳ್ಳು ಮಾಹಿತಿ ನೀಡಿದ್ದಾರೆ. ಈ ಬಗ್ಗೆ ಕೂಲಂಕಷ ವಿಚಾರಣೆ ನಡೆಯಬೇಕು’ ಎಂದು ದೂರಿನಲ್ಲಿ ತಿಳಿಸಿದ್ದಾರೆ.



ಐ ಎನ್ ಎಸ್ ವಿಕ್ರಾಂತ್, ಭಾರತದ ಪ್ರಥಮ ಸ್ವದೇಶೀ ನಿರ್ಮಿತ ಏರ್‌ಕ್ರಾಫ್ಟ್ ವಾಹಕ, ನಿಯೋಜಿಸಲಾಗಿದೆ!

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	124.68	26,247	26,643
ಹಾರಂಗಿ	2,859	2,856.43	2,910	1,500
ಕಬಿನಿ	2284.00	2,283.10	6,624	5,000
ಹೇಮಾವತಿ	2,922	2,921.55	8,943	12,800
ಲಿಂಗನಮಕ್ಕಿ	1,819	1814.70	7,226	7,078.67
ಸೂಪಾ (ಮೀ)	564	550.68	4,327	-
ವಾಣಿ	594	588.90	721	-
ತುಂಗಭದ್ರಾ	1,633	1,632.44	98,980	96,272
ಮಲಪ್ರಭಾ	2079.5	2,079.50	7,544	7,544
ಘಟಪ್ರಭಾ	2175	2,175	4,906	4,906
ಭದ್ರಾ	186	185	9,920	17,790
ಆಲಮಟ್ಟಿ (ಮೀ)	519.6	519.60	25,000	25,000
ನಾರಾಯಣಪುರ (ಮೀ)	492.25	492.17	35,000	29,200

* ನೆಲಮಟ್ಟದಿಂದ

ಮುರುಘಾ ಶರಣರನ್ನು ಮಠದಿಂದ ಹೊರಹಾಕಿ: ಯತ್ನಾಳ

ಪ್ರಜಾವಾಣಿ ವಾರ್ತೆ

ವಿಜಯಪುರ: ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಹೊತ್ತಿರುವ ಚಿತ್ರದುರ್ಗದ ಮುರುಘಾ ಶರಣರನ್ನು ಮಠದಿಂದ ಹೊರಹಾಕಬೇಕು ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಒತ್ತಾಯಿಸಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುರುಘಾ ಶ್ರೀಗಳ ವಿರುದ್ಧ ಗಂಭೀರ ಆರೋಪ ಬಂದಿರುವ ಕಾರಣ ಅವರನ್ನು ಹೊರಹಾಕಿ, ಮುಂದಿನ ದಿನಗಳಲ್ಲಿ ವೀರಶೈವ ಲಿಂಗಾಯತ ಸಮಾಜ ಒಳ್ಳೆಯ ಮಠಾಧೀಶರನ್ನು ನೇಮಕ ಮಾಡಬೇಕು ಎಂದು ಸಲಹೆ ನೀಡಿದರು.

ಮುರುಘಾ ಮಠ ಉಳಿಸುವ ಕೆಲಸ ಸರ್ಕಾರ ಮಾಡಬೇಕು, ಒಳ್ಳೆಯ ಆಡಳಿತಾಧಿಕಾರಿಯನ್ನು ತಕ್ಷಣ ನೇಮಿಸಬೇಕು ಎಂದು ಆಗ್ರಹಿಸಿದರು.

ಚಿತ್ರದುರ್ಗ ಆಳಿದ ಮದಕರಿ ನಾಯಕರ ವಂಶದವರು ಮಠಕ್ಕೆ ಸಾವಿರಾರು ಎಕರೆ ಜಮೀನು ನೀಡಿದ್ದಾರೆ. ಸಾವಿರಾರು ಕೋಟಿ ಆಸ್ತಿಯಿದೆ. ಇದೇ ಕಾರಣದಿಂದ ಮಠ ಎಂದಿಗೂ ಕೆಟ್ಟ ಜನರ ಕೈಗೆ ಸಿಗಬಾರದು ಎಂದರು.

‘ಮಠದಿಂದ ಬಸವ ಶ್ರೀ ಪ್ರಶಸ್ತಿ ಪಡೆದವರು ವಾಪಸ್ ಕೊಡುತ್ತಿದ್ದಾರೆ. ಅದೇ ರೀತಿ ಮುರುಘಾ ಮಠದಲ್ಲಿ ವಿಜಯೇಂದ್ರ ಏನಿಟ್ಟಿದ್ದಾನೋ ಅದನ್ನು ವಾಪಸ್ ಕೊಡಲಿ, ವಿಜಯೇಂದ್ರ ಏನು ಕೊಟ್ಟಿದ್ದಾನೋ ಅದನ್ನು ವಸೂಲಿ ಮಾಡಲಿ’ ಎಂದರು.

‘ಮುರುಘಾ ಶ್ರೀಗಳು ಹಿಂದೂ ಧರ್ಮದ ಬಗ್ಗೆ ಹಗುರವಾಗಿ ಮಾತನಾಡುತ್ತಿದ್ದರು. ವೀರಶೈವ ಲಿಂಗಾಯತ ಮಠದಲ್ಲಿ ಟಿಪ್ಪು ಸುಲ್ತಾನ್ ಮೂರ್ತಿ ಇಟ್ಟಿದ್ದರು. ಗೋಮಾತೆಯ ಬಗ್ಗೆಯೂ ಅವಹೇಳನಕಾರಿಯಾಗಿ ಮಾತನಾಡಿದ್ದರು’ ಎಂದು ಅವರು ಆರೋಪಿಸಿದರು.

‘ಈ ದೇಶವನ್ನು ಹಾಳು ಮಾಡಲು ಹೊರಟಿರುವ ಪ್ರಗತಿಪರರು ಹಾಗೂ ಬುದ್ಧಿಜೀವಿಗಳೇ ಮುರುಘಾ ಶರಣರನ್ನು ಹಾಳು ಮಾಡಿದ್ದು, ಪ್ರಗತಿಪರರು ಎಂದು ಹೇಳಿಕೊಂಡವರೇ ಸ್ವಾಮೀಜಿಯನ್ನು ದಿಕ್ಕು ತಪ್ಪಿಸಿದವರು. ಇಂಥ ಸಂದರ್ಭದಲ್ಲಿ ಯಾರೂ ಅವರ ಪರ ನಿಲ್ಲಲ್ಲ. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಕಠಿಣ ಕ್ರಮ ತೆಗೆದುಕೊಳ್ಳಬೇಕು’ ಎಂದು ಹೇಳಿದ್ದಾರೆ ಎಂದರು.

‘ಹಿಂದೂ ಧರ್ಮ ರಕ್ಷಣೆ ಮಾಡಲು ಖಾವಿ ಇದೆಯೇ ಹೊರತು, ಇಸ್ಲಾಂ ಧರ್ಮದ ವರ್ಣನೆ, ಗುಣಗಾನ ಮಾಡಲಿಕ್ಕೆ ಅಲ್ಲ. ಹಿಂದೂ ಧರ್ಮದ ಗುಣಗಾನ ಮಾಡಿ, ಬೆಳೆಸಿ ಇತರೆ ಧರ್ಮದವರನ್ನು ಹಿಂದೂ ಧರ್ಮಕ್ಕೆ ಕರೆ ತನ್ನಿ. ಲವ್ ಜಿಹಾದ್‌ಗಳಂತ ಘಟನೆ ತಪ್ಪಿಸಿ, ಅದನ್ನು ಬಿಟ್ಟು ವಿಭೂತಿ, ಕುಂಕುಮ ಹಚ್ಚಿಕೊಂಡು ಟಿಪ್ಪು ಸುಲ್ತಾನ್ ಆರಾಧನೆ ಮಾಡಿದರೆ ಹೇಗೆ’ ಎಂದು ಪ್ರಶ್ನಿಸಿದರು.

‘ಟಿಪ್ಪು ಸುಲ್ತಾನ್ ಹೊಗಳಿದ ಎಲ್ಲರೂ ಹಾಳಾಗಿ ಹೋಗಿದ್ದಾರೆ. ಟಿಪ್ಪು ಬಗ್ಗೆ ಸಿನಿಮಾ ಮಾಡಿದವನ ಪೆಂಡಾಲ್ ಸುಟ್ಟು ಹೋಗಿದೆ. ಟಿಪ್ಪುವಿನ ಖಡ್ಗ ತಂದಿದ್ದ ವಿಜಯ್ ಮಲ್ಯ ದೇಶ ಬಿಟ್ಟು ಓಡಿ ಹೋಗಿದ್ದಾನೆ. ಟಿಪ್ಪು ಜಯಂತಿ ಮಾಡಿ ಸಿದ್ದರಾಮಯ್ಯ ಚುನಾವಣೆಯಲ್ಲಿ ಸೋತಿದ್ದಾರೆ. ಟಿಪ್ಪು ಬಗ್ಗೆ ಯಾವುದೇ ನಾಯಕರು ಗುಣಗಾನ ಮಾಡಬೇಡಿ, ನಿಮಗೂ ಹಾಗೇ ಆಗುತ್ತದೆ’ ಎಂದರು.

ಸ್ಟ್ಯಾನ್ಲಿ, ಪರಶುರಾಮ್‌ಗೆ ಬೆದರಿಕೆ; ರಕ್ಷಣೆಗೆ ಮೊರೆ

ಮೈಸೂರು: ಶಿವಮೂರ್ತಿ ಮುರುಘಾ ಶರಣರ ವಿರುದ್ಧದ ಪೋಕ್ಸೊ ಪ್ರಕರಣದ ಸಂತ್ರಸ್ತೆಯರಿಗೆ ಆಶ್ರಯ ನೀಡಿ, ಪ್ರಕರಣವನ್ನು ಬಯಲಿಗೆ ತಂದ ಒಡನಾಡಿ ಸಂಸ್ಥೆಯ ನಿರ್ದೇಶಕರಾದ ಸ್ಟ್ಯಾನ್ಲಿ, ಪರಶುರಾಮ್ ಎಂ.ಎಲ್ ಅವರಿಗೆ ನಿರಂತರ ಜೀವ ಬೆದರಿಕೆ ಬರುತ್ತಿದ್ದು, ರಕ್ಷಣೆ ನೀಡುವಂತೆ ನಗರ ಪೊಲೀಸ್ ಆಯುಕ್ತ ಚಂದ್ರಗುಪ್ತ ಅವರಿಗೆ ಶನಿವಾರ ಮನವಿ ಮಾಡಿದ್ದಾರೆ.

‘ಶರಣರ ಬಂಧನದ ಬಳಿಕ ಅವರ ಅನುಯಾಯಿಗಳು ಮತ್ತು ಮಠದ ಪರವಾಗಿರುವ ಹಿತಾಸಕ್ತಿಗಳು ಪ್ರಾಣ ಬೆದರಿಕೆ ಒಡ್ಡುತ್ತಿದ್ದು, ಅಸಮಾಧಾನವನ್ನು ತೋಡಿಕೊಂಡಿದ್ದಾರೆ. ಈ ಕಾರಣದಿಂದ ನಮಗೂ, ಕುಟುಂಬಕ್ಕೂ ರಕ್ಷಣೆ ಒದಗಿಸಬೇಕು. ಒಡನಾಡಿ ಮಡಿಲು ಸಂಸ್ಥೆಯು ಹೆಣ್ಣು ಮಕ್ಕಳ ಪುನರ್ವಸತಿ ಸಂಸ್ಥೆಯಾಗಿದ್ದು, ಸಂಸ್ಥೆಗೆ ಗನ್‌ಮ್ಯಾನ್ ಸಹಿತ ಸೂಕ್ತ ರಕ್ಷಣೆ ಒದಗಿಸಬೇಕು’ ಎಂದು ಕೋರಿದ್ದಾರೆ.

‘ಭಾನುವಾರ ಠಾಣೆಗೆ ಬರುವಂತೆ ಇಬ್ಬರಿಗೂ ತಿಳಿಸಲಾಗಿದೆ’ ಎಂದು ವಿಜಯನಗರ ಠಾಣೆಯ ಠಾಣಾಧಿಕಾರಿ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು
ದ್ವಾರಕೀಶ್
ಹಿರಿಯ ನಟ, ನಿರ್ಮಾಪಕ
ಕುಳ್ಳ @ 80
ಸೆಲೆಬ್ರಿಟಿ LIVE

ಬೆಳಿಗ್ಗೆ 10.30

ಪಾಡ್‌ಕಾಸ್ಟ್: ಕಥಾಸಾಗರ: ಬೆಳಿಗ್ಗೆ 9
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ನಾಳೆ
ಅತ್ಯಾಚಾರ, ಲೈಂಗಿಕ ದೌರ್ಜನ್ಯ ಎಲ್ಲಿದೆಯೋ ನ್ಯಾಯ?
ಸಂವಾದ
ಭಾಗವಹಿಸುವವರು:
ಕೆ. ನೀಲಾ, ಲೇಖಕಿ, ಸಾಮಾಜಿಕ ಕಾರ್ಯಕರ್ತೆ, ಕಲಬುರ್ಗಿ
ಸ್ಟ್ಯಾನ್ಲಿ, ಸಹ ಸಂಸ್ಥಾಪಕ, ಒಡನಾಡಿ, ಮೈಸೂರು
ವಿ.ಕೆ. ಸಂಜ್ಯೋತಿ, ಚಿತ್ರನಿರ್ದೇಶಕಿ, ಬೆಂಗಳೂರು
ಮಲ್ಲಿಗೆ ಸಿರಿಮನೆ, ಸಂಚಾಲಕಿ, ಕರ್ನಾಟಕ ಜನಶಕ್ತಿ, ಮಂಡ್ಯ
ಮಧ್ಯಾಹ್ನ 12 ರಿಂದ 1

‘ನಮ್ಮ ನಡಿಗೆ ಶಾಂತಿ ಕಡೆಗೆ’ ಜಾಥಾ: ಸಾವಿರಾರು ಜನರು ಭಾಗಿ

ಶಾಂತಿ– ಸೌಹಾರ್ದದ ಸಂದೇಶ ಸಾರಿದ ‘ನಡಿಗೆ’

ಪ್ರಜಾವಾಣಿ ವಾರ್ತೆ

ಶಿವಮೊಗ್ಗದಲ್ಲಿ ಶನಿವಾರ ನಡೆದ ‘ನಮ್ಮ ನಡಿಗೆ ಶಾಂತಿ ಕಡೆಗೆ’ ಜಾಥಾದಲ್ಲಿ ವಿವಿಧ ಧರ್ಮಗಳ ಸಾವಿರಾರು ಜನರು ಸೇರಿದ್ದರು – ಪ್ರಜಾವಾಣಿ ಚಿತ್ರ/ ಶಿವಮೊಗ್ಗ ನಾಗರಾಜ್

ಶಿವಮೊಗ್ಗ: ಕೋಮು ಗಲಭೆಗಳಿಂದಾಗಿ ಅಶಾಂತಿಯ ವಾತಾವರಣ ನಿರ್ಮಾಣಗೊಂಡಿದ್ದ ನಗರದಲ್ಲಿ ಶನಿವಾರ ನಡೆದ ‘ನಮ್ಮ ನಡಿಗೆ ಶಾಂತಿ ಕಡೆಗೆ’ ಎಂಬ ಸದ್ಭಾವನಾ ಜಾಥಾ ಶಾಂತಿ–ಸೌಹಾರ್ದದ ಸಂದೇಶವನ್ನು ಸಾರಿತು. ನಗರದ ಅಭಿವೃದ್ಧಿಯ ದೃಷ್ಟಿಯಿಂದ ಕೋಮುಸೌಹಾರ್ದ ಕಾಪಾಡುವ ಅಗತ್ಯತೆಯನ್ನು ಒತ್ತಿ ಹೇಳಿತು.

ನಗರದಲ್ಲಿ ಈಚೆಗೆ ನಡೆದಿದ್ದ ಕೋಮು ಗಲಭೆಗಳಿಂದ ವ್ಯಾಪಾರ–ವಹಿವಾಟಿನ ಮೇಲೂ ಪರಿಣಾಮ ಬೀರಿತ್ತು. ಹೀಗಾಗಿ ವಿವಿಧ ಸಂಘಟನೆಗಳು ಜಿಲ್ಲಾಡಳಿತದ ಸಹಯೋಗದಲ್ಲಿ ಪಕ್ಷ–ಧರ್ಮಾತೀತವಾಗಿ ಜಾಥಾವನ್ನು ಹಮ್ಮಿಕೊಂಡಿದ್ದವು. ಹಿಂದೂ, ಮುಸ್ಲಿಂ ಹಾಗೂ ಕ್ರೈಸ್ತ ಧರ್ಮಗುರುಗಳು, ಪ್ರಗತಿಪರ ಸಂಘಟನೆಗಳ ಮುಖಂಡರು, ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಜಾಥಾದಲ್ಲಿ ಹೆಜ್ಜೆ ಹಾಕಿದರು.

ನಗರದ ಸಿಮ್ಸ್‌ನಿಂದ ಸೈನ್ಸ್ ಮೈದಾನದವರೆಗೆ ನಡೆದ ಜಾಥಾದಲ್ಲಿ ಪಾಲ್ಗೊಂಡಿದ್ದ ಜನರು, ‘ಸ್ನೇಹ, ಶಾಂತಿ ನಮ್ಮ ಉಸಿರು’, ‘ನಮ್ಮ ನಡಿಗೆ ಶಾಂತಿ ಕಡೆಗೆ’ ಎಂಬ ಘೋಷಣೆಗಳನ್ನು ಕೂಗಿದರು. ಜಾಥಾದ ವಾಹನದಲ್ಲಿದ್ದ ‘ಹಿಂದೂ–ಮುಸ್ಲಿಂ ಶತ್ರುಗಳಲ್ಲ, ನಾವೆಲ್ಲರೂ ಒಂದೇ. ಶಾಂತಿಯಿಂದ ನೆಮ್ಮದಿ ಸಾಧ್ಯ’ ಎಂಬ ಬರಹ; ಹಿಂದೂ–ಮುಸ್ಲಿಂ ವ್ಯಕ್ತಿಗಳು ಪರಸ್ಪರ ಮುತ್ತಿಕ್ಕುತ್ತಿದ್ದ ಚಿತ್ರ ಗಮನ ಸೆಳೆಯಿತು.

ಜಾಥಾಕ್ಕೆ ಸಿರಿಗೆರೆಯ ತರಳಬಾಳು ಬೃಹನ್ಮಠದ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಚಾಲನೆ ನೀಡಿದರು. ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಡಾ.ಮುಸ್ತಫಾ ಹುಸೇನ್, ಜಿಲ್ಲಾಧಿಕಾರಿ ಡಾ.ಆರ್.ಸೆಲ್ವಮಣಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಿಪ್ರಸಾದ್ ಸಾಥ್ ನೀಡಿದರು.

ಜಾಥಾ ಬಳಿಕ ನಡೆದ ಸಭೆಯಲ್ಲಿ ಮಾತನಾಡಿದ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ‘ದ್ವೇಷ ಬಿಟ್ಟು ಮಾನವೀಯ ಗುಣ ಬೆಳೆಸಿಕೊಂಡರೆ ಶಾಂತಿ ತಾನಾಗಿಯೇ ನಮ್ಮನ್ನು ಆವರಿಸುತ್ತದೆ. ಶಿವಮೊಗ್ಗ ಸಮಾಜವಾದ, ವೈಚಾರಿಕತೆಯ ನೆಲ. ಇಂತಹ ಸ್ಥಳದಲ್ಲಿ ಇತ್ತೀಚೆಗೆ ಕೋಮು ಸೌಹಾರ್ದ ಕದಡುವ ಘಟನೆಗಳು ನಡೆಯುತ್ತಿರುವುದು ವಿಷಾದನೀಯ’ ಎಂದರು.

ಬೆಕ್ಕಿನ ಕಲ್ಮಠದ ಮಲ್ಲಿಕಾರ್ಜುನ ಮುರುಘರಾಜೇಂದ್ರ ಸ್ವಾಮೀಜಿ, ಜಡೆ ಮಠದ ಮಹಾಂತ ಸ್ವಾಮೀಜಿ, ಬಸವಕೇಂದ್ರದ ಬಸವಮರುಳಸಿದ್ಧ ಸ್ವಾಮೀಜಿ, ಧರ್ಮಗುರು ಡಾ.ಕ್ಲಿಫರ್ಡ್ ರೋಷನ್ ಪಿಂಟೊ, ಜಾಮಿಯಾ ಮಸೀದಿಯ ಮೌಲ್ವಿ ಮುಫ್ತಿ ಅಖ್ವಿಲ್ ರಝಾ ಇದ್ದರು.

> ಶಾಂತಿಗಾಗಿ ನಡೆಯ ನಿಮ್ಮ ಮಿಡಿತ ಶಿವಮೊಗ್ಗದ ಜನರ ಹೃದಯ ಬಡಿತವಾಗಿರಲಿ. ಶಾಂತಿಯ ಬದುಕಿಗಾಗಿ ನಮ್ಮ ಹಿತಾಸಕ್ತಿ, ಸ್ವಾರ್ಥ ಬಿಡಬೇಕು
> **ಡಾ.ಎಸ್.ಜೆ. ಫ್ರಾನ್ಸಿಸ್ ಸೆರಾವೋ**, ಬಿಷಪ್, ಶಿವಮೊಗ್ಗ

> ಎಲ್ಲಾ ಧರ್ಮಗಳ ಸಾರ ಒಂದೇ. ಸಮಾನತೆಯ ಸಂದೇಶ ಸಾರಬೇಕಿದೆ. ಧರ್ಮ ಮುಂದಿಟ್ಟುಕೊಂಡು ದ್ವೇಷ ಕಾರುವವರಿಗೆ ಈ ಶಾಂತಿ ನಡಿಗೆ ಒಂದು ಪಾಠವಾಗಲಿ
> **ಮೌಲಾನಾ ಶಾಹುಲ್ ಹಮೀದ್**, ಮುಸ್ಲಿಂ ಮುಖಂಡ

ಬೇಗ್ ಅಕ್ರಮಕ್ಕೆ ಜೈರಾಜ್ ಸಹಕಾರ!

ಒಂದನೇ ಪುಟದಿಂದ

ಹಣ ಅಕ್ರಮ ವರ್ಗಾವಣೆ ತಡೆ (ಪಿಎಂಎಲ್) ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡಿದ್ದ ಅಧಿಕಾರಿಗಳು, ಭೂ ಅಕ್ರಮದ ಮಾಹಿತಿಯನ್ನು ಕರ್ನಾಟಕ ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಹಂಚಿಕೊಂಡಿದ್ದರು.

ಈ ಬಗ್ಗೆ ಸಮಗ್ರ ಪರಿಶೀಲನೆ ನಡೆಸಿ ವರದಿ ಸಲ್ಲಿಸುವಂತೆ ಎಸಿಬಿಯ ಎಸ್ಪಿಗೆ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು (ಎಡಿಜಿಪಿ) ಸೂಚಿಸಿದ್ದರು. ‘ಕ್ರಯಪತ್ರ ಮಾಡಿಕೊಟ್ಟ ಬಿಬಿಎಂಪಿ ಅಧಿಕಾರಿಗಳ ವಿರುದ್ಧ ಹಾಗೂ ರಾಜಕೀಯ ಪ್ರಭಾವ ಬಳಸಿ ನಿಯಮ ಉಲ್ಲಂಘಿಸಿ ಭೂಕಬಳಿಕೆ ಮಾಡಿರುವ ರೋಷನ್ ಬೇಗ್ ವಿರುದ್ಧ ಹೆಚ್ಚಿನ ತನಿಖೆ ನಡೆಸಬೇಕಿದೆ. ಅದಕ್ಕಾಗಿ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆಯಂತೆ ಪೂರ್ವಾನುಮತಿ ದೊರಕಿಸಿ ಕೊಡಬೇಕು’ ಎಂದು ಎಸ್ಪಿ ಅವರು 2021ರ ಡಿಸೆಂಬರ್ 13ರಂದು ಎಡಿಜಿಪಿ ಅವರಿಗೆ ಪತ್ರ ಬರೆದಿದ್ದರು.

ಬಿಬಿಎಂಪಿ ಅಧಿಕಾರಿಗಳ ವಿರುದ್ಧ ವಿಚಾರಣೆ ನಡೆಸಲು ಪೂರ್ವಾನುಮತಿ ನೀಡುವಂತೆ ಎಡಿಜಿಪಿ ಅವರು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ (ಎಸಿಎಸ್) ರಾಕೇಶ್ ಸಿಂಗ್ ಅವರಿಗೆ 2022ರ ಜನವರಿ 12ರಂದು ಪ್ರಸ್ತಾವನೆ ಸಲ್ಲಿಸಿದ್ದರು.

ಡ್ಯಾನಿಷ್ ಪಬ್ಲಿಕೇಷನ್‌ಗೆ ಕ್ರಯಪತ್ರ ಮಾಡಿಕೊಟ್ಟ ಬಿಬಿಎಂಪಿ ಅಧಿಕಾರಿಗಳ ಮಾಹಿತಿಯನ್ನು ಕೂಡಲೇ ಕಳುಹಿಸಿಕೊಡುವಂತೆ ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರು ಫೆಬ್ರುವರಿ 21ರಂದು ಸೂಚಿಸಿದ್ದರು. ಆದರೆ, ಮುಖ್ಯ ಆಯುಕ್ತರು ಯಾವುದೇ ಮಾಹಿತಿ ನೀಡಿರಲಿಲ್ಲ. ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಆಗಸ್ಟ್ 18ರಂದು ನಗರಾಭಿವೃದ್ಧಿ ಇಲಾಖೆಯ ಉಪ ಕಾರ್ಯದರ್ಶಿ ಪತ್ರ ಬರೆದು, ಕೂಡಲೇ ಮಾಹಿತಿ ನೀಡುವಂತೆ ಕೋರಿದ್ದರು. ‘ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಹಿಂದೇಟು’ ಶೀರ್ಷಿಕೆಯಡಿ ‘ಪ್ರಜಾವಾಣಿ’ ವಿಶೇಷ ವರದಿ ಪ್ರಕಟಿಸಿ ಗಮನ ಸೆಳೆದಿತ್ತು. ಅದರ ಬೆನ್ನಲ್ಲೇ, ಬಿಬಿಎಂಪಿಯು ವರದಿ ಸಲ್ಲಿಸಿದೆ.

ಸ್ತ್ರೀ ನಿಂದನೆ: ಶಾಸಕ ಅರವಿಂದ ಲಿಂಬಾವಳಿ ವಿರುದ್ಧ ತೀವ್ರ ಆಕ್ರೋಶ

ಪ್ರಜಾವಾಣಿ ವಾರ್ತೆ

ಅರವಿಂದ ಲಿಂಬಾವಳಿ

ಬೆಂಗಳೂರು: ಅಹವಾಲು ಹೇಳಿಕೊಳ್ಳಲು ಬಂದ ಮಹಿಳೆಯೊಬ್ಬರನ್ನು ಏಕವಚನದಲ್ಲಿ ನಿಂದಿಸಿದ ಬಿಜೆಪಿ ಶಾಸಕ ಅರವಿಂದ ಲಿಂಬಾವಳಿ ವಿರುದ್ಧ ತೀವ್ರ ಆಕ್ರೋಶ ವ್ಯಕ್ತವಾಗಿದೆ.

ಶಾಸಕರು ನಿಂದಿಸಿರುವ ವಿಡಿಯೊ ತುಣುಕು ಟ್ಯಾಗ್ ಮಾಡಿ ಸಾಮಾಜಿಕ ಜಾಲತಾಣದಲ್ಲಿ ನೆಟ್ಟಿಗರು ಹರಿಹಾಯ್ದಿದ್ದಾರೆ. ಶಾಸಕರಾಗಿ ಮುಂದುವರಿಯಲು ಲಿಂಬಾವಳಿ ಅನರ್ಹರು ಎಂದು ಟೀಕಿಸಿದ್ದಾರೆ.

ಈ ಬಗ್ಗೆ ಟ್ವೀಟ್ ಮಾಡಿರುವ ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ‘ಸ್ತ್ರೀ ಉದ್ಧಾರಕರಂತೆ ಕೇವಲ ಬೂಟಾಟಿಕೆ ಮಾತಾಡುವ ಬಿಜೆಪಿಗರೇ, ನಿಮ್ಮ ಪಕ್ಷದ ಅರವಿಂದ ಲಿಂಬಾವಳಿಯವರು ಒಬ್ಬ ಜನಪ್ರತಿನಿಧಿಯಾಗಿ ಮಹಿಳೆಯೊಂದಿಗೆ ಅನುಚಿತವಾಗಿ ನಡೆದುಕೊಂಡ ರೀತಿ ಅಕ್ಷಮ್ಯ’ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

‘ಇಂಥ ಮಹಿಳಾ ವಿರೋಧಿ ನಡೆಯ ವಿರುದ್ಧ ಮಾತನಾಡುವ ಧೈರ್ಯ ತೋರುತ್ತೀರಾ’ ಎಂದು ಪ್ರಶ್ನಿಸಿರುವ ಅವರು, ‘ಅರವಿಂದ ಲಿಂಬಾವಳಿಯವರು ಆ ಮಹಿಳೆಯ ಕ್ಷಮೆ ಕೇಳುತ್ತಾರೆಯೇ’ ಎಂದೂ ಕೇಳಿದ್ದಾರೆ.

ರಾಜ್ಯ ಕಾಂಗ್ರೆಸ್ ಘಟಕವೂ ಟ್ವೀಟ್ ಮಾಡಿದ್ದು, ‘ಮಹಿಳೆಯನ್ನು ಮಾಧುಸ್ವಾಮಿ ನಿಂದಿಸಿದ್ದರು, ಸಿದ್ದು ಸವದಿ ಮಹಿಳೆಗೆ ಹಲ್ಲೆ ಮಾಡಿದ್ದರು, ಉದ್ಯೋಗ ಕೇಳಿದಾಕೆಯನ್ನು ರಮೇಶ ಜಾರಕಿಹೊಳಿ ಮಂಚ ಹತ್ತಿಸಿದ್ದರು. ಅತ್ಯಾಚಾರ ಸಂತ್ರಸ್ತೆಯದ್ದೇ ತಪ್ಪು ಎಂದು ಆರಗ ಜ್ಞಾನೇಂದ್ರ ಹೇಳಿದ್ದರು. ಇದೀಗ, ಅರವಿಂದ ಲಿಂಬಾವಳಿ ಮಹಿಳೆಯ ಮೇಲೆ ದರ್ಪ ಮೆರೆದಿದ್ದಾರೆ. ಇದೇನಾ ಬಿಜೆಪಿಯ ಸ್ತ್ರೀ ಗೌರವದ ಸಂಸ್ಕೃತಿ’ ಎಂದು ಪ್ರಶ್ನಿಸಿದೆ.

ಕಾಂಗ್ರೆಸ್ ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪಾ ಅಮರನಾಥ್ ಪತ್ರಿಕಾಗೋಷ್ಠಿ ನಡೆಸಿ, ‘ಲಿಂಬಾವಳಿಯವರು ಮಹಿಳೆಯ ಕ್ಷಮೆ ಕೇಳಬೇಕು. ಇಲ್ಲದಿದ್ದರೆ ಬಿಜೆಪಿ ನಾಯಕರು ಅವರ ರಾಜೀನಾಮೆ ಪಡೆಯಬೇಕು’ ಎಂದು ಆಗ್ರಹಿಸಿದರು.

ಮಹಿಳಾ ಆಯೋಗಕ್ಕೆ ಎಎಪಿ ದೂರು: ಲಿಂಬಾವಳಿ ವಿರುದ್ಧ ಆಮ್ ಆದ್ಮಿ ಪಕ್ಷ (ಎಎಪಿ) ಕರ್ನಾಟಕ ರಾಜ್ಯ ಮಹಿಳಾ ಆಯೋಗಕ್ಕೆ ದೂರು ನೀಡಿದೆ. ‘ಮಹಿಳೆ ಜೊತೆ ಅನುಚಿತವಾಗಿ ವರ್ತಿಸಿದ ಲಿಂಬಾವಳಿ ವಿರುದ್ಧ ಪೊಲೀಸರು ಕ್ರಮ ಕೈಗೊಳ್ಳಬೇಕು’ ಎಂದು ಎಎಪಿ ಮಹಿಳಾ ಘಟಕದ ಅಧ್ಯಕ್ಷೆ ಕುಶಲಸ್ವಾಮಿ ಆಗ್ರಹಿಸಿದರು.

ಮಹಿಳೆ ವಿರುದ್ಧ ಎಫ್‌ಐಆರ್

ಸರ್ಕಾರಿ ಜಾಗ ಒತ್ತುವರಿ ಮಾಡಿ ಕಾಂಪೌಂಡ್ ನಿರ್ಮಿಸಿದ್ದ ಆರೋಪದಡಿ ರುತ್ ಸಗಾಯಿ ಮೇರಿ ಅಮೀಲಾ ವಿರುದ್ಧ ವೈಟ್‌ಫೀಲ್ಡ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಕಂದಾಯ ಅಧಿಕಾರಿ ಪಾರ್ಥಸಾರಥಿ ದೂರು ನೀಡಿದ್ದಾರೆ. ಇದರನ್ವಯ ಮಹಿಳೆ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ನಾನೇನು ರೇಪ್ ಮಾಡಿದ್ದೀನಾ?’

‘ಆಕೆ ರಾಜಕಾಲುವೆ ಒತ್ತುವರಿ ಮಾಡಿದ್ದಾರೆ. ಮಹಿಳೆಗೆ ನಾನು ಏನೋ ಮಾಡಿದ್ದೀನಿ ಎನ್ನುವಂತೆ ಮಾಧ್ಯಮಗಳು ಹೇಳುತ್ತಿವೆ. ನಾನೇನು ರೇಪ್ ಮಾಡಿದ್ದೀನಾ’ ಎಂದು ಅರವಿಂದ ಲಿಂಬಾವಳಿ ಪ್ರಶ್ನಿಸಿರುವುದು ಟೀಕೆಗೆ ಗುರಿಯಾಗಿದೆ.

ಮಹಿಳೆಯೊಬ್ಬರಿಗೆ ನಿಂದಿಸಿದ ಬಗ್ಗೆ ಪ್ರತಿಕ್ರಿಯೆ ಪಡೆಯಲು ಮುಂದಾದ ಸುದ್ದಿವಾಹಿನಿಯೊಂದಕ್ಕೆ ಪ್ರತಿಕ್ರಿಯಿಸುವಾಗ ಸಿಟ್ಟಾದ ಲಿಂಬಾವಳಿ ಈ ರೀತಿ ಅಸಹನೆ ತೋರಿದರು. ಈ ವಿಡಿಯೊ ತುಣುಕು ಕೂಡ ಸಾಮಾಜಿಕ ಜಾಲತಾಣಗಳಲ್ಲಿ ಈಗ ಹರಿದಾಡುತ್ತಿದೆ.

4,244 ಅಂಗನವಾಡಿ ಆರಂಭಕ್ಕೆ ಆದೇಶ

ಬೆಂಗಳೂರು: ಪೋಷಣ್ 2.0 ಯೋಜನೆಯಡಿ ರಾಜ್ಯದಲ್ಲಿ 4,244 ಅಂಗನವಾಡಿಗಳನ್ನು ಆರಂಭಿಸಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಗುರುವಾರ ಆದೇಶ ಹೊರಡಿಸಿದೆ.

ಕಡಿಮೆ ಆದಾಯದ ಜನರು ಹಾಗೂ ವಲಸೆ ಮತ್ತು ಭೂರಹಿತ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುವ ಪ್ರದೇಶಗಳಲ್ಲಿ ಈ ಅಂಗನವಾಡಿಗಳನ್ನು ಆರಂಭಿಸಲಾಗುತ್ತದೆ. ಗ್ರಾಮೀಣ ಪ್ರದೇಶದಲ್ಲಿ 1,655 ಮತ್ತು ನಗರ ಪ್ರದೇಶಗಳಲ್ಲಿ 2,589 ಅಂಗನವಾಡಿಗಳನ್ನು ಆರಂಭಿಸಲಾಗುತ್ತದೆ. ಇದಕ್ಕಾಗಿ ₹ 268.98 ಕೋಟಿ ವೆಚ್ಚ ಮಾಡುವ ಪ್ರಸ್ತಾವಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

‘ಈ ಅಂಗನವಾಡಿಗಳಿಂದ 8,100 ಮಹಿಳೆಯರಿಗೆ ಉದ್ಯೋಗಾವಕಾಶಗಳು ಲಭಿಸಲಿವೆ. ಪ್ರಧಾನಿ ನರೇಂದ್ರ ಮೋದಿಯವರ ಕಲ್ಪನೆಯಂತೆ ಈ ಯೋಜನೆ ರೂಪಿಸಲಾಗಿದೆ. ತ್ವರಿತವಾಗಿ ಅಂಗನವಾಡಿಗಳು ಕಾರ್ಯಾರಂಭ ಮಾಡಲಿವೆ’ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವ ಹಾಲಪ್ಪ ಆಚಾರ್ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಅಖಿಲ ಕರ್ನಾಟಕ ವಿಜ್ಞಾನ ಸಮ್ಮೇಳನ 8ರಿಂದ

ಮೈಸೂರು: ‘ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು (ಕೆಆರ್‌ವಿಪಿ) ನಗರದಲ್ಲಿ ಸೆ.8ರಿಂದ 10ರವರೆಗೆ 14ನೇ ಅಖಿಲ ಕರ್ನಾಟಕ ವಿಜ್ಞಾನ ಸಮ್ಮೇಳನ ಆಯೋಜಿಸಲಿದೆ’ ಎಂದು ಪರಿಷತ್ತಿನ ಸಂಯೋಜಕ ಎ.ಎನ್.ಮಹೇಶ್ ತಿಳಿಸಿದರು.

‘ಖ್ಯಾತ ವಿಜ್ಞಾನಿ ಎ.ಎಸ್. ಕಿರಣ್‌ಕುಮಾರ್ ಅವರನ್ನು ಸರ್ವಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ’ ಎಂದು ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಶನಿವಾರ ಮಾಹಿತಿ ನೀಡಿದರು.

ರೈತರ ಲೆಕ್ಕಗಳಿಗೆಲ್ಲ ಪರಿಹಾರ ಸಾಧ್ಯವೇ: ಮಾಧುಸ್ವಾಮಿ

ಮಧುಗಿರಿ (ತುಮಕೂರು): ‘ಮಳೆಯಿಂದ ಆದ ಬೆಳೆ ನಷ್ಟದ ಕುರಿತು ರೈತರು ನೀಡುವ ಲೆಕ್ಕಾಚಾರಗಳಿಗೆಲ್ಲ ಪರಿಹಾರ ಕೊಡಲು ಸಾಧ್ಯವೆ’ ಎಂದು ಕಾನೂನು, ಸಂಸದೀಯ ವ್ಯವಹಾರ ಹಾಗೂ ಸಣ್ಣ ನೀರಾವರಿ ಸಚಿವ ಜೆ.ಸಿ.ಮಾಧುಸ್ವಾಮಿ ಪ್ರಶ್ನಿಸಿದ್ದಾರೆ.

‘ರೈತರಿಗೆ ಆಗುವ ಬೆಳೆ ನಷ್ಟವನ್ನು ಸರ್ಕಾರ ತುಂಬಿ ಕೊಡುವುದಿಲ್ಲ. ಮಳೆಯಿಂದ ಬೆಳೆ ನಷ್ಟವಾಗಿದ್ದರೆ ಲೆಕ್ಕ ಬರೆದುಕೊಂಡು ಪರಿಹಾರ ನೀಡಲು ಸಾಧ್ಯವಿಲ್ಲ. ರೈತರು ವಿಮೆ ಮಾಡಿಸಿ ಆ ಮೂಲಕ ಪರಿಹಾರ ಪಡೆದುಕೊಳ್ಳಬೇಕು’ ಎಂದು ಅವರು ಸಲಹೆ ಮಾಡಿದರು.

ಮಳೆಯಿಂದ ಹಾನಿಯಾಗಿರುವ ಕೆರೆಗಳನ್ನು ಶನಿವಾರ ವೀಕ್ಷಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಇದರ ಹೆಸರೇ ಪರಿಹಾರ. ರೈತರಿಗಾದ ನಷ್ಟವನ್ನೆಲ್ಲ ತುಂಬಿಸಿ ಕೊಡುವುದಿಲ್ಲ. ಆಕಸ್ಮಿಕವಾಗಿ ತೊಂದರೆಯಾದಾಗ ಪರಿಹಾರವನ್ನಷ್ಟೇ ನೀಡಲಾಗುತ್ತದೆ. ಬೆಳೆ ವಿಮೆ ವ್ಯವಸ್ಥೆಗೆ ಹೋಗಬೇಕು’ ಎಂದು ಅವರು ತಿಳಿಸಿದರು.

ನಿವೃತ್ತಿ ಬಳಿಕವೂ ಮುಖ್ಯ ಎಂಜಿನಿಯರ್ ಹುದ್ದೆ • ಪುನಃ ಅಧಿಕಾರ ಹಿಡಿಯಲು ಕಸರತ್ತು

ಎನ್‌.ಜಿ. ಗೌಡಯ್ಯ ಸೇವಾವಧಿ ಮತ್ತೆ ವಿಸ್ತರಣೆ?

• ವಿ.ಎಸ್. ಸುಬ್ರಹ್ಮಣ್ಯ

ಎನ್‌.ಜಿ. ಗೌಡಯ್ಯ

ಬೆಂಗಳೂರು: ನಿವೃತ್ತಿ ಬಳಿಕವೂ ಆರು ತಿಂಗಳಿನಿಂದ ಕರ್ನಾಟಕ ಪೊಲೀಸ್ ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮದ (ಕೆಎಸ್‌ಪಿಎಚ್‌ಸಿ) ಮುಖ್ಯ ಎಂಜಿನಿಯರ್ ಹುದ್ದೆಯಲ್ಲಿದ್ದ ಎನ್.ಜಿ. ಗೌಡಯ್ಯ ಸೇವಾವಧಿಯನ್ನು ಮತ್ತೊಂದು ಅವಧಿಗೆ ವಿಸ್ತರಿಸಲು ತೆರೆಮರೆಯ ಸಿದ್ಧತೆ ನಡೆದಿದೆ.

ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿದ ಆರೋಪದಡಿ ಭ್ರಷ್ಟಾಚಾರ ನಿಗ್ರಹ ದಳದಿಂದ (ಎಸಿಬಿ) ದಾಳಿಗೊಳಗಾಗಿದ್ದ ಈ ಅಧಿಕಾರಿಯ ಸೇವಾವಧಿ ವಿಸ್ತರಣೆಗೆ ಅಧಿಕಾರಿಗಳ ವಲಯದಲ್ಲಿ ತೀವ್ರ ಅಸಮಾಧಾನ ವ್ಯಕ್ತವಾಗುತ್ತಿದೆ.

ಕೆಎಸ್‌ಪಿಎಚ್‌ಸಿ ಮುಖ್ಯ ಎಂಜಿನಿಯರ್ ಹುದ್ದೆಯಲ್ಲಿದ್ದ ಗೌಡಯ್ಯ, ಈ ವರ್ಷದ ಫೆಬ್ರುವರಿ 28ರಂದು ವಯೋನಿವೃತ್ತಿ ಹೊಂದಿದ್ದರು. ‘ನಿಯಮಗಳಲ್ಲಿ ಅವಕಾಶವಿಲ್ಲದಿದ್ದರೂ ನಿಗಮಕ್ಕೆ ಅವರ ಸೇವೆಯ ಅಗತ್ಯವಿದೆ’ ಎಂಬ ಕಾರಣ ನೀಡಿ ಮಾರ್ಚ್ 1ರಿಂದ ಆರು ತಿಂಗಳ ಕಾಲ ಸೇವಾವಧಿ ವಿಸ್ತರಿಸಲಾಗಿತ್ತು.

‘ಆಗಸ್ಟ್ 31ಕ್ಕೆ ಸೇವಾ ಅವಧಿ ಅಂತ್ಯಗೊಂಡಿದ್ದು, ನಿಗಮದ ಸೂಪರಿಂಟೆಂಡಿಂಗ್ ಎಂಜಿನಿಯರ್ ರಘುನಂದನ್ ಸಿ.ಜಿ. ಅವರಿಗೆ ಹುದ್ದೆಯ ಪ್ರಭಾರವನ್ನು ವಹಿಸಲಾಗಿದೆ. ಆದರೆ, ರಾಜಕೀಯ ಪ್ರಭಾವ ಬಳಸಿಕೊಂಡು ಪುನಃ ಅದೇ ಹುದ್ದೆಗೆ ಬರಲು ಗೌಡಯ್ಯ ಯತ್ನಿಸುತ್ತಿದ್ದಾರೆ. ಸಚಿವ ಸಂಪುಟದ ಮುಂದಿನ ಸಭೆಯಲ್ಲೇ ಅವರ ಸೇವಾ ಅವಧಿ ವಿಸ್ತರಣೆಯ ಪ್ರಸ್ತಾವಕ್ಕೆ ಒಪ್ಪಿಗೆ ಪಡೆಯುವ ಪ್ರಯತ್ನಗಳು ನಡೆಯುತ್ತಿವೆ’ ಎಂದು ಇಲಾಖೆಯ ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

ಅರ್ಹರಿದ್ದರೂ ನಿವೃತ್ತರಿಗೆ ಮಣೆ: ‘ಲೋಕೋಪಯೋಗಿ, ಜಲ ಸಂಪನ್ಮೂಲ, ನಗರಾಭಿವೃದ್ಧಿ ಇಲಾಖೆಗಳ ಹಲವು ಮಂದಿ ಮುಖ್ಯ ಎಂಜಿನಿಯರ್‌ಗಳಿಗೆ ಹುದ್ದೆ ತೋರಿಸಿಲ್ಲ. ಸೇವೆಯಲ್ಲಿರುವ ಅಧಿಕಾರಿಗಳಿಗೆ ಹುದ್ದೆ ನೀಡದೆ, ನಿವೃತ್ತಿ ಹೊಂದಿದವರ ಸೇವಾ ಅವಧಿ ವಿಸ್ತರಣೆ ಮಾಡುವುದು ಸರಿಯಲ್ಲ’ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಅಧಿಕಾರಿಯೊಬ್ಬರು ಅಸಮಾಧಾನ ವ್ಯಕ್ತಪಡಿಸಿದರು.

‘2022ರ ಮಾರ್ಚ್‌ನಲ್ಲಿ ಗೌಡಯ್ಯ ಅವರ ಸೇವೆ ಮುಂದುವರಿಸುವಂತೆ ನಿಗಮದಿಂದ ಯಾವ ಕೋರಿಕೆಯೂ ಸಲ್ಲಿಕೆಯಾಗಿರಲಿಲ್ಲ. ಆದರೆ, ಒಳಾಡಳಿತ ಇಲಾಖೆಯ ಮೂಲಕ ಟಿಪ್ಪಣಿಯೊಂದನ್ನು ಸಲ್ಲಿಸಿ ಈ ಅಧಿಕಾರಿಯ ಸೇವಾವಧಿ ವಿಸ್ತರಣೆಗೆ ಕೋರಲಾಗಿತ್ತು. ಈ ಬಾರಿಯೂ ಅಂತಹ ಪ್ರಯತ್ನ ನಡೆಯುತ್ತಿದೆ’ ಎಂದು ಅಧಿಕಾರಿಯೊಬ್ಬರು ದೂರಿದರು.

ನಿವೃತ್ತ ಅಧಿಕಾರಿಯ ಸೇವಾವಧಿಯನ್ನು ಮತ್ತೊಮ್ಮೆ ವಿಸ್ತರಿಸುವ ಪ್ರಸ್ತಾವದ ಕುರಿತು ಪ್ರತಿಕ್ರಿಯೆ ಪಡೆಯಲು ಗೃಹ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್ ಅವರನ್ನು ಸಂಪರ್ಕಿಸಲು ಪ್ರಯತ್ನಿಸಲಾಯಿತು. ಆದರೆ, ಮೊಬೈಲ್ ಕರೆ ಮತ್ತು ಎಸ್‌ಎಂಎಸ್‌ಗಳಿಗೆ ಅವರಿಂದ ಪ್ರತಿಕ್ರಿಯೆ ಲಭ್ಯವಾಗಲಿಲ್ಲ.

ಎಸಿಬಿ ದಾಳಿಗೆ ಒಳಗಾಗಿದ್ದ ಅಧಿಕಾರಿ

2018ರ ಅಕ್ಟೋಬರ್‌ನಲ್ಲಿ ಬಿಡಿಎ ಎಂಜಿನಿಯರಿಂಗ್ ಸದಸ್ಯ ಹುದ್ದೆಯಲ್ಲಿದ್ದ ಗೌಡಯ್ಯ ಮನೆ ಮೇಲೆ ಎಸಿಬಿ ಅಧಿಕಾರಿಗಳು ದಾಳಿಮಾಡಿ ಅಪಾರ ಪ್ರಮಾಣದ ಚಿನ್ನ, ಬೆಳ್ಳಿ, ಹಣ, ಬ್ಯಾಂಕ್ ಠೇವಣಿ, ಸ್ಥಿರಾಸ್ತಿಯನ್ನು ವಶಪಡಿಸಿಕೊಂಡಿದ್ದರು. ಈ ಪ್ರಕರಣದ ತನಿಖೆ ಅಂತಿಮ ಹಂತದಲ್ಲಿದೆ.

ದಾಳಿಯ ಬಳಿಕ ಅಧಿಕಾರಿಯನ್ನು ಸೇವೆಯಿಂದ ಅಮಾನತು ಮಾಡಲಾಗಿತ್ತು. ಅಮಾನತು ತೆರವಾದ ಬಳಿಕ ಗೌಡಯ್ಯ ಅವರನ್ನು ಬಿಬಿಎಂಪಿ ಯೋಜನಾ ವಿಭಾಗದ ಮುಖ್ಯ ಎಂಜಿನಿಯರ್ ಹುದ್ದೆಗೆ ನಿಯೋಜಿಸಲಾಗಿತ್ತು. ಆದರೆ, ‘ಈ ಅಧಿಕಾರಿ ಸೇವೆ ಬಿಬಿಎಂಪಿಗೆ ಬೇಡ’ ಎಂದು ಪಾಲಿಕೆ ಆಯುಕ್ತರು ಸರ್ಕಾರಕ್ಕೆ ಪತ್ರ ಬರೆದಿದ್ದರು.

ಆಲ್ ಇಂಡಿಯಾ ಇಮಾಮ್ಸ್ ಕೌನ್ಸಿಲ್‌ನಿಂದ ಪ್ರತಿಭಟನೆಯ ಎಚ್ಚರಿಕೆ

'ಮದರಸಾ: ಅನಗತ್ಯ ಹಸ್ತಕ್ಷೇಪ ಬೇಡ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಮದರಸಾಗಳು ನಿಗದಿತ ಧಾರ್ಮಿಕ ಶಿಕ್ಷಣವನ್ನಷ್ಟೇ ನೀಡುತ್ತಿವೆ. ಪರಿಶೀಲನೆಗೆ ಸದಾ ಬಾಗಿಲುಗಳು ತೆರೆದಿರುತ್ತವೆ. ಹಾಗಾಗಿ ಸರ್ಕಾರದ ಹಸ್ತಕ್ಷೇಪ ಅನಗತ್ಯ' ಎಂದು ಆಲ್ ಇಂಡಿಯಾ ಇಮಾಮ್ಸ್ ಕೌನ್ಸಿಲ್ ಮುಖಂಡರು ಹೇಳಿದರು.

'ಮದರಸಾಗಳಲ್ಲಿ ಬೆಳಿಗ್ಗೆ ಮತ್ತು ಸಂಜೆ ಎರಡು ಗಂಟೆ ಮಾತ್ರ ಧಾರ್ಮಿಕ ಶಿಕ್ಷಣ ಬೋಧನೆ ಮಾಡಲಾಗುತ್ತದೆ. ನಂತರ ಶಾಲಾ–ಕಾಲೇಜು ಶಿಕ್ಷಣವನ್ನು ನೀಡಲಾಗುತ್ತಿದೆ' ಎಂದು ಕೌನ್ಸಿಲ್‌ನ ರಾಜ್ಯ ಘಟಕದ ಅಧ್ಯಕ್ಷ ಮೌಲಾನಾ ಅತೀಕುರ್‌ರ್ಹ್ಮಾನ್ ಅಶ್ರಫಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

'ಕೋಮು ರಾಜಕಾರಣ ಜೀವಂತವಾಗಿಡಲು ಪ್ರಯತ್ನ'

'ಬಿಜೆಪಿ ಸರ್ಕಾರ ಇತ್ತೀಚಿನ ದಿನಗಳಲ್ಲಿ ಧಾರ್ಮಿಕ ವಿಚಾರಗಳನ್ನು ಕೆದಕುತ್ತಾ ಸಮಾಜದಲ್ಲಿ ಅಶಾಂತಿ ಹರಡಲು ಪ್ರಯತ್ನಿಸುತ್ತಿದೆ. ಬಾಬಾ ಬುಡನ್‌ಗಿರಿ ದಾಖಲೆಗಳು ದರ್ಗಾದ ಪರವಾಗಿದ್ದರೂ ಮತ್ತೆ ಅದನ್ನು ವಿವಾದ ಮಾಡುತ್ತಿದೆ. ಚಾಮರಾಜಪೇಟೆಯ ಈದ್ಗಾ ಮೈದಾನ ವಕ್ಫ್ ಬೋರ್ಡ್ ಆಸ್ತಿಯಾಗಿರುವ ಬಗ್ಗೆ ದಾಖಲೆಗಳಿದ್ದರೂ ಅನಗತ್ಯ ವಿವಾದ ಸೃಷ್ಟಿಸಲಾಗಿದೆ. ಇವೆಲ್ಲವನ್ನು ಸೂಕ್ಷ್ಮವಾಗಿ ನೋಡಿದರೆ ಬಿಜೆಪಿ ಧರ್ಮಗಳ ಮೂಲಕ ತನ್ನ ಕೋಮು ರಾಜಕಾರಣವನ್ನು ಜೀವಂತವಾಗಿಡಲು ಯೋಜನೆ ರೂಪಿಸುತ್ತಿದೆ' ಎಂದು ಕೌನ್ಸಿಲ್ ಸದಸ್ಯ ಜಾಫರ್ ಫೈಝಿ ಹೇಳಿದರು.

'ರಾಜ್ಯದಲ್ಲಿರುವ ಮದರಸಾಗಳು ಸಮುದಾಯದ ಸ್ವಂತ ಖರ್ಚಿನಲ್ಲಿ ಕಾರ್ಯನಿರ್ವಹಿಸುತ್ತಿವೆ. ಉಪಯುಕ್ತ ಪಠ್ಯಕ್ರಮಗಳನ್ನು ಅಳವಡಿಸಿಕೊಂಡು ಬೋಧನೆ ಮಾಡಲಾಗುತ್ತಿದೆ. ಕೆಲ ಮದರಸಾಗಳಿಗಷ್ಟೇ ವಕ್ಫ್ ಸಂಸ್ಥೆಯ ಮೂಲಕ ಅನುದಾನ ನೀಡಲಾಗುತ್ತಿದ್ದು, ಅದು ತೃಪ್ತಿಕರವಾಗಿಲ್ಲ. ವಾಸ್ತವ ಸ್ಥಿತಿ ಹೀಗಿದ್ದರೂ ಬಿಜೆಪಿ ಸರ್ಕಾರ ಮದರಸಾ ಶಿಕ್ಷಣ ವ್ಯವಸ್ಥೆಯಲ್ಲಿ ಮೂಗು ತೂರಿಸುತ್ತಿರುವುದು ಸಂವಿಧಾನದ 25, 29 ಮತ್ತು 30ನೇ ವಿಧಿಗಳ ಧಾರ್ಮಿಕ ಸ್ವಾತಂತ್ರ್ಯದ ಹಕ್ಕು, ಅಲ್ಪಸಂಖ್ಯಾತರು ಧಾರ್ಮಿಕ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವ ಮೂಲಭೂತ ಹಕ್ಕುಗಳ ಉಲ್ಲಂಘನೆಯಾಗುತ್ತದೆ' ಎಂದರು.

> ಮದರಸಾ ಶಿಕ್ಷಣದಲ್ಲಿ ಸರ್ಕಾರದ ಹಸ್ತಕ್ಷೇಪ ಮುಸ್ಲಿಮರ ಧಾರ್ಮಿಕ ಹಕ್ಕುಗಳನ್ನು ಕಸಿಯುವ ಆರ್‌ಎಸ್‌ಎಸ್‌ನ ವ್ಯವಸ್ಥಿತ ಹುನ್ನಾರ
>
> **ಮೌಲಾನಾ ಅತೀಕುರ್‌ರ್ಹ್ಮಾನ್,** ಆಲ್ ಇಂಡಿಯಾ ಇಮಾಮ್ಸ್ ಕೌನ್ಸಿಲ್‌ನ ರಾಜ್ಯ ಘಟಕದ ಅಧ್ಯಕ್ಷ

'ಶಾಲಾ–ಕಾಲೇಜು ಆವರಣದಲ್ಲಿ ಧಾರ್ಮಿಕ ಆಚರಣೆಗೆ ಅವಕಾಶವಿಲ್ಲವೆಂದು ಹೇಳಿದ್ದ ಸರ್ಕಾರ ಮತ್ತು ಶಿಕ್ಷಣ ಸಚಿವರು ಇಂದು ಗಣೇಶೋತ್ಸವ ಆಚರಣೆಗೆ ಅವಕಾಶ ನೀಡಿ ಧರ್ಮದ ಹೆಸರಿನಲ್ಲಿ ಮಕ್ಕಳನ್ನು ವಿಭಜನೆ ಮಾಡುತ್ತಿರುವುದು ಖಂಡನೀಯ' ಎಂದು ಕೌನ್ಸಿಲ್ ಸದಸ್ಯ ಜಾಫರ್ ಸಾದಿಕ್ ಫೈಝಿ ಆಕ್ರೋಶ ವ್ಯಕ್ತಪಡಿಸಿದರು.

'ಯಾವುದೇ ಕಾರಣಕ್ಕೂ ಮದರಸಾ ಶಿಕ್ಷಣದಲ್ಲಿ ಸರ್ಕಾರದ ಹಸ್ತಕ್ಷೇಪ ಸಹಿಸಲು ಸಾಧ್ಯವಿಲ್ಲ. ಒಂದು ವೇಳೆ ಮಧ್ಯ ಪ್ರವೇಶಿಸಿದರೆ ರಾಜ್ಯದಾದ್ಯಂತ ಉಗ್ರ ಪ್ರತಿಭಟನೆ ಮಾಡಲಾಗುವುದು' ಎಂದು ಎಚ್ಚರಿಕೆ ನೀಡಿದರು.

ಸಂಚಾರ ದಟ್ಟಣೆ: ಪರಿಶೀಲನೆ

ಪ್ರಜಾವಾಣಿ ವಾರ್ತೆ

ಹೆಬ್ಬಾಳ ಜಂಕ್ಷನ್‌ನಲ್ಲಿ ಸಂಚಾರ ದಟ್ಟಣೆ ಸಮಸ್ಯೆಯನ್ನು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಪರಿಶೀಲಿಸಿದರು

ಬೆಂಗಳೂರು: ಮಳೆ ನೀರು ರಸ್ತೆ ಮೇಲೆ ನಿಲ್ಲುವುದನ್ನು ತಪ್ಪಿಸಲು ಮತ್ತು ಸಂಚಾರ ದಟ್ಟಣೆ ಕಡಿಮೆ ಮಾಡಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವ ನಿಟ್ಟಿನಲ್ಲಿ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ನಗರದ ಪ್ರಮುಖ ಜಂಕ್ಷನ್‌ಗಳಲ್ಲಿ ಶನಿವಾರ ಪರಿಶೀಲನೆ ನಡೆಸಿದರು.

ಹೆಬ್ಬಾಳ ಜಂಕ್ಷನ್‌ಗೆ ರಾತ್ರಿ 9 ಗಂಟೆಗೆ ಭೇಟಿ ನೀಡಿದ ಅವರು, 'ಎಸ್ಟೀಮ್ ಹಾಲ್ ಕಡೆಯಿಂದ ಕೆ.ಆರ್.ಪುರ ಕಡೆಗೆ ಹೋಗುವ ಮಾರ್ಗದ ಅಗಲೀಕರಣಕ್ಕೆ ಭೂಸ್ವಾಧೀನ ಪ್ರಕ್ರಿಯೆ ಕೂಡಲೇ ಆರಂಭಿಸಬೇಕು' ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಎಲ್ಲೆಡೆ ಬೀದಿ ದೀಪ ಅಳವಡಿಸಬೇಕು, ಪಾದಚಾರಿ ಮಾರ್ಗ ಸರಿಪಡಿಸಬೇಕು, ಮಳೆ ನೀರು ಸರಾಗವಾಗಿ ಹರಿದು ಹೋಗುವ ವ್ಯವಸ್ಥೆ ಮಾಡಬೇಕು ಎಂದು ತಿಳಿಸಿದರು.

ಕೆ.ಆರ್.ಪುರ, ಹೊರ ವರ್ತುಲ ರಸ್ತೆ, ಇಬ್ಬಲೂರು ಜಂಕ್ಷನ್, ಸಿಲ್ಕ್ ಬೋರ್ಡ್ ಜಂಕ್ಷನ್, ಸಾರಕ್ಕಿ ಜಂಕ್ಷನ್, ಸುಮ್ಮನಹಳ್ಳಿ ಹಾಗೂ ಗೊರಗುಂಟೆ ಪಾಳ್ಯ ಜಂಕ್ಷನ್‌ಗೆ ಭೇಟಿ ನೀಡಿ ಪರಿಶೀಲಿಸಿದರು. ಜಂಟಿ ಆಯುಕ್ತೆ ಪೂರ್ಣಿಮಾ, ಮುಖ್ಯ ಎಂಜಿನಿಯರ್ (ರಾಜಕಾಲುವೆ) ಲೋಕೇಶ್, ಉಮಾದೇವಿ ಇದ್ದರು.

ಬೈಕ್‌ನಲ್ಲಿ 38 ಸಾವಿರ ಕಿ.ಮೀ. ಕ್ರಮಿಸಿದ ಸುಹಾಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರಿನ ಸುಹಾಸ್ ಶಾಸ್ತ್ರಿ ಅವರು ಅಮೆರಿಕದ ಡೆಟ್ರಾಯಿಟ್‌ನಲ್ಲಿ ಆಟೊಮೊಬೈಲ್ ಕಂಪನಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, 5 ತಿಂಗಳಲ್ಲಿ ಬೈಕ್‌ನಲ್ಲಿ 38 ಸಾವಿರ ಕಿ.ಮೀ. ಕ್ರಮಿಸಿ, 16 ದೇಶ ಸುತ್ತಿ ಸಾಧನೆ ಮಾಡಿದ್ದಾರೆ.

ಕಾಲೇಜು ದಿನಗಳಿಂದಲೂ ಬೈಕ್ ಪ್ರವಾಸ ಸುಹಾಸ್ ಅವರ ನೆಚ್ಚಿನ ಹವ್ಯಾಸ. ಬೆಂಗಳೂರಿನಲ್ಲಿದ್ದಾಗ ಅವರು ಭಾರತದಾದ್ಯಂತ ಬೈಕ್‌ನಲ್ಲಿ ಸಂಚರಿಸಿದ್ದರು. ಉದ್ಯೋಗ ನಿಮಿತ್ತ ಅಮೆರಿಕಕ್ಕೆ ತೆರಳಿದ ಮೇಲೆ, ಉತ್ತರ ಅಮೆರಿಕ ಹಾಗೂ ದಕ್ಷಿಣ ಅಮೆರಿಕವನ್ನು ಸಾಂಸ್ಕೃತಿಕ, ಭೌಗೋಳಿಕ, ಸಾಮಾಜಿಕವಾಗಿ ಅರಿಯಲು ಬೈಕ್‌ನಲ್ಲಿ ಏಕಾಂಗಿಯಾಗಿ ಪ್ರವಾಸ ಮಾಡುವುದರ ಮೂಲಕ ವಿಶಿಷ್ಟ ಸಾಧನೆ ಮಾಡಿದ್ದಾರೆ.

'ಪೋರ್ಟ್ ಲ್ಯಾಂಡ್‌ನಿಂದ ಸ್ಯಾನ್ ಹೋಸೆಗೆ ಒಂದೇ ದಿನ ಸುಹಾಸ್ 1,150 ಕಿ.ಮೀ ಕ್ರಮಿಸಿದ್ದು ವಿಶೇಷ. ಮೆಕ್ಸಿಕೊ ಮಾದಕ ದ್ರವ್ಯಗಳ ದಂಧೆಗೆ, ಅಪಹರಣ, ಕೊಲೆ ಮತ್ತಿತರ ಅಪರಾಧಗಳಿಗೆ ಕುಖ್ಯಾತಿ ಪಡೆದಿದೆ. ಆದರೆ, ನನ್ನ ಅನುಭವದ ಪ್ರಕಾರ ಮೆಕ್ಸಿಕನ್ನರು ಸ್ನೇಹಪ್ರಿಯರು, ಸಹಾಯಹಸ್ತ ಚಾಚುವವರು ಹಾಗೂ ಆತಿಥ್ಯಕ್ಕೆ ಹೆಸರಾದವರು' ಎಂದು ಸುಹಾಸ್ ಹೇಳಿದ್ದಾರೆ.

'ಮೆಕ್ಸಿಕೊ ನಗರದ ಟ್ರಾಫಿಕ್ ಬೆಂಗಳೂರಿಗಿಂತ ಕೆಟ್ಟದಾಗಿದೆ. ಈ ಮಧ್ಯೆ ಕರ್ತವ್ಯದ ತುರ್ತು ಕರೆಗೆ ಓಗೊಟ್ಟು ಮೆಕ್ಸಿಕೊದಿಂದ ಡೆಟ್ರಾಯಿಟ್‌ಗೆ ಹಿಂತಿರುಗಬೇಕಾಯಿತು' ಎಂದು ತಿಳಿಸಿದ್ದಾರೆ.

ಸುಹಾಸ್ ಶಾಸ್ತ್ರಿ

ವಿಂಗಡಣೆ ಬಳಿಕ ಮೊದಲ ವಾರ್ಡ್ ಸಮಿತಿ ಸಭೆ

ಬೆಂಗಳೂರು: ವಾರ್ಡ್ ಮರುವಿಂಗಡಣೆ ಪ್ರಕ್ರಿಯೆ ಮುಗಿದ ಬಳಿಕ ಹೊಸ ವಾರ್ಡ್ ಸಮಿತಿ ಸಭೆಗಳು ಶನಿವಾರ ನಡೆದವು.

ವಾರ್ಡ್ ಸಮಿತಿಗಳನ್ನು ಬಲಪಡಿಸಲು ಹಿರಿಯ ಅಧಿಕಾರಿಗಳನ್ನು ಬಿಬಿಎಂಪಿ ನೇಮಕ ಮಾಡಿತ್ತು. ಜನಾಗ್ರಹ ಸಂಘಟನೆ ನೀಡಿರುವ ಮಾಹಿತಿ ಪ್ರಕಾರ 222 ವಾರ್ಡ್‌ಗಳಲ್ಲಿ ಸಭೆಗೆ ಪ್ರಕಟಣೆ ಹೊರಡಿಸಲಾಗಿತ್ತು. ಈ ಪೈಕಿ 150ರಿಂದ 160 ವಾರ್ಡ್‌ಗಳಲ್ಲಿ ಸಭೆಗಳು ಯಶಸ್ವಿಯಾಗಿ ನಡೆದಿವೆ.

'ಹಲವು ಸಭೆಗಳಲ್ಲಿ ವಲಯ ಆಯುಕ್ತರು ಮತ್ತು ಜಂಟಿ ಆಯುಕ್ತರು ಹಾಜರಿದ್ದರು. ನಾಗರಿಕರು ಭಾಗವಹಿಸಿ ಸ್ಥಳೀಯ ಸಮಸ್ಯೆಗಳನ್ನು ಪರಿಹರಿಸಲು ಉತ್ಸುಕರಾಗಿದ್ದಾರೆ. ವಾರ್ಡ್ ಸಮಿತಿ ಸದಸ್ಯರನ್ನು ಮಾತ್ರ ಆಹ್ವಾನಿಸುವ ಬದಲು ಎಲ್ಲಾ ನಾಗರಿಕರನ್ನು ಆಹ್ವಾನಿಸುವುದು ಸೂಕ್ತ' ಎಂದು ಜನಾಗ್ರಹ ಅಭಿಪ್ರಾಯಪಟ್ಟಿದೆ.

ಗಣೇಶ ವಿಗ್ರಹಗಳಿಗೆ ಹಾನಿ

ಪ್ರಜಾವಾಣಿ ವಾರ್ತೆ

ಮಾಲೂರು: ಪಟ್ಟಣದಲ್ಲಿ ಶುಕ್ರವಾರ ರಾತ್ರಿ ದುಷ್ಕರ್ಮಿಗಳು ಹಲವು ಕಡೆ ಗಣೇಶ ಮೂರ್ತಿಗಳನ್ನು ಕೆಡವಿ, ಫ್ಲೆಕ್ಸ್ ಬೋರ್ಡ್‌ಗಳನ್ನು ಹರಿದು ಹಾಕಿದ್ದಾರೆ.

ಕುಂಬಾರಪೇಟೆ ವ್ಯಾಪ್ತಿಯಲ್ಲಿ ನಾಲ್ಕು ಗಣಪತಿ ಮೂರ್ತಿಗಳು, ಬಾಬುರಾವ್ ಬೀದಿ, ಕುಪ್ಪಶೆಟ್ಟಿ ಬಾವಿ ಬಳಿ, ಧರ್ಮರಾಯಸ್ವಾಮಿ ದೇವಸ್ಥಾನ, ಗಾಂಧಿ ಸರ್ಕಲ್ ಬಳಿ ಗಣಪತಿ ಮೂರ್ತಿಗಳನ್ನು ವಿರೂಪಗೊಳಿಸಲಾಗಿದೆ.

ಪಟ್ಟಣದ ಮಲ್ಲೇಶ್ (25), ಕಾಂತರಾಜು (30), ಗಿರೀಶ್ (24), ಪುನೀತ್ (25), ಚಂದು (21) ಅವರನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ.



ಮಾಲೂರು ಕುಂಬಾರ ಪೇಟೆ ವ್ಯಾಪ್ತಿಯಲ್ಲಿ ಪ್ರತಿಷ್ಠಾಪಿಸಿದ್ದ ವಿಗ್ರಹವನ್ನು ಕೆಡವಿರುವುದು

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE
This is to inform the general public that our clients (1) Sri. Bijay Kumar Agarwalla, S/o Sri. Gangadhar Agarwalla and (2) Sri. Jitendra Agarwalla, S/o Sri. Gangadhar Agarwalla, had entered into an agreement to sell without possession dated 27/10/2006 with Smt. T.A. Bharathi Devi, S.v. Dharshan Kumar Babu, Smt. Suvarna Rani, Sri. Naveen Kumar, Smt. T.A. Dhanalakshmi, Smt. s.v. Sahana, Smt. T.K. Prabhavath, Kumari Maheshwari, Sri. T.A. Ramesh Kumari Vasavi, Sri. T.A. Srinivassa Murthy, Smt. Nagarathna, Sri. Gagan, Smt. Gowthami, Smt. T.A. Chandra Kumari and Sri. Nagarjuna, in respect of a portion of all that piece and parcel of undivided share right, title and interest in the and bearing Sy. No. 42 and 44, situated at Uttarahalli Village, Uttarahalli Hobli, Bangalore South Taluk, Bangalore, which is morefully described in the schedule hereunder, to an extent of 118.28 guntas. The said agreement to sell was registered as Document No. KEN-1-30549-2006-2007, Book-1, stored in CD No. KEND 349, dated 22/11/2006, in the office of the Senior Sub registrar, Kengeri, Bangalore.
Our clients state that the aforesaid agreement of sale in respect of the schedule property is still subsisting. It has now come to the knowledge of our clients that the aforesaid persons in collusion and connivance with people with vested interests have been making hectic efforts to rights over the schedule property to convey/ dispose off/create third party rights over the schedule property to unsuspecting persons despite the subsistence of the agreement to sell dated 27/06/2006, which is reflected in the encumbrance certificate.
The general public are hereby warned not to enter into any transaction/deal in respect of the schedule property with the aforesaid persons or anyone claiming through or under them or acting under their instructions. If anyone were to enter into any fraudulent transaction/s in respect of the schedule property with the aforesaid persons or anyone claiming through or under them or acting under instructions without the consent or concurrence of our clients, the same shall not be binding on them and such persons will be doing so at their own peril.
SCHEDULE PROPERTY
All that piece and parcel of a portion of the undivided share, right, title and interest in the land bearing Sy. No. 42 and 44, situated at Uttarahalli Village, Uttarahalli Hobli, Bangalore South Taluk, Bangalore, ad measuring 118.28 guntas.
M. ARUN PONAPPA, Advocate, 2nd Floor, Kasturi Complex, 76, Mission Road, Bangalore 560027. Ph: 9844043021 080 22243631

ಮೇ: ಚಂದ್ರ ಸ್ಪಿನ್ನಿಂಗ್ ಮತ್ತು ವೀವಿಂಗ್ ಮಿಲ್ ಪ್ರೈ ಲಿಮಿಟೆಡ್
ಮೇ : ಟಿ.ಆರ್ ಮಿಲ್ ಪ್ರೈ ಲಿಮಿಟೆಡ್
ಸಾರ್ವಜನಿಕ ಪ್ರಕಟಣೆ
ಈ ಕೆಳಕಂಡಲ್ಲಿ ಸಹಿ ಮಾಡಿರುವ ನಾನು ಮೇಲ್ಕಂಡ ಎರಡು ಕಂಪನಿಗಳಲ್ಲಿ ಹೆಚ್ಚು ಷೇರುದಾರ ಮತ್ತು ನಿರ್ದೇಶಕನಾಗಿದ್ದು ಸದರಿ ಮೇಲ್ಕಂಡ ಕಂಪನಿಗಳ ಆಸ್ತಿ ಮತ್ತು ಷೇರುಗಳ ವಿಚಾರದಲ್ಲಿ ನ್ಯಾಯಾಲಯದಲ್ಲಿ ವ್ಯಾಜ್ಯ ಬಾಕಿ ಇದ್ದು ಸದರಿ ಕಂಪನಿಗಳ ಆಸ್ತಿ & ಷೇರುಗಳ ವರ್ಗಾವಣೆಯನ್ನು ನಿರ್ಬಂಧಿಸಿ ನ್ಯಾಯಾಲಯ ತಡೆಯಾಜ್ಞೆ ನೀಡಿದ್ದು, ಅದಾಗ್ಯೂ ಈ ಕಂಪನಿಗಳಲ್ಲಿ ಹಿತಾಸಕ್ತಿ ಹೊಂದಿದ ಕೆಲವೇ ವ್ಯಕ್ತಿಗಳು ಹಣಕಾಸಿನ ವ್ಯವಹಾರ ಮತ್ತು ಆಸ್ತಿಗಳ ವರ್ಗಾವಣೆ ಅಥವಾ ಮಾರಾಟ ಕುರಿತು ಪ್ರಯತ್ನ ಪಡುತ್ತಿದ್ದು ಈ ವಿಚಾರದಲ್ಲಿ ಯಾವುದಾದರೂ ವ್ಯಕ್ತಿಗಳು ಸದರಿ ಆಸ್ತಿ ಮತ್ತು ಷೇರು ಖರೀದಿ ವಿಚಾರದಲ್ಲಿ ಪ್ರಯತ್ನ ಮಾಡಿದ್ದಲ್ಲಿ ಅದಕ್ಕೆ ಅವರೇ ಹಣಕಾಸಿನ ಜವಾಬ್ದಾರಿ ಮತ್ತು ಹೊಣೆಗಾರರಾಗಿರುತ್ತಾರೆಂದು ಈ ಮೂಲಕ ತಿಳಿಯಪಡಿಸುತ್ತೇವೆ.
ಶ್ರೀ ಬಾಲಚಂದ್ರನ್ ಕೆ.
ಷೇರುದಾರರು/ನಿರ್ದೇಶಕರು
ನಂ. 73/1, 5ನೇ ಮೈನ್, ಚಾಮರಾಜಪೇಟೆ, ಬೆಂಗಳೂರು–18
ಫೊ: 9442524388

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

JOB OPPORTUNITIES

Accounts & Finance

WANTED COMPUTER SAVVY GRADUATES, from South Bangalore, experience in Tally, Preferable, to assist in Accounts and related matters, near Bannerghatta. Fresh graduates can also apply. Contact-9880215703 and Please apply- sales@vigirom.com

IMMDT APPOINTMENT Accounts Executive with 3years Min Exp B.com 1st class Tally & Gst /Invoicing have good Knowledge Iso Certified Mfr Company @ Bommasandra Hosur road contact@hppindia.com or rasik_ranjan@hotmail.com salary approx. Rs 18k to 20k

B.COM FEMALE Office Assistants required for HVV & Co CA's 5 Karnic Road Shankarapuram B'lore - 4 Ph 9845608707

Engg/ Production Technical

REQUIRED ELECTRICAL Engineer Diploma/ BE (electrical) 5 + years experience in Residential Project. Call: 9845865789

WANTED FOR Company near Hosur (1) Sales and Service ENGINEER for Computerised Industrial Machines: BE 2 years/ Diploma 5 years, Electrical/ Electronics. Willing to travel all over India. (2) AUTOCAD DRAFTSMAN for Mechanical Machine Drawings. (3) ITI Electrical Contact: 9789055141

Hospital & Medical Jobs

WANTED NURSES to Manage Home Nursing Centre in Bangalore. Contact: 9845182814

Marketing & Sales

EDULAMP PUBLICATIONS: Urgently Requires Business Development Executives (M/F) (Exp/ Freshers). Good Salary. Call: 9886888175, 9739736664.

"TRAVEL CONSULTANT Customer Service &.Sales (Male)Looking for Immediate Joiner Only. Contact:"My Trip Holidays "J.P.Nagar 7th Phase,Mr.Raj- 09900123329

Multiple Vacancy

KRJS GROUP OF INSTITUTIONS
No.1, Mahayogi Vemana Road, 3rd Block, Koramangala, Bangalore - 560034
REQUIRES
VEMANA INSTITUTE OF TECHNOLOGY
a) Accountant / FDC -1
b) Lab Instructors -7
c) Library Assistant - 2
d) Tele Callers - 2
e) Attender - 3
RJS- MANAGEMENT STUDIES
Asst. Professor English – 1
RJS POLYTECHNIC COLLEGE
a) Lecturers – Com. Science -1
B) Electrical –2, C) Maths – 1
D) Civil -1, E) Mechanical - 2
CJR RJS MARATHALLI COLLEGE
P.E Master – 1 Post
DBM RJS SCHOOL
a) High School Teacher - Science -1
b) Primary Teacher – 2
c) Pre-Primary – 1
Apply within 7 days
General Secretary, KRJS
E:krjsestablishment@gmail.com
website : www.reddyjanasangha.org.
Ph : 080-25534194 99018 01138.

SWASTIK AIRCONDITIONER, JAYANAGAR. REQUIRED- RECEPTIONIST WITH TALLY COURSE, TATA-ACE DRIVER, STORE KEEPER , A/C TECHNICIAN AND HELPERS. CONTACT: 9535333446/ 8618966068.

Teachers/ Professors

WANTED EXPERIENCED LECTURERS M.Com/MCA/M.Sc (CS)/ M.Tech (CS), Reservation as per Government Norms, Attractive Salary, Contact Principal with original Certificates between 10.00 am and 1.00 pm SREE VENKATESHWARA DEGREE COLLEGE, Krishnarajapuram, Bangalore-36. Contact:9036068144, 7411135627

"GOOD HOPE High School", Chinnappa Garden, Bangalore-46 Mobile:9844016267. Wanted Lady Teachers B.Sc B.Ed(Maths, Science),BA B.Ed.(Kannada, English, Social Science) 6th-10th.Std, Walkin Interview- Between 10-1pm with Originals

HARWARD Pre-University College
www.harwardinstitutions.com
Dasanapura, Tumkur Road, Bangalore North - 562123
WANTED
Principal (10 yrs experience)
Commerce Lecturer M.Com with Accounts/ Tax
PRO- (Female)
Administrator (Exp in Education institutions)
Marketing Executives
Walk in interview Regularly @ 10:30 am to 3:00 pm
Please send CV to infoharwardints@gmail.com
Ph:9741337257, 9880112833

'IMPACT COLLEGE of Engineering and Applied Sciences invites candidates for the post of Assistant/ Associate professors- M.Tech (Computer science) with exposure to AI or Data science Walk-in between 10 AM to 3 PM at IMPACT Campus, Kodigehalli, SahakarNagar, Bangalore-92, 080-23334101. (AICTE rules apply for eligibility and compensation)'

ಕ್ಲಾಸಿಫೈಡ್ಸ್ WEEKEND CORNER

new Learning HORIZONS
ISO 9001 : 2015 Certified
Enriching Childrens Future
Learn, Teach & Earn
Calling for Franchise / Course Instructors
Start your own Fun filled Activity Center
Meet up with NLH Director Dhiral Panchmatia at Bengaluru 7th to 11th Sept 2022
ACEM abacus · Write well · Easy Math
Book your Appointment now
Contact Bengaluru City Franchisee
Mrs.Umme Salma
9019691233

Mrigashira Kolkata
Presents an Exclusive
DESIGNER BOUTIQUE FESTIVAL
Sarees & Kurties from Bengal & Dhakai Sarees from Bangladesh
OPENING TOMORROW (Monday)
at SAFINA PLAZA, Main Art Gallery
84/85 infantry road Bangalore-01
From 5th to 11th September
Time: 11 am - 9 pm

VIVEKANANDA INSTITUTE OF TECHNOLOGY
AN INSTITUTE OF JANATHA EDUCATION SOCIETY®
Recognised by GOK, Affiliated to VTU & Approved by AICTE
CET CODE: E087 · ESTD.: 1997 · COMEDK CODE: E149
BE: Bachelor of Engineering
Computer Science
Information Science
Artificial Intelligence & Machine Learning
Electronics & Communication
Mechanical · Civil
Ph.D Program
CSE | E&C | MECH
Maths | Chemistry
Physics
VKIT
College of Pharmacy
D.Pharm
B.Pharm
M.Pharm
CET B060
Institute of Management
BCA | BCA - Hons.
BBA | BBA - Hons.
MBA | M.Com
PGCET B-323
College of Law
5 Yrs : BA - LLB | B.Com - LLB
3 Yrs : LLB
Degree College
BSc | BA | BA-Journalism
B.Com | B.Com-Data Analytics
NAAC ACCREDITED
2022-23 Admissions Open
7625013738
9513953482
Admission Center: Dr.Rajkumar Road, Next to Orion Mall, Rajajinagar II Stage, Bengaluru-560055
VKIT Campus: Kumbalagodu, Kengeri, Bengaluru-560074
JES

WANTED EXPERIENCED Assistant Professors for BCA Course Qualification: I Class in PG with NET/ SLET/Ph.D. Send your resume with all testimonials before 01.09.2022.to the Principal, V.V.N. Degree College, 3, Vani Vilas Road, Visveswarapuram, Bengaluru-560004. Email id:-vvncollege @yahoo.com

Wanted

WANTED
Personal Assistant knowing fluent Computer Knowledge, Typing in Kannada and Preliminary Accounts for Former Minister at Nelamangala.
Free accommodation & food will be provided for Bachelors.
Contact: 94802 59762

WANTED MALE Female Sales man, Sales girl, Accountant. Contact Navrang Silk Saree Showroom, M.G. Road Public Utility Building, Bangalore

WANTED BUSINESS DEVELOPMENT MANAGER, Earn more than 1,00,000/ month, Part-time/ Full-time/ Freshers/ Retired. 9341313141

MATRIMONIAL

Brides Wanted

Hindu

BRIDE WANTED
Kannada Brahmin
US Citizen groom 1991 born, dyslexic, Bharadwaj Gothra, looking for a Bride willing to settle down in the USA. Boy has US University Degree, employed, well settled family. Kannada Brahmin girl any sub-sect, economically backward, widow and divorced. Please email your response to abibrideusa@yahoo.com

BALIJA RICH, 27 years, '6', B.E, Income Rs. 72 LPA, only Son. Contact USHODHAYA 9611919477/ 9886884291.

ADIDRAVIDA, B.E, MNC 31, 170, 1,25,000/- Prefers Graduates. Contact: 9448688344.

HANDSOME VOKKALIGA 29 years, '6' MCA SWE Bangalore, well settled. Contact USHODHAYA: 9611919477/ 9886884291.

Muslim

1982 BORN Sunni Muslim Boy from a well known family of Bangalore, settled in Dubai MS Working as a Data Scientist seeking a suitable match.(080-69103008)

BRIDE WANTED for 1983 born Bangalore based Sunni Muslim boy, BE/ MBA-NITIE, Working as a Senior Associated in a Reputed MNC, Father AGM In an MNC (080-69103008)

33 YEARS old Sunni Muslim M.Tech Divorcee boy is looking for an Educated Match for Early Marriage, Widowed & Divorced welcome (080-69074922)

UPPER CLASS Islamic Family of Bangalore seeks suitable match for their 1994 born Son MBA (Singapore) (080-69074922)

Grooms Wanted

Hindu

ADIDRAVIDA, B.COM, MBA, MNC 25, 155, 60,000/- Slim. Contact: 9448688344.

Matrimonial Bureaus

ASHIRWAD MATRIMONIALS SERVICE for all religion Alliance invited 50+ for 60+ BE Divorcee Christian. Contact- 9632163953

USHODHAYA MATRIMONIAL (Estd: 1998)
FREE REGISTRATION
FOR HIGH CLASS FIRST/ SECOND MARRIAGES
All Age Groups
INDIA/ ABROAD, Contact:
9611919477
9886884291

ASWATH MATRIMONIAL for only Hindus highly qualified, all ages 1st and 2nd Marriages India/Abroad. Aswath- 9739855599

PERSONAL

Change of Name

I, SHACHINDRA Shetty@Shacheendra S/o Shekara Shetty aged 40years Residing at #3-22-1, Mathru Sri Nilaya, Nayarkodu, Shivapur Post, Hebri, Udupi, Karnataka-576112. both the above names are pertaining to me only. vide affidavit dated 30.08.2022.before notary Gangaraja nelamangala Tq Bangalore Rural Dist-562123

I, JAGADEESH.D resident of No.1546, Hosuing Board Colony, Nehrunagar, 3rd Cross, Ranganatha Flour Mill, Chitradurga-577501 have changed my name to JAGADISH. D vide affidavit dated 11/07/2022, sworn before notary Gangambike.H.S, Banglaore

I, MAXLARA ANTONY 1348, MTS Colony, Max Computers Building, T Dasarahalli, Bangalore-57 hereby state that both MAXLARA ANTONY and LARA PREM ANTONY belongs to me. Sworn before Notary T.V BHADRAVIJAYA, Bangalore dated 01-09-2022.

I, SAJIDA MOHAMED ZAHIR W/o Mohamed Zahir, Residing at #29, Behind Tippu Masjid, HUDCO, 2 Stage, Bannimantap, Mysore-570015. Have changed my name to SAJIDA BANU sworn before Notary L.N. Rajendran Mysore vide affidavit dated: 03-09-2022.

I, M. PRIYADHARSHINI KOTHARI W/o Madan Lal R/a#41, 1st Floor, Car Street, Halasuru, Bangalore-08 Have Changed My Name to PRIYADARSHINI vide Affidavit Dated 26-08-2022 Before Notary AR.Muneer Ahmed, Bangalore.

14827982Y HAV MUKLESUR RAHAMAN 2ATC MOTHER NAME RECORDS HADICHA BIBI instead of HADECHHA BIBI NOTARY KV MANI

BEAUTY & HEALTH

Skin Care

ಕರ್ನಾಟಕದಲ್ಲೇ ಪ್ರಪ್ರಥಮ ಬಾರಿ ತುಮಕೂರು ಮತ್ತು ಬೆಂಗಳೂರಿನಲ್ಲಿ ಪ್ರಾರಂಭವಾಗಿದೆ ವಿಶ್ವವಿಖ್ಯಾತ
FRAXEL DUAL LASER
(ಫ್ರಾಕ್ಸೆಲ್ ಡ್ಯುಯಲ್ ಲೇಸರ್) ಚಿಕಿತ್ಸೆ ತುಮಕೂರಿನ ಕಾಸ್ಮೊ ಕ್ಲಿನಿಕ್‌ನಲ್ಲಿ ಲಭ್ಯ
ಈ ಮಿಷನ್‌ನಿಂದ ಲಭ್ಯವಾಗುವ ಚಿಕಿತ್ಸೆಗಳು
ಕಪ್ಪು ಕಲೆ, ಕುಳಿಬಿದ್ದ ಕಲೆ, ಉಬ್ಬಿದ ಕಲೆ, ಶಸ್ತ್ರ ಚಿಕಿತ್ಸೆಗಳಿಂದ ಆಗಿರುವ ಕಲೆಗಳ ನಿವಾರಣೆ ತ್ವಚೆಯ ದೃಢತೆ, ಮುಖದ ಸುಕ್ಕು ಮತ್ತು ನೆರಿಗೆಗಳಿಗೆ ಸ್ಟ್ರೆಚ್ ಮಾರ್ಕ್‌ಗಳಿಗೆ ತ್ವರಿತಗತಿಯಲ್ಲಿ ನಿವಾರಣೆಯಾಗುತ್ತದೆ.
ಡಾ. ಸತ್ಯಾನಂದ
ಕಾಸ್ಮೊ ಸ್ಕಿನ್ ಕ್ಲಿನಿಕ್
1ನೇ 'ಎ' ಕ್ರಾಸ್, ಸಿದ್ಧಗಂಗಾ ಬಡಾವಣೆ, ತುಮಕೂರು
Mobile : 94482 14441
Ph : 0816-2270061

‘ಲಿಂಬಾವಳಿ ವಿರುದ್ಧ ಆರೋಪ ಸುಳ್ಳು’

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ‘ಶಾಸಕ ಅರವಿಂದ ಲಿಂಬಾವಳಿ ಅವರು ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳನ್ನು ಸಹಿಸದೇ ಕಾಂಗ್ರೆಸ್‌ನವರು ಒಬ್ಬ ಮಹಿಳೆ ಮೂಲಕ ಅವರ ವಿರುದ್ಧ ಇಲ್ಲಸಲ್ಲದ ಆರೋಪ ಹೊರಿಸುತ್ತಿದ್ದಾರೆ’ ಎಂದು ಬಿಜೆಪಿಯ ಮಹದೇವಪುರ ನಗರ ಮಂಡಲ ಘಟಕದ ಅಧ್ಯಕ್ಷ ಮನೋಹರ್‌ರೆಡ್ಡಿ ಪ್ರತಿಕ್ರಿಯಿಸಿದರು.

ಕೆ.ಆರ್.ಪುರ ಸಮೀಪದ ಮಾರತ್ತಹಳ್ಳಿಯ ಬಿಜೆಪಿ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

‘ರಾಜಕಾಲುವೆ ಒತ್ತುವರಿ ಮಾಡಿಕೊಂಡು ನೂರಾರು ಮನೆಗಳಿಗೆ ನೀರು ನುಗ್ಗಲು ಕಾರಣರಾದ ಕಾಂಗ್ರೆಸ್‌ನ ಅಲ್ಪಸಂಖ್ಯಾತ ಮಹಿಳಾ ಘಟಕದ ಅಧ್ಯಕ್ಷೆ ರುತ್ ಸಗಾಯಿ ಮೇರಿ ಪರ ನಿಂತಿರುವ ಕಾಂಗ್ರೆಸ್‌ನವರು, ಶಾಸಕ ಅರವಿಂದ ಲಿಂಬಾವಳಿ ತಪ್ಪು ಮಾಡಿದ್ದಾರೆ ಎಂದು ಬಿಂಬಿಸುವ ಕೆಲಸ ಮಾಡುತ್ತಿದ್ದಾರೆ. ಸತ್ಯಾಂಶ ಅರಿಯದೆ ಮಾಧ್ಯಮಗಳಲ್ಲಿ ಸುಳ್ಳು ಮಾಹಿತಿ ಪ್ರಚಾರವಾಗುತ್ತಿದೆ. ಇದು ನಿಲ್ಲಬೇಕು’ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಕ್ಷೇತ್ರ ಮಹಿಳಾ ಅಧ್ಯಕ್ಷೆ ಪುಷ್ಪ, ಮುಖಂಡರಾದ ಜಯಚಂದ್ರರೆಡ್ಡಿ, ಸುರೇಶ್, ರಾಜೇಶ್, ಲೋಕೇಶ್ ಮತ್ತಿತರರಿದ್ದರು.

ವಾರ್ಡ್‌ಗಳಲ್ಲಿ ಹಸಿ ತ್ಯಾಜ್ಯದಿಂದ ಗೊಬ್ಬರ ಮಾಡಲು ವ್ಯಕ್ತಿ, ಸಂಘ–ಸಂಸ್ಥೆಗಳಿಗೆ ಅವಕಾಶ

‘ಕಾಂಪೋಸ್ಟ್ ಸರ್ವೀಸ್’ಗೆ ರಿಯಾಯಿತಿ

• ಆರ್. ಮಂಜುನಾಥ್

ಬೆಂಗಳೂರು: ಅಧಿಕ ಪ್ರಮಾಣದಲ್ಲಿ ಹಸಿ ತ್ಯಾಜ್ಯ ಸಂಗ್ರಹವಾಗುವ ಪ್ರದೇಶದಲ್ಲೇ ಅದನ್ನು ಗೊಬ್ಬರವಾಗಿಸಲು ವ್ಯಕ್ತಿ ಅಥವಾ ಸಂಘ–ಸಂಸ್ಥೆಗಳಿಗೆ ಬಿಬಿಎಂಪಿ ಅವಕಾಶ ಕಲ್ಪಿಸುತ್ತಿದೆ. ಇದಕ್ಕಾಗಿ ಹಲವು ರಿಯಾಯಿತಿಗಳನ್ನು ನೀಡಲು ಯೋಜಿಸುತ್ತಿದೆ.

100 ಕೆ.ಜಿಗೂ ಅಧಿಕ ಹಸಿ ತ್ಯಾಜ್ಯ ಸಂಗ್ರಹವಾಗುವ ಕಟ್ಟಡ, ಮಾಲ್, ಅಪಾರ್ಟ್‌ಮೆಂಟ್‌ಗಳೇ ಅದನ್ನು ಸಂಸ್ಕರಿಸಬೇಕು ಎಂದು ಹಳೆಯ ನಿಯಮವನ್ನೇ ಬಿಬಿಎಂಪಿ ಇದೀಗ ಕಠಿಣವಾಗಿ ಜಾರಿಗೊಳಿಸಲು ಮುಂದಾಗಿದೆ. ಈ ನಿಟ್ಟಿನಲ್ಲಿ ಯಾರಾದರೂ ಗೊಬ್ಬರ ತಯಾರಿಸುವ ಘಟಕ ಸ್ಥಾಪಿಸಿಕೊಂಡರೆ ಅವರಿಗೆ ಲೈಸೆನ್ಸ್, ತೆರಿಗೆ ಸೇರಿ ಇತರೆ ವಿನಾಯಿತಿಗಳನ್ನು ನೀಡುವುದರ ಜೊತೆಗೆ ಗೊಬ್ಬರ ಮಾರಾಟಕ್ಕೂ ನೆರವಾಗಲಿದೆ. ಅಲ್ಲದೆ, ಮುಂದೆ ತ್ಯಾಜ್ಯ ವಿಲೇವಾರಿಗೆ ತೆರಿಗೆ ಅನುಷ್ಠಾನವಾದರೆ ಅದರಿಂದಲೂ ವಿನಾಯಿತಿ ಸಿಗಲಿದೆ.

ಹೆಚ್ಚು ಹಸಿ ಕಸ ಉತ್ಪತ್ತಿಯಾಗುವ ಸ್ಥಳ ಅಥವಾ ಕಟ್ಟಡಗಳನ್ನು ಬಿಬಿಎಂಪಿ ಗುರುತಿಸಿ, ಪಟ್ಟಿ ಮಾಡಿಕೊಂಡಿದೆ. ಆ ಕಟ್ಟಡದವರೇ ಸಂಸ್ಕರಣೆ ಮಾಡಬಹುದು ಅಥವಾ ಮೂರ್ನಾಲ್ಕು ನಿವಾಸಿಗಳ ಸಂಘಗಳು ಸೇರಿಕೊಂಡು ಗೊಬ್ಬರವಾಗಿಸಿಕೊಳ್ಳಬಹುದು. ಇದಲ್ಲದೆ, ವ್ಯಕ್ತಿ ಅಥವಾ ಸಂಘ–ಸಂಸ್ಥೆಗಳು ಅವರಿಂದ ತ್ಯಾಜ್ಯವನ್ನು ಪಡೆದು, ಅವರ ಸ್ಥಳ ಅಥವಾ ಬೇರೆಲ್ಲಾದರೂ ಸಂಸ್ಕರಿಸಬಹುದು. ಇದನ್ನು ‘ಕಾಂಪೋಸ್ಟ್ ಸರ್ವೀಸ್’ ಎಂದು ಹೆಸರಿಸಲು ಬಿಬಿಎಂಪಿ ಅಧಿಕಾರಿಗಳು ಯೋಜಿಸಿದ್ದಾರೆ.

‘ಸಂಸ್ಕರಣೆಗೆ ಯಾವುದೇ ಮಾದರಿ ಅಳವಡಿಸಿಕೊಳ್ಳಬಹುದು. ಆದರೆ ವೈಜ್ಞಾನಿಕವಾಗಿರಬೇಕು. ಇದನ್ನು ಬಿಬಿಎಂಪಿ ನಿಗಾವಹಿಸಲಿದೆ. ಹೆಚ್ಚಿನ ಸ್ಥಳ ಬೇಕಿಲ್ಲ, ವೆಚ್ಚವೂ ಕಡಿಮೆ. ಗೊಬ್ಬರ ಮಾರಾಟದಿಂದ ಲಾಭವೂ ಬರುತ್ತದೆ. ಇದರಿಂದ ಸ್ವಯಂ ಉದ್ಯೋಗದ ಅವಕಾಶಗಳೂ ತೆರೆದುಕೊಳ್ಳಲಿವೆ. ಸಣ್ಣ ಪ್ರಮಾಣದಲ್ಲಿ ಸಂಸ್ಕರಣೆ, ಆಧುನಿಕ ತಂತ್ರಜ್ಞಾನದಿಂದ ವಾಸನೆ, ಕೊಳಕು ನೀರನ್ನೂ ನಿಯಂತ್ರಿಸಬಹುದು’ ಎಂದು ಹಿರಿಯ ಅಧಿಕಾರಿ ಹೇಳಿದರು.

ಒಂದು ವಾರ್ಡ್‌ನಲ್ಲಿ ನಿತ್ಯವೂ ಸುಮಾರು 20 ಟನ್ ಹಸಿ ತ್ಯಾಜ್ಯ ಸಂಗ್ರಹವಾಗುತ್ತದೆ. ಇದು ಅದೇ ವಾರ್ಡ್‌ನಲ್ಲಿ ಅಲ್ಲಲ್ಲಿ ಸಂಸ್ಕರಣೆಯಾದರೆ ಕಸದ ಸಮಸ್ಯೆ ಬಹುತೇಕ ನಿವಾರಣೆಯಾಗುತ್ತದೆ. ಹೀಗಾಗಿ ಈ ‘ಕಾಂಪೋಸ್ಟ್ ಸರ್ವೀಸ್’ ಯೋಜನೆಯ ಶೀಘ್ರ ಜಾರಿಗೆ ಬಿಬಿಎಂಪಿ ಪ್ರಕ್ರಿಯೆಗಳನ್ನು ಆರಂಭಿಸಿದೆ.

ಸಾಂದರ್ಭಿಕ ಚಿತ್ರ

ಹಲವು ಮಾದರಿ

ಗೊಬ್ಬರ ತಯಾರಿಕೆ ಸಂಘ–ಸಂಸ್ಥೆಗಳಲ್ಲಿ, ಮಾರುಕಟ್ಟೆಯಲ್ಲಿ ಸಾಕಷ್ಟು ಮಾದರಿಗಳಿವೆ. ಹಸಿ ಕಸದ ಸಾಮರ್ಥ್ಯಕ್ಕೆ ಅನುಗುಣವಾಗಿ ಇವುಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ತ್ಯಾಜ್ಯ ಸಂಸ್ಕರಣೆ ಘಟಕ ಅದು ಎಂದು ಗೊತ್ತಾಗದ ರೀತಿಯಲ್ಲಿ ಮಾದರಿಗಳಿವೆ. ಅದಕ್ಕೆ ಮೊದಲು ಎಲ್ಲಿ ಅಳವಡಿಕೆಯಾಗಿದೆ ಎನ್ನುವುದನ್ನು ನೋಡಿ, ಪರಿಶೀಲಿಸಿಕೊಳ್ಳುವುದು ಉತ್ತಮ. ಹಸಿ ಕಸದಿಂದ ಗೊಬ್ಬರ ತಯಾರಿಕೆ ನಮ್ಮ ಜವಾಬ್ದಾರಿಯಾಗಬೇಕು.

ಡಾ. ಶಾಂತಿ ತುಮ್ಮಲ
ಸದಸ್ಯೆ, ಘನತ್ಯಾಜ್ಯ ನಿರ್ವಹಣೆ ರೌಂಡ್ ಟೇಬಲ್ (ಎಸ್‌ಡಬ್ಲ್ಯುಎಂಆರ್‌ಟಿ)

ಪ್ರಜಾವಾಣಿ ವಿಶೇಷ

ಎಲ್ಲರಿಗೂ ಅನುಕೂಲ

ನ್ಯಾಯಾಲಯ ಹಲವು ಸಂದರ್ಭಗಳಲ್ಲಿ ಉತ್ಪತ್ತಿಯಾಗುವ ಕಸವನ್ನು ಆ ಪ್ರದೇಶಗಳಲ್ಲೇ ಸಂಸ್ಕರಣೆ ಮಾಡಬೇಕು ಎಂದು ಸೂಚಿಸಿದೆ. ಅಲ್ಲದೆ, ತಜ್ಞರು ಕೂಡ ಅದೇ ರೀತಿಯ ಅಭಿಪ್ರಾಯ ನೀಡಿದ್ದಾರೆ. ಹೀಗಾಗಿ ಹಸಿ ತ್ಯಾಜ್ಯವನ್ನು ವಾರ್ಡ್ ಮಟ್ಟದಲ್ಲೇ ಸಂಸ್ಕರಿಸಿ, ಗೊಬ್ಬರವನ್ನಾಗಿಸುವ ಪ್ರಕ್ರಿಯೆಗೆ ಹೆಚ್ಚು ಉತ್ತೇಜನ ನೀಡಲಾಗುತ್ತಿದೆ. ಎಲ್ಲ ರೀತಿಯ ಕಸವನ್ನು ಆಯಾ ವಾರ್ಡ್‌ನಲ್ಲೇ ಸಂಸ್ಕರಣೆ ಮಾಡಲು ಯೋಜನೆ ರೂಪಿಸಲಾಗುತ್ತಿದೆ. ಈ ಪ್ರಕ್ರಿಯೆಯಲ್ಲಿ ಬಿಬಿಎಂಪಿಯೊಂದಿಗೆ ಕೈಜೋಡಿಸಿದರೆ ನಾಗರಿಕರು ಅಥವಾ ಸಂಘ–ಸಂಸ್ಥೆಗಳಿಗೂ ಅನುಕೂಲವಾಗುತ್ತದೆ ಎಂದು ಬಿಬಿಎಂಪಿ ಘನತ್ಯಾಜ್ಯ ವಿಭಾಗದ ವಿಶೇಷ ಆಯುಕ್ತ ಡಾ. ಹರೀಶ್ ಕುಮಾರ್ ತಿಳಿಸಿದರು.

‘ಗೊಬ್ಬರ ಘಟಕ’ಕ್ಕೆ ಟೆಂಡರ್

ವಾರ್ಡ್‌ನಲ್ಲಿ ಸಂಗ್ರಹವಾಗುವ ಎಲೆ, ಗಿಡ, ಬಳ್ಳಿಯಂತಹ ತ್ಯಾಜ್ಯವನ್ನು ಸಾವಯವ ಗೊಬ್ಬರವಾಗಿಸುವ ನಿಟ್ಟಿನಲ್ಲಿ 200 ಸ್ಥಳಗಳಲ್ಲಿ ‘ಗೊಬ್ಬರ ಘಟಕ’ಗಳನ್ನು ಸ್ಥಾಪಿಸಲಾಗುತ್ತಿದೆ. ಒಂದು ಟನ್ ತ್ಯಾಜ್ಯ ಸಂಸ್ಕರಣೆ ಘಟಕಕ್ಕೆ ಸುಮಾರು ₹6 ಲಕ್ಷ ವೆಚ್ಚವಾಗಲಿದೆ. ಈ ಘಟಕಗಳ ಸ್ಥಾಪನೆಗೆ ಸದ್ಯದಲ್ಲಿಯೇ ಟೆಂಡರ್ ಕರೆಯಲಾಗುತ್ತಿದೆ. ಈ ಘಟಕಗಳ ಮೇಲ್ವಿಚಾರಣೆಯನ್ನು ಸ್ಥಳೀಯ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳಿಗೇ ವಹಿಸಲಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದರು.

ಸುದ್ದಿ 2 ನಿಮಿಷ

ಬಿಡಿಎ ಅಧ್ಯಕ್ಷ ವಿಶ್ವನಾಥ್ ಅನರ್ಹತೆ: ಪಿಐಎಲ್ ವಿಲೇವಾರಿ

ಬೆಂಗಳೂರು: ‘ಲಾಭದಾಯಕ ಹುದ್ದೆ ಆಕ್ಷೇಪಕ್ಕೆ ಸಂಬಂಧಿಸಿದಂತೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಅಧ್ಯಕ್ಷ ಎಸ್.ಆರ್. ವಿಶ್ವನಾಥ್ ಅವರನ್ನು ಶಾಸಕ ಸ್ಥಾನದಿಂದ ಅನರ್ಹಗೊಳಿಸಬೇಕು’ ಎಂಬ ಕೋರಿಕೆಯನ್ನು ಪರಿಗಣಿಸಲು ಹೈಕೋರ್ಟ್ ನಿರಾಕರಿಸಿದೆ.

ಈ ಕುರಿತಂತೆ ವಕೀಲ ಎ.ಎಸ್. ಹರೀಶ್ ಎಂಬುವವರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ಪೂರ್ಣಗೊಳಿಸಿ ಕಾಯ್ದಿರಿಸಿದ್ದ ತೀರ್ಪನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಶನಿವಾರ ಪ್ರಕಟಿಸಿತು.

‘ಅರ್ಜಿದಾರರ ಮನವಿ ರಾಜ್ಯಪಾಲರ ಪರಿಶೀಲನೆಯಲ್ಲಿದ್ದು, ರಾಜ್ಯಪಾಲರ ಕಚೇರಿಗೆ ನಿರ್ದೇಶನ ಸಾಧ್ಯವಿಲ್ಲ’ ಎಂದು ನ್ಯಾಯಪೀಠ ಹೇಳಿದೆ.

‘ಬಿಡಿಎ ಅಧ್ಯಕ್ಷ ಹುದ್ದೆಯಲ್ಲಿರುವ ಎಸ್.ಆರ್. ವಿಶ್ವನಾಥ್, ವೇತನ ಮತ್ತು ಭತ್ಯೆ ಪಡೆಯುತ್ತಿದ್ದಾರೆ. ಲಾಭದಾಯಕ ಹುದ್ದೆ ಹೊಂದಿರುವ ಅವರನ್ನು ಶಾಸಕ ಸ್ಥಾನದಿಂದ ಅನರ್ಹಗೊಳಿಸಬೇಕು’ ಎಂದು ಅರ್ಜಿದಾರರು ಕೋರಿದ್ದರು.

ಎಸ್.ಆರ್.ವಿಶ್ವನಾಥ್ 2018ರ ವಿಧಾನಸಭೆ ಚುನಾವಣೆಯಲ್ಲಿ ಬೆಂಗಳೂರಿನ ಯಲಹಂಕ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗಿದ್ದಾರೆ.

ಮಂಜುನಾಥ್‌ಗೆ ಜಾಮೀನು

ಬೆಂಗಳೂರು: ‘ಕಂದಾಯ ವ್ಯಾಜ್ಯವೊಂದರಲ್ಲಿ ಪಕ್ಷಪಾತಿ ತೀರ್ಪು ನೀಡುವ ಉದ್ದೇಶದಿಂದ ₹ 5 ಲಕ್ಷ ಲಂಚ ಪಡೆದಿದ್ದಾರೆ’ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ನ್ಯಾಯಾಂಗ ಬಂಧನದಲ್ಲಿರುವ ಬೆಂಗಳೂರು ನಗರ ಜಿಲ್ಲಾಧಿಕಾರಿಯಾಗಿದ್ದ ಐಎಎಸ್ ಅಧಿಕಾರಿ ಜೆ. ಮಂಜುನಾಥ್ ಅವರಿಗೆ ನಗರದ 23ನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯ ಷರತ್ತುಬದ್ಧ ಜಾಮೀನು ನೀಡಿದೆ.

ಪ್ರಾಸಿಕ್ಯೂಷನ್ 60 ದಿನಗಳ ಒಳಗಾಗಿ ದೋಷಾರೋಪ ಪಟ್ಟಿ ಸಲ್ಲಿಸದ ಕಾರಣ ಆರೋಪಿಯು, ಕಾನೂನುಬದ್ಧವಾಗಿ ತಂತಾನೆ ಪಡೆಯಬಹುದಾದ ‘ಡಿಫಾಲ್ಟ್’ ಜಾಮೀನನ್ನು ಷರತ್ತು ವಿಧಿಸುವ ಮೂಲಕ ನ್ಯಾಯಾಧೀಶ ಲಕ್ಷ್ಮಿನಾರಾಯಣ ಭಟ್ ಶನಿವಾರ ಮಂಜೂರು ಮಾಡಿದರು.

ಆನೇಕಲ್ ತಾಲ್ಲೂಕಿನ ಕೂಡ್ಲು ಗ್ರಾಮದ 38 ಗುಂಟೆ ಜಮೀನು ಒಡೆತನಕ್ಕೆ ಸಂಬಂಧಿಸಿದ ವ್ಯಾಜ್ಯದಲ್ಲಿ ಅನುಕೂಲಕರ ಆದೇಶ ನೀಡಲು ಬೇಗೂರು ನಿವಾಸಿ ಅಜಂ ಪಾಷಾ ಎಂಬುವವರಿಂದ ಮಂಜುನಾಥ್ ₹ 5 ಲಕ್ಷ ಲಂಚ ಪಡೆದಿದ್ದಾರೆ ಎಂಬ ಆರೋಪದಡಿ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ದೂರು ದಾಖಲಿಸಿಕೊಂಡಿತ್ತು. ಪ್ರಕರಣದಲ್ಲಿ ಮಂಜುನಾಥ್ ಅವರನ್ನು ಮೂರನೇ ಆರೋಪಿಯನ್ನಾಗಿ ಮಾಡಲಾಗಿದೆ. ಸೇವೆಯಿಂದ ಅಮಾನತುಗೊಂಡಿರುವ ಮಂಜುನಾಥ್ ಅವರನ್ನು ಎಸಿಬಿ 2022ರ ಜುಲೈ 4ರಂದು ಬಂಧಿಸಿತ್ತು.

ಶೇ 40 ಭ್ರಷ್ಟಾಚಾರ ಆರೋಪ: ಶಿಕ್ಷಣಾಧಿಕಾರಿಗಳ ಸಂಘ ಖಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿಕ್ಷಣ ಇಲಾಖೆಯಲ್ಲೂ ಶೇ 40ರಷ್ಟು ಭ್ರಷ್ಟಾಚಾರ ನಡೆಯುತ್ತಿದೆ ಎನ್ನುವ ನೋಂದಾಯಿತ ಅನುದಾನರಹಿತ ಖಾಸಗಿ ಶಾಲೆಗಳ ಆಡಳಿತ ಸಂಘದ (ರುಪ್ಸಾ) ಆರೋಪಗಳನ್ನು ಕರ್ನಾಟಕ ರಾಜ್ಯ ಶಿಕ್ಷಣಾಧಿಕಾರಿಗಳ ಸಂಘ ಖಂಡಿಸಿದೆ.

ರುಪ್ಸಾ ಪದಾಧಿಕಾರಿಗಳ ಎಲ್ಲ ಆರೋಪಗಳೂ ಸ್ವಾರ್ಥಸಾಧನೆಗಾಗಿ, ಅಧಿಕಾರಿಗಳ ತೇಜೋವಧೆಗಾಗಿ ಮಾಡಲಾಗಿದೆ. ಈ ಕುರಿತು ಕಾನೂನು ತಜ್ಞರ ಜತೆ ಚರ್ಚೆ ನಡೆಸಿ, ಕ್ರಮ ಜರುಗಿಸಲಾಗುವುದು ಎಂದು ಸಂಘದ ಪ್ರಧಾನ ಕಾರ್ಯದರ್ಶಿ ರಾಜ್‌ಕುಮಾರ್ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಎಚ್ಚರಿಸಿದರು.

ಆಡಳಿತ ಮಂಡಳಿ ತಮ್ಮದೇ ಲಾಗಿನ್‌ನಲ್ಲಿ ಅರ್ಜಿ ಸಲ್ಲಿಸುತ್ತಾರೆ. ಕಚೇರಿಗಳಿಗೆ ಅಲೆದಾಡುವ ಪ್ರಮೇಯವೇ ಇಲ್ಲ. ಆನ್‌ಲೈನ್‌ನಲ್ಲೇ ದಾಖಲೆಗಳನ್ನು ಅಪ್‌ಲೋಡ್ ಮಾಡಿದರೆ ಸಾಕು. ಬಿಇಒ, ಡಿಡಿಪಿಐ ಪರಿಶೀಲಿಸಿ, ನವೀಕರಣ ಪತ್ರ ನೀಡುವರು. ಹಾಗಾಗಿ, ಅವ್ಯವಹಾರಕ್ಕೆ ಅವಕಾಶವೇ ಇಲ್ಲ ಎಂದು ಸಮರ್ಥಿಸಿಕೊಂಡರು.

ಕೋರ್ಟ್ ತೀರ್ಪಿನ ಅನ್ವಯ ಕಟ್ಟಡ ಗುಣಮಟ್ಟ, ಅಗ್ನಿಶಾಮಕ ಸುರಕ್ಷತೆಯ ಪ್ರಮಾಣಪತ್ರ ಕಡ್ಡಾಯ. ಇದರಿಂದ ನವೀಕರಣ ಪ್ರಕ್ರಿಯೆ ವಿಳಂಬವಾಗುತ್ತಿದೆ. ಸಮಸ್ಯೆಗಳಿರುವುದು ಖಾಸಗಿ ಶಾಲೆಗಳಲ್ಲಿ, ಅವುಗಳನ್ನು ಸರಿಪಡಿಸಿಕೊಳ್ಳದೇ ಅನಗತ್ಯ ಆರೋಪ ಮಾಡುತ್ತಿದ್ದಾರೆ. ಆರ್‌ಟಿಇ ಹಣವೂ ಆನ್‌ಲೈನ್ ಮೂಲಕವೇ ಇತ್ಯರ್ಥವಾಗುತ್ತದೆ. ದಾಖಲೆಗಳು ಸರಿ ಇದ್ದರೆ ಅವರ ಶಾಲೆಯ ಖಾತೆಗೆ ಜಮೆಯಾಗುತ್ತದೆ. ಎನ್‌ಒಸಿ ನೀಡುವಲ್ಲಿಯೂ ಯಾವುದೇ ಅವ್ಯವಹಾರ ನಡೆಯುತ್ತಿಲ್ಲ. ಹೊಸ ಶಾಲೆಗಳ ಮಾನ್ಯತೆಗೆ ತ್ರಿ ಸದಸ್ಯ ಸಮಿತಿ ನೀಡಿದ ವರದಿಯಂತೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ವಿವರ ನೀಡಿದರು.

ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಸರ್ಕಾರ ಹಲವು ಯೋಜನೆಗಳನ್ನು ರೂಪಿಸಿದೆ. ಶಿಕ್ಷಕರ ವರ್ಗಾವಣೆ ಕಾರ್ಯ ಪಾರದರ್ಶಕವಾಗಿ, ಕೌನ್ಸೆಲಿಂಗ್ ಮೂಲಕ ನಡೆಯುತ್ತಿದೆ. ಭ್ರಷ್ಟ ಅಧಿಕಾರಿಗಳನ್ನು ಸಂಘ ಬೆಂಬಲಿಸುವುದಿಲ್ಲ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಸಂಘದ ಅಧ್ಯಕ್ಷ ಕೆ.ಜಿ.ಅಂಜನಪ್ಪ, ಪದಾಧಿಕಾರಿಗಳಾದ ಪ್ರಶಾಂತ್, ಗೋವಿಂದಪ್ಪ, ಗೋಪಾಲಗೌಡ, ನಸ್ರಿನ್‌ತಾಜ್ ಇದ್ದರು.

‘ಐಟಿ–ಬಿಟಿ ಕಂಪನಿಗಳಿಂದ ಕೆರೆ–ಕಟ್ಟೆಗಳ ಅತಿಕ್ರಮಣ’

ಧಾರವಾಡ: ಬೆಂಗಳೂರಿನ ಐಟಿ-ಬಿಟಿ ಕಂಪನಿಗಳೇ ಅಲ್ಲಿನ ಕೆರೆ-ಕಟ್ಟೆಗಳು ಹಾಗೂ ಕಾಲುವೆಗಳನ್ನು ಅತಿಕ್ರಮಣ ಮಾಡಿವೆ. ಇವುಗಳ ವಿರುದ್ಧ ರಾಜ್ಯ ಸರ್ಕಾರ ಈಗ ಕ್ರಮಕೈಗೊಳ್ಳುತ್ತಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಐಟಿ-ಬಿಟಿ ಕಂಪನಿಗಳ ಮುಖ್ಯಸ್ಥರು ಮುಖ್ಯಮಂತ್ರಿಗೆ ಪತ್ರ ಬರೆದುದರ ಬಗ್ಗೆ ನಗರದಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ‘ಮಳೆ ನೀರು ಹರಿಯದಂತೆ ಐಟಿ- ಬಿಟಿ, ವಿವಿಧ ಉದ್ಯಮಿಗಳು ಕೆರೆ- ಕಾಲುವೆ ಅತಿಕ್ರಮಿಸಿದ್ದಾರೆ. ಬೃಹತ್ ಬೆಂಗಳೂರು ಮಹಾನಗರದ ಬಜೆಟ್ ₹8 ಸಾವಿರ ಕೋಟಿ ಆಗಿದೆ. ನೀರು ಒಂದೆಡೆ ಶೇಖರಣೆಗೊಂಡು, ರಸ್ತೆಗಳು ಹಾಳಾಗಿವೆ. ಪ್ರತಿ ವರ್ಷವೂ ಸಾವಿರಾರು ಕೋಟಿ ರೂಪಾಯಿ ರಸ್ತೆಗಾಗಿ ವ್ಯಯಿಸುತ್ತಿದೆ. ಆದರೂ ಸಮಸ್ಯೆ ನೀಗಿಲ್ಲ’ ಎಂದರು.

ಬೆಂಗಳೂರು ಬಿಡಬೇಕಾದೀತು: ಒಆರ್‌ಆರ್‌ಸಿಎ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರದಲ್ಲಿ ಮೂಲಸೌಕರ್ಯ ಸುಧಾರಣೆ ಆಗದಿದ್ದರೆ ಐ.ಟಿ ಕಂಪನಿಗಳನ್ನು ಮುಂದುವರಿಸಲು ಬೇರೆ ಸ್ಥಳಗಳನ್ನು ಹುಡುಕಿಕೊಳ್ಳಬೇಕಾಗುತ್ತದೆ’ ಎಂದು ಹೊರ ವರ್ತುಲ ರಸ್ತೆ ಕಂಪನಿಗಳ ಸಂಘ (ಒಆರ್‌ಆರ್‌ಸಿಎ) ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದಿದೆ.

‘ಭಾರಿ ಮಳೆಯಿಂದಾಗಿ ಹೊರವರ್ತುಲ ರಸ್ತೆಗಳಲ್ಲಿನ ಕಂಪನಿಗಳಿಗೆ ಸುಮಾರು ₹200 ಕೋಟಿಗೂ ಹೆಚ್ಚು ನಷ್ಟವಾಗಿದೆ. ಉದ್ಯೋಗಿಗಳು ಮನೆಯಿಂದಲೇ ಕೆಲಸ ಮಾಡುವಂತಾಗಿದೆ. ಇದರಿಂದ ಉತ್ಪಾದನಾ ಸಾಮರ್ಥ್ಯದ ಮೇಲೆ ಹೊಡೆತ ಬಿದ್ದಿದೆ’ ಎಂದು ಪತ್ರದಲ್ಲಿ ಹೇಳಿದೆ.

ಐ.ಟಿ ಕಂಪನಿಗಳಿಂದ ಸರ್ಕಾರಕ್ಕೆ ಬರುತ್ತಿರುವ ವರಮಾನದಲ್ಲಿ ಶೇ 32ರಷ್ಟು ಪಾಲು ಬೆಂಗಳೂರು ಐ.ಟಿ ಕಂಪನಿಗಳದ್ದೇ ಆಗಿದೆ. ಸಂಚಾರ ದಟ್ಟಣೆ ಸಮಸ್ಯೆ ಹಲವು ವರ್ಷಗಳಿಂದ ಕಂಪನಿಗಳನ್ನು ಕಾಡುತ್ತಿದೆ. ಸಂಚಾರ ದಟ್ಟಣೆ ನಿಯಂತ್ರಣಕ್ಕೆ ಅಗತ್ಯ ಕ್ರಮಗಳನ್ನು ಸರ್ಕಾರ ಕೈಗೊಳ್ಳಬೇಕು ಎಂದು ಒತ್ತಾಯಿಸಿದೆ.

ಹೊರ ವರ್ತುಲ ರಸ್ತೆಯಲ್ಲಿ ಮಳೆ ನೀರು ಮೂರು ದಿನ ಹರಿದು ಸಂಚಾರ ದಟ್ಟಣೆ ಸೃಷ್ಟಿಸಿದ ಸಂದರ್ಭದಲ್ಲಿ ‘ಮಳೆಯಿಂದ ಹಾನಿಗೊಳಗಾಗಿರುವ ಬೆಂಗಳೂರನ್ನು ಕಾಪಾಡಿ’ ಎಂದು ಪ್ರಧಾನಿ ಅವರಿಗೆ ಟ್ಯಾಗ್ ಮಾಡಿ ಉದ್ಯಮಿ ಟಿ.ವಿ. ಮೋಹನದಾಸ್ ಪೈ ಟ್ವೀಟ್ ಮಾಡಿದ್ದರು. ಅದರ ಬೆನ್ನಲ್ಲೇ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು. ಇದೀಗ ಒಆರ್‌ಆರ್‌ಸಿಎ ಮುಖ್ಯಮಂತ್ರಿಗೆ ಪತ್ರ ಬರೆದು ಅದನ್ನು ಟ್ವೀಟ್ ಮಾಡಿದೆ. ಇದು ಸಾಮಾಜಿಕ ಜಾಲತಾಣದಲ್ಲಿ ವ್ಯಾಪಕ ಚರ್ಚೆಗೆ ಕಾರಣವಾಗಿದೆ.

ಹೈದರಾಬಾದ್ ರೇಸ್

ಅಹೆಡ್ ಆಫ್ ಮೈ ಟೈಮ್ ಗೆಲ್ಲುವ ನಿರೀಕ್ಷೆ

ರೇಸ್ 2 ವಿನ್.ಕಾಮ್ ಡೆಕ್ಕನ್ ಕೋಲ್ಟ್ಸ್ ಚ್ಯಾಂಪಿಯನ್‌ಷಿಪ್ ಸ್ಟೇಕ್ಸ್ ಭಾನುವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು ಅಹೆಡ್ ಆಫ್ ಮೈ ಟೈಮ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:20ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ದಿ ಅಖಂಡ 1, ಬ್ಲಾಸ್ಟ್ ಇನ್ ಕ್ಲಾಸ್ 7, ಫಿಲಂಥ್ರೋಪಿಸ್ಟ್ 2
2ನೇ ರೇಸ್: ದಿ ಥಂಡರ್ 10, ಡೆಕ್ಕನ್ ರೇಂಜರ್ 2, ವಿಂಡ್ ಸ್ಟ್ರೈಟ್ 6
3ನೇ ರೇಸ್: ಫುಲ್ ವಾಲ್ಯೂಮ್ 5, ಎನ್ ಆರ್ ಐ ವಿಶನ್ 1, ಸ್ಟ್ರಾಟಜಿಸ್ಟ್ 2
4ನೇ ರೇಸ್: ಸ್ಟಾರ್ ರೇಸರ್ 4, ಬ್ಯೂಟಿ ಫ್ಲೇಮ್ 1, ಥಿಯೋಸ್ ಚಾಯ್ಸ್ 6
5ನೇ ರೇಸ್: ಫೋರ್ ಒನ್ ಫೋರ್ 5, ಮಾರ್ಕ್ ಮೈ ಡೇ 2, ಸ್ಟಾರ್ ಬೇಬ್ 6
6ನೇ ರೇಸ್: ಅಹೆಡ್ ಆಫ್ ಮೈ ಟೈಮ್ 1, ಅಶೋಕ 2, ಅಶ್ವ ಯುದ್ಧಿರ್ 3
7ನೇ ರೇಸ್: ಸ್ಟ್ರಾಸ್ 5, ಟ್ರೂ ಮಾರ್ಶಲ್ 5, ಅವಾನ್ಸಿಯ 6

ಉತ್ತಮ ಬೆಟ್: ದಿ ಅಖಂಡ

ಜಾಕ್‌ಪಾಟ್	ಟ್ರಿಬಲ್
3,4,5,6,7	4,5,6

ಕೋಲೆ ಬಸವ

ಕೋಲೆ ಬಸವನ ನಗರ ಸಂಚಾರ ಈಗಲೂ ನಡೆದೇ ಇದೆ. ಟ್ರಾಫಿಕ್ ಜಂಜಡದ ನಡುವೆ ಎತ್ತುಗಳನ್ನು ಹೊರ ವರ್ತುಲ ರಸ್ತೆಯಲ್ಲಿ ದಾಟಿಸುವುದು ಈ ಹೊತ್ತಿನಲ್ಲಿ ಸೂಕ್ಷ್ಮ ಕೆಲಸ. ‘ಬಸವನ ರೋಡ್ ಕ್ರಾಸಿಂಗ್’ನ ಈ ದೃಶ್ಯ ನಗರದಲ್ಲಿನ ಜನಪದೀಯ ಗಳಿಗೆಯೇ ಹೌದು –ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

‘ಜನೋತ್ಸವ ಚುನಾವಣೆ ದಿಕ್ಸೂಚಿ’

ದೊಡ್ಡಬೆಳವಂಗಲ (ದೊಡ್ಡಬಳ್ಳಾಪುರ): ದೊಡ್ಡಬಳ್ಳಾಪುರದಲ್ಲಿ ಸೆ.8ರಂದು ನಡೆಯುವ ಬಿಜೆಪಿಯ ಜನೋತ್ಸವ ರಾಜ್ಯ ವಿಧಾನಸಭಾ ಚುನಾವಣೆಯ ದಿಕ್ಸೂಚಿಯಾಗಲಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಹೇಳಿದರು.

ಜನೋತ್ಸವ ಪೂರ್ವ ಸಿದ್ಧತೆ ಕುರಿತು ತಾಲ್ಲೂಕಿನ ದೊಡ್ಡಬೆಳವಂಗಲದ ಕಲ್ಯಾಣ ಮಂದಿರದಲ್ಲಿ ಶನಿವಾರ ನಡೆದ ಸಭೆಯ ನಂತರ ಮಾಧ್ಯಮಗಳ ಜತೆ ಮಾತನಾಡಿದರು. ‘ಕರ್ನಾಟಕವನ್ನು ಉಳಿಸಲು ಬಿಜೆಪಿಯಿಂದ ಮಾತ್ರ ಸಾಧ್ಯ ಎಂಬ ಭಾವನೆ ಜನರಲ್ಲಿದೆ. ರಾಜ್ಯ ಮತ್ತು ದೇಶಕ್ಕೆ ಏಕೈಕ ನಾಯಕರು ನರೇಂದ್ರ ಮೋದಿ ಎಂಬ ಭಾವನೆ ಜನರದು. ರಾಜ್ಯದ ಜನರನ್ನು ಮುಟ್ಟುವ ಕಾರ್ಯವನ್ನು ನಮ್ಮ ಕಾರ್ಯಕರ್ತರು ಮಾಡಬೇಕಿದೆ’ ಎಂದರು.

ಶೇಷಾದ್ರಿಪುರ ಶಿಕ್ಷಣ ಸಂಸ್ಥೆ ಘಟಿಕೋತ್ಸವ ಸಮಾರಂಭ

3,000 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

ಪ್ರಜಾವಾಣಿ ವಾರ್ತೆ

ಯಲಹಂಕ: ಶೇಷಾದ್ರಿಪುರ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ವಿವಿಧ ವಿಷಯಗಳಲ್ಲಿ ಪದವಿ ಮತ್ತು ಸ್ನಾತಕೋತ್ತರ ಪೂರ್ಣಗೊಳಿಸಿದ ಒಟ್ಟು 3,000 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ವಿಶ್ವವಿದ್ಯಾಲಯ ಮಟ್ಟದಲ್ಲಿ ರ್‍ಯಾಂಕ್ ಗಳಿಸಿದ 8 ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಸೇರಿ 46 ವಿದ್ಯಾರ್ಥಿಗಳಿಗೆ ಹಾಗೂ 17 ಮಂದಿಗೆ ಪಿಎಚ್.ಡಿ ಪದವಿ ಪ್ರದಾನ ಮಾಡಲಾಯಿತು. ಅಲ್ಲದೆ, ಮೂವರು ವಿದ್ಯಾರ್ಥಿಗಳಿಗೆ ‘ಗೋಪಾಲಕೃಷ್ಣ ಗೋಧಾಮಣಿ’ ದತ್ತಿ ಬಹುಮಾನ ವಿತರಿಸಲಾಯಿತು.

ಈ ವೇಳೆ ಮಾತನಾಡಿದ ಕರ್ನಾಟಕ ಜನಪದ ಪರಿಷತ್‌ನ ಅಧ್ಯಕ್ಷ ಡಾ.ಟಿ.ತಿಮ್ಮೇಗೌಡ, ‘ಭಾರತ ಅತಿ ಹೆಚ್ಚು ಯುವಕರನ್ನು ಹೊಂದಿರುವ ದೇಶವಾಗಿದ್ದು, ಇಂದು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಬೆಂಗಳೂರು ಎಲ್ಲಾ ಅವಕಾಶ ಮತ್ತು ಸಾಧ್ಯತೆಗಳಿಗೆ ದೊಡ್ಡ ಹೆಬ್ಬಾಗಿಲಾಗಿದೆ. ಹಾಗಾಗಿ ಇಂದಿನ ಪದವೀಧರರು ತಮ್ಮ ಮುಂದಿನ ಭವಿಷ್ಯವನ್ನು ಉನ್ನತ ಮಟ್ಟದಲ್ಲಿ ರೂಪಿಸಿಕೊಳ್ಳುವ ಮೂಲಕ ಈ ದೇಶದ ಆಸ್ತಿಯಾಗಬೇಕು’ ಎಂದು ತಿಳಿಸಿದರು.

ಶಿಕ್ಷಣ ತಜ್ಞ ವೂಡೇ.ಪಿ.ಕೃಷ್ಣ, ಶೇಷಾದ್ರಿಪುರ ಶಿಕ್ಷಣ ದತ್ತಿಯ ಅಧ್ಯಕ್ಷ ಎನ್. ಆರ್.ಪಂಡಿತಾರಾಧ್ಯ, ಉಪಾಧ್ಯಕ್ಷ ಟಿ.ಎಸ್. ಹೆಂಜಾರಪ್ಪ, ಜಂಟಿ ಕಾರ್ಯದರ್ಶಿ ಶೇಷ ನಾರಾಯಣ, ಆಡಳಿತ ಸಲಹಾ ಮಂಡಳಿಗಳ ಅಧ್ಯಕ್ಷ ರಾದ ಎಂ.ಎಸ್.ನಟರಾಜ್, ಪ್ರೊ.ಕೆ.ಪಿ. ನರಸಿಂಹಮೂರ್ತಿ, ಪಿ.ಸಿ. ನಾರಾಯಣ, ಡಬ್ಲ್ಯೂ.ಡಿ. ವಿಜಯಕುಮಾರ್, ಡಬ್ಲ್ಯು.ಡಿ. ಅಶೋಕ್, ಪ್ರಾಂಶುಪಾಲ ಎ.ಎಸ್. ಎನ್. ವೆಂಕಟೇಶ್ ಇದ್ದರು.

ಯಲಹಂಕದ ಶೇಷಾದ್ರಿಪುರ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ವಿದ್ಯಾರ್ಥಿನಿಯೊಬ್ಬರಿಗೆ ಪದವಿ ಪ್ರದಾನ ಮಾಡಲಾಯಿತು. ಕರ್ನಾಟಕ ಜನಪದ ಪರಿಷತ್‌ನ ಅಧ್ಯಕ್ಷ ಡಾ.ಟಿ.ತಿಮ್ಮೇಗೌಡ, ಶಿಕ್ಷಣತಜ್ಞ ವೂಡೇ.ಪಿ.ಕೃಷ್ಣ, ಶೇಷಾದ್ರಿಪುರ ಶಿಕ್ಷಣ ದತ್ತಿಯ ಅಧ್ಯಕ್ಷ ಎನ್‌ಆರ್ ಪಂಡಿತಾರಾಧ್ಯ, ಉಪಾಧ್ಯಕ್ಷ ಟಿ.ಎಸ್‌ಹೆಂಜಾರಪ್ಪ, ಜಂಟಿ ಕಾರ್ಯದರ್ಶಿ ಶೇಷ ನಾರಾಯಣ, ಪ್ರಾಂಶುಪಾಲ ಡಾ.ಎಸ್‌ಎನ್ ವೆಂಕಟೇಶ್ ಇತರರು ಇದ್ದರು.

ತುಮಕೂರು: ಬಿಜೆಪಿ ಸೇರ್ಪಡೆಗೆ ಮುದ್ದಹನುಮೇಗೌಡ ನಿರ್ಧಾರ

ಪ್ರಜಾವಾಣಿ ವಾರ್ತೆ

ತುಮಕೂರು: ಕಾಂಗ್ರೆಸ್‌ಗೆ ರಾಜೀನಾಮೆ ನೀಡಿರುವ ಮಾಜಿ ಸಂಸತ್ ಸದಸ್ಯ ಎಸ್.ಪಿ.ಮುದ್ದಹನುಮೇಗೌಡ ಅವರು ಬಿಜೆಪಿ ಮುಖಂಡರನ್ನು ಶನಿವಾರ ಬೆಂಗಳೂರಿನಲ್ಲಿ ಭೇಟಿಯಾಗಿ ಮಾತುಕತೆ ನಡೆಸಿದ್ದು, ಬಿಜೆಪಿ ಸೇರಲು ನಿರ್ಧರಿಸಿದ್ದಾರೆ.

ಪಿತೃ ಪಕ್ಷ ಆರಂಭಕ್ಕೂ ಮುನ್ನ ಬಿಜೆಪಿ ಸೇರಲು ಸಿದ್ಧತೆ ಮಾಡಿಕೊಂಡಿದ್ದಾರೆ. ಇನ್ನೂ ಒಂದೆರಡು ದಿನಗಳಲ್ಲಿ ಬೆಂಗಳೂರಿನ ಬಿಜೆಪಿ ಕಚೇರಿಯಲ್ಲಿ ಪಕ್ಷ ಸೇರ್ಪಡೆಯಾಗಲಿದ್ದಾರೆ. ಬಿಜೆಪಿ ಮುಖಂಡ ಬಿ.ಎಸ್.ಯಡಿಯೂರಪ್ಪ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು ಎಂದು ಮೂಲಗಳು ಹೇಳಿವೆ.

ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕುಣಿಗಲ್ ಕ್ಷೇತ್ರದಿಂದ ಟಿಕೆಟ್ ನೀಡುವಂತೆ ಗೌಡರು ಪಟ್ಟು ಹಿಡಿದಿದ್ದರು. ಇದು ಕೈಗೂಡುವ ಲಕ್ಷಣಗಳು ಕಾಣದಿದ್ದಾಗ ಕಾಂಗ್ರೆಸ್ ತೊರೆದಿದ್ದು, ಈಗ ಬಿಜೆಪಿ ಕದ ತಟ್ಟಿದ್ದಾರೆ ಎಂದು ಇವೇ ಮೂಲಗಳು ಹೇಳಿವೆ.

ಮುಂಬರುವ ಚುನಾವಣೆಗೆ ಸಂಬಂಧಿಸಿದಂತೆ ನಾಯಕರ ಜತೆಗೆ ಚರ್ಚೆ ನಡೆಸಿದರು. ಇತ್ತೀಚಿನ ರಾಜಕೀಯ ಬೆಳವಣಿಗೆ, ಕಾಂಗ್ರೆಸ್‌ನಲ್ಲಿ ತಮಗಾದ ನೋವು, ಅಪಮಾನ ಮತ್ತಿತರ ವಿಚಾರಗಳು ಈ ಸಂದರ್ಭದಲ್ಲಿ ಚರ್ಚೆಯಾದವು. ಕುಣಿಗಲ್ ವಿಧಾನಸಭಾ ಕ್ಷೇತ್ರದಲ್ಲಿ ಸ್ಪರ್ಧೆಗೆ ಬಿಜೆಪಿ ಟಿಕೆಟ್ ಖಚಿತಪಡಿಸಿಕೊಂಡು, ಪಕ್ಷ ಸೇರ್ಪಡೆಗೆ ಆಗುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕುಣಿಗಲ್ ಕ್ಷೇತ್ರದಿಂದ ಮೂರು ಬಾರಿ ಬಿಜೆಪಿಯಿಂದ ಸ್ಪರ್ಧಿಸಿ ಪರಾಭವಗೊಂಡಿರುವ ಡಿ.ಕೃಷ್ಣಕುಮಾರ್ ಮತ್ತೆ ಸ್ಪರ್ಧಿಸುವುದಾಗಿ ಹೇಳಿಕೊಂಡಿದ್ದಾರೆ. ಈಗ ಅವರ ಮನವೊಲಿಸಿ, ಗೌಡರನ್ನು ಕಣಕ್ಕಿಳಿಸಲು ಬಿಜೆಪಿ ನಾಯಕರು ಮುಂದಾಗಿದ್ದಾರೆ. ಒಂದು ವೇಳೆ ಕೃಷ್ಣಕುಮಾರ್ ಬಂಡಾಯವೆದ್ದರೆ ಅವರನ್ನು ಯಾವ ರೀತಿ ಸಮಾಧಾನ ಮಾಡಬೇಕು, ಪಕ್ಷದಲ್ಲೇ ಉಳಿಸಿಕೊಂಡು ಚುನಾವಣೆ ಎದುರಿಸಲು ಯಾವ ರೀತಿಯ ತಂತ್ರಗಾರಿಕೆ ರೂಪಿಸಲು ಬಿಜೆಪಿ ನಾಯಕರು ಮುಂದಾಗಿದ್ದಾರೆ ಎನ್ನಲಾಗಿದೆ.

ನಗರದಲ್ಲಿ ಇಂದು

ವಿಷನ್ 5 ಕೋಟಿ ಸೈಕಲ್: ಅತಿಥಿಗಳು: ಪಿ ಸಿ.ಮೋಹನ್, ರಿಜ್ವಾನ್ ಅರ್ಷದ್, ಮಂಜುಳಾ.ವಿ., ಆಯೋಜನೆ: ಕರ್ನಾಟಕ ಬೈಸಿಕಲ್ ಡೀಲರ್ಸ್ ಅಸೋಸಿಯೇಷನ್, ಸ್ಥಳ: ಚಿತ್ರಕಲಾ ಪರಿಷತ್ತು, ಬೆಳಿಗ್ಗೆ 8.30

10ನೇ ವರ್ಷದ ‘ಸಹಕಾರ ರತ್ನ’ ಬಿ ಎಲ್. ಲಕ್ಕೇಗೌಡ ಪ್ರಶಸ್ತಿ ಪ್ರದಾನ: ಅತಿಥಿಗಳು: ಎಸ್ ಟಿ. ಸೋಮಶೇಖರ್, ಅಧ್ಯಕ್ಷತೆ: ಕಾಳೇಗೌಡ, ಸನ್ಮಾನ: ಬಸವೇಗೌಡ, ಎಂ.ಜಯರಾಮಯ್ಯ, ಟಿ. ತಿಮ್ಮೇಗೌಡ, ಕೆ ಆರ್. ಸಂಧ್ಯಾ ರೆಡ್ಡಿ, ಆಯೋಜನೆ: ದಿ ಭಾರತಿ ಕೋ–ಆಪರೇಟಿವ್ ಕ್ರೆಡಿಟ್ ಸೊಸೈಟಿ ಲಿ., ಸ್ಥಳ: ಕೆ.ಆರ್. ಮರುದೇವಗೌಡ ರಂಗಮಂದಿರ, ಭಾರತ್ ವಿದ್ಯಾಸಂಸ್ಥೆ, (ಬಿಇಎಸ್ ಕಾಲೇಜ್) ಆವರಣ, ಜಯನಗರ, ಬೆಳಿಗ್ಗೆ 9.30

ಕಲಾಶ್ರೀ ಉತ್ಸವ–2022: ಉದ್ಘಾಟನೆ: ವಿ. ಸೋಮಣ್ಣ, ಅತಿಥಿಗಳು: ಸಿ ಸೋಮಶೇಖರ್, ಉಷಾ ದಾತಾರ್, ಪೂರ್ಣಿಮಾ ಕೆ. ಗುರುರಾಜ, ನವ್ಯಾ ನಟರಾಜನ್, ಆಯೋಜನೆ: ಸಂಗೀತ ನೃತ್ಯ ಭಾರತಿ ಅಕಾಡೆಮಿ, ಸ್ಥಳ: ಜ್ಞಾನಸೌಧ ಕಲ್ಯಾಣನಗರ, ನಾಗರಬಾವಿ, ಬೆಳಿಗ್ಗೆ 9.30



ಇತಿಹಾಸ ಕಟ್ಟಿದೆವು ಪುಸ್ತಕದ ಮುಖಪುಟ

ದು.ಸರಸ್ವತಿ ಅವರು ಅನುವಾದಿಸಿರುವ (ಮೂಲ: ಊರ್ಮಿಳಾ ಪವಾರ್, ಮೀನಾಕ್ಷಿ ಮೂನ್) ‘ನಾವೂ ಇತಿಹಾಸ ಕಟ್ಟಿದೆವು’ ಪುಸ್ತಕ ಬಿಡುಗಡೆ ಸಮಾರಂಭ: ಬಿಡುಗಡೆ: ರಮಾಬಾಯಿ ಆನಂದ್ ತೇಲ್ತುಂಬ್ಡೆ, ಅಧ್ಯಕ್ಷತೆ: ಎನ್. ವೆಂಕಟೇಶ್, ಪುಸ್ತಕ ಕುರಿತು: ಸಬೀಹಾ ಭೂಮಿಗೌಡ, ಪೀರ್ ಬಾಷಾ, ಉಪಸ್ಥಿತಿ: ಎಚ್.ಎಸ್. ಅನುಪಮಾ, ಆಯೋಜನೆ: ತಮಟೆ–ಕರ್ನಾಟಕ ಮತ್ತು ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ, ಸ್ಥಳ: ಗಾಂಧಿಭವನ, ಬೆಳಿಗ್ಗೆ 10

ಎಸ್ಸೆಸ್ಸೆಲ್ಸಿ ಪರೀಕ್ಷೆಯ ಕನ್ನಡ ವಿಷಯದಲ್ಲಿ 125 ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ: ಉದ್ಘಾಟನೆ: ಎಸ್. ಟಿ. ಸೋಮಶೇಖರ್, ಅತಿಥಿಗಳು: ಕೆ.ಈ. ರಾಧಾಕೃಷ್ಣ, ಎಂ. ಪ್ರಕಾಶಮೂರ್ತಿ, ಅಧ್ಯಕ್ಷತೆ: ಎಚ್.ಎಸ್. ಸುಧೀಂದ್ರ ಕುಮಾರ್, ಆಯೋಜನೆ: ಕನ್ನಡ ಸಾಹಿತ್ಯ ಪರಿಷತ್ತು, ಯಶವಂತಪುರ ವಿಧಾನಸಭಾ ಕ್ಷೇತ್ರ, ಸ್ಥಳ: ಅಂಬೇಡ್ಕರ್ ಭವನ, ಕೆಂಗೇರಿ ಉಪನಗರ, ಬೆಳಿಗ್ಗೆ 10

ಎಎಪಿ ನಾಗಪುರ ವಾರ್ಡ್–1 ಕಚೇರಿ ಉದ್ಘಾಟನಾ ಸಮಾರಂಭ: ಅತಿಥಿಗಳು: ‘ಮುಖ್ಯಮಂತ್ರಿ’ ಚಂದ್ರು, ಶಾಂತಲಾ ದಾಮ್ಲೆ, ಆಯೋಜನೆ: ಎಎಪಿ, ಸ್ಥಳ: ಶನಿ ದೇವಸ್ಥಾನದ ಬಳಿ, ನಾಗಪುರ ಮುಖ್ಯರಸ್ತೆ, ಬೆಳಿಗ್ಗೆ 10.30



‘ಪ್ರವಾಹ ನೃತ್ಯೋತ್ಸವ: ಪ್ರಸ್ತುತಿ: ಶರ್ಮಿಳಾ ಮುಖರ್ಜಿ, ಪಾರ್ಶ್ವನಾಥ ಎಸ್. ಉಪಾಧ್ಯಾಯ, ಶೃತಿ ಗೋಪಾಲ್, ಆದಿತ್ಯ ಪಿ.ವಿ., ಆಯೋಜನೆ: ಸಂಜಲಿ ಸೆಂಟರ್ ಫಾರ್ ಒಡಿಸ್ಸಿ ಡಾನ್ಸ್, ಸ್ಥಳ: ಎ.ಡಿ.ಎ. ರಂಗಮಂದಿರ, ಸಂಜೆ 6

ಉಚಿತ ಶೈಕ್ಷಣಿಕ ಕಾರ್ಯಕ್ರಮಗಳ ಉದ್ಘಾಟನಾ ಸಮಾರಂಭ: ಉದ್ಘಾಟನೆ: ವೆಂಕಟೇಶ್ ಗುಪ್ತ, ಅತಿಥಿಗಳು: ಎಂ. ಆರ್. ವೆಂಕಟೇಶ್, ಎಂ.ಜಿ. ಶ್ರೀನಾಥ್ ಗುಪ್ತ, ಬಾಬು ಶಂಕರ್, ಅಧ್ಯಕ್ಷತೆ: ಶ್ರೀರಾಮೇಗೌಡ, ಆಯೋಜನೆ: ಉದಯಭಾನು ಕಲಾಸಂಘ, ಸ್ಥಳ: ಉದಯಭಾನು ಕಲಾಸಂಘದ ಸಾಂಸ್ಕೃತಿಕ ಭವನ, ಕೆಂಪೇಗೌಡ ನಗರ, ಬೆಳಿಗ್ಗೆ 10.30

52ನೇ ವಾರ್ಷಿಕ ಮಹಾಸಭೆ ಸೂಚನಾ ಪತ್ರ: ಆಯೋಜನೆ: ವಿಶ್ವಕರ್ಮ ಕೋ–ಆಪರೇಟಿವ್ ಸೊಸೈಟಿ (ಲಿ), ಸ್ಥಳ: ಕರ್ನಾಟಕ ರಾಜ್ಯ ವಿಶ್ವಕರ್ಮ ಸಮಾಜ, ಶಿರೂರು ಪಾರ್ಕ್ ರಸ್ತೆ, ಶೇಷಾದ್ರಿಪುರ, ಬೆಳಿಗ್ಗೆ 10.30

ಶ್ರೀಧರಮೂರ್ತಿ ಎ. ಅವರ ‘ಲಿಮಿನಲ್ ಲ್ಯಾಂಡ್ಸ್’ ಎಂಬ ಏಕವ್ಯಕ್ತಿ ಚಿತ್ರಕಲೆ ಪ್ರದರ್ಶನ: ಆಯೋಜನೆ: ಆರ್ಟ್ ಹೌಸ್, ಸ್ಥಳ: 63, ಪ್ಯಾಲೇಸ್ ರಸ್ತೆ, ಅಬ್‌ಶಾಟ್ ಲೇಔಟ್, ವಸಂತನಗರ, ಬೆಳಿಗ್ಗೆ 10.30

ಶಿಕ್ಷಕರ ದಿನಾಚರಣೆ ವಿಶೇಷ ಕಾರ್ಯಕ್ರಮ: ಅತಿಥಿಗಳು: ಎಚ್ ಕೆ. ಸುಪ್ರಭ, ಎಂ ಆರ್. ಉಷಾ, ಉಪಸ್ಥಿತಿ: ಎಚ್.ಎನ್. ಮಂಡ್ಯ ಬಾಲಸುಬ್ರಹ್ಮಣ್ಯಂ, ಕೆ.ವಿ. ಲಕ್ಷ್ಮಣಮೂರ್ತಿ, ಆಯೋಜನೆ: ರವಿಕಿರಣ ಸಾಹಿತ್ಯ ಪ್ರತಿಷ್ಠಾನ, ಸ್ಥಳ: ಕೆನ್ ಕಲಾ ಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30

ಗುರುವಂದನಾ ಕಾರ್ಯಕ್ರಮ: ಪ್ರಶಸ್ತಿ ಪ್ರದಾನ: ಎಂ ಪಿ. ಶ್ಯಾಮ್, ಭಾಷಣಕಾರರು: ತೇಜಸ್ವಿ ಸೂರ್ಯ, ಅತಿಥಿಗಳು: ಮಾತಾ.ಬಿ. ಮಂಜಮ್ಮ ಜೋಗತಿ, ಆರ್. ಪ್ರಸಾದ್, ಆಯೋಜನೆ: ಆರ್. ವಿ. ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಆ್ಯಂಡ್ ಡೆಂಟಲ್ ಕಾಲೇಜ್, ಆಡಿಟೋರಿಯಂ, ಜೆ ಪಿ ನಗರ, ಮಧ್ಯಾಹ್ನ 2ರಿಂದ ಸಂಜೆ 6

ಭರತನಾಟ್ಯ ಪ್ರದರ್ಶನ: ಪ್ರಸ್ತುತಿ: ಅನಘ ಆರ್., ಸಂಜೆ: 4, ಅಭಿನಂದನಾ ಸಮಾರಂಭ: ಬೇಲೂರು ರಾಮಮೂರ್ತಿ, ಭರತನಾಟ್ಯ: ಎಂ.ಎನ್. ಲತಾರಾಣಿ ಶಿಷ್ಯರಿಂದ, ಗಣಪತಿ ವಿಸರ್ಜನೆ: ಜನಪದ ಕಲಾ ತಂಡದೊಂದಿಗೆ, ಆಯೋಜನೆ: ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ, ಗಾಯತ್ರಿ ಭವನ, ತ್ಯಾಗರಾಜನಗರ, ಬನಶಂಕರಿ, ಸಂಜೆ 4

ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಕರ್ನಾಟಕ ಸದ್ಭಾವನಾ ಪ್ರಶಸ್ತಿ ಪ್ರದಾನ ಸಮಾರಂಭ: ಉದ್ಘಾಟನೆ: ಎನ್. ಸಂತೋಷ್ ಹೆಗ್ಡೆ, ಅತಿಥಿಗಳು: ಎಚ್. ಎಲ್. ನಾಗರಾಜ್, ಮಂಜುನಾಥ್ ವಿ., ಎಚ್.ಎಸ್. ಮಂಜುನಾಥ್, ವಿ. ಕೃಷ್ಣಮೂರ್ತಿ, ಆಯೋಜನೆ: ಕಲಾಬಂಧು ಫೌಂಡೇಷನ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ ಸಿ. ರಸ್ತೆ, ಸಂಜೆ 4.15

ಚಾಮರಾಜ್ ಫಿಲ್ಮ್ ಇನ್‌ಸ್ಟಿಟ್ಯೂಟ್‌ನ 30ನೇ ವರ್ಷದ ವಾರ್ಷಿಕೋತ್ಸವ, ಗುರುವಂದನಾ ಕಾರ್ಯಕ್ರಮ: ಅತಿಥಿಗಳು: ಕೆ. ಗೋಪಾಲಯ್ಯ, ಓಂ ಸಾಯಿ ಪ್ರಕಾಶ್, ವಿ.ನಾಗೇಂದ್ರ ಪ್ರಸಾದ್, ಪ್ರೇಮ್, ಶರಣ್, ತರುಣ್ ಸುಧೀರ್, ಆಯೋಜನೆ: ಗುರುಕುಲ ಚಾಮರಾಜ್ ಕಲಾಕುಟೀರ್, ಸ್ಥಳ: ಡಾ.ರಾಜ್‌ಕುಮಾರ್ ಸಭಾಂಗಣ, ಗೆಳೆಯರ ಬಳಗ, ಸಂಜೆ 4.30

ಎಂ.ಎಸ್. ಸುಬ್ಬಲಕ್ಷ್ಮಿ ಅವರ 106ನೇ ಜನ್ಮದಿನದ ಪ್ರಯುಕ್ತ ಯುಗಳ ಸಂಗೀತ ಕಾರ್ಯಕ್ರಮ: ಪ್ರಸ್ತುತಿ: ಎಸ್. ಐಶ್ವರ್ಯಾ, ಎಸ್. ಸೌಂದರ್ಯ, ಪಿಟೀಲು, ಮತ್ತೂರ್ ವಿಶ್ವಜಿತ್, ಮೃದಂಗ: ಫಣೀಂದ್ರ ಭಾಸ್ಕರ್, ಘಟ: ರಾಂಗೋಪಾಲ್, ಆಯೋಜನೆ ಮತ್ತು ಸ್ಥಳ: ರಾಮ ಲಲಿತ ಕಲಾಮಂದಿರ, ಸಭಾಂಗಣ, ಬನಶಂಕರಿ 2ನೇ ಹಂತ, ಸಂಜೆ 5.30

ಪ್ರೇಯಸಿ ಮದುವೆಯಾಗಿದ್ದಕ್ಕೆ ಸ್ನೇಹಿತನ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೈಯಪ್ಪನಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಸತೀಶ್ (23) ಎಂಬುವರನ್ನು ಚಾಕುವಿನಿಂದ ಇರಿದು ಕೊಲೆ ಮಾಡಲಾಗಿದ್ದು, ಸ್ನೇಹಿತನೇ ಕೃತ್ಯ ಎಸಗಿರುವ ಅನುಮಾನ ವ್ಯಕ್ತವಾಗಿದೆ.

'ಹಳೇ ಬೈಯಪ್ಪನಹಳ್ಳಿಯ ಗಜೇಂದ್ರನಗರ ನಿವಾಸಿ ಸತೀಶ್ (23), ಕಾರ್ಯಕ್ರಮಗಳಲ್ಲಿ ಹೂವಿನ ಅಲಂಕಾರದ ಕೆಲಸ ಮಾಡುತ್ತಿದ್ದರು. ಇವರನ್ನು ಶುಕ್ರವಾರ ರಾತ್ರಿ ಕೊಲೆ ಮಾಡಲಾಗಿದೆ. ಸ್ನೇಹಿತ ರಾಕೇಶ್ ಎಂಬಾತ ಕೃತ್ಯ ಎಸಗಿರುವುದು ತನಿಖೆಯಿಂದ ಗೊತ್ತಾಗಿದ್ದು, ಸದ್ಯ ಆತ ತಲೆಮರೆಸಿಕೊಂಡಿದ್ದಾನೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸ್ಥಳೀಯ ನಿವಾಸಿಯಾದ ಆರೋಪಿ ರಾಕೇಶ್ ಯುವತಿಯೊಬ್ಬರನ್ನು ಪ್ರೀತಿಸುತ್ತಿದ್ದ. ಈ ವಿಷಯ ಸತೀಶ್ ಅವರಿಗೂ ಗೊತ್ತಿತ್ತು. ರಾಕೇಶ್ ವರ್ತನೆ ಸರಿ ಇಲ್ಲವೆಂಬ ಕಾರಣಕ್ಕೆ ಯುವತಿ ಆತನಿಂದ ದೂರವಾಗಿದ್ದಳು. ಇದೇ ಸಂದರ್ಭದಲ್ಲೇ ಸತೀಶ್, ಯುವತಿ ಜೊತೆ ಒಡನಾಟ ಬೆಳೆಸಿದ್ದರು. ಸತೀಶ್ ಹಾಗೂ ಯುವತಿ ಪರಸ್ಪರ ಪ್ರೀತಿಸಲಾರಂಭಿಸಿದ್ದರು. ಇಬ್ಬರೂ ತಿಂಗಳ ಹಿಂದೆಯಷ್ಟೇ ಮದುವೆಯಾಗಿದ್ದರು. ರಾಕೇಶ್ ಮನೆ ಬಳಿಯೇ ದಂಪತಿ ವಾಸವಿದ್ದರು' ಎಂದೂ ಮೂಲಗಳು ತಿಳಿಸಿವೆ.

ಸಂಚು ರೂಪಿಸಿ ಕೊಲೆ: 'ತಾನು ಪ್ರೀತಿಸುತ್ತಿದ್ದ ಯುವತಿಯನ್ನು ಮದುವೆಯಾದನೆಂಬ ಕಾರಣಕ್ಕೆ ಸತೀಶ್ ವಿರುದ್ಧ ರಾಕೇಶ್ ಸಿಟ್ಟಾಗಿದ್ದ. ಆಗಾಗ ಇಬ್ಬರ ನಡುವೆ ಗಲಾಟೆಯೂ ಆಗಿತ್ತು. ಸತೀಶ್ ಅವರನ್ನು ಕೊಲ್ಲಲು ರಾಕೇಶ್ ಸಂಚು ರೂಪಿಸಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಬೈಯಪ್ಪನಹಳ್ಳಿ ರೈಲು ನಿಲ್ದಾಣ ಸಮೀಪದ ಕೆಳ ಸೇತುವೆ ಬಳಿ ಹೊರಟಿದ್ದ ಸತೀಶ್ ಅವರನ್ನು ಅಡ್ಡ-ಗಟ್ಟಿದ್ದ ಆರೋಪಿ, ಚಾಕುವಿನಿಂದ ಇರಿದಿದ್ದ. ತೀವ್ರ ರಕ್ತಸ್ರಾವದಿಂದ ಸತೀಶ್ ಮೃತಪಟ್ಟಿದ್ದಾರೆ. ಕೃತ್ಯದಲ್ಲಿ ಮತ್ತಷ್ಟು ಆರೋಪಿಗಳು ಭಾಗಿಯಾಗಿರುವ ಅನುಮಾನವಿದೆ' ಎಂದು ತಿಳಿಸಿವೆ.

ಜೂಜಾಟ: ಮನೆ ಮೇಲೆ ಸಿಸಿಬಿ ದಾಳಿ

ಬೆಂಗಳೂರು: ಕೋಣನಕುಂಟೆ ಠಾಣೆ ವ್ಯಾಪ್ತಿಯ ಮನೆಯೊಂದರ ಮೇಲೆ ಸಿಸಿಬಿ ಪೊಲೀಸರು ದಾಳಿ ಮಾಡಿದ್ದು, ಜೂಜಾಟದಲ್ಲಿ ತೊಡಗಿದ್ದ ಆರೋಪದಡಿ ಎಂಟು ಮಂದಿಯನ್ನು ಬಂಧಿಸಿದ್ದಾರೆ.

'ಕೊತ್ತನೂರು ಮುಖ್ಯರಸ್ತೆಯ ಗೌಡರ ಮುನಿರೆಡ್ಡಿ ಬಡಾವಣೆ ನಿವಾಸಿ ಬಾಬುರೆಡ್ಡಿ ಎಂಬುವರ ಮನೆಯಲ್ಲಿ ಜೂಜಾಟ ನಡೆಯುತ್ತಿತ್ತು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಿ, ಆರೋಪಿಗಳನ್ನು ಬಂಧಿಸಲಾಗಿದೆ. ₹ 50,200 ನಗದು ಜಪ್ತಿ ಮಾಡಲಾಗಿದೆ. ಹಲವು ಬಾರಿ ಆರೋಪಿಗಳು ಮನೆಯಲ್ಲಿ ಸೇರಿ ಹಣ ಕಟ್ಟಿ ಜೂಜು ಆಡುತ್ತಿದ್ದರು. ಇವರೆಲ್ಲರ ವಿರುದ್ಧ ಕೋಣನಕುಂಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

ಲಾಕ್‌ಡೌನ್‌ನಿಂದಾಗಿ ನಷ್ಟಕ್ಕೊಳಗಾಗಿದ್ದ ಪಬ್‌ಗಳು • ಗ್ರಾಹಕರ ಸೆಳೆಯಲು 'ವಾಮ ಮಾರ್ಗ'

ಅರೆನಗ್ನ ನೃತ್ಯ: ಹೆದರದ ಮಾಲೀಕರು

• ಆದಿತ್ಯ ಕೆ.ಎ.

ಪ್ರಜಾವಾಣಿ ವಿಶೇಷ

ಬೆಂಗಳೂರು: ರಾಜಧಾನಿಯಲ್ಲಿ ಪಬ್ ಹಾಗೂ ಬಾರ್‌ಗಳ ಸಮಯ ವಿಸ್ತರಣೆ ಬಳಿಕ ಗ್ರಾಹಕರ ಸೆಳೆಯಲು ರಾತ್ರಿಯಿಡೀ ಅರೆನಗ್ನ ನೃತ್ಯ ಆಯೋಜಿ-ಸಲಾಗುತ್ತಿದೆ.

ಕೋವಿಡ್ ಸಾಂಕ್ರಾಮಿಕ ರೋಗ ನಿಯಂತ್ರಣಕ್ಕೆ ಹೇರಿದ್ದ ಲಾಕ್‌ಡೌನ್‌ನಿಂದ ಬೆಂಗಳೂರಿನ ನೂರಾರು ಪಬ್‌ಗಳು ನಷ್ಟಕ್ಕೆ ತುತ್ತಾಗಿದ್ದವು. ಈಗ ಆ ನಷ್ಟ ತುಂಬಿಕೊಳ್ಳಲು ಪಬ್‌ಗಳು 'ವಾಮ ಮಾರ್ಗ' ಅನುಸರಿಸುತ್ತಿದ್ದು ಪೊಲೀಸರ ಕೆಂಗಣ್ಣಿಗೆ ಗುರಿಯಾಗಿವೆ.

ಹೊರರಾಜ್ಯದ ಮಹಿಳೆಯರು, ಯುವತಿಯರನ್ನು ಕೆಲಸಕ್ಕೆ ನೇಮಿಸಿಕೊಂಡು ಅವರಿಂದ ಅರೆನಗ್ನ ನೃತ್ಯ ಮಾಡಿಸಿ, ಗ್ರಾಹಕರ ಸೆಳೆದು ಹಣ ಗಳಿಸುತ್ತಿದ್ದ ಪಬ್‌ಗಳ ವಿರುದ್ಧ ದೂರು ದಾಖಲಾಗಿದೆ.

ಅಕ್ಕಪಕ್ಕದ ನಿವಾಸಿಗಳ ಒತ್ತಡ, ಆಗ್ರಹದ ಬಳಿಕ ನಗರ ಪೊಲೀಸರು ತಡರಾತ್ರಿ ಗ್ರಾಹಕರ ಸೋಗಿನಲ್ಲಿ ಕಾರ್ಯಾಚರಣೆಗೆ ಇಳಿದಿದ್ದಾರೆ. ಕಬ್ಬನ್ ಪಾರ್ಕ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲೇ ಇಂತಹ ಪ್ರಕರಣಗಳು ಹೆಚ್ಚು ಕಂಡುಬಂದಿವೆ.

'ಆರ್‌ಎಚ್‌ಪಿ ರಸ್ತೆಯ ಡುಯೆಟ್ ಪಬ್, ಬ್ರಿಗೇಡ್ ರಸ್ತೆಯ ರೆಸ್ಟ್ ಹೌಸ್ ರಸ್ತೆಯ ನಂ.:27ರ ಮ್ಯಾಗೀ ಟ್ರೀ ಲಾಡ್ಜ್‌ನ 4ನೇ ಮಹಡಿಯಲ್ಲಿರುವ 'ಎಕ್ಸ್‌ಕ್ಯೂಸ್ ಬಾರ್' ಸೇರಿದಂತೆ 10 ಡಾನ್ಸ್ ಬಾರ್‌ಗಳ ವಿರುದ್ಧ ಪ್ರಕರಣ ದಾಖಲಾಗಿದೆ' ಎಂದು ಮೂಲಗಳು ಹೇಳಿವೆ.

ಬಾರ್ ವ್ಯವಸ್ಥಾಪಕ ನವೀನ್‌ಗೌಡ, ಕ್ಯಾಶಿಯರ್ ಕೆ.ಎಲ್.ಸೂರಿ, ಮದ್ಯ ಸರಬರಾಜು ಮಾಡುವ ಲೋಹಿತ್‌ಕುಮಾರ್, ಭರತ್, ಭಾಸ್ಕರ್, ಆಕಾಶ್, 'ಡಿಜೆ' ರವಿ ಎಂಬುವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗಿದೆ. ಎಕ್ಸ್‌ಕ್ಯೂಸ್ ಬಾರ್‌ನ ಮಾಲೀಕರ ಸತ್ಯನಾರಾಯಣ ತಲೆಮರೆಸಿಕೊಂಡಿದ್ದಾರೆ.

'ಪಬ್‌ಗಳಿಗೆ ಹೊರರಾಜ್ಯದ ಯುವತಿಯರನ್ನೇ ಹೆಚ್ಚಾಗಿ ನೇಮಿಸಿ-ಕೊಳ್ಳಲಾಗುತ್ತಿದೆ. ಗ್ರಾಹಕರಿಗೆ ಲೈಂಗಿಕ ಪ್ರಚೋದನೆ ನೀಡುವಂತಹ ಅಸಭ್ಯ ಉಡುಪನ್ನು ಮಹಿಳೆಯರಿಗೆ ತೊಡಿಸಿ ಅವರಿಂದ ಅಶ್ಲೀಲ ನೃತ್ಯ ಮಾಡಿಸ-ಲಾಗುತ್ತಿದೆ. ಪ್ರತಿ ಗ್ರಾಹಕರಿಗೆ ಒಬ್ಬ ಯುವತಿ ನೇಮಿಸಿ, ಟೇಬಲ್‌ಗಳ ಮೂಲೆಯಲ್ಲಿ ಕೂರಿಸಲಾಗುತ್ತಿದೆ. ಲೈಟ್ ಆಫ್ ಮಾಡಿ ಚುಂಬಿಸುವುದಕ್ಕೆ ಮಾಲೀಕರು, ಪಬ್ ಸಿಬ್ಬಂದಿ ಅವಕಾಶ ಕಲ್ಪಿಸುತ್ತಿರುವುದು ದಾಳಿ ವೇಳೆ ಪತ್ತೆಯಾಗಿದ್ದು, ಈ ವಿಷಯವನ್ನು ಎಫ್‌ಐಆರ್‌ನಲ್ಲೂ ಉಲ್ಲೇಖಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

'ವಾರಾಂತ್ಯದಲ್ಲಿ ಬಹುತೇಕ ಪಬ್‌ಗಳಲ್ಲಿ ಅನೈತಿಕ ಚಟುವಟಿಕೆಗೆ ಅವಕಾಶ ಕಲ್ಪಿಸಲಾಗುತ್ತಿದೆ. ಅನಧಿಕೃತ ಬಾರ್‌ಗಳ ಹಾವಳಿ ಮಿತಿಮೀರಿದೆ. ಜತೆಗೆ ಗಾಂಜಾ ವ್ಯಸನಿಗಳ ತಾಣವಾಗಿ ಬದಲಾಗಿವೆ. 'ಮಾಮೂಲಿ' ನೀಡದ ಪಬ್‌ಗಳ ಮೇಲೆ ಮಾತ್ರ ದಾಳಿ ನಡೆಯುತ್ತಿದೆ. ಸರ್ಕಾರಕ್ಕೆ ಆದಾಯ ಬರುತ್ತಿದೆ ಎಂಬ ದೃಷ್ಟಿಕೋನದಿಂ-ದಲೇ ಎಲ್ಲವನ್ನೂ ನೋಡುವುದನ್ನು ಬಿಡಬೇಕು. ಪಬ್‌ಗಳ ಮೇಲೆ ನಿರಂತರ ನಿಗಾ ವಹಿಸಬೇಕು' ಎಂದು ಇಂದಿರಾನಗರದ ನಿವಾಸಿ ಲೋಕೇಶ್ ಆಗ್ರಹಿಸಿದರು.

'ಡಾನ್ಸ್ ಪ್ಲೀಸ್...'

ಶನಿವಾರ, ಭಾನುವಾರ ನಗರದ ಬ್ರಿಗೇಡ್ ರಸ್ತೆ, ಚರ್ಚ್ ಸ್ಟ್ರೀಟ್, ಕೋರಮಂಗಲದ ಕೆಲವು ರಸ್ತೆಗಳಲ್ಲಿ ಪಬ್‌ಗಳ ಸಿಬ್ಬಂದಿ ರಸ್ತೆಯ ಬದಿಯಲ್ಲಿ ನಿಂತು 'ಡಾನ್ಸ್ ಪ್ಲೀಸ್... ಬನ್ನಿ ಸಾರ್' ಎನ್ನುತ್ತಿದ್ದಾರೆ. ಇದು ಪಾದಚಾರಿಗಳು ಹಾಗೂ ಹಿರಿಯರಿಗೆ ಮುಜುಗರ ತರುತ್ತಿದೆ ಎಂದು ಎಂಜಿನಿಯರ್ ಲೋಕೇಶ್ ದೂರಿದರು.

ಕೋಣನಕುಂಟೆ: ಒಂದೇ ಕುಟುಂಬದ ಮೂವರ ಸಾವು ಪ್ರಕರಣ, ತನಿಖೆ ಚುರುಕು

ಪತ್ನಿ, ಮಗನ ಕುತ್ತಿಗೆ ಹಿಸುಕಿ ಕೊಂದು ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋಣನಕುಂಟೆ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಒಂದೇ ಕುಟುಂಬದ ಮೂವರು ಮೃತಪಟ್ಟಿದ್ದ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಪೊಲೀಸರು ಸಾವು ಹೇಗಾಯಿತೆಂಬ ಪ್ರಾಥಮಿಕ ಮಾಹಿತಿಯನ್ನು ಕಲೆಹಾಕಿದ್ದಾರೆ.

'ಚುಂಚನಕಟ್ಟೆ ಎಸ್‌ಬಿಐ ಲೇಔಟ್ ನಿವಾಸಿ ಮಹೇಶ್ ಕುಮಾರ್ (44), ಪತ್ನಿ ಜ್ಯೋತಿ (29) ಹಾಗೂ ಮಗ ನಂದೀಶ್ ಗೌಡ (9) ಅವರ ಮೃತದೇಹಗಳು ಆಗಸ್ಟ್ 18ರಂದು ಮನೆಯಲ್ಲಿ ಪತ್ತೆ-ಯಾಗಿದ್ದವು. ಮೂವರ ಸಾವು ನಿಗೂಢವಾಗಿತ್ತು. ತನಿಖೆ ಕೈಗೊಂಡಾಗ ಕೊಲೆ ನಡೆದಿರುವುದು ಗೊತ್ತಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಬಿಬಿಎಂಪಿ ಗುತ್ತಿಗೆದಾರ-ರೊಬ್ಬರ ಬಳಿ ಕೆಲಸ ಮಾಡುತ್ತಿದ್ದ ಮಹೇಶ್‌ಕುಮಾರ್ ಆರೋಗ್ಯ ಸಮಸ್ಯೆ ಎದುರಿಸುತ್ತಿದ್ದರು. ಹಲವು ವೈದ್ಯರ ಬಳಿ ತೋರಿಸಿದರೂ ಗುಣಮುಖವಾಗಿರಲಿಲ್ಲ. ಇದರಿಂದ ಬೇಸತ್ತಿದ್ದ ಮಹೇಶ್, ಆತ್ಮಹತ್ಯೆ ಮಾಡಿಕೊಳ್ಳಲು ತೀರ್ಮಾನಿಸಿದ್ದರು. ಇದೇ ವಿಷಯವನ್ನು ಪತ್ನಿ ಜ್ಯೋತಿಗೆ ಹೇಳಿದ್ದರು. ಆದರೆ, ಆತ್ಮಹತ್ಯೆ ಮಾಡಿಕೊಳ್ಳುವುದು ಬೇಡವೆಂದು ಜ್ಯೋತಿ ಹೇಳಿದ್ದರೆಂದು ತಿಳಿದುಬಂದಿದೆ.'

ಮಗನ ಜೊತೆ ಮಹೇಶ್‌ಕುಮಾರ್ ಹಾಗೂ ಜ್ಯೋತಿ

ಅಪರಾಧ ಸುದ್ದಿ

'ಆತ್ಮಹತ್ಯೆ ವಿಚಾರವಾಗಿ ಮನೆಯಲ್ಲಿ ಗಲಾಟೆ ಆಗಿರುವ ಮಾಹಿತಿಯೂ ಇದೆ. ಸಿಟ್ಟಾಗಿದ್ದ ಮಹೇಶ್, ಪತ್ನಿ ಹಾಗೂ ಮಗನನ್ನು ಕುತ್ತಿಗೆ ಹಿಸುಕಿ ಕೊಲೆ ಮಾಡಿರುವುದು ಸದ್ಯದ ತನಿಖೆಯಿಂದ ಗೊತ್ತಾಗಿದೆ' ಎಂದು ತಿಳಿಸಿವೆ.

ಐದು ಗಂಟೆ ಬಳಿಕ ಆತ್ಮಹತ್ಯೆ: 'ಪತ್ನಿ ಹಾಗೂ ಮಗನನ್ನು ಕೊಲೆ ಮಾಡಿದ ಬಳಿಕ ಮಹೇಶ್, ಮನೆಯಲ್ಲೇ ಸುಮಾರು ಐದು ಗಂಟೆ ಕಳೆದಿದ್ದರು. 'ಆರೋಗ್ಯ ಸಮಸ್ಯೆಯಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇವೆ' ಎಂಬುದಾಗಿ ಮರಣಪತ್ರ ಬರೆದಿಟ್ಟು, ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಜ್ಯೋತಿ, ನಂದೀಶ್ ಗೌಡ ಅವರ ಮೃತದೇಹಗಳು ಕೊಠಡಿಯಲ್ಲಿದ್ದವು. ಇನ್ನೊಂದು ಕೊಠಡಿಯಲ್ಲಿ ಮಹೇಶ್, ಮೃತದೇಹವಿತ್ತು. ಇದು ಕೊಲೆ ಬಗ್ಗೆ ಸುಳಿವು ನೀಡಿತ್ತು. ಮೂವರ ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗೆ ಒಳಪಡಿಸಲಾಗಿತ್ತು. ಇದೀಗ ಪರೀಕ್ಷೆ ವರದಿ ಬಂದಿದ್ದು, ವಿಧಿವಿಜ್ಞಾನ ಪ್ರಯೋಗಾಲಯದ ವರದಿ ಬರುವುದು ಬಾಕಿ ಇದೆ' ಎಂದು ತಿಳಿಸಿವೆ.

ಬೈಕ್ ಉರುಳಿಬಿದ್ದು ಟೆಕಿ ಸಾವು

ಬೆಂಗಳೂರು: ಚಿಕ್ಕಜಾಲ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಬೈಕ್ ಉರುಳಿ ಬಿದ್ದು ಅಪಘಾತ ಸಂಭವಿಸಿದ್ದು, ಸವಾರ ದೀಪಕ್ (24) ಮೃತಪಟ್ಟಿದ್ದಾರೆ.

'ಸಾಫ್ಟ್‌ವೇರ್ ಎಂಜಿನಿಯರ್ (ಟೆಕಿ) ದೀಪಕ್, ರಾಮಮೂರ್ತಿನಗರದಲ್ಲಿ ವಾಸವಿದ್ದರು. ಶುಕ್ರವಾರ ತಡರಾತ್ರಿ ಹೆಬ್ಬಾಳದಿಂದ ರಾಮಮೂರ್ತಿನಗರದತ್ತ ಬೈಕ್‌ನಲ್ಲಿ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ' ಎಂದು ಪೊಲೀಸರು ಹೇಳಿದರು.

'ದೀಪಕ್ ಅವರು ಹೊರವರ್ತುಲ ರಸ್ತೆಯಲ್ಲಿ ನಿರ್ಲಕ್ಷ್ಯದಿಂದ ಅತಿ ವೇಗವಾಗಿ ಬೈಕ್ ಚಲಾಯಿಸಿದ್ದರು. ಇದೇ ಕಾರಣಕ್ಕೆ ರಸ್ತೆಯಲ್ಲೇ ಬೈಕ್ ಉರುಳಿ ಬಿದ್ದಿತ್ತು. ದೀಪಕ್ ಅವರಿಗೆ ತೀವ್ರ ಪೆಟ್ಟಾಗಿತ್ತು. ಪ್ರಜ್ಞೆ ತಪ್ಪಿ ಬಿದ್ದಿದ್ದ ಅವರನ್ನು ಸ್ಥಳೀಯರು ಆಂಬುಲೆನ್ಸ್‌ನಲ್ಲಿ ಸಮೀಪದ ಆಸ್ಪತ್ರೆಗೆ ಕರೆದೊಯ್ದಿದ್ದರು. ತಪಾಸಣೆ ನಡೆಸಿದ ವೈದ್ಯರು ಮಾರ್ಗಮಧ್ಯೆಯೇ ದೀಪಕ್ ಮೃತಪಟ್ಟಿರುವುದಾಗಿ ತಿಳಿಸಿದರು' ಎಂದು ಪೊಲೀಸರು ಮಾಹಿತಿ ನೀಡಿದರು.

ಪೂರ್ಣ ಕ್ಲಬ್ ಮೇಲೆ ಸಿಸಿಬಿ ದಾಳಿ

ಬೆಂಗಳೂರು: ಮರಿಯಪ್ಪನಪಾಳ್ಯದ ಪೂರ್ಣ ಸ್ಪೋರ್ಟ್ಸ್ ಆ್ಯಂಡ್ ಕಲ್ಚರಲ್ ಅಸೋಸಿಯೇಷನ್ ಕ್ಲಬ್ ಮೇಲೆ ಸಿಸಿಬಿ ಪೊಲೀಸರು ದಾಳಿ ಮಾಡಿದ್ದು, ಅಕ್ರಮವಾಗಿ ಜೂಜಾಟವಾಡುತ್ತಿದ್ದ 38 ಮಂದಿಯನ್ನು ಬಂಧಿಸಿದ್ದಾರೆ.

'100 ಅಡಿ ರಸ್ತೆಯಲ್ಲಿರುವ ಎಸ್.ಎಂ. ಕಾಂಪ್ಲೆಕ್ಸ್‌ನ 2ನೇ ಮಹಡಿಯಲ್ಲಿ ಕ್ಲಬ್ ಇದೆ. ಸದಸ್ಯರಲ್ಲದ ಹಲವರು ಕ್ಲಬ್‌ನಲ್ಲಿ ಜೂಜು ಆಡುತ್ತಿದ್ದ ಮಾಹಿತಿ ಬಂದಿತ್ತು. ವಿಶೇಷ ವಿಚಾರಣಾ ದಳದ ಅಧಿಕಾರಿಗಳು, ಕ್ಲಬ್ ಮೇಲೆ ದಾಳಿ ಮಾಡಿ ಆರೋಪಿಗಳನ್ನು ಬಂಧಿಸಿದ್ದಾರೆ. ನಿತ್ಯವೂ ಕ್ಲಬ್‌ನಲ್ಲಿ ಸೇರುತ್ತಿದ್ದ ಆರೋಪಿಗಳು, ಸಾವಿರ ಹಾಗೂ ಲಕ್ಷ ಲೆಕ್ಕದಲ್ಲಿ ಹಣ ಕಟ್ಟಿ ಜೂಜು ಆಡುತ್ತಿದ್ದರು. ಬಂಧಿತ ಆರೋಪಿಗಳಿಂದ ₹ 90,090 ಜಪ್ತಿ ಮಾಡಲಾಗಿದೆ. ಜ್ಞಾನಭಾರತಿ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

ದಸರಾ ಬಹುಭಾಷಾ ಕವಿಗೋಷ್ಠಿ: ಕಂಬಾರ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಮೈಸೂರು: 'ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಪ್ರಧಾನ ಕವಿಗೋಷ್ಠಿಯು ಅ.3ರಂದು ನಡೆಯಲಿದ್ದು, ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಚಂದ್ರಶೇಖರ ಕಂಬಾರ ಉದ್ಘಾಟಿಸಲಿದ್ದಾರೆ. ಕವಿ ಎಚ್.ಎಸ್.ಶಿವಪ್ರಕಾಶ್ ಅಧ್ಯಕ್ಷತೆ ವಹಿಸಲಿದ್ದಾರೆ' ಎಂದು ದಸರಾ ಕವಿಗೋಷ್ಠಿ ಉಪ ಸಮಿತಿಯ ಉಪ ವಿಶೇಷಾಧಿಕಾರಿ ಡಾ.ಎಂ.ದಾಸೇಗೌಡ ತಿಳಿಸಿದರು.

'ಕನ್ನಡದೊಂದಿಗೆ ತುಳು, ಕೊಡವ, ಅರೆಭಾಷೆ, ಸಂಸ್ಕೃತ, ಕೊಂಕಣಿ ಮೊದಲಾದ ಭಾಷೆಗಳ 40 ಕವಿಗಳು ಪಾಲ್ಗೊಳ್ಳಲಿದ್ದಾರೆ. ಕವಿಗಳ ಆಯ್ಕೆ ಪ್ರಕ್ರಿಯೆ ನಡೆದಿದ್ದು, ರಾಜ್ಯದ ಎಲ್ಲ ಭಾಗದವರಿಗೂ ಪ್ರಾತಿನಿಧ್ಯ ಇರಲಿದೆ. ₹ 25 ಲಕ್ಷ ಅನುದಾನ ಕೋರಲಾಗಿದೆ' ಎಂದು ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಶನಿವಾರ ಮಾಹಿತಿ ನೀಡಿದರು.

ಅನಿಲ ಸೋರಿಕೆಯಿಂದ ಸ್ಫೋಟ: ಮೂವರಿಗೆ ಗಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುಮಾರಸ್ವಾಮಿ ಠಾಣೆ ವ್ಯಾಪ್ತಿಯ ಯಲಚೇನಹಳ್ಳಿಯ ಮನೆಯೊಂದರಲ್ಲಿ ಶನಿವಾರ ಬೆಳಿಗ್ಗೆ ಸ್ಫೋಟ ಸಂಭವಿಸಿದ್ದು, ಮೂವರು ತೀವ್ರವಾಗಿ ಗಾಯಗೊಂಡಿದ್ದಾರೆ.

'ಗೌತಮ್, ಮಂದಿಲ್ ಹಾಗೂ ಸೋನಿ ಗಾಯಗೊಂಡವರು. ತೀವ್ರ ಸುಟ್ಟ ಗಾಯಗಳಾಗಿರುವ ಮೂವರನ್ನೂ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾ-ಗಿದ್ದು, ಆರೋಗ್ಯ ಸ್ಥಿತಿ ಚಿಂತಾಜನಕವಾ-ಗಿದೆ' ಎಂದು ಪೊಲೀಸರು ಹೇಳಿದರು.

'ಬಿಹಾರದ ಗೌತಮ್ ಹಾಗೂ ಮಂದಿಲ್ ವರ್ಷದ ಹಿಂದೆಯಷ್ಟೇ ನಗರಕ್ಕೆ ಬಂದಿದ್ದರು. ಏಜೆನ್ಸಿ ಮೂಲಕ ಭದ್ರತಾ ಸಿಬ್ಬಂದಿ ಆಗಿ ಕೆಲಸ ಆರಂಭಿಸಿದ್ದರು. ಯಲಚೇನಹಳ್ಳಿಯಲ್ಲಿ ಬಾಡಿಗೆ ಕೊಠಡಿಯಲ್ಲಿ ವಾಸವಿದ್ದರು. ಅವರ ಪಕ್ಕದ ಮನೆಯಲ್ಲೇ ಕುಟುಂಬದ ಜೊತೆ ಮಹಿಳೆ ಸೋನಿ ನೆಲೆಸಿದ್ದರು' ಎಂದು ತಿಳಿಸಿದರು.

'ಸೋನಿ ಅವರು ಬೆಳಿಗ್ಗೆ ಬಟ್ಟೆ ಒಣ ಹಾಕಲೆಂದು ಹೊರಗೆ ಬಂದಿದ್ದರು. ಇದೇ ಸಂದರ್ಭದಲ್ಲೇ ಕೊಠಡಿಯಲ್ಲಿ ಸ್ಫೋಟ ಸಂಭವಿಸಿತ್ತು. ಕೊಠಡಿಯ-ಲ್ಲಿದ್ದ ಗೌರಮ್, ಮಂದಿಲ್ ಹಾಗೂ ಹೊರಗೆ ಇದ್ದ ಸೋನಿ ಅವರಿಗೆ ಬೆಂಕಿ ತಗುಲಿ ಗಾಯವಾಯಿತು' ಎಂದೂ ಹೇಳಿದರು.

ಮನೆಯಲ್ಲಿ ಪರಿಶೀಲನೆ: 'ಸ್ಫೋಟ ಸಂಭವಿಸುತ್ತಿದ್ದಂತೆ ಜೋರಾದ ಶಬ್ದ ಬಂದಿತ್ತು. ಸ್ಥಳೀಯರು ಠಾಣೆಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಹೋಗಿ ಪರಿಶೀಲಿಸಲಾಯಿತು' ಎಂದು ಪೊಲೀಸರು ತಿಳಿಸಿದರು.

'ಕೊಠಡಿಯಲ್ಲಿ ಅಡುಗೆ ಅನಿಲ ಸಿಲಿಂಡರ್ ಇತ್ತು. ಅದೇ ಅನಿಲ ಸೋರಿಕೆಯಾಗಿ ಸ್ಫೋಟ ಸಂಭವಿಸಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ಕೊಠಡಿಯಲ್ಲಿ-ದ್ದ ವಸ್ತುಗಳೆಲ್ಲವೂ ಸುಟ್ಟಿದ್ದು, ಕಿಟಕಿಗಳು ಒಡೆದಿವೆ' ಎಂದು ಹೇಳಿದರು.

'ಡಿಸೆಂಬರ್ ಅಂತ್ಯದಲ್ಲಿ ರಾಜಕೀಯ ಧ್ರುವೀಕರಣ'

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಡಿಸೆಂಬರ್ ಅಂತ್ಯದಲ್ಲಿ ರಾಜ್ಯ ಮತ್ತು ದೇಶದಲ್ಲಿ ರಾಜಕೀಯ ಧ್ರುವೀಕರಣ ಆಗಲಿದ್ದು, ಕಾಂಗ್ರೆಸ್‌ನ ಅನೇಕ ನಾಯಕರು ಪಕ್ಷ ತೊರೆಯಲು ನಿರ್ಧರಿಸಿದ್ದಾರೆ' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಹೇಳಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ನಿರ್ದಿಷ್ಟ ಯೋಜನೆ ಹಾಗೂ ಕಾರ್ಯತಂತ್ರವಿಲ್ಲದ ಕಾಂಗ್ರೆಸ್ ಜನ ಮಾನಸದಿಂದ ದೂರ ಆಗುತ್ತಿದೆ. ಪಕ್ಷದ ಹಿರಿ-ಕಿರಿಯ ಮುಖಂಡರು ನಮ್ಮ ಸಂಪರ್ಕ-ದಲ್ಲಿದ್ದು, ಪಕ್ಷ ತೊರೆಯಲು ನಿರ್ಧರಿಸಿದ್ದಾರೆ. ಅದಕ್ಕೆ ಆಪರೇಷನ್ ಕಮಲ ಎನ್ನುತ್ತೀರೋ ಅಥವಾ ರಾಜಕೀಯ ಧ್ರುವೀಕರಣ ಎನ್ನುತ್ತೀರೋ ಜನತೆಗೆ ಬಿಟ್ಟಿದ್ದು' ಎಂದು ಸಿ.ಟಿ. ರವಿ ಅವರು ಮಾರ್ಮಿಕವಾಗಿ ಹೇಳಿದರು.

ಜಲ ವಿವಾದಗಳಿಗೆ ಜಂಟಿ ಪರಿಹಾರ: ಶಾ ಸೂಚನೆ

ತಿರುವನಂತಪುರ (ಪಿಟಿಐ): ನದಿ ನೀರು ಹಂಚಿಕೆ ಸಮಸ್ಯೆಗಳಿಗೆ ಜಂಟಿ ಪರಿಹಾರ ಹುಡುಕುವಂತೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ದಕ್ಷಿಣದ ರಾಜ್ಯಗಳನ್ನು ಒತ್ತಾಯಿಸಿದ್ದಾರೆ.

ಶನಿವಾರ ನಡೆದ ದಕ್ಷಿಣ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಮುಖ್ಯಮಂತ್ರಿಗಳು, ಲೆಫ್ಟಿನೆಂಟ್ ಗವರ್ನರ್‌ಗಳು ಪಾಲ್ಗೊಂಡಿದ್ದ 30ನೇ ದಕ್ಷಿಣ ವಲಯ ಕೌನ್ಸಿಲ್ ಸಭೆಯಲ್ಲಿ ಅವರು ಮಾತನಾಡಿದರು.

'ಬಾಕಿ ಇರುವ ಸಮಸ್ಯೆಗಳನ್ನು ಪರಸ್ಪರ ಮಾತುಕತೆ ಮೂಲಕ ಬಗೆಹರಿಸಿಕೊಳ್ಳುವಂತೆ ಅವರು ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳ ಪ್ರತಿನಿಧಿಗಳಿಗೆ ಸೂಚಿಸಿದರು' ಎಂದು ಪ್ರಕಟಣೆ ತಿಳಿಸಿದೆ. ನದಿಗಳ ನೀರಿನ ಹಂಚಿಕೆಗೆ ಸಂಬಂಧಿಸಿದ ಸಮಸ್ಯೆಗಳಿಗೆ ಜಂಟಿ ಪರಿಹಾರ ಕಂಡುಕೊಳ್ಳುವಂತೆಯೂ ಅಮಿತ್ ಶಾ ಅವರು ದಕ್ಷಿಣ ವಲಯ ಎಲ್ಲಾ ರಾಜ್ಯಗಳಿಗೆ ಸಲಹೆ ನೀಡಿದರು ಎಂದೂ ಪ್ರಕಟಣೆ ತಿಳಿಸಿದೆ.

ದ್ವಿಚಕ್ರ ವಾಹನ ಕಳ್ಳತನ: ಮೆಕ್ಯಾನಿಕ್ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಗಳ ಮುಂದೆ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ನಿಲ್ಲಿಸುತ್ತಿದ್ದ ದ್ವಿಚಕ್ರ ವಾಹನ ಕಳ್ಳತನ ಮಾಡುತ್ತಿದ್ದ ಆರೋಪದಡಿ ಮೆಕ್ಯಾನಿಕ್ ಸೇರಿ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

'ಶಿವಾಜಿನಗರ ಅಫ್ರೋಜ್ ಪಾಷಾ ಹಾಗೂ ಕೋಲಾರದ ಬೇತಮಂಗಲದ ಅಶ್ಫಕ್ ಹುಸೈನ್ ಬಂಧಿತರು. ಇವರಿಂದ ₹ 20 ಲಕ್ಷ ಮೌಲ್ಯದ 20 ದ್ವಿಚಕ್ರ ವಾಹನ ಹಾಗೂ ಕೆಲ ಬಿಡಿಭಾಗಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಮೆಕ್ಯಾನಿಕ್ ಆಗಿದ್ದ ಅಫ್ರೋಜ್ ಪಾಷಾ ಗ್ಯಾರೇಜೊಂದರಲ್ಲಿ ಬೈಕ್ ದುರಸ್ತಿ ಮಾಡುತ್ತಿದ್ದ. ಅಕ್ರಮವಾಗಿ ಹಣ ಸಂಪಾದಿಸಬೇಕೆಂದು ವಾಹನಗಳ ಕಳ್ಳತನಕ್ಕೆ ಇಳಿದಿದ್ದ. ಕದ್ದ ವಾಹನಗಳ ಬಿಡಿಭಾಗ ತೆಗೆದು, ಅವುಗಳನ್ನು ಶಿವಾಜಿನಗರದ ಗುಜರಿಯಲ್ಲಿ ಮಾರುತ್ತಿದ್ದ' ಎಂದು ತಿಳಿಸಿದರು.

'ನಗರದಲ್ಲಿ ಸುತ್ತಾಡುತ್ತಿದ್ದ ಆರೋಪಿಗಳು, ಬಿಡಿ ಭಾಗಗಳು ಉತ್ತಮ ಸ್ಥಿತಿಯಲ್ಲಿರುವ ದ್ವಿಚಕ್ರ ವಾಹನ ಗುರುತಿಸುತ್ತಿದ್ದರು. ನಂತರ ಹ್ಯಾಂಡಲ್ ಲಾಕ್ ಮುರಿದು ವಾಹನ ಕದ್ದೊಯ್ಯುತ್ತಿದ್ದರು.'

'ನಿರ್ಜನ ಪ್ರದೇಶದಲ್ಲಿ ಮೆಕ್ಯಾನಿಕ್ ಕಿಟ್ ಮೂಲಕ ಬಿಡಿಭಾಗ ತೆಗೆಯುತ್ತಿದ್ದ ಆರೋಪಿಗಳು, ಅದನ್ನೇ ಗುಜರಿಗೆ ತೆಗೆದುಕೊಂಡು ಹೋಗಿ ಮಾರುತ್ತಿದ್ದರು. ಇದರಿಂದ ಬಂದ ಹಣವನ್ನು ಐಷಾರಾಮಿ ಜೀವನಕ್ಕೆ ಖರ್ಚು ಮಾಡುತ್ತಿದ್ದರು' ಎಂದು ಹೇಳಿದರು.

'ಬನಶಂಕರಿ, ಜೆ.ಪಿ.ನಗರ, ಬಸವನಗುಡಿ ಠಾಣೆ ವ್ಯಾಪ್ತಿಯಲ್ಲೂ ಆರೋಪಿಗಳು ವಾಹನ ಕದ್ದಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದು ತಿಳಿಸಿದರು.

ಲೈಂಗಿಕ ಕಿರುಕುಳ: ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಕೋಲಾರ: ನರ್ಸಿಂಗ್ ವಿದ್ಯಾರ್ಥಿಗಳಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದ ಮೇಲೆ ನಗರದ ಆಸ್ಪತ್ರೆ ಹಾಗೂ ನರ್ಸಿಂಗ್ ಕಾಲೇಜೊಂದರ ಆಡಳಿ-ತಾಧಿಕಾರಿಯಾಗಿದ್ದ ಡಾ.ಜಾನ್ಸನ್ ಕುಂದರ್ ಎಂಬುವರ ವಿರುದ್ಧ ಇಲ್ಲಿನ ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ನರ್ಸಿಂಗ್ ಕೋರ್ಸ್‌ನ ಶುಲ್ಕ ಕಡಿಮೆ ಮಾಡುವಂತೆ ಮನವಿ ಸಲ್ಲಿಸಲು ಮೇ 26ರಂದು ಕ್ಯಾಬಿನ್‌ಗೆ ಹೋಗಿದ್ದಾಗ ಅಸಭ್ಯವಾಗಿ ವರ್ತಿಸಿ ಲೈಂಗಿಕ ಕಿರುಕುಳ ನೀಡಿದ್ದಾರೆ' ಎಂದು ಇಬ್ಬರು ವಿದ್ಯಾರ್ಥಿನಿಯ-ರು ಆ.30ರಂದು ಠಾಣೆಗೆ ದೂರು ನೀಡಿದ್ದರು.

'ಪ್ರಕರಣ ದಾಖಲಿಸಿ ತನಿಖೆ ನಡೆಸುತ್ತಿದ್ದೇವೆ. ಆರೋಪಿ ಜಾನ್ಸನ್ ಕುಂದರ್ ತಲೆಮರೆಸಿಕೊಂಡಿದ್ದು, ಶೋಧ ಕಾರ್ಯ ಆರಂಭಿಸಿದ್ದೇವೆ' ಎಂದು ಪೊಲೀಸರು ತಿಳಿಸಿದ್ದಾರೆ.

ಕಾಲೇಜು ಕೊಠಡಿಗಳ ನಿರ್ಮಾಣಕ್ಕೆ ಭೂಮಿಪೂಜೆ

ಪ್ರಜಾವಾಣಿ ವಾರ್ತೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರದ ಬಾಗಲೂರಿನ ಕರ್ನಾಟಕ ಪಬ್ಲಿಕ್ ಶಾಲೆಯ ಆವರಣದಲ್ಲಿ ₹2 ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಂಡಿ-ರುವ ಪದವಿಪೂರ್ವ ಕಾಲೇಜಿನ ನೂತನ ಕೊಠಡಿಗಳ ನಿರ್ಮಾಣಕ್ಕೆ ಶಾಸಕ ಕೃಷ್ಣ ಬೈರೇಗೌಡ ಭೂಮಿಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, 'ಈ ಶಾಲೆಯ ಪ್ರಾಥಮಿಕ, ಪ್ರೌಢ ಮತ್ತು ಪದವಿಪೂರ್ವ ಕಾಲೇಜು ವಿಭಾಗಗಳಲ್ಲಿ 1400ಕ್ಕೂ ಹೆಚ್ಚು ಮಕ್ಕಳು ವ್ಯಾಸಂಗ ಮಾಡುತ್ತಿದ್ದಾರೆ. ಕಳೆದವರ್ಷ 10 ಕಾಲೇಜು ಕೊಠಡಿಗಳನ್ನು ನಿರ್ಮಿಸಲಾಗಿದೆ. ಹೆಚ್ಚುತ್ತಿರುವ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಉತ್ತಮ ಮೂಲಸೌಕರ್ಯ ಕಲ್ಪಿಸಬೇಕೆಂಬ ಉದ್ದೇಶದಿಂದ ಈಗ ಮತ್ತೆ 10 ಹೆಚ್ಚುವರಿ ಕಾಲೇಜು ಕೊಠಡಿಗಳ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸ-ಲಾಗಿದೆ' ಎಂದು ತಿಳಿಸಿದರು.

ಗ್ರಾಮ ಪಂಚಾಯಿತಿ ಅಧ್ಯಕ್ಷೆ ಹಮೀದಾ, ಸದಸ್ಯರಾದ ಬಿ.ಜಿ. ನಟರಾಜ್, ಬಿ.ಸಿ.ನಾಗರಾಜ್, ಕಾಂಗ್ರೆಸ್ ಮುಖಂಡರಾದ ಎಂ.ಜಯ-ಗೋಪಾಲಗೌಡ, ಪುಟ್ಟು ಆಂಜನಪ್ಪ, ರಾಜಕುಮಾರ್, ಎ.ವೆಂಕಟರಾಜು, ಶಬೀರ್, ಪ್ರಾಂಶುಪಾಲ ಎಸ್. ಆದಿನಾರಾಯಣ, ಎಸ್.ಡಿ.ಎಂ.ಸಿ ಅಧ್ಯಕ್ಷ ರವಿಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಬ್ಯಾಟರಾಯನಪುರ ಕ್ಷೇತ್ರದ ಬಾಗಲೂರಿನ ಕರ್ನಾಟಕ ಪಬ್ಲಿಕ್ ಶಾಲೆಯ ಆವರಣದಲ್ಲಿ ₹2 ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಂಡಿರುವ ಪದವಿಪೂರ್ವ ಕಾಲೇಜಿನ ನೂತನ ಕೊಠಡಿಗಳ ನಿರ್ಮಾಣಕ್ಕೆ ಶಾಸಕ ಕೃಷ್ಣ ಬೈರೇಗೌಡ ಭೂಮಿಪೂಜೆ ನೆರವೇರಿಸಿದರು. ಗ್ರಾಮ ಪಂಚಾಯಿತಿ ಅಧ್ಯಕ್ಷೆ ಹಮೀದಾ, ಸದಸ್ಯರಾದ ಬಿ.ಜಿ.ನಟರಾಜ್, ಬಿ.ಸಿ.ನಾಗರಾಜ್, ಕಾಂಗ್ರೆಸ್ ಮುಖಂಡರಾದ ಎಂ.ಜಯಗೋಪಾಲಗೌಡ, ಪುಟ್ಟು ಆಂಜನಪ್ಪ, ರಾಜಕುಮಾರ್, ಎ.ವೆಂಕಟರಾಜು, ಶಬೀರ್, ಪ್ರಾಂಶುಪಾಲ ಎಸ್.ಆದಿನಾರಾಯಣ, ಎಸ್.ಡಿ.ಎಂ.ಸಿ ಅಧ್ಯಕ್ಷ ರವಿಕುಮಾರ್, ಇತರರು ಇದ್ದರು

ಚಾಮರಾಜನಗರ: ಗುಂಪು ಘರ್ಷಣೆ

ಚಾಮರಾಜನಗರ: ಸೈಕಲ್ ವೀಲಿಂಗ್ ವಿಚಾರವಾಗಿ ಮುಸ್ಲಿಮರು–ನಾಯಕ ಸಮಾಜದ ಗುಂಪುಗಳ ನಡುವೆ ನಗರದ ಸಂತೇಮರಹಳ್ಳಿ ವೃತ್ತದ ಬಳಿ ಶನಿವಾರ ರಾತ್ರಿ ಘರ್ಷಣೆ ನಡೆದಿದೆ.

ತಕ್ಷಣವೇ ಮಧ್ಯಪ್ರವೇಶಿಸಿದ ಪೊಲೀಸರು ಲಾಠಿಪ್ರಹಾರ ನಡೆಸಿ ಗುಂಪುಗಳನ್ನು ಚದುರಿಸಿದ್ದಾರೆ. ರಾತ್ರಿ 9.15ರ ಸುಮಾರಿಗೆ ಗಲಾಟೆ ನಡೆದಿದೆ. ಭಾರಿ ಸಂಖ್ಯೆಯಲ್ಲಿ ಸೇರಿದ್ದ ಎರಡೂ ಗುಂಪುಗಳು ಕೈ ಕೈ ಮಿಲಾಯಿಸಿವೆ. ಕೆಲವರು ಸುತ್ತಮುತ್ತಲಿನ ಅಂಗಡಿಗಳ ಮೇಲೆ ಕಲ್ಲು ತೂರಿದ್ದಾರೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ನಗರದಲ್ಲಿ ಪರಿಸ್ಥಿತಿ ಬಿಗುವಿನಿಂದ ಕೂಡಿದೆ. ಘಟನೆಯ ಬಳಿಕ ಸ್ಥಳದಲ್ಲಿ ಭಾರಿ ಸಂಖ್ಯೆಯಲ್ಲಿ ಪೊಲೀಸರನ್ನು ನಿಯೋಜಿಸಲಾಗಿದೆ. ಪೊಲೀಸ್ ಅಧಿಕಾರಿಗಳು ಎರಡೂ ಕಡೆಯ ಮುಖಂಡರೊಂದಿಗೆ ಮಾತುಕತೆ ನಡೆಸಿ, ಶಾಂತಿ ಕಾಪಾಡುವಂತೆ ಕೋರಿದ್ದಾರೆ.

ಕೆಪಿಟಿಸಿಎಲ್ ಪರೀಕ್ಷಾ ಅಕ್ರಮ: ಐವರ ಜಾಮೀನು ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಕೆಪಿಟಿಸಿಎಲ್ ಕಿರಿಯ ಸಹಾಯಕರ ನೇಮಕಾತಿ ಪರೀಕ್ಷೆಯ ಅಕ್ರಮದಲ್ಲಿ ಬಂಧಿತರಾದ ಐವರ ಜಾಮೀನು ಅರ್ಜಿಯನ್ನು, ಗೋಕಾಕದ 12ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಲಯ ಶನಿವಾರ ವಜಾಗೊಳಿಸಿದೆ.

ಗೋಕಾಕ ತಾಲ್ಲೂಕಿನ ನಾಗನೂರು ಗ್ರಾಮದ ಸಿದ್ದಪ್ಪ ಕೆಂಪಣ್ಣ ಮದಿಹಳ್ಳಿ, ಮಾಲದಿನ್ನಿಯ ಸುನೀಲ ಅಜ್ಜಪ್ಪ ಭಂಗಿ, ಬೆಣ-ಚಿನಮರಡಿಯ ಸಿದ್ಧಪ್ಪ ಕೆಂಚಪ್ಪ ಕೊತ್ತಲ, ವೀರನಗಡ್ಡಿಯ ಸಂತೋಷ ಪ್ರಕಾಶ ಮಾಣಗಾವಿ, ಮಾಲದಿನ್ನಿಯ ರೇಣುಕಾ ವಿಠಲ ಜವಾರಿ ಅವರ ಜಾಮೀನು ಅರ್ಜಿ ನ್ಯಾಯಾಲಯದಲ್ಲಿ ಶನಿವಾರ ವಿಚಾರಣೆಗೆ ಬಂದವು.

ಇನ್ನೊಬ್ಬ ಆರೋಪಿ ಬಂಧನ: ಈ ಪರೀಕ್ಷೆ ನಡೆದಾಗ ಹುಕ್ಕೇರಿ ತಾಲ್ಲೂಕಿನ ಶಿರಹಟ್ಟಿ (ಬಿ.ಕೆ) ಗ್ರಾಮದ ತೋಟದ ಮನೆಯೊಂದರಲ್ಲಿ ಕುಳಿತು, ಅಲ್ಲಿಂದಲೇ ಅಭ್ಯರ್ಥಿಗಳಿಗೆ ಉತ್ತರಗಳನ್ನು ಹೇಳಿದ ಆರೋಪದ ಮೇರೆಗೆ, ಅರಬಾವಿ ಗ್ರಾಮದ ಗಿರೀಶ ಫಕೀರಪ್ಪ ಬನಾಜ್ (22) ಎಂಬಾತನನ್ನು ಪೊಲೀಸರು ಶನಿವಾರ ಬಂಧಿಸಿದರು.

ಗಿರೀಶ ಫಕೀರಪ್ಪ ಬನಾಜ್

ಇದರೊಂದಿಗೆ ಪ್ರಕರಣದ ಪ್ರಮುಖ ಆರೋಪಿ ಸಂಜೀವ ಲಕ್ಷ್ಮಣ ಭಂಡಾರಿ ಸೇರಿದಂತೆ ಈವರೆಗೆ 14 ಮಂದಿಯನ್ನು ಬಂಧಿಸಿದಂತಾಗಿದೆ.

ಒಂಬತ್ತು ಜನರಿಗೆ ನ್ಯಾಯಾಂಗ ಬಂಧನ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ ಜಿಲ್ಲೆ): ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ನಾಗಲಾಪುರ ತಾಂಡಾದಲ್ಲಿ ಶುಕ್ರವಾರ ರಾತ್ರಿ ಗಣೇಶ ವಿಸರ್ಜನೆಯ ಸಂದರ್ಭದಲ್ಲಿ ಪೊಲೀಸರ ಮೇಲೆ ಹಲ್ಲೆ ನಡೆಸಿದ ಒಂಬತ್ತು ಜನರನ್ನು ವಶಕ್ಕೆ ಪಡೆದು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಕೃತ್ಯದಲ್ಲಿ ಭಾಗಿಯಾಗಿದ್ದ ಗದುಗಿನ ಇಬ್ಬರು ಪೊಲೀಸರು ತಪ್ಪಿಸಿ-ಕೊಂಡಿದ್ದಾರೆ.

ಮೂರನೇ ದಿನದ ಗಣೇಶ ವಿಸರ್ಜನೆಯ ವೇಳೆ ವಿನಾಯಕ ಮಿತ್ರ ಮಂಡಳಿಯವರು ಡಿ.ಜೆ ಬಳಸಿದ್ದರು. ಮೆರವಣಿಗೆ ನಂತರ ಪೊಲೀಸರು ಕಾನೂನು ಕ್ರಮಕ್ಕೆ ಮುಂದಾದಾಗ ಮಂಡಳಿಯವರು ಹಾಗೂ ಕೆಲ ಗ್ರಾಮಸ್ಥರು ಹಂಪಸಾಗರ ಉಪಠಾಣೆಗೆ ತೆರಳಿ ಪ್ರತಿಭಟನೆ ನಡೆಸಿ, ಠಾಣೆಯ ಸಿಬ್ಬಂದಿ ರಾಮಾಂಜಿನಿ ಹಾಗೂ ಸಿದ್ದೇಶ್ ಎಂಬುವರ ಮೇಲೆ ಹಲ್ಲೆ ಮಾಡಿದ್ದರು.

'ಸಿಬ್ಬಂದಿ ರಾಮಾಂಜಿನಿ ಅವರ ಮೇಲೆ ಹಲ್ಲೆ ನಡೆದಿದೆ. ಅವರಿಗೆ ಗಾಯಗಳಾಗಿವೆ. ಕೃತ್ಯದಲ್ಲಿ ಭಾಗಿಯಾದ ಗದಗ ಜಿಲ್ಲೆಯ ಪೊಲೀಸ್ ಸಿಬ್ಬಂದಿ ಮಂಜು ನಾಯ್ಕ, ಪರಶು ನಾಯ್ಕ ತಪ್ಪಿಸಿಕೊಂಡಿದ್ದಾರೆ. ಇವರು ರೈಲ್ವೆ ಪೊಲೀಸರಾ ಅಥವಾ ನಮ್ಮ ಇಲಾಖೆಯ ಪೊಲೀಸರೇ ಎನ್ನುವುದು ಖಚಿತವಾ-ಗಬೇಕಿದೆ. 2 ಟ್ರ್ಯಾಕ್ಟರ್, ಡಿ.ಜೆ ವಶಪ-ಡಿಸಿಕೊಳ್ಳಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಅರುಣ್ ಕೆ. ತಿಳಿಸಿದ್ದಾರೆ.

ತಂಬ್ರಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸತತ ಮಳೆಗೆ ಹಾನಿ • ಸರ್ಕಾರಿ ಶಾಲೆ, ಅಂಗನವಾಡಿ ಕೇಂದ್ರಕ್ಕೆ ನುಗ್ಗಿದ ನೀರು

ಕಪ್ಪತ್ತಗುಡ್ಡ ವ್ಯಾಪ್ತಿಯಲ್ಲಿ ಒಂದೂವರೆ ಎಕರೆಯಷ್ಟು ಕುಸಿತ

ಪ್ರಜಾವಾಣಿ ವಾರ್ತೆ

ಶಿರಹಟ್ಟಿ: ತಾಲ್ಲೂಕಿನ ಕಡಕೋಳ ಭಾಗಕ್ಕೆ ಹೊಂದಿ ಕೊಂಡಿರುವ ಕಪ್ಪತ್ತಗುಡ್ಡದ ಒಂದೂವರೆ ಎಕರೆಯಷ್ಟು ಭಾಗ ಗುರುವಾರ ಸಂಜೆ ಕುಸಿದಿದೆ. ಕಳೆದೆರಡು ದಿನಗಳಿಂದ ಸುರಿದ ಭಾರಿ ಮಳೆಯಿಂದಾಗಿ ಮಾಲಿಂಗೇಶ್ವರ ಮಠದ ಪಕ್ಕದ ಮಣ್ಣು ಜರಿದಿದೆ. ದೊಡ್ಡ ಬಂಡೆ ಕಲ್ಲುಗಳು ಉರುಳಿ ಬಿದ್ದಿವೆ. ಅಕ್ಕಪಕ್ಕದ ರೈತರಲ್ಲಿ ಆತಂಕ ಮನೆ ಮಾಡಿದೆ.

ರಭಸದ ಮಳೆ ಹಾಗೂ ಕಪ್ಪತ್ತಗುಡ್ಡದಿಂದ ಹರಿದು ಬಂದ ಅಪಾರ ಪ್ರಮಾಣದ ನೀರು ಹೊಸಳ್ಳಿ ಗ್ರಾಮದ ಮನೆಗಳಿಗೆ ನುಗ್ಗಿ ಹಾನಿಯುಂಟು ಮಾಡಿದೆ. ಗ್ರಾಮದ ಸರ್ಕಾರಿ ಶಾಲೆಗೆ ಮತ್ತು ಅಂಗನವಾಡಿ ಕೇಂದ್ರಕ್ಕೆ ನೀರು ನುಗ್ಗಿ ಬಿಸಿಯೂಟದ ಆಹಾರ ಧಾನ್ಯ, ಪುಸ್ತಕ, ಶಾಲಾ ದಾಖಲೆಗಳು ಹಾಳಾಗಿವೆ.

ಕಳೆದ ಎರಡು ದಿನಗಳಿಂದ ಸುರಿದ ಧಾರಾಕಾರ ಮಳೆಗೆ ಕಪ್ಪತ್ತಗುಡ್ಡ ಕುಸಿದು, ಬಂಡೆ ಕಲ್ಲುಗಳು ಉರುಳಿರುವುದು

ಬೆಂಬಿಡದೆ ಸುರಿದ ಮಳೆಯಿಂದಾಗಿ ಸಾಕಷ್ಟು ಅವಾಂತರ ಸೃಷ್ಟಿಯಾ-ಗುತ್ತಿದ್ದು, ಕಡಕೋಳ ಗ್ರಾಮದ ಮಾಂತೇಶ ನಾದಿಗಟ್ಟಿ ಎಂಬುವವರ ನೆಲಮಹಡಿಯಲ್ಲಿ ನೀರಿನ ಸೆಲೆ ಉಂಟಾಗಿ ನೀರು ಸತತವಾಗಿ ಹರಿಯುತ್ತಿದೆ. ಇದರಿಂದ ಪೂರ್ತಿ ಕಟ್ಟಡ ಜಲಾವೃತಗೊಂಡಿದ್ದು, ಎರಡು ಗಂಟೆಗೊಮ್ಮೆ ಪಂಪ್‌ಸೆಟ್ ಮೂಲಕ ನೀರು ತೆಗೆಯಲು ಹರಸಾಹಸ ಪಡುತ್ತಿದ್ದಾರೆ. ಸತತ ನೀರು ಬರುತ್ತಿರುವುದರಿಂದ ಕಟ್ಟಡ ಬೀಳುವ ಭಯದಲ್ಲಿ ಮಾಲೀಕ ಜೀವನ ನಡೆಸುವ ದುಸ್ಥಿತಿ ಎದುರಾಗಿದೆ.

'ರೈತರ ಜಮೀನುಗಳಿಗೆ ಹಾನಿಯಾಗಿಲ್ಲ'

ಕಪ್ಪತ್ತಗುಡ್ಡ ಸುಮಾರು 1.5 ಎಕರೆಯಷ್ಟು ಅರಣ್ಯ ಪ್ರದೇಶ ವ್ಯಾಪ್ತಿಯಲ್ಲೇ ಕುಸಿದಿದ್ದು, ಅಕ್ಕಪಕ್ಕದ ರೈತರ ಜಮೀನುಗಳಿಗೆ ಯಾವುದೇ ಹಾನಿಯಾಗಿಲ್ಲ. ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿಗಳೊಂ-ದಿಗೆ ಸ್ಥಳ ಪರಿಶೀಲನೆ ಮಾಡಿ ಎರಡು ದಿನಗಳಲ್ಲಿ ಸಂಪೂರ್ಣ ಮಾಹಿತಿ ನೀಡಲಾಗುವುದು ಎಂದು ಜಿಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿ ದೀಪಿಕಾ ಬಾಜಪೇಯಿ ತಿಳಿಸಿದರು.

ರಾಮನಗರ: ಮಳೆ ಮುನ್ಸೂಚನೆ ಮಾರ್ಗ ಬದಲಾವಣೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ರಾಮನಗರ: ಸೋಮವಾರದಿಂದ ಜಿಲ್ಲೆಯಲ್ಲಿ ಮತ್ತೆ ಮಳೆಯ ಅಬ್ಬರದ ಸಾಧ್ಯತೆ ಇರುವುದಾಗಿ ಹವಾಮಾನ ಇಲಾಖೆ ವರದಿ ನೀಡಿದ್ದು, ವರ್ಷಧಾರೆ ಹೆಚ್ಚಾದಲ್ಲಿ ಮತ್ತೆ ಬೆಂಗಳೂರು–ಮೈಸೂರು ಹೆದ್ದಾರಿ ಮಾರ್ಗದಲ್ಲಿ ವಾಹನ ಸಂಚಾರಕ್ಕೆ ನಿರ್ಬಂಧ ಬೀಳುವ ಸಾಧ್ಯತೆ ಇದೆ. ಸದ್ಯ ಬೆಂಗಳೂರು–ಮೈಸೂರು ಹೆದ್ದಾರಿ ಹತ್ತು ಪಥದ ಕಾಮಗಾರಿ ಪ್ರಗತಿಯಲ್ಲಿದೆ. ಹೊಸ ಹೆದ್ದಾರಿಯ ಅಂಡರ್‌ಪಾಸ್‌ಗಳಲ್ಲಿ ಭಾರಿ ಪ್ರಮಾಣದಲ್ಲಿ ಮಳೆ ನೀರು ನಿಂತು ವಾಹನಗಳು ನೀರಿನಲ್ಲಿ ಮುಳುಗಿದ್ದವು. ಹೀಗಾಗಿ, ಈ ಮಾರ್ಗದಲ್ಲಿ ವಾಹನಗಳ ಸಂಚಾರಕ್ಕೆ ಪೊಲೀಸರು ನಿರ್ಬಂಧ ವಿಧಿಸಿದ್ದು, ಬದಲಿ ಮಾರ್ಗಗಳಲ್ಲಿ ಸಂಚಾರಕ್ಕೆ ಸೂಚಿಸಿದ್ದರು.

'ಬೆಂಗಳೂರು–ರಾಮ ನಗರ ಭಾಗದಲ್ಲಿ ಮತ್ತೆ ಮಳೆ ಹೆಚ್ಚಾದರೆ ಈ ಹೆದ್ದಾರಿಯಲ್ಲಿ ಸಂಚಾರ ನಿರ್ಬಂಧದ ಕುರಿತು ತೀರ್ಮಾನ ಕೈಗೊಳ್ಳಲಾಗುವುದು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ. ಸಂತೋಷ್ ಬಾಬು 'ಪ್ರಜಾವಾಣಿ'ಗೆ ತಿಳಿಸಿದರು.

ಒಂದು ವೇಳೆ ಬೆಂಗಳೂರು–ಮೈಸೂರು ಹೆದ್ದಾರಿ ಮತ್ತೆ ಬಂದ್ ಆದಲ್ಲಿ ಬೆಂಗಳೂರಿನಿಂದ ಪ್ರಯಾಣಿಸುವವರು ಕಗ್ಗಲೀಪುರ, ಕನಕಪುರ ಮಾರ್ಗವಾಗಿ ಮೈಸೂರಿಗೆ ಕಡೆಗೆ ಹಾಗೂ ಮೈಸೂರಿನಿಂದ ಪ್ರಯಾಣಿಸುವವರು ಶ್ರೀರಂಗ-ಪಟ್ಟಣ, ಕುಣಿಗಲ್ ಮಾರ್ಗವಾಗಿ ಬೆಂಗಳೂರಿಗೆ ತೆರಳಲು ಪೊಲೀಸರು ಸೂಚಿಸುವ ಸಾಧ್ಯತೆಯಿದೆ.

ಶಿಕ್ಷಣ: ಲಂಚವೇ 'ಭೂಷಣ!'

ಒಂದನೇ ಪುಟದಿಂದ..

ಸರ್ಕಾರಿ ಶಾಲಾ ಶಿಕ್ಷಕರು ಕೂಡ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯಲ್ಲಿ ತಮ್ಮ ಕೆಲಸ ಮಾಡಿಕೊಡಲು ಇಂತಿಷ್ಟು ಲಂಚ ಕೊಡಲೇಬೇಕು. ನಿವೃತ್ತಿ ಬಳಿಕ ಬರಬೇಕಾದ ನಿವೃತ್ತಿ ಪರಿಹಾರ, ಪಿಂಚಣಿ, ನಿವೃತ್ತಿ ವೇತನ ಪಡೆಯಲು ಹಣ ನೀಡದೇ ಇದ್ದರೆ ವರ್ಷ ಕಳೆದರೂ ಕಡತ ಮುಂದಕ್ಕೆ ಹೋಗುವುದೇ ಇಲ್ಲ. ಯಾವುದೇ ರೀತಿಯ ಲಂಚ ಇಲ್ಲದ ಶಿಕ್ಷಕ ವೃತ್ತಿ ನಡೆಸುವವರು ಇಳಿಗಾಲದಲ್ಲಿ ದೊಡ್ಡ ಮೊತ್ತದ ಲಂಚ ಎಲ್ಲಿಂದ ತರುವುದು ಎಂದು ನಿವೃತ್ತಿಯ ಅಂಚಿನಲ್ಲಿರುವ ಶಿಕ್ಷಕರು ಪ್ರಶ್ನಿಸುತ್ತಾರೆ.

ನವೀಕರಣವೆಂಬ ದುಡ್ಡಿನ ಚೀಲ: 2004ರಲ್ಲಿ ಶಾಲೆಗಳ ಮಾನ್ಯತೆ ನವೀಕರಣಕ್ಕೆ ಸರ್ಕಾರ ಆದೇಶ ಹೊರಡಿಸಿದರೂ, 2014ರವರೆಗೆ ಕಡ್ಡಾಯ ಗೊಳಿಸಿರಲಿಲ್ಲ. 2014ರಿಂದ ಮತ್ತೆ ಮಾನ್ಯತೆ ನವೀಕರಣ ಚಟುವಟಿಕೆ ಆರಂಭವಾದರೂ, ಅದನ್ನು 10 ವರ್ಷಗಳಿಗೆ ಒಮ್ಮೆ ಎಂದು ನಿಗದಿ ಮಾಡಲಾಯಿತು.

'ಇಷ್ಟು ವರ್ಷಗಳು ಶಾಲೆಗಳ ಮಾನ್ಯತೆ ನವೀಕರಣದ ಸಮಸ್ಯೆ ಇರಲಿಲ್ಲ. 2020ರಲ್ಲಿ ಅಂದಿನ ಶಿಕ್ಷಣ ಸಚಿವ ಸುರೇಶ್ ಕುಮಾರ್ ಪ್ರತಿ ವರ್ಷ ನವೀಕರಣಕ್ಕೆ ಆದೇಶ ಮಾಡಿದರು. ಅರ್ಜಿ ಸಲ್ಲಿಸಿದ ಶಾಲೆಗಳು ಕ್ಷೇತ್ರ ಶಿಕ್ಷಣಾಧಿಕಾರಿಗೆ (ಬಿಇಒ) ₹ 20 ಸಾವಿರ, ಉಪ ನಿರ್ದೇಶಕರಿಗೆ (ಡಿಡಿಪಿಐ) ₹ 20 ಸಾವಿರ ಕೊಡುವಂತಾಯಿತು. ಹಿಂದೆ ನವೀಕರಣಕ್ಕೆ ಅರ್ಜಿ ಸಲ್ಲಿಸಿದರೆ ಒಂದೆರಡು ಸಾವಿರ ರೂಪಾಯಿ ಕೊಟ್ಟರೂ ಸಾಕಿತ್ತು. 10 ವರ್ಷಕ್ಕೆ ಒಮ್ಮೆ ನವೀಕರಣ ಮಾಡುತ್ತೇವೆ ಎಂದು ಕೋರ್ಟ್ ಮುಂದೆ ಅಫಿಡವಿಟ್ ಸಲ್ಲಿಸಿದ ಅಧಿಕಾರಿಗಳು ಮತ್ತೆ ಹೊಸ ನೀತಿಗೆ ಅಂಟಿಕೊಂಡರು. ಇದರಿಂದ 8 ಸಾವಿರ ಶಾಲೆಗಳ ಮಾನ್ಯತೆ ನವೀಕರಣ ಸಾಧ್ಯವಾಗಿಲ್ಲ' ಎಂದು ರುಪ್ಸಾ ಅಧ್ಯಕ್ಷ ಲೋಕೇಶ್ ತಾಳಿಕಟ್ಟೆ ವಿವರಿಸುತ್ತಾರೆ.

'ನವೀಕರಣ ಪ್ರಮಾಣಪತ್ರ ಇಲ್ಲದಿದ್ದರೆ ಎಸ್ಸೆಸ್ಸೆಲ್ಸಿ ಪರೀಕ್ಷಾ ಕೇಂದ್ರವನ್ನು ನೀಡುವುದಿಲ್ಲ. ಮಾಮೂಲಿ ವಸೂಲಿಗಾಗಿ ಇಲಾಖೆಯ ಅಧಿಕಾರಿಗಳು ಖಾಸಗಿ ಶಾಲೆಗಳಿಗೆ ಭೇಟಿ ನೀಡುತ್ತಾರೆ. ಅನಗತ್ಯ ದಾಖಲೆಗಳ ನೆಪದಲ್ಲಿ ಹಣ ವಸೂಲಿ ಮಾಡುತ್ತಿದ್ದಾರೆ. ಒಟ್ಟು ₹ 1.25 ಲಕ್ಷ ಖರ್ಚಾಗುತ್ತಿದೆ. ಶಾಲೆಯ ಮಾನ್ಯತೆ ನವೀಕರಣಕ್ಕೆ ಶಿಕ್ಷಣ ಇಲಾಖೆ ಅಧಿಕಾರಿಯೊಬ್ಬರು ಖಾಸಗಿ ಶಾಲೆಯೊಂದರ ಆಡಳಿತ ಮಂಡಳಿಗೆ ಲಂಚ ಕೇಳಿರುವ ಆಡಿಯೊ ಸಂಭಾಷಣೆಯ ಸಿ.ಡಿ, ವಾಟ್ಸ್ಆ್ಯಪ್ ಚರ್ಚೆಯ ದಾಖಲೆಗಳೂ ನಮ್ಮ ಬಳಿ ಇವೆ' ಎಂದು ಅವರು ಹೇಳುತ್ತಾರೆ.

'ರಾಜ್ಯದ ಇಬ್ಬರು ಬಿಇಒಗಳ ವಿರುದ್ಧ ದಾಖಲೆಗಳ ಸಮೇತ ಶಿಕ್ಷಣ ಸಚಿವರಿಗೆ ದೂರು ನೀಡಿದ್ದೆವು. ದೂರು ನೀಡಿದ ಕಾರಣಕ್ಕಾಗಿ 3-4 ದಶಕಗಳಿಂದ ಗುಣಮಟ್ಟದ ಶಿಕ್ಷಣ ನೀಡಿದ ಸಂಸ್ಥೆಗಳ ಮೇಲೆಯೇ ದಾಳಿ ನಡೆಸಿ, ಬಾಗಿಲು ಮುಚ್ಚಿಸಿದರು. ಕೊನೆಗೆ ಕೋರ್ಟ್ ಮೆಟ್ಟಿಲು ಹತ್ತಿದೆವು. ₹ 1 ಕೋಟಿ ದಂಡ ಕಟ್ಟಲು ಬಿಇಒಗೆ ಕೋರ್ಟ್ ತೀರ್ಪು ನೀಡಿತು. ₹ 65 ಲಕ್ಷ ಕಟ್ಟಿದ್ದಾರೆ. ಆದರೂ, ಸರ್ಕಾರ ಅಂತಹ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲಿಲ್ಲ' ಎಂದು ತಾಳಿಕಟ್ಟೆ ಹೇಳುತ್ತಾರೆ.

ನವೀಕರಣಕ್ಕೆ ಅರ್ಜಿ ಸಲ್ಲಿಸುವಾಗ ಲೋಕೋಪಯೋಗಿ ಇಲಾಖೆಯಿಂದ ಕಟ್ಟಡ ಸದೃಢತೆಯ ಪ್ರಮಾಣಪತ್ರ, ಅಗ್ನಿ ಶಾಮಕ ಸೇವಾ ಘಟಕದಿಂದ ಶಾಲೆಯಲ್ಲಿ ಅಳವಡಿಸಿದ ಅಗ್ನಿ ದುರಂತ ಸೌಲಭ್ಯಗಳ ಖಾತ್ರಿಯ ಪ್ರಮಾಣಪತ್ರ ಕಡ್ಡಾಯ ಮಾಡಲಾಗಿದೆ. ಅಗ್ನಿಶಾಮಕ ಸುರಕ್ಷತೆ, ಕಟ್ಟಡ ಗುಣಮಟ್ಟ ಖಾತ್ರಿ ಪ್ರಮಾಣಪತ್ರಕ್ಕೆ ತಲಾ ₹ 2.50 ಲಕ್ಷದಿಂದ ₹ 3 ಲಕ್ಷ ನೀಡಬೇಕಿದೆ ಎನ್ನುವುದು ಖಾಸಗಿ ಶಿಕ್ಷಣ ಸಂಸ್ಥೆಗಳ ಆರೋಪ.

ಸಮೃದ್ಧ ಹುಲ್ಲುಗಾವಲು ಆರ್‌ಟಿಇ: 2012ರಲ್ಲಿ (ಕಡ್ಡಾಯ ಶಿಕ್ಷಣ ಹಕ್ಕು) ಆರ್‌ಟಿಇ ಜಾರಿ ಮಾಡಿದಾಗ, ಪ್ರತಿ ವರ್ಷ 1.20 ಲಕ್ಷ ಮಕ್ಕಳು ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆಯುತ್ತಿದ್ದರು. ಸರ್ಕಾರ ಇದಕ್ಕಾಗಿ ₹ 900 ಕೋಟಿಗೂ ಹೆಚ್ಚು ಬಿಡುಗಡೆ ಮಾಡುತ್ತಿತ್ತು. 2018-19ರಲ್ಲಿ ಆರ್‌ಟಿಇ ಒಳಗೊಳ್ಳುವ ಪ್ರವೇಶದ ವ್ಯಾಪ್ತಿ ಮರು ವ್ಯಾಖ್ಯಾನ ಮಾಡಿದ ನಂತರ 7 ಸಾವಿರ ಮಕ್ಕಳು ಮಾತ್ರ ಆರ್‌ಟಿಇ ಸೌಲಭ್ಯ ಪಡೆಯುತ್ತಿದ್ದಾರೆ.

'ಪೂರ್ವ ಪ್ರಾಥಮಿಕ ಮಗುವಿಗೆ ₹ 8 ಸಾವಿರ, 1ರಿಂದ 8ನೇ ತರಗತಿವರೆಗಿನ ಮಗುವಿಗೆ ₹ 16 ಸಾವಿರದಂತೆ ಸರ್ಕಾರ ಹಣ ನೀಡುತ್ತಿದೆ. ಎರಡು ವರ್ಷಗಳಿಂದ ಬರಬೇಕಾದ ಬಾಕಿಯೇ ₹ 300 ಕೋಟಿಗೂ ಅಧಿಕವಿದೆ. ಈ ಹಣ ಪಡೆಯಲೂ ಶೇ 40ರಷ್ಟು ಲಂಚ ನೀಡಬೇಕಿದೆ. ಒಂದು ಶಾಲೆಯ ಆರ್‌ಟಿಇ ಬಾಕಿ ₹ 2 ಲಕ್ಷ ಇದ್ದರೆ, ಅವರು ಬಿಇಒಗೆ ₹ 40 ಸಾವಿರ, ಡಿಡಿಪಿಐಗೆ ₹ 40 ಸಾವಿರ ಲಂಚ ನೀಡಬೇಕಿದೆ. ಲಂಚ ನೀಡಲು ಬಯಸದ ಹಲವು ಶಾಲೆಗಳು ಆರ್‌ಟಿಇ ಹಣಕ್ಕಾಗಿ ಅರ್ಜಿಯನ್ನೇ ಸಲ್ಲಿಸಿಲ್ಲ' ಎಂದು ನೇರ ಆರೋಪ ಮಾಡುತ್ತಾರೆ ಕೆಲವು ಶಾಲೆಗಳ ಆಡಳಿತ ಮಂಡಳಿಗಳು.

> **ರುಪ್ಸಾ ಮಾಡಿರುವ ಭ್ರಷ್ಟಾಚಾರದ ಆರೋಪದಲ್ಲಿ ಹುರುಳಿಲ್ಲ. ಶಿಕ್ಷಣ ಕ್ಷೇತ್ರದಲ್ಲಿ ಅಂತಹ ಅಧಿಕಾರಿಗಳು ಶೇ 2ರಷ್ಟೂ ಇಲ್ಲ. ಅವರನ್ನು ಸಂಘ ಎಂದೂ ಬೆಂಬಲಿಸುವುದಿಲ್ಲ.**
> **ರಾಜ್‌ಕುಮಾರ್,** ಪ್ರಧಾನ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಶಿಕ್ಷಣಾಧಿಕಾರಿಗಳ ಸಂಘ

> **ಸಚಿವರ ನಡವಳಿಕೆ ಮೇಲೆ ವ್ಯವಸ್ಥೆಯ ಸ್ವರೂಪ ನಿರ್ಧಾರವಾಗುತ್ತದೆ. ನನ್ನ ಅವಧಿಯಲ್ಲಿ ಪಾರದರ್ಶಕತೆಗೆ ಒತ್ತು ನೀಡಿದ್ದೆ. ಪ್ರಸ್ತುತ ಶಿಕ್ಷಣ ವ್ಯವಸ್ಥೆ ಅತ್ಯಂತ ಕೆಟ್ಟದಾಗಿದೆ.**
> **ಕಿಮ್ಮನೆ ರತ್ನಾಕರ,** ಮಾಜಿ ಶಿಕ್ಷಣ ಸಚಿವ

ಎನ್‌ಒಸಿಗೂ ಭಾರಿ ಲಂಚ

ಬಹುತೇಕ ಆಡಳಿತ ಮಂಡಳಿಗಳು ರಾಜ್ಯ ಪಠ್ಯಕ್ರಮ ತೊರೆದು ಸಿಬಿಎಸ್‌ಇ, ಐಸಿಎಸ್‌ಇ ಮತ್ತಿತರ ಕೇಂದ್ರೀಯ ಪಠ್ಯಕ್ರಮ ಅನುಸರಿಸುತ್ತಿವೆ. ಈ ಬೋರ್ಡ್‌ಗಳಿಗೆ ಅರ್ಜಿ ಸಲ್ಲಿಸಲು ರಾಜ್ಯ ಸರ್ಕಾರದಿಂದ ನಿರಾಕ್ಷೇಪಣಾ ಪತ್ರ (ಎನ್‌ಒಸಿ) ಪಡೆಯುವುದು ಕಡ್ಡಾಯ. ಹೀಗೆ ನಿರಾಕ್ಷೇಪಣಾ ಪತ್ರ ಪಡೆಯಲೂ ಹಲವು ಹಂತಗಳಲ್ಲಿ ಹಣ ಸಂದಾಯ ಮಾಡಬೇಕು ಎನ್ನುವುದು ರುಪ್ಸಾ ಆರೋಪ.

ಮೊದಲು ಸಚಿವಾಲಯಕ್ಕೆ ಅರ್ಜಿ ಸಲ್ಲಿಸಬೇಕು. ಅಲ್ಲಿನ ಉಪ ಕಾರ್ಯದರ್ಶಿ, ಪ್ರಧಾನ ಕಾರ್ಯದರ್ಶಿ ಮೇಜುದಾಟಿ, ಸಚಿವರಿಗೆ ತಲುಪುತ್ತದೆ. ನಂತರ ಆಯುಕ್ತರ ಕಚೇರಿ ಸುತ್ತಿ ಡಿಡಿಪಿಐ, ಬಿಇಒ ಅತ್ತ ಸಾಗುತ್ತದೆ. ನಂತರ ಮತ್ತೆ ಮೇಲ್ಮುಖವಾಗಿ ಬಂದು ಎರಡು ಸುತ್ತು ಸಚಿವಾಲಯ ಸುತ್ತಿ ನಿರಾಕ್ಷೇಪಣಾ ಪತ್ರ ಸಿದ್ಧವಾಗುತ್ತದೆ. ಪ್ರತಿ ಹಂತದಲ್ಲೂ ಅಧಿಕಾರಿಗಳ ಸ್ಥಾನಮಾನದ ಆಧಾರದಲ್ಲಿ ₹ 2 ಲಕ್ಷದಿಂದ ₹ 5 ಲಕ್ಷದವರೆಗೂ ಹಣ ಸಂದಾಯ ಮಾಡಬೇಕಿದೆ. ಒಟ್ಟು ಖರ್ಚು ₹ 15 ಲಕ್ಷದಷ್ಟಾಗುತ್ತದೆ ಎಂದು ಎನ್‌ಒಸಿ ಪಡೆಯುವಲ್ಲಿನ ಲಂಚಾವತಾರವನ್ನು ಹಲವು ಶಾಲೆಗಳು ತೋಡಿಕೊಂಡಿವೆ.

ಅಭ್ಯರ್ಥಿಗಳಿಗೆ ತಲಾ ₹5 ಸಾವಿರ ದಂಡ

ಕೃತಿಚೌರ್ಯ: 60 ಪ್ರಬಂಧ ತಿರಸ್ಕರಿಸಿದ ವಿಟಿಯು

ಬೆಂಗಳೂರು: ಈ ವರ್ಷ ಸಲ್ಲಿಕೆಯಾದ 577 ಸಂಶೋಧನಾ ಪ್ರಬಂಧಗಳ ಪೈಕಿ 60 (ಶೇ 10.39) ಅನ್ನು ಕೃತಿಚೌರ್ಯದ ಕಾರಣಕ್ಕೆ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು) ತಿರಸ್ಕರಿಸಿದೆ.

2020ರಿಂದ ಇಲ್ಲಿಯವರೆಗೆ ಒಟ್ಟು 134 ಸಂಶೋಧನಾ ಪ್ರಬಂಧಗಳನ್ನು ಕೃತಿಚೌರ್ಯದ ಕಾರಣಕ್ಕೆ ವಿಟಿಯು ತಿರಸ್ಕರಿಸಿದೆ. ತಂತ್ರಾಂಶ ಅಭಿವೃದ್ಧಿಪಡಿಸಿದ್ದರಿಂದ ಕೃತಿಚೌರ್ಯಗಳನ್ನು ಪತ್ತೆ ಮಾಡಲು ಸಾಧ್ಯವಾಗಿದ್ದು, ಈ ಕೃತ್ಯ ನಡೆಸಿದ ಅಭ್ಯರ್ಥಿಗಳು ವಿಶ್ವವಿದ್ಯಾಲಯಕ್ಕೆ ₹ 5 ಸಾವಿರ ದಂಡ ಕಟ್ಟಬೇಕು ಎಂದೂ ಸೂಚನೆ ನೀಡಿದೆ.

ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (ಎಐಸಿಟಿಇ) ನಿರ್ದೇಶನದಂತೆ ಸಂಶೋಧನಾ ಪ್ರಬಂಧಗಳ ಗುಣಮಟ್ಟ ಹೆಚ್ಚಿಸುವ ಉದ್ದೇಶದಿಂದ ಕೃತಿಚೌರ್ಯ ಪತ್ತೆ ಮಾಡಲು 2014-15ನೇ ಸಾಲಿನಲ್ಲಿ ತಂತ್ರಾಂಶವನ್ನು ವಿಟಿಯು ಅಭಿವೃದ್ಧಿಪಡಿಸಿತ್ತು.

'ಕೃತಿಚೌರ್ಯವನ್ನು ಓದಿನ ಮೂಲಕ ಪತ್ತೆ ಮಾಡುವುದು ಕಷ್ಟ. ತಂತ್ರಾಂಶ ಬಳಸಿದ್ದರಿಂದ ಮೊದಲ ಹಂತದಲ್ಲಿಯೇ ಸಂಶೋಧನಾ ಪ್ರಬಂಧಗಳನ್ನು ಶೋಧಿಸಿ ತೆಗೆಯಲು ಸಾಧ್ಯವಾಗಿದೆ' ಎಂದು ವಿಟಿಯು ಕುಲಪತಿ ಕರಿಸಿದ್ದಪ್ಪ 'ಪ್ರಜಾವಾಣಿ'ಗೆ ತಿಳಿಸಿದರು.

'ಈಗಾಗಲೇ ಪ್ರಕಟವಾದ ಸಂಶೋಧನಾ ಪ್ರಬಂಧಗಳಿಂದ ವಿಷಯಗಳನ್ನು ಯಥಾವತ್ತಾಗಿ ತೆಗೆದುಕೊಂಡ ಕಾರಣಕ್ಕೆ ಬಹುತೇಕ ಸಂಶೋಧನಾ ಪ್ರಬಂಧಗಳು ತಿರಸ್ಕೃತಗೊಂಡಿವೆ. ಕೃತಿಚೌರ್ಯ ಶೇ 25ಕ್ಕಿಂತ ಹೆಚ್ಚು ಇದ್ದರೆ ಅಂಥವುಗಳನ್ನು ತಿರಸ್ಕರಿಸಲಾಗುತ್ತದೆ' ಎಂದು ವಿಟಿಯು ಅಧಿಕಾರಿಯೊಬ್ಬರು ತಿಳಿಸಿದರು.

2020ರಲ್ಲಿ ಸಲ್ಲಿಕೆಯಾಗಿದ್ದ 560 ಸಂಶೋಧನಾ ಪ್ರಬಂಧಗಳ ಪೈಕಿ 43 (ಶೇ 7.67), 2021ರಲ್ಲಿ ಸಲ್ಲಿಕೆಯಾಗಿದ್ದ 831ರ ಪೈಕಿ 31 (ಶೇ 4.45) ಅನ್ನು ಕೃತಿಚೌರ್ಯದ ಕಾರಣಕ್ಕೆ ವಿಟಿಯು ತಿರಸ್ಕರಿಸಿತ್ತು.

ತುಳು ಸಾಹಿತ್ಯ ಅಕಾಡೆಮಿ ಆಯ್ಕೆಯಲ್ಲಿ ಲೋಪ

ಪುಸ್ತಕ ಬಹುಮಾನ 'ಗೌರವ'ಕ್ಕೆ ಸೀಮಿತ

• ವಿಕ್ರಂ ಕಾಂತಿಕೆರೆ

ಮಂಗಳೂರು: ತುಳು ಸಾಹಿತ್ಯ ಅಕಾಡೆಮಿ ಈ ಬಾರಿಯ ಪುಸ್ತಕ ಬಹುಮಾನಕ್ಕೆ ಕೃತಿಯನ್ನು ಆಯ್ಕೆ ಮಾಡುವಲ್ಲಿ ಆಗಿರುವ ಲೋಪದಿಂದಾಗಿ ಬಹುಮಾನವನ್ನು ರದ್ದುಮಾಡಲಾಗಿದೆ. ಆಯ್ಕೆ ಮಾಡಿರುವ ಅಶೋಕ್ ಆಳ್ವ ಸುರತ್ಕಲ್ ಅವರ 'ತುಳುನಾಡಿನ ಪ್ರಾಣಿ ಜಾನಪದ' ಕೃತಿ 'ಅನರ್ಹ' ಎಂದು ತಡವಾಗಿ ಗಮನಕ್ಕೆ ಬಂದ ಕಾರಣ ಬಹುಮಾನದ ಬದಲು ಕೃತಿಕಾರನಿಗೆ 'ಗೌರವ' ಮಾತ್ರ ನೀಡಲು ಅಕಾಡೆಮಿ ನಿರ್ಧರಿಸಿದೆ.

ಗೌರವ ಪ್ರಶಸ್ತಿ, ಪುಸ್ತಕ ಬಹುಮಾನ ಮತ್ತು ವಿವಿಧ ಪುರಸ್ಕಾರಗಳಿಗೆ ಆಯ್ಕೆಯಾದವರ ಪಟ್ಟಿಯನ್ನು ಜುಲೈ 21ರಂದು ಅಕಾಡೆಮಿ ಅಧ್ಯಕ್ಷ ದಯಾನಂದ ಕತ್ತಲ್‌ಸಾರ್ ಪ್ರಕಟಿಸಿದ್ದರು. ಆಗಸ್ಟ್ 21ರಂದು ಮಂಗಳೂರಿನ ಪುರಭವನದಲ್ಲಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಲಿದೆ ಎಂದು ಘೋಷಿಸಿದ್ದರು. ಆಯ್ಕೆಯಲ್ಲಿ ಆಗಿರುವ ಗೊಂದಲದಿಂದಾಗಿ ಕಾರ್ಯಕ್ರಮವನ್ನು ಸೆ. 24ಕ್ಕೆ ಮುಂದೂಡಲಾಗಿದೆ.

ಪುಸ್ತಕ ಬಹುಮಾನದ ಆಯ್ಕೆಗಾಗಿ ಒಟ್ಟು ಮೂರು ಕೃತಿಗಳು ಬಂದಿದ್ದವು. ತುಳುನಾಡಿನ ಪ್ರಾಣಿ ಜಾನಪದಕ್ಕೆ ಸಂಬಂಧಿಸಿದ ಕೃತಿಯನ್ನು ಆಯ್ಕೆ ಮಾಡಲಾಗಿತ್ತು. ಆದರೆ ಇದು ಪಿಎಚ್.ಡಿ ಪದವಿಗಾಗಿ ಅಧ್ಯಯನ ನಡೆಸಿದ ಕೃತಿ ಎಂದು ಅಕಾಡೆಮಿಗೆ ತಡವಾಗಿ ಗಮನಕ್ಕೆ ಬಂದಿದೆ. ಅಕಾಡೆಮಿಯ ನಿಯಮಾವಳಿಗಳ ಪ್ರಕಾರ ಪಿಎಚ್.ಡಿಗಾಗಿ ಅಧ್ಯಯನ ನಡೆಸಿದ ಕೃತಿಯನ್ನು ಪ್ರಶಸ್ತಿ ಆಯ್ಕೆಗೆ ಪರಿಗಣಿಸುವಂತೆ ಇಲ್ಲ.

'ಪಿಎಚ್.ಡಿಗಾಗಿ ಅಧ್ಯಯನ ಮಾಡಿರುವ ಕೃತಿಗಳಿಗೆ ಪ್ರಶಸ್ತಿ ಕೊಟ್ಟ ಉದಾಹರಣೆ ಇವೆ. ಆದರೂ ನಿಯಮಾವಳಿಗಳನ್ನು ಮೀರಿ ಯಾವುದನ್ನೂ ಮಾಡಬಾರದು ಎಂಬ ನಿಲುವಿಗೆ ಅಕಾಡೆಮಿ ಈಗ ಬದ್ಧವಾಗಿರುವುದರಿಂದ ಬಹುಮಾನವನ್ನು ರದ್ದುಗೊಳಿಸಲು ನಿರ್ಧರಿಸಲಾಗಿದೆ. ಆದರೆ ಕೃತಿಕಾರನಿಗೆ ಅಗೌರವ ತೋರುವುದು ಸರಿಯಲ್ಲ ಎಂಬ ಕಾರಣಕ್ಕೆ ಬಹುಮಾನದ ಬದಲು ಗೌರವ ನೀಡಲು ನಿರ್ಧರಿಸಲಾಗಿದೆ' ಎಂದು ಅಕಾಡೆಮಿಯ ಅಧ್ಯಕ್ಷ ದಯಾನಂದ ಕತ್ತಲ್‌ಸಾರ್ 'ಪ್ರಜಾವಾಣಿ'ಗೆ ತಿಳಿಸಿದರು.

'ಪಿಎಚ್.ಡಿಗಾಗಿ ಅಧ್ಯಯನ ನಡೆಸಿದ ಕೃತಿಯಲ್ಲಿ ಶೇಕಡಾ 40ರಷ್ಟು ಬದಲಾವಣೆ ಮಾಡಿ ಪ್ರಕಟಿಸಿದರೆ ಪ್ರಶಸ್ತಿಗೆ ಪರಿಗಣಿಸಬಹುದು. ಈ ಬಾರಿ ಆಯ್ಕೆ ಮಾಡಿರುವ ಕೃತಿಯನ್ನು 25 ವರ್ಷಗಳ ನಂತರ ಬದಲಾವಣೆ ಮಾಡಿ ಪ್ರಕಟಿಸಲಾಗಿದೆ. ಆದರೂ ಗೊಂದಲಕ್ಕೆ ಆಸ್ಪದ ಬೇಡ ಎಂಬ ಕಾರಣದಿಂದ ಬಹುಮಾನ ರದ್ದುಗೊಳಿಸಲು ನಿರ್ಧರಿಸಲಾಗಿದೆ. ಹೊಸದಾಗಿ ಆಯ್ಕೆ ಮಾಡುವ ಯೋಚನೆ ಇತ್ತು. ಆದರೆ ಆಯ್ಕೆಗೆ ಬಂದಿದ್ದ ಮೂರು ಕೃತಿಗಳ ಪೈಕಿ ಒಂದನ್ನು ಕೈಬಿಟ್ಟ ನಂತರ ಉಳಿದ ಎರಡು ಕೃತಿಗಳನ್ನು ಮಾತ್ರ ಪರಿಗಣಿಸಲು ನಿಯಮಾವಳಿಗಳಲ್ಲಿ ಅವಕಾಶವಿಲ್ಲ' ಎಂದು ಕತ್ತಲ್‌ಸಾರ್ ವಿವರಿಸಿದರು.

ಗೌರವಕ್ಕೂ ಪ್ರಾಯೋಜಕತ್ವ

ಈ ಬಾರಿ ಗೌರವ ಪ್ರಶಸ್ತಿಗೆ ಮೂವರನ್ನು, ಪುಸ್ತಕ ಪ್ರಕಾಶನದಲ್ಲಿ ಕವನ, ನಾಟಕ ಮತ್ತು ಅಧ್ಯಯನ ವಿಭಾಗದಲ್ಲಿ ತಲಾ ಒಬ್ಬರನ್ನು, ಬಾಲ ಪ್ರತಿಭೆ, ಯುವ ಸಾಧಕ ವಿಭಾಗದಲ್ಲಿ ತಲಾ ಮೂವರನ್ನು, ಮಾಧ್ಯಮ ಪುರಸ್ಕಾರಕ್ಕೆ ಇಬ್ಬರನ್ನು ಮತ್ತು ಸಂಘಟನೆ ವಿಭಾಗದಲ್ಲಿ ಮೂರು ಸಂಸ್ಥೆಗಳನ್ನು ಆಯ್ಕೆ ಮಾಡಲಾಗಿತ್ತು. ಈ ಪೈಕಿ ಗೌರವ ಪ್ರಶಸ್ತಿ ಮತ್ತು ಪುಸ್ತಕ ಬಹುಮಾನ ಹೊರತುಪಡಿಸಿದರೆ ಉಳಿದ ಎಲ್ಲ ಬಹುಮಾನಗಳನ್ನು ಪ್ರಾಯೋಜಕರಿಂದ ನೀಡಲಾಗುತ್ತದೆ. ಅಧ್ಯಯನ ವಿಭಾಗದ ಆಯ್ಕೆಯಲ್ಲಿ ಲೋಪ ಆಗಿರುವುದರಿಂದ ಗೌರವವನ್ನು ಕೂಡ ಪ್ರಾಯೋಜಕತ್ವದ ಮೂಲಕ ನೀಡಲು ಅಕಾಡೆಮಿ ನಿರ್ಧರಿಸಿದೆ ಎಂದು ಅಧ್ಯಕ್ಷರು ಸ್ಪಷ್ಟಪಡಿಸಿದ್ದಾರೆ.

> **ಬೇರೆಯವರ ಅಚಾತುರ್ಯದಿಂದ ಈ ತಪ್ಪು ಆಗಿದೆ. ಆದರೆ ಇದರ ಸಂಪೂರ್ಣ ಹೊಣೆಯನ್ನು ನಾನೇ ಹೊತ್ತುಕೊಂಡಿದ್ದೇನೆ.**
> **ದಯಾನಂದ ಕತ್ತಲ್‌ಸಾರ್,** ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷ

> **ನನ್ನದು ಸಂಶೋಧನಾ ಕೃತಿ. ಸಮಾಜಕ್ಕೆ ಅನುಕೂಲ ಆಗಲಿ ಎಂಬ ಉದ್ದೇಶದಿಂದ ವರ್ಷಗಳ ನಂತರ ಪ್ರಕಟಿಸಿದ್ದೇನೆ. ಪ್ರಶಸ್ತಿಗಾಗಿ ಬರೆದದ್ದಲ್ಲ. ಆದ್ದರಿಂದ ಅಕಾಡೆಮಿ ನಿರ್ಧಾರದ ಬಗ್ಗೆ ಬೇಸರವೂ ಇಲ್ಲ.**
> **ಅಶೋಕ್ ಆಳ್ವ ಸುರತ್ಕಲ್,** ಕೃತಿಕಾರ

'ಫ್ರೀ ಕೋಚಿಂಗ್ ವಿದ್ಯಾ': ಬಡ ಮಕ್ಕಳಿಗೆ ಆಸರೆ

ಒಂದನೇ ಪುಟದಿಂದ

ಗ್ರಾಮಾಂತರ ಪ್ರದೇಶಗಳ ವಿದ್ಯಾರ್ಥಿಗಳಿಗೆ ಸ್ಮಾರ್ಟ್‌ಫೋನ್‌ಗಳು, ಪ್ರೊಜೆಕ್ಟರ್‌ಗಳು ಮತ್ತು ಸ್ಪೀಕರ್‌ಗಳನ್ನು ದಾನಿಗಳು ಕೊಡುಗೆಯಾಗಿ ನೀಡಿದ್ದಾರೆ. ಗ್ರಾಮೀಣ ಪ್ರದೇಶದ ಶಾಲೆಗಳಲ್ಲಿ ತರಗತಿಗಳನ್ನು ಪ್ರೊಜೆಕ್ಟರ್‌ಗಳ ಮೂಲಕ ನಡೆಸಲಾಗುತ್ತಿದೆ.

'ನಮ್ಮ ಮನೆಯಲ್ಲಿ ಅಡುಗೆ ಕೆಲಸ ಮಾಡುವ ಮಹಿಳೆಯ ಇಬ್ಬರು ಮಕ್ಕಳಿಗೆ ಪಾಠ ಮಾಡುವ ಮೂಲಕ ಇದನ್ನು ಆರಂಭಿಸಿದ್ದೆವು. ಕೋವಿಡ್ ಕಾಣಿಸಿಕೊಂಡ ನಂತರ ಆನ್‌ಲೈನ್ ಕೋಚಿಂಗ್ ನೀಡುವುದನ್ನು ಆರಂಭಿಸಲಾಯಿತು. ಹಲವಾರು ಪರೋಪಕಾರಿಗಳು ಕೈಜೋಡಿಸಿದರು. ಉಚಿತವಾಗಿ ಬೋಧನೆ ಮಾಡುವುದಾಗಿ ಸ್ವಯಂ ಪ್ರೇರಿತರಾಗಿ ಹಲವರು ಮುಂದೆ ಬಂದರು. ಇವರು ಸಮರ್ಪಣಾ ಮನೋಭಾವದಿಂದ ಕಾರ್ಯನಿರ್ವಹಿಸುತ್ತಿದ್ದಾರೆ' ಎಂದು ಬದರಿನಾಥ ವಿಠ್ಠಲ ದಂಪತಿ ವಿವರಿಸುತ್ತಾರೆ.

'ಬೋಧನೆಯಲ್ಲೂ ವಿನೂತನ ವಿಧಾನಗಳನ್ನು ಅಳವಡಿಸಿಕೊಳ್ಳಲು ಯತ್ನಿಸುವ ಜತೆಗೆ, ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಕೋಚಿಂಗ್ ನೀಡಲು ಮುಂದಾದೆವು. ಇದರಿಂದಾಗಿ ವಿದ್ಯಾರ್ಥಿಗಳ ಸಂಖ್ಯೆ ಆರು ತಿಂಗಳಲ್ಲೇ ಆರು ಸಾವಿರಕ್ಕೆ ಏರಿಕೆಯಾಯಿತು. ಈಗ 18 ಸಾವಿರ ದಾಟಿದೆ. ಒಟ್ಟಾರೆಯಾಗಿ ಈ ಬೆಳವಣಿಗೆಯನ್ನು 22 ತಿಂಗಳಲ್ಲಿ ಸಾಧಿಸಲಾಯಿತು' ಎಂದು ಹೇಳುತ್ತಾರೆ.

'ಕಳೆದ ಒಂದು ತಿಂಗಳಲ್ಲಿ ಸಿದ್ದಗಂಗಾ ಸೊಸೈಟಿ ನಿರ್ವಹಿಸುತ್ತಿರುವ 57ಕ್ಕೂ ಹೆಚ್ಚು ಗ್ರಾಮೀಣ ಶಾಲೆಗಳು ಮತ್ತು ಕಾಲೇಜುಗಳು 'ಫ್ರೀ ಕೋಚಿಂಗ್ ವಿದ್ಯಾ' ಯೋಜನೆ ಅಡಿಯಲ್ಲಿ ಸೇರ್ಪಡೆಯಾಗಿವೆ. ನಮಗೆ ಕಲಿಯುವ ಉತ್ಸಾಹ ಇರುವ ಬಡ ಮಕ್ಕಳು ಮತ್ತು ಉತ್ತಮ ಶಿಕ್ಷಣ ನೀಡುವ ಸ್ವಯಂ ಸೇವಕರು ಹಾಗೂ ಅಗತ್ಯ ಇರುವವರಿಗೆ ಮೊಬೈಲ್ ನೀಡುವ ದಾನಿಗಳು ಬೇಕು' ಎಂದು ಅವರು ಹೇಳುತ್ತಾರೆ.

ಬದರೀನಾಥ ಅವರ ಸಂಪರ್ಕ: 9901841508, 99004 08760, 080-41501976.

ಇಬ್ಬರು ಪ್ರಾಂಶುಪಾಲರು, 8 ಉಪನ್ಯಾಸಕರಿಗೆ ಪ್ರಶಸ್ತಿ

ಬೆಂಗಳೂರು: ಪದವಿಪೂರ್ವ ಕಾಲೇಜಿನ ಇಬ್ಬರು ಪ್ರಾಂಶುಪಾಲರು, ಎಂಟು ಉಪನ್ಯಾಸಕರು 2022-23ನೇ ಸಾಲಿನ ಶಿಕ್ಷಕರ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಜಿ.ನಾಗಣ್ಣ, ಪ್ರಾಂಶುಪಾಲ, ಬಾಲಕಿಯರ ಸರ್ಕಾರಿ ಪಿಯು ಕಾಲೇಜ್, ಬಸವನಗುಡಿ. ಸತೀಶ್ ಬೊಮ್ಮಯ್ಯ ನಾಯಕ್, ಪ್ರಾಂಶುಪಾಲ, ನೆಲ್ಲಿಕೆರೆ ಎಚ್.ಬೆಣ್ಣೆ ಸರ್ಕಾರಿ ಪಿಯು ಕಾಲೇಜ್,ಕುಮಟಾ, ಉತ್ತರ ಕನ್ನಡ ಜಿಲ್ಲೆ.

ಉಪನ್ಯಾಸಕರು: ಆರ್.ಬಿ.ಚಂದ್ರಶೇಖರ್, ಎಂಪ್ರೆಸ್ ಬಾಲಕಿಯರ ಪಿಯು ಕಾಲೇಜ್, ತುಮಕೂರು. ಎಂ.ಎನ್.ಉಮೇಶ್, ಸರ್ಕಾರಿ ಪಿಯು ಕಾಲೇಜ್, ಯಲಹಂಕ. ಮಹಾವೀರ್ ಸಿಂಗ್ ಬಿ ರಜಪೂತ್, ಬಾಲಕಿಯರ ಕಾಲೇಜ್, ವಿಜಯಪುರ. ಕೆ.ಮಲ್ಲಮ್ಮ, ಹಲಸೂರು ಎಸ್‌ಕೆಪಿಎಸ್ ಸ್ವತಂತ್ರ ಪಿಯು ಕಾಲೇಜ್, ಬಸವಕಲ್ಯಾಣ, ಬೀದರ್. ಶಿವಾನಂದ ಎಂ.ಕಲ್ಲೂರು, ಸಿದ್ದಲಿಂಗ ಸರ್ಕಾರಿ ಪಿಯು ಕಾಲೇಜ್, ಗದಗ. ಶ್ರೀಶೈಲ ಕೋಲಾರ, ಕೆರೂರು ಕಾಲೇಜ್, ಚಿಕ್ಕೋಡಿ. ಎಂ.ಪಿ.ಉದಯ್‌ಕುಮಾರ್, ಸರ್ಕಾರಿ ಪಿಯು ಕಾಲೇಜ್, ಬೈಂದೂರು, ಉಡುಪಿ. ಆರ್.ಸದಾನಂದ, ಬಾಲಕಿಯರ ಕಾಲೇಜ್, ಹುಣಸೂರು, ಮೈಸೂರು.

ಸೆ.5ರಂದು ಅವರನ್ನು ಪುರಸ್ಕರಿಸಲಾಗುವುದು ಎಂದು ಪದವಿಪೂರ್ವ ಶಿಕ್ಷಣ ಇಲಾಖೆ ಪ್ರಕಟಣೆ ತಿಳಿಸಿದೆ.

ಸಿಇಟಿ: ಹೊಸದಾಗಿ ರ‍್ಯಾಂಕ್ ಪಟ್ಟಿಗೆ ಸೂಚನೆ

ಒಂದನೇ ಪುಟದಿಂದ

ಕಳೆದ ವಿಚಾರಣೆ ವೇಳೆ ನ್ಯಾಯಪೀಠವು, 'ಪಿಯು ಮತ್ತು ಸಿಇಟಿ ಅಂಕಗಳನ್ನು 25:75ರ ಅನುಪಾತದಲ್ಲಿ ಪರಿಗಣಿಸುವ ಮೂಲಕ ಸಹಮತದ ಸೂತ್ರವನ್ನು ಕಂಡುಕೊಳ್ಳಬಹುದು' ಎಂದು ಸರ್ಕಾರಕ್ಕೆ ಸಲಹೆ ನೀಡಿತ್ತು. ಆದರೆ, ಸರ್ಕಾರ ಈ ಸಲಹೆಯನ್ನು ಒಪ್ಪಿಲ್ಲ. ಅರ್ಜಿದಾರರ ಪರ ಹಿರಿಯ ವಕೀಲರಾದ ಎ.ಎಸ್.ಪೊನ್ನಣ್ಣ, ಡಿ. ಆರ್. ರವಿಶಂಕರ್, ಎಸ್. ಬಸವರಾಜ್, ಕೆಇಎ ಪರ ಎನ್.ಕೆ.ರಮೇಶ್ ಮತ್ತು ಸರ್ಕಾರದ ಪರ ಹೆಚ್ಚುವರಿ ಅಡ್ವೊಕೇಟ್ ಜನರಲ್ ಧ್ಯಾನ್ ಚಿನ್ನಪ್ಪ ವಾದ ಮಂಡಿಸಿದ್ದರು. ಅರ್ಜಿದಾರ ವಿದ್ಯಾರ್ಥಿಗಳ ಪರವಾಗಿ ಶತಭಿಷ ಶಿವಣ್ಣ ವಕಾಲತ್ತು ವಹಿಸಿದ್ದರು.

ಕೋವಿಡ್ ಕಾರಣಕ್ಕೆ 2020- 21ನೇ ಸಾಲಿನಲ್ಲಿ ಪರೀಕ್ಷೆ ನಡೆಯದ ಕಾರಣ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳನ್ನು ತೇರ್ಗಡೆ ಮಾಡಲಾಗಿತ್ತು. ಅಂತಹ ವಿದ್ಯಾರ್ಥಿಗಳಲ್ಲಿ ಶೇ 90ಕ್ಕೂ ಹೆಚ್ಚು ಅಂಕ ಪಡೆದ 24 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಈ ಬಾರಿಯೂ ಎಂಜಿನಿಯರಿಂಗ್ ಕೋರ್ಸ್‌ಗಳಿಗೆ ನಡೆದ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಬರೆದಿದ್ದರು.

ಗುಂಡಣ್ಣ

25 ವರ್ಷಗಳ ಹಿಂದೆ — ಗುರುವಾರ, 4-9-1997

● ಕಾವೇರಿ: ಪ್ರಾಧಿಕಾರಕ್ಕೆ ಬದಲಾಗಿ ಸಮನ್ವಯ ಸಮಿತಿ– ರಾಜ್ಯ ಸಲಹೆ

ಬೆಂಗಳೂರು, ಸೆಪ್ಟೆಂಬರ್ 3– ಕಾವೇರಿ ನದಿ ಜಲ ವಿವಾದಕ್ಕೆ ಸಂಬಂಧಿಸಿದ ನ್ಯಾಯ ಮಂಡಲಿ ಇನ್ನೂ ತನ್ನ ಅಂತಿಮ ತೀರ್ಪು ನೀಡದಿರುವ ಈ ಹಂತದಲ್ಲಿ ಕಾವೇರಿ ನದಿ ಪ್ರಾಧಿಕಾರದ ರಚನೆ ಅಗತ್ಯವಿಲ್ಲ. ಆದರೆ ಅದರ ಬದಲಿಗೆ ಸಮನ್ವಯ ಸಮಿತಿಯೊಂದನ್ನು ರಚಿಸಬೇಕು ಎಂದು ಕೇಂದ್ರ ಸರ್ಕಾರಕ್ಕೆ ಸೂಚಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಸರ್ವಪಕ್ಷಗಳ ಸಭೆಯಲ್ಲಿ ಕೈಗೊಂಡ ಈ ತೀರ್ಮಾನವನ್ನು ಭಾರಿ ನೀರಾವರಿ ಸಚಿವ ಕೆ.ಎನ್. ನಾಗೇಗೌಡ ಅವರು ಇಂದು ಉಭಯ ಸದನಗಳಲ್ಲಿ ಪ್ರಕಟಿಸಿದರು.

50 ವರ್ಷಗಳ ಹಿಂದೆ — ಸೋಮವಾರ, 4-9-1972

● ಭಾರತದಿಂದ ಒಪ್ಪಂದ ಉಲ್ಲಂಘನೆ: ಭುಟ್ಟೋ ಆರೋಪ

ನವದೆಹಲಿ, ಸೆಪ್ಟೆಂಬರ್ 3– ಅಂತರರಾಷ್ಟ್ರೀಯ ಒಪ್ಪಂದಗಳಿಂದ ಭಾರತ ಹಿಂದಕ್ಕೆ ಸರಿಯುತ್ತದೆ ಎಂದು ಭುಟ್ಟೋ ಆಪಾದಿಸಿದರು.

ಸಯಾಲ್ಕೋಟ್ ಮತ್ತು ಸಿಂಧ್‌ಗಳಲ್ಲಿ ವಶಪಡಿಸಿಕೊಂಡಿರುವ ಪ್ರದೇಶಗಳನ್ನು ಭಾರತ ತೆರವು ಮಾಡಬೇಕೆಂದು ಸಿಮ್ಲಾ ಒಪ್ಪಂದದಲ್ಲಿ ತಿಳಿಸಲಾಗಿದೆ. ಡಿಸೆಂಬರ್ 17ರಂದು ಉಭಯ ರಾಷ್ಟ್ರಗಳ ಪಡೆಗಳು ಎಲ್ಲಿದ್ದವೋ ಅಲ್ಲಿ ಕಾಶ್ಮೀರದಲ್ಲಿ ಹತೋಟಿ ರೇಖೆ ಇರುತ್ತದೆ ಎಂದು ಭುಟ್ಟೋ ಅವರು ತಿಳಿಸಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಭಾನುವಾರ ಸೆಪ್ಟೆಂಬರ್ 4, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಶುಕ್ಲ ಅಷ್ಟಮಿ ಗಂ. 10-40 ನಕ್ಷತ್ರ: ಜ್ಯೇಷ್ಠ ಗಂ. 21-43 ಯೋಗ: ವಿಷ್ಕಂಭ ಗಂ. 14-23, ಕರಣ: ಬವ ಗಂ. 10-40, ಸಿಂಹ ಮಾಸದ 18 ನೇ ದಿನ.
ರಾಹುಕಾಲ : ಸಾಯಂಕಾಲ 04:30-06:00
ಸೂರ್ಯೋದಯ : 06-23 ಸೂರ್ಯಾಸ್ತ : 06-36
ಮುಸ್ಲಿಂ ದಿನಾಂಕ : 07 ಸಫರ್
ದಿನ ವಿಶೇಷ : ಕೇದಾರ ನವಮೀ, ಎಳೇಯಷ್ಟಮಿ ಅದೃಷ್ಟ ಸಂಖ್ಯೆ : 3, 7

ಮೇಷ: ನಿಮ್ಮ ಭರವಸೆಯ ಮಾತುಗಳು ಸಹೋದ್ಯೋಗಿಯೊಬ್ಬರಿಗೆ ಆತ್ಮಸ್ಥೈರ್ಯ ತರಲಿದೆ. ಬಹಳ ದಿನದ ನಂತರದ ಹಳೆಯ ಮಿತ್ರನೊಬ್ಬನ ಭೇಟಿ ಮನಸ್ಸಿಗೆ ಮುದ ತರುವುದು. ಹಣದ ವಿಚಾರದಲ್ಲಿ ಬಿಗಿ ನಿಲುವು ಉತ್ತಮ.

ವೃಷಭ: ಸಾಮಾಜಿಕ ವಲಯದಲ್ಲಿ ಬರುವ ಅವಕಾಶಗಳನ್ನು ನಿಮ್ಮತ್ತ ತಿರುಗಿಸಿಕೊಂಡು ಸದುಪಯೋಗ ಪಡೆದುಕೊಳ್ಳುವುದು ನಿಮಗೆ ಬಿಟ್ಟ ವಿಷಯ. ಕುಟುಂಬದಲ್ಲಿ ಸೌಖ್ಯ. ಮನೋರಂಜನೆಯ ಸಮಯವನ್ನು ಅನುಭವಿಸುವಿರಿ.

ಮಿಥುನ: ಮಗನಿಗಾಗಿ ವೈದ್ಯಕೀಯ ಖರ್ಚಿನ ಸಂಭವ. ಧ್ಯಾನ ಹಾಗೂ ಯೋಗದ ಕಡೆ ಗಮನ ಹರಿಸಿ. ಅದರಿಂದ ನಿಮ್ಮ ಆರೋಗ್ಯಕ್ಕೆ ಬಹಳ ಸಹಾಯವಾಗಲಿದೆ. ಗೋವಿನ ಉತ್ಪನ್ನಗಳ ಮಾರಾಟಗಾರರಿಗೆ ಹೆಚ್ಚಿನ ಲಾಭ ಬರುವುದು.

ಕರ್ಕಾಟಕ: ದಾಯಾದಿಗಳ ಮಧ್ಯೆ ನೀವಂದುಕೊಂಡಷ್ಟು ಪರಿಸ್ಥಿತಿ ಕೆಟ್ಟದಾಗಿ ಇರುವುದಿಲ್ಲ. ಜಾಹೀರಾತುಗಳ ಮೂಲಕ ವಹಿವಾಟನ್ನು ಹೆಚ್ಚಿಸಿಕೊಳ್ಳುವ ಪ್ರಯತ್ನದಿಂದ ಫಲ. ಲಾಭದ ವಿಚಾರದಲ್ಲಿ ಸ್ವಲ್ಪ ದಿನ ಕಾಯಬೇಕಾಗುವುದು.

ಸಿಂಹ: ಈ ದಿನದ ನಿಮ್ಮ ಪ್ರಯಾಣವು ಪೂರ್ವನಿಯೋಜಿತ ರೀತಿಯಲ್ಲಿ ನಡೆಯುವುದು ಕಷ್ಟಕರ. ಚರ್ಮದ ವಸ್ತುಗಳ ವ್ಯಾಪಾರಿಗಳಿಗೆ ಲಾಭದಾಯಕ ದಿನ. ವೈದ್ಯರನ್ನು ಭೇಟಿ ಮಾಡಬೇಕಾದ ಸ್ಥಿತಿಯು ಎದುರಾಗಬಹುದು.

ಕನ್ಯಾ: ನಿಮ್ಮಂತೆಯೇ ಇತರರೂ ಸ್ವತಂತ್ರರಾಗಿರಬೇಕು, ಸಂತೋಷವಾಗಿರಬೇಕೆಂಬ ನಿಮ್ಮ ಮನೋಭಾವದಿಂದಾಗಿ ಹೆಚ್ಚಿನ ಗೌರವವನ್ನು ಪಡೆದುಕೊಳ್ಳುವಿರಿ. ಮನೆಯಲ್ಲಿ ಧಾರ್ಮಿಕ ಸಮಾರಂಭಗಳ ಸಿದ್ಧತೆ ನಡೆಯಲಿದೆ.

ತುಲಾ: ಮಕ್ಕಳ ಹೊಸ ವ್ಯವಹಾರದಲ್ಲಿ ತಂದೆ ತಾಯಿಯ ಆಶೀರ್ವಾದ, ಆರ್ಥಿಕ ಸಹಾಯ ಸಹಕಾರ. ರಾಜಕೀಯ ವ್ಯಕ್ತಿಗಳಿಗೆ ಅನಿವಾರ್ಯವಾಗಿ ಓಡಾಟ ಹೆಚ್ಚಲಿದೆ. ಕುಲದೇವತೆಯ ಪ್ರಾರ್ಥನೆಯಿಂದ ಆರೋಗ್ಯ ಉತ್ತಮವಾಗುವುದು.

ವೃಶ್ಚಿಕ: ಸಂಬಂಧಿಕರಲ್ಲಿ ಹಣದ ವ್ಯವಹಾರ ನಡೆಸಬೇಡಿ. ಆಪ್ತಸ್ನೇಹಿತರು ಮತ್ತು ನೆರೆಯವರೊಂದಿಗೆ ಬಾಂಧವ್ಯ ಉತ್ತಮಗೊಳ್ಳುವುದು. ನಿಮ್ಮ ಮೌನದ ಉತ್ತರದಿಂದ ಭಿನ್ನಾಭಿಪ್ರಾಯದ ಸಮಸ್ಯೆಗೆ ಈ ದಿನ ಅಂತ್ಯ.

ಧನು: ಲೇವಾದೇವಿ ವ್ಯವಹಾರಗಳನ್ನು ಆದಷ್ಟು ಕಡಿಮೆ ಮಾಡಿಕೊಳ್ಳಲು ನಿರ್ಧರಿಸಿ. ನಿಮ್ಮ ಪ್ರತಿಭೆ, ಕೌಶಲಗಳು ಬೆಳಕಿಗೆ ಬಂದು ಇತರರಿಗೆ ವಿಶೇಷ ವ್ಯಕ್ತಿ ಎನಿಸುವಿರಿ. ನೆರೆಹೊರೆಯವರ ವೈಷಮ್ಯ ಮನೋಭಾವ ಅನುಭವಕ್ಕೆ ಬರಲಿದೆ.

ಮಕರ: ವ್ಯಾಪಾರದಲ್ಲಿ ಆಗುತ್ತಿರುವ ನಷ್ಟಗಳ ಬಗ್ಗೆ ಗಮನಿಸಿ. ದಿನದ ಮೊದಲಾರ್ಧ ನಿಮಗೆ ಸ್ವಲ್ಪಮಟ್ಟಿಗೆ ಬೇಸರ ತರಬಹುದು. ಆದರೆ ದಿನದ ಕೊನೆಯನ್ನು ಸಂತೋಷದಲ್ಲಿ ಕಳೆಯುತ್ತೀರಿ. ಪೊಲೀಸರಿಗೆ ಕೆಲಸದ ಒತ್ತಡ ಇರುತ್ತದೆ.

ಕುಂಭ: ರಾಜಕೀಯ ಜೀವನದಲ್ಲಿ ನಿಮ್ಮ ಪರಿಸ್ಥಿತಿ ಸುಧಾರಿಸಿಕೊಳ್ಳಲು ಅನುಕೂಲವಾಗುವ ಅವಕಾಶಗಳು ದೊರೆಯಲಿದೆ. ಪ್ರತಿಷ್ಠಿತ, ಪ್ರಭಾವಿ ವ್ಯಕ್ತಿಗಳ ಪರಿಚಯ ಇದಕ್ಕೆ ಕಾರಣ. ವದಂತಿಗಳಿಗೆ ಕಿವಿಗೊಡದಿರಿ.

ಮೀನ: ಗಂಭೀರ ಅಧ್ಯಯನ, ಅನ್ವೇಷಣೆ ಮಾಡುವವರಿಗೆ ಶುಭ. ನವ ದಂಪತಿಗಳಿಗೆ ಸಂತಾನ ಭಾಗ್ಯ. ಸಾಂಸ್ಕೃತಿಕವಾಗಿ ಅದರಲ್ಲೂ ಮುಖ್ಯವಾಗಿ ನಟನಾ ವೃತ್ತಿಯವರಿಗೆ ಖ್ಯಾತಿ, ಸಂಪತ್ತು ಹರಿದುಬರಲಿದೆ.

ಪದಬಂಧ 5069 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3.ದಟ್ಟವಾದ ಕಾಡಿನಲ್ಲಿ ರಚಿಸಿದ ಕೋಟೆ (4)
4.ಮಠದ ಹತ್ತಿರವಿರುವ ಆಮೆ (3)
5.ಕೊನೆಗೆ ವಿಕ್ರಯಿಸಿ ಮೋಸ ಹೋಗು (3)
6.ಯುದ್ಧಕ್ಕೊಂದು ಪರ್ಯಾಯ ಪದ (3)
8.ಕಳೆಯುವ ಲೆಕ್ಕವಿದು (5)
10.ಮುಳ್ಳುಗಳ ನಡುವೆ ಅರಳುವ ಹೂವು (3)
12.ಸಾವು ಈ ರೀತಿ ಬಂದಿದೆ (3)
13.ಜಡಿಮಳೆಯಲ್ಲಿ ತಂದಿರುವ ವಂದರಿ (3)
15.ಸಾರವತ್ತಾದ ಭಾಗದೊಡನಿರುವ ಕ್ಷೀರ (4)

ಮೇಲಿಂದ ಕೆಳಕ್ಕೆ
1.ಅಧಮನ ಹತ್ತಿರವಿರುವ ಹಣ (2)
2.ನಾನಾ ಮನೆಯಲ್ಲಿ ಇದ್ದವರ ಹೆಸರು (2)
3.ತರ್ಕ ಮಾಡುವ ವ್ಯಾಪಾರಿ (3)
4.ಹಸುವಿನ ಮರಿಯಿದು (2)
5.ಎಲ್ಲರನ್ನೂ ಒಂದುಗೂಡಿಸುವುದು (5)
7.ಇದು ಹೊಸದು (2)
9.ನಡುಗುವುದನ್ನು ನೋಡಿದ್ದಕ್ಕೇ ಈ ಮಂದಹಾಸ (2)
11.ಸೂರ್ಯನ ಕಾವು ಇಲ್ಲಿದೆ (3)
12.ಮಹಡಿಯಲ್ಲೇ ಮಾಡಿರುವ ಪಾತಿ (2)
14.ಬೆಲೆ ಬಾಳುವ ಮಣಿ (2)
16.ಹಾರಾಡಿದಾಗ ಹಳ್ಳಿ ಕಾಣುವುದೇ? (2)



5068ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪಿತಾಮಹ 3.ಹಸನ್ಮುಖ
5.ರಿಪೇರಿ 6.ಸಂವತ್ಸರ
7.ರಿಯಾಯಿತಿ 9.ತರದೂದು
11.ಸಡಗರ 13.ಚಾಕರ
14.ಜವಾಹಿರಿ 15.ಸದ್ಭಾವನೆ

ಮೇಲಿಂದ ಕೆಳಕ್ಕೆ:
2.ಹರಿಕಾರ 3.ಹರಿದಾರಿ
4.ಖಗ 6.ಸಂಗೀತ
8.ತಿಮಿರ 10.ದುರಾಚಾರಿ
11.ಸಮರಸ 12.ಹುಂಜ

ಸುಡೊಕು 5455

3					8	2		6
			4	9				3
		8			2		5	
	3			4				1
		1	7		5	6	2	
	6			1				
6			5	2		1		7
	1				4		6	
9		5		7		3		8

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5454 ಸುಡೊಕು

2	5	4	8	7	6	1	3	9
7	9	1	2	5	3	6	4	8
8	3	6	1	4	9	7	2	5
4	7	3	5	1	2	8	9	6
6	1	5	9	8	4	3	7	2
9	2	8	6	3	7	4	5	1
1	4	9	3	6	5	2	8	7
3	6	2	7	9	8	5	1	4
5	8	7	4	2	1	9	6	3

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಹೂಳೆತ್ತುವ ನೆಪದ ವಿರುದ್ಧ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ಆದೇಶ

ಮರಳುಗಾರಿಕೆಗೆ ಅವಕಾಶ ಇಲ್ಲ

ಪ್ರಜಾವಾಣಿ ವಾರ್ತೆ

ನವದೆಹಲಿ: ಜಲಕಾಯಗಳು, ಕೆರೆಗಳು, ಕೊಳಗಳು ಹಾಗೂ ಜೌಗು ಪ್ರದೇಶಗಳಲ್ಲಿ ಹೂಳೆತ್ತುವ ನೆಪದಲ್ಲಿ ಮರಳು ಗಣಿಗಾರಿಕೆ ನಡೆಸುವಂತಿಲ್ಲ ಎಂದು ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ (ಎನ್‌ಜಿಟಿ) ದಕ್ಷಿಣ ವಲಯ ಪೀಠ ಆದೇಶಿಸಿದೆ.

ಇಂಡಿ ಕ್ಷೇತ್ರದ ಮಾಜಿ ಶಾಸಕ ಡಾ. ಸಾರ್ವಭೌಮ ಬಗಲಿ ದಾಖಲಿಸಿರುವ ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ.ರಾಮಕೃಷ್ಣನ್ ಹಾಗೂ ಡಾ.ಸತ್ಯಗೋಪಾಲ್ ಕೊರ್ಲಪಾಟಿ ಅವರನ್ನು ಒಳಗೊಂಡ ಪೀಠವು ಶುಕ್ರವಾರ ತೀರ್ಪು ಪ್ರಕಟಿಸಿದೆ.

ಕೇಂದ್ರ ಪರಿಸರ ಹಾಗೂ ಅರಣ್ಯ ಸಚಿವಾಲಯದ ಸುಸ್ಥಿರ ಮರಳುಗಾರಿಕೆ ನಿರ್ವಹಣೆ ಮಾರ್ಗಸೂಚಿ– 2016, ಮರಳು ಗಣಿಗಾರಿಕೆಯ ಮೇಲ್ವಿಚಾರಣೆ ಹಾಗೂ ಜಾರಿ ಮಾರ್ಗಸೂಚಿ– 2020 ಹಾಗೂ ಎನ್‌ಜಿಟಿಯ ಪ್ರಧಾನ ಪೀಠ ಹೊರಡಿಸಿರುವ ಮಾರ್ಗಸೂಚಿಯ ಪ್ರಕಾರವೇ ಹೂಳೆತ್ತುವ ಕಾಮಗಾರಿಗಳನ್ನು ನಡೆಸಬೇಕು ಎಂದು ಪೀಠ ನಿರ್ದೇಶನ ನೀಡಿದೆ.

ಮರಳು ಗಣಿಗಾರಿಕೆಯ ಚಟುವಟಿಕೆಗಳ ಮೇಲೆ ನಿಗಾ ವಹಿಸಲು ಪ್ರತಿ ಜಿಲ್ಲೆಯಲ್ಲಿ ಕಾರ್ಯಪಡೆಯನ್ನು ಸ್ಥಾಪಿಸಬೇಕು. ಉಲ್ಲಂಘನೆಯ ಪ್ರಕರಣಗಳು ಕಂಡು ಬಂದಾಗ ಗಣಿ ನಿಯಮಗಳ ಅಡಿಯಲ್ಲಿ ದಂಡ ವಿಧಿಸುವ ಹಾಗೂ ಪರಿಸರ ಪರಿಹಾರಗಳನ್ನು ವಸೂಲಿ ಮಾಡುವಂತಹ ಕ್ರಮಗಳನ್ನು ಕೈಗೊಳ್ಳಬೇಕು ಎಂದೂ ಸೂಚಿಸಿದೆ.

ಜಿಲ್ಲಾಧಿಕಾರಿಗಳು, ಗಣಿ ಮತ್ತು ಭೂವಿಜ್ಞಾನ ಇಲಾಖೆಯ ನಿರ್ದೇಶಕರು ಪ್ರತಿ ಜಿಲ್ಲೆಯಲ್ಲಿ ಮರಳು ಗಣಿಗಾರಿಕೆ, ಹೂಳೆತ್ತುವ ಕಾಮಗಾರಿಗಳು, ಜೌಗು ಪ್ರದೇಶಗಳ ಮೇಲೆ ನಿಗಾ ಇಡಬೇಕು. ಒಂದು ವೇಳೆ ಉಲ್ಲಂಘನೆ ಪ್ರಕರಣಗಳು ಕಂಡುಬಂದಲ್ಲಿ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಪೀಠ ಹೇಳಿದೆ.

ಅರಣ್ಯ, ಪರಿಸರ ಇಲಾಖೆಯ ಪ್ರಧಾನ ಕಾರ್ಯದರ್ಶಿ ಅಧ್ಯಕ್ಷತೆಯ ಸಮಿತಿಯನ್ನು ಕರ್ನಾಟಕ ಸರ್ಕಾರ ಮುಖ್ಯ ಕಾರ್ಯದರ್ಶಿಯವರು ನೇಮಿಸಬೇಕು. ಈ ಸಮಿತಿಯಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆ, ಸಣ್ಣ ನೀರಾವರಿ, ಸಣ್ಣ ಕೈಗಾರಿಕೆ ಇಲಾಖೆಗಳ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಜೌಗು ಪ್ರದೇಶ ಪ್ರಾಧಿಕಾರದ ಅಧ್ಯಕ್ಷರು ಈ ಸಮಿತಿಯಲ್ಲಿ ಇರಬೇಕು. ಮರಳು ಗಣಿಗಾರಿಕೆಗೆ ವಿಧಿಸುವ ನಿರ್ಬಂಧಗಳ ಮೇಲೆ ಈ ಸಮಿತಿ ನಿಗಾ ಇಡಬೇಕು. ಪರಿಸರ ಸಚಿವಾಲಯದ ಮಾರ್ಗಸೂಚಿ ಹಾಗೂ ಎನ್‌ಜಿಟಿಯ ನಿರ್ದೇಶನಗಳ ಪಾಲನೆ ಆಗುತ್ತಿದೆಯೇ ಎಂಬುದನ್ನು ಪರಿಶೀಲನೆ ನಡೆಸಬೇಕು ಎಂದು ಎನ್‌ಜಿಟಿ ಸೂಚಿಸಿದೆ.

ರಾಯಚೂರು ಹಾಗೂ ವಿಜಯಪುರ ಜಿಲ್ಲೆಗಳಲ್ಲಿ ಜಲಕಾಯಗಳ ನಿರ್ವಹಣೆ ಹಾಗೂ ಹೂಳೆತ್ತುವ ನೆಪದಲ್ಲಿ ಅಕ್ರಮ ಮರಳು ಗಣಿಗಾರಿಕೆ ನಡೆಸಲಾಗುತ್ತಿದೆ ಎಂದು ಆರೋಪಿಸಿ ಸಾರ್ವಭೌಮ ಬಗಲಿ ಅವರು ಎನ್‌ಜಿಟಿಯ ಮೆಟ್ಟಿಲೇರಿದ್ದರು. ಕೇಂದ್ರ ಪರಿಸರ ಸಚಿವಾಲಯದ ಮಾರ್ಗಸೂಚಿಗಳನ್ನು ಗಾಳಿಗೆ ತೂರಿ ಮರಳುಗಾರಿಕೆಗೆ ಅನುಮತಿ ನೀಡಲಾಗುತ್ತಿದೆ ಎಂದೂ ಆರೋಪಿಸಿದ್ದರು.

ಕೇಂದ್ರ ಅರಣ್ಯ, ಪರಿಸರ ಸಚಿವಾಲಯದ ಹಿರಿಯ ಅಧಿಕಾರಿ ನೇತೃತ್ವದಲ್ಲಿ ಜಂಟಿ ಸಮಿತಿಯನ್ನು ರಚಿಸಿದ್ದ ಎನ್‌ಜಿಟಿ, ಕೊಳ, ಕೆರೆಗಳಲ್ಲಿ ಮರಳು ತೆಗೆಯುವುದರಿಂದ ಪರಿಸರದ ಮೇಲೆ ಹಾನಿಯಾಗುತ್ತದೆಯೇ ಎಂಬುದನ್ನು ಪರಿಶೀಲಿಸಿ ವರದಿ ನೀಡುವಂತೆ ಸೂಚಿಸಿತ್ತು. ವಿಜಯಪುರ ಹಾಗೂ ರಾಯಚೂರು ಜಿಲ್ಲೆಗಳಲ್ಲಿ ಪರಿಶೀಲನೆ ನಡೆಸಿದ್ದ ಜಂಟಿ ಸಮಿತಿಯು ಮೂರು ವರದಿಗಳನ್ನು ಸಲ್ಲಿಸಿತ್ತು.

ಬಿಜೆಪಿಯಲ್ಲಿದ್ದೇ ಎಎಪಿ ಪರ ಕೆಲಸ ಮಾಡಿ: ಕೇಜ್ರಿವಾಲ್

ರಾಜ್‌ಕೋಟ್ (ಪಿಟಿಐ): ಗುಜರಾತ್‌ನಲ್ಲಿರುವ ಬಿಜೆಪಿ ಕಾರ್ಯಕರ್ತರು ಅಲ್ಲಿಯೇ ಇದ್ದುಕೊಂಡು ಎಎಪಿಯನ್ನು ಬೆಂಬಲಿಸಿ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಸಲಹೆ ನೀಡಿದ್ದಾರೆ.

ಎರಡು ದಿನ ಚುನಾವಣಾ ಪ್ರಚಾರದಲ್ಲಿ ತೊಡಗಿಸಿಕೊಂಡಿದ್ದ ಕೇಜ್ರಿವಾಲ್ ಶನಿವಾರ ಸುದ್ದಿಗೋಷ್ಠಿಯಲ್ಲಿ, 'ಆಡಳಿತಾರೂಢ ಬಿಜೆಪಿ ಕಾರ್ಯಕರ್ತರು ಆ ಪಕ್ಷದಿಂದ ತಮಗೆ ದೊರೆಯುವ ಹಣವನ್ನು ತೆಗೆದುಕೊಂಡು, ಒಳಗಿಂದೊಳಗೆ ಎಎಪಿ ಪರ ಕೆಲಸ ಮಾಡಬೇಕು ಎಂದು ಮನವಿ ಮಾಡಿದರು.

'ರಾಜ್ಯದಲ್ಲಿ ಎಎಪಿ ಅಧಿಕಾರಕ್ಕೆ ಬಂದರೆ ಚುನಾವಣೆ ಪೂರ್ವದಲ್ಲಿ ಘೋಷಿಸಿರುವ ಎಲ್ಲ ಯೋಜನೆಗಳ ಫಲವನ್ನು ಬಿಜೆಪಿ ಕಾರ್ಯಕರ್ತರೂ ಪಡೆದುಕೊಳ್ಳಬಹುದು. ನಮಗೆ ಬಿಜೆಪಿ ನಾಯಕರು ಬೇಕಾಗಿಲ್ಲ. ಅವರನ್ನು ಆ ಪಕ್ಷವೇ ಇಟ್ಟುಕೊಳ್ಳಲಿ. ಆದರೆ ಬಿಜೆಪಿಯ ತಾಲ್ಲೂಕು ಮತ್ತು ಬೂತ್ ಮಟ್ಟದ ಕಾರ್ಯಕರ್ತರು, ಗ್ರಾಮಗಳಲ್ಲಿ ಪಕ್ಷದ ಪರ ಕೆಲಸ ಮಾಡುತ್ತಿರುವವರು ಎಲ್ಲರೂ ಸಾಮೂಹಿಕವಾಗಿ ಎಎಪಿ ಸೇರುತ್ತಿದ್ದಾರೆ' ಎಂದು ಅವರು ಹೇಳಿದರು.

'ಬಿಜೆಪಿಯು ತನ್ನ ಕಾರ್ಯಕರ್ತರ ಕುಟುಂಬಗಳಿಗೆ ಉಚಿತ ಮತ್ತು ಗುಣಮಟ್ಟದ ಶಿಕ್ಷಣ, ಆರೋಗ್ಯ ಸೇವೆ, ಉಚಿತ ವಿದ್ಯುತ್ ಯೋಜನೆಗಳನ್ನು ಘೋಷಿಸಿಲ್ಲ. ಆದರೆ ಎಎಪಿ ಎಲ್ಲರ ಕಾಳಜಿಯನ್ನು ಮಾಡುತ್ತದೆ. ಬಿಜೆಪಿ ಕಾರ್ಯಕರ್ತರು ಅಲ್ಲಿದ್ದುಕೊಂಡೇ ಎಎಪಿ ಪರ ಕೆಲಸ ಮಾಡಬಹುದು. ಹೆಚ್ಚಿನ ಕಾರ್ಯಕರ್ತರಿಗೆ ಚುನಾವಣೆ ಸಂದರ್ಭ ಬಿಜೆಪಿ ದುಡ್ಡುಕೊಡುತ್ತದೆ. ಅದನ್ನು ತೆಗೆದುಕೊಳ್ಳಿ. ನಮ್ಮನ್ನು ಬೆಂಬಲಿಸಿ. ಬಿಜೆಪಿಯಂತೆ ಹಂಚಲು ನಮ್ಮ ಬಳಿ ಹಣವಿಲ್ಲ' ಎಂದು ಅವರು ಹೇಳಿದರು.

ಅಧಿಕಾರಕ್ಕೆ ಬಂದ ಬಳಿಕ ಉಚಿತ ವಿದ್ಯುತ್, ಉತ್ತಮ ಶಾಲೆಗಳ ನಿರ್ಮಾಣ, ಉತ್ತಮ ಗುಣಮಟ್ಟದ ಉಚಿತ ಶಿಕ್ಷಣ, ಉತ್ತಮ ಆರೋಗ್ಯ ಸೇವೆಯನ್ನು ಬಿಜೆಪಿ ಕಾರ್ಯಕರ್ತರೆಂದು ನೋಡದೆ ಎಲ್ಲರಿಗೂ ಸಹಕಾರಿಯಾಗಿ ನಿಲ್ಲುತ್ತೇವೆ ಎಂದು ಕೇಜ್ರಿವಾಲ್ ಭರವಸೆ ನೀಡಿದರು.

ಕೇಜ್ರಿವಾಲ್ 'ಯು– ಟರ್ನ್' ನಾಯಕ

ರಾಜ್‌ಕೋಟ್ (ಪಿಟಿಐ): ಎಎಪಿ ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಅವರು ದೇಶದಲ್ಲಿ ನಿಲುವು ಬದಲಿಸುವ ಅತಿ ದೊಡ್ಡ ನಾಯಕ (ಯು–ಟರ್ನ್) ಎಂದು ಸಂಸದ, ಭಾರತೀಯ ಜನತಾ ಯುವ ಮೋರ್ಚಾ ಅಧ್ಯಕ್ಷ ತೇಜಸ್ವಿ ಸೂರ್ಯ ವ್ಯಂಗ್ಯವಾಡಿದ್ದಾರೆ.

ರಾಜಕಾರಣದಲ್ಲಿ ವಿಶ್ವಾಸಾರ್ಹತೆ ಮತ್ತು ಸಮಗ್ರತೆಯ ಕೊರತೆಯನ್ನು ಕೇಜ್ರಿವಾಲ್ ಹೊಂದಿದ್ದಾರೆ. ಅವರ 'ರೆವ್ಡಿ (ಉಚಿತ) ಮತ್ತು ಬೆವ್ಡಿ (ಅಬಕಾರಿ) ರಾಜಕೀಯ'ವನ್ನು ಗುಜರಾತಿನ ಯುವ ಜನರು ತಿರಸ್ಕರಿಸುತ್ತಾರೆ ಎಂದು ಅವರು ಹೇಳಿದ್ದಾರೆ.

ಗುಜರಾತ್ ಎಎಪಿ ಅಧ್ಯಕ್ಷ ವಿರುದ್ಧ ಎಫ್‌ಐಆರ್

ಸೂರತ್ (ಪಿಟಿಐ): ಬಿಜೆಪಿ ನಾಯಕರ ವಿರುದ್ಧ ಅವಹೇಳನಕಾರಿ ಮತ್ತು ಮಾನಹಾನಿಕಾರಕ ಹೇಳಿಕೆ ನೀಡಿದ್ದಾರೆ ಎಂಬ ಆರೋಪದ ಮೇಲೆ ಎಎಪಿಯ ಗುಜರಾತ್ ಘಟಕದ ಅಧ್ಯಕ್ಷ ಗೋಪಾಲ್ ಇಟಾಲಿಯಾ ವಿರುದ್ಧ ಬಿಜೆಪಿ ಕಾರ್ಯಕರ್ತರು ಶನಿವಾರ ಪ್ರಕರಣ ದಾಖಲಿಸಿದ್ದಾರೆ.

ಬಿಜೆಪಿಯ ರಾಜ್ಯ ಘಟಕದ ಅಧ್ಯಕ್ಷ ಸಿ.ಆರ್.ಪಾಟೀಲ್ ಮತ್ತು ಗೃಹ ಸಚಿವ ಸಾಂಘ್ವಿ ವಿರುದ್ಧ ಗೋಪಾಲ್ ಮಾನಹಾನಿಕಾರಕ ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಲಾಗಿದೆ.

ಸೂರತ್‌ನಲ್ಲಿ ಬಿಜೆಪಿಯ 'ಗೂಂಡಾಗಳು' ಇತ್ತೀಚೆಗೆ ಎಎಪಿಯ ನಾಯಕ ಮನೋಜ್ ಸೊರಥಿಯಾ ಮೇಲೆ ಹಲ್ಲೆ ಮಾಡಿದ್ದರು ಎಂದು ದೂರಿದ್ದ ಗೋಪಾಲ್ ಅವರು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಮತ್ತು ಗೃಹ ಸಚಿವರ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ್ದರು.

ಮರ ಹನನ: ಅಪಾರ ಪಕ್ಷಿಗಳ ಸಾವು

ಮಲಪ್ಪುರಂ (ಪಿಟಿಐ): ಕೇರಳದ ಮಲಪ್ಪುರಂ ಜಿಲ್ಲೆಯಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎ) ಕೈಗೊಂಡಿದ್ದ ರಸ್ತೆ ವಿಸ್ತರಣೆ ಕಾಮಗಾರಿ ವೇಳೆ ಮರಮೊಂದನ್ನು ಕಡಿದಿದ್ದರಿಂದ ಅಪಾರ ಸಂಖ್ಯೆಯ ಪಕ್ಷಿಗಳು ಮೃತಪಟ್ಟಿವೆ.

ಮಲಪ್ಪುರಂ ಜಿಲ್ಲೆಯ ರಂಡಥಾನಿಯಲ್ಲಿ ಈ ಘಟನೆ ನಡೆದಿದೆ. ಈ ವಿಡಿಯೊ ಜಾಲತಾಣಗಳಲ್ಲಿ ವೈರಲ್ ಆಗಿದೆ.

EMPLOYMENT NOTIFICATION

1. Applications are invited by the Officer Commanding Establishment, HQ K&K Sub Area to fill 07 posts i.e, Steno II-01, MTS (Messenger)-04, MTS (Daftry)-01, MTS (Safaiwala)-01.
2. For further detailded information please refer to **EMPLOYMENT NEWS Weekly issue of 27 Aug 2022, Page No. 25.**

Officer Commanding Establishement HQ K&K Sub Area

PUBLIC NOTICE

Public are informed that my client intend to purchase property bearing Survey Number.27/4, measuring 31 Guntas, situated at Goravehalli Village, Nandagudi Hobli, Hosakote Taluk, Bangalore Rural District, and bounded on the
East by : Land in Survey No.28
West by : Land in Survey No.25
North by : Land in Survey No.27/1
South by : Land in Survey No.29
FROM **Sri.B.R.KUMAR** S/o Late T.R.Basappa, aged 57 years, represented by his registered GPA Holder T.L.MANJUNATH S/o of T.M.Lakshmaiah aged 46 years
Any Persons having any right over the said property may lodge their objections/claims with documentary evidence within **15 days** from this day to the undersigned.

KCS ASSOCIATES, Advocates
No.G-1, Ground Floor, "Sai Smaran Apartments", 1st Main Road
Pai Layout, Bangalore-560016.
Purchaser Mob. 9742555553 / 9964123644.

ವಿರೋಧ ಪಕ್ಷಗಳ ನಡುವೆ ಒಗ್ಗಟ್ಟು ನಿತೀಶ್‌ಗೆ ಹೊಣೆ ವಹಿಸಿದ ಜೆಡಿಯು

ಪಟ್ನಾ (ಪಿಟಿಐ): ಬಿಜೆಪಿಯನ್ನು ಎದುರಿಸಲು ವಿರೋಧ ಪಕ್ಷಗಳೆಲ್ಲ ಒಟ್ಟಾಗಬೇಕು, ಪರ್ಯಾಯದ ಹುಡುಕಾಟದಲ್ಲಿರುವ ಜನರ ಅಭಿವೃದ್ಧಿಗಾಗಿ ಭಿನ್ನಾಭಿಪ್ರಾಯಗಳನ್ನು ಮರೆಯಬೇಕು ಎಂದು ಬಿಹಾರ ಮುಖ್ಯಮಂತ್ರಿ ಮತ್ತು ಜೆಡಿಯು ನಾಯಕ ನಿತೀಶ್ ಕುಮಾರ್ ಕರೆ ಕೊಟ್ಟಿದ್ದಾರೆ.

ಜೆಡಿಯು ರಾಷ್ಟ್ರೀಯ ಕಾರ್ಯಕಾರಿಣಿಯನ್ನು ಉದ್ದೇಶಿಸಿ ನಿತೀಶ್ ಅವರು ಶನಿವಾರ ಮಾತನಾಡಿದರು. ವಿರೋಧ ಪಕ್ಷಗಳನ್ನು ಒಗ್ಗೂಡಿಸುವುದೇ ತಮ್ಮ ಏಕೈಕ ಗುರಿ ಎಂದು ನಿತೀಶ್ ಹೇಳಿದರು. ಬಳಿಕ, ವಿವಿಧ ಪಕ್ಷಗಳನ್ನು ಒಟ್ಟುಗೂಡಿಸುವ ಹೊಣೆಗಾರಿಕೆಯನ್ನು ಪಕ್ಷವು ಅವರಿಗೆ ವಹಿಸಿತು.

ದೇಶದಲ್ಲಿ ಅಘೋಷಿತ ತುರ್ತುಸ್ಥಿತಿ ಇದೆ. ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಳ್ಳುವ ಮೂಲಕ ವಿರೋಧದ ಧ್ವನಿಗಳನ್ನು ಬಿಜೆಪಿ ಸರ್ಕಾರವು ಹತ್ತಿಕ್ಕುತ್ತಿದೆ ಎಂಬ ನಿರ್ಣಯವನ್ನು ಕಾರ್ಯಕಾರಿಣಿಯು ಅಂಗೀಕರಿಸಿದೆ.

ಮಣಿಪುರದ ಜೆಡಿಯುನ ಆರು ಶಾಸಕರ ಪೈಕಿ ಐವರು ಬಿಜೆಪಿ ಸೇರಿದ್ದರ ಕುರಿತು ನಿತೀಶ್ ಕುಮಾರ್ ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಹಣಬಲದ ಮೂಲಕ ಇತರ ಪಕ್ಷಗಳ ಶಾಸಕರನ್ನು ಬಿಜೆಪಿ ಸೆಳೆಯುತ್ತಿದೆ ಎಂದು ಅವರು ಆರೋಪಿಸಿದ್ದಾರೆ.

'ಇದು ಸರಿಯಾದ ಕ್ರಮವೇ? ಇದು ಸಾಂವಿಧಾನಿಕವೇ? ಇದು ನಮ್ಮ ಮೌಲ್ಯಗಳಿಗೆ ಅನುಗುಣವಾಗಿ ಇದೆಯೇ? ಅವರು ಎಲ್ಲೆಡೆಯೂ ಇದನ್ನೇ ಮಾಡುತ್ತಿದ್ದಾರೆ. ಹಾಗಾಗಿಯೇ 2024ರಲ್ಲಿ ಸಕಾರಾತ್ಮಕ ಫಲಿತಾಂಶ ಪಡೆಯಲು ವಿರೋಧ ಪಕ್ಷಗಳೆಲ್ಲ ಒಂದಾಗಬೇಕು' ಎಂದು ನಿತೀಶ್ ಕುಮಾರ್ ಅವರು ಕರೆಕೊಟ್ಟಿದ್ದಾರೆ.

ಜೆಡಿಯುನ ರಾಷ್ಟ್ರೀಯ ಕಾರ್ಯಕಾರಿಣಿಯ ಎರಡು ದಿನಗಳ ಸಭೆ ಪಟ್ನಾದಲ್ಲಿ ನಡೆಯುತ್ತಿದೆ. ನಿತೀಶ್ ಅವರು ಕಾರ್ಯಕಾರಿಣಿಯ ಮೊದಲ ದಿನವಾದ ಶನಿವಾರ ಮಾಧ್ಯಮ ಪ್ರತಿನಿಧಿಗಳ ಜತೆಗೆ ಮಾತನಾಡಿದರು.

ವಿಪಕ್ಷ ನಾಯಕರ ಭೇಟಿಗೆ ನಾಳೆ ದೆಹಲಿಗೆ

ನಿತೀಶ್ ಅವರು ಇದೇ ಸೋಮವಾರ ದೆಹಲಿಗೆ ತೆರಳಿ ವಿರೋಧ ಪಕ್ಷಗಳ ನಾಯಕರನ್ನು ಭೇಟಿ ಮಾಡಲಿದ್ದಾರೆ ಎಂದು ಜೆಡಿಯುನ ಮುಖಂಡರು ತಿಳಿಸಿದ್ದಾರೆ. ಕಾಂಗ್ರೆಸ್ ಸೇರಿದಂತೆ ಬಿಜೆಪಿಯೇತರ ಪಕ್ಷಗಳ ಮುಖಂಡರನ್ನು ನಿತೀಶ್ ಭೇಟಿಯಾಗಲಿದ್ದಾರೆ. ಕಾಂಗ್ರೆಸ್ ಪಕ್ಷವು ಬಿಹಾರದಲ್ಲಿ ಜೆಡಿಯುನ ಮಿತ್ರ ಪಕ್ಷವಾಗಿದೆ ಮತ್ತು ಸರ್ಕಾರದ ಭಾಗವೂ ಆಗಿದೆ.

ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಮತ್ತು ಸಂಸದ ರಾಹುಲ್ ಗಾಂಧಿ ಅವರನ್ನು ನಿತೀಶ್ ಭೇಟಿಯಾಗಲಿದ್ದಾರೆ.

ಬಿಹಾರದ ಅತಿ ದೀರ್ಘ ಅವಧಿಯ ಮುಖ್ಯಮಂತ್ರಿ ಎನಿಸಿಕೊಂಡಿರುವ ನಿತೀಶ್ ಅವರನ್ನು ವಿರೋಧ ಪಕ್ಷಗಳ ಪ್ರಧಾನಿ ಅಭ್ಯರ್ಥಿ ಎಂದು ಘೋಷಿಸಬೇಕು ಎಂಬ ಹಂಬಲವನ್ನು ಜೆಡಿಯುನ ಹಲವು ಮುಖಂಡರು ಹೊಂದಿದ್ದಾರೆ.

ಎಎಪಿ ಮುಖ್ಯಸ್ಥ ಮತ್ತು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನೂ ನಿತೀಶ್ ಭೇಟಿಯಾಗಲಿದ್ದಾರೆ. ರಾಷ್ಟ್ರ ಮಟ್ಟದಲ್ಲಿ ಬಿಜೆಪಿಗೆ ಎಎಪಿಯೇ ಪರ್ಯಾಯ ಎಂದು ಬಿಂಬಿಸಲು ಕೇಜ್ರಿವಾಲ್ ಪ್ರಯತ್ನ ಮಾಡುತ್ತಿದ್ದಾರೆ.

ಹರಿಯಾಣದ ಮಾಜಿ ಮುಖ್ಯಮಂತ್ರಿ ಓಂಪ್ರಕಾಶ್ ಚೌತಾಲಾ ಅವರನ್ನೂ ನಿತೀಶ್ ಭೇಟಿ ಆಗಲಿದ್ದಾರೆ ಎಂದು ತಿಳಿದು ಬಂದಿದೆ.

ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್, ಜೆಡಿಯು ಅಧ್ಯಕ್ಷ ಲಲನ್ ಸಿಂಗ್, ಸಂಸದೀಯ ಮಂಡಳಿ ಅಧ್ಯಕ್ಷ ಉಪೇಂದ್ರ ಕುಶ್ವಾಹ ಅವರು ಜೆಡಿಯು ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ಶನಿವಾರ ಭಾಗವಹಿಸಿದ್ದರು —ಪಿಟಿಐ ಚಿತ್ರ

ನಿಧನ ವಾರ್ತೆ

ಟಿ.ವಿ. ಶಂಕರ ನಾರಾಯಣನ್

ಚೆನ್ನೈ: ಕರ್ನಾಟಕ ಸಂಗೀತ ಗಾಯಕ ಟಿ.ವಿ.ಶಂಕರನಾರಾಯಣನ್ (77) ಅವರು ಶುಕ್ರವಾರ ಸಂಜೆ ಚೆನ್ನೈನಲ್ಲಿ ನಿಧನರಾದರು. ಅವರಿಗೆ ಪತ್ನಿ, ಪುತ್ರ ಮತ್ತು ಪುತ್ರಿ ಇದ್ದಾರೆ.

ಕರ್ನಾಟಕ ಸಂಗೀತರ ಮೇರು ಶಿಖರ ಎನಿಸಿದ್ದ ಮದುರೈ ಮಣಿ ಅಯ್ಯರ್ ಶೈಲಿಯಲ್ಲಿ ಹಾಡುತ್ತಿದ್ದ ಶಂಕರ ನಾರಾಯಣನ್ ಅವರು 2003 ರಲ್ಲಿ ಪದ್ಮಭೂಷಣ ಪ್ರಶಸ್ತಿಗೆ ಭಾಜನರಾಗಿದ್ದರು.

ಅವರಿಗೆ ಸಂಗೀತ ಕಲಾನಿಧಿ, ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿಗಳೂ ಸಂದಿವೆ.

CENTRAL INSTITUTE OF PETROCHEMICALS ENGINEERING AND TECHNOLOGY (CIPET)
CENTRE FOR SKILLING & TECHNICAL SUPPORT (CSTS)
Department of Chemicals & Petrochemicals, Ministry of Chemicals & Fertilizers, Government of India
No.437/A, Hebbal Industrial Area, Mysuru - 570 016. Phone: +91-821-2511903 Mobile: +91-9466146001
Email: mysore@cipet.gov.in / cipetmys1@gmail.com Website: https://www.cipet.gov.in/

Advertisement No: CIPET/MYS/ADMIN/CIPET_Contr./01 Date: 04.09.2022

ADVERTISEMENT FOR ENGAGEMENT FOR LIMITED OR FIXED PERIOD ON CONTRACT AS ASSISTANT PLACEMENT CONSULTANT & LECTURER IN CIPET

Central Institute of Petrochemicals Engineering & Technology (CIPET) (formerly known as Central Institute of Plastics Engineering & Technology(CIPET)) is a premier National Institution in the field of Polymer Science & Technology with a focus on Academic, Technology Support and Research & Application Development. CIPET also offers AICTE approved Diploma, Post Diploma & Post Graduation Diploma Programs in the fields of Plastics Technology, Mould Technology, Mould Design with CAD/ CAM and Plastics Processing & Testing.
CIPET: CSTS – Mysuru is in search of dynamic, result oriented personnel in the area of Academics on Contract basis as detailed below:

Sl.No.	Position	Remuneration payable per month	No. of positions
1.	Assistant Placement Consultant	Rs. 35,000/- (Consolidated)	01
2.	Lecturer (Physics)	Rs. 30,000/- to Rs. 35,000/-	01
3.	Lecturer (Mathematics)	Rs. 30,000/- to Rs. 35,000/-	01

For detailed information on eligibility criteria, educational qualifications & experience, general terms and conditions and application form etc., please visit our website: **www.cipet.gov.in**
Applications in the prescribed form along with necessary enclosures should be sent in a sealed envelope to **The Director & Head, CIPET: CSTS – Mysuru, No.437/A, Hebbal Industrial Area, Mysuru - 570 016** by Registered Post / Speed Post. **The closing/ last date of receipt of application is 19.09.2022.** The candidate should clearly mention **"Advertisement No.: CIPET/MYS/ADMIN/CIPET_Contr./01"** and **"Name of the position applied with discipline"** in BOLD letters on top of the envelope.
Sd/
Director & Head, CIPET:CSTS – Mysuru

ಯೋಗಿ ತವರು: ಮುಸ್ಲಿಂ ಹೆಸರಿನ ವಾರ್ಡ್‌ಗಳಿಗೆ ಮರುನಾಮಕರಣ

ಪ್ರಜಾವಾಣಿ ವಾರ್ತೆ

ಲಖನೌ: ಉತ್ತರ ಪ್ರದೇಶದ ಮುಖ್ಯಮಂತ್ರಿಯೋಗಿ ಆದಿತ್ಯನಾಥ್ ಅವರ ತವರು ನಗರ ಗೋರಖ್‌ಪುರದಲ್ಲಿ ಸುಮಾರು 12ರಷ್ಟು ವಾರ್ಡ್‌ಗಳಿಗೆ ಹಿಂದೂ ನಾಯಕರು, ಸಂತರು ಮತ್ತು ಕವಿಗಳ ಹೆಸರುಗಳೊಂದಿಗೆ ಮರುನಾಮಕಣ ಮಾಡಲಾಗಿದೆ.

ಗೋರಖ್‌ಪುರ ಮಹಾನಗರ ಪಾಲಿಕೆ ಶನಿವಾರ ಹೊಸ ಹೆಸರುಗಳೊಂದಿಗೆ ವಾರ್ಡ್‌ಗಳ ಪಟ್ಟಿಯನ್ನು ಬಿಡುಗಡೆ ಮಾಡಿದೆ. ಮಿಯಾನ್ ಬಜಾರ್, ಅಲಿ ನಗರ, ಮುಫ್ತಿಪುರ್, ತುರ್ಕಮೆನ್‌ಪುರ್, ಇಸ್ಮಾಯಿಲ್‌ಪುರ, ರಸೂಲ್‌ಪುರ್, ಹುಮಾಯೂನ್‌ಪುರ್ ಉತ್ತರ, ದಾವೂದ್ ಪುರ್, ಇಲಾಹಿ ಬಾಗ್, ಕ್ವಾಜಿಪುರ್ ಖುರ್ದ್ ಮತ್ತಿತರ ವಾರ್ಡ್‌ಗಳಿಗೆ ಮರು ನಾಮಕರಣ ಮಾಡಲಾಗಿದೆ.

ಮುಸ್ಲಿಂ ಹೆಸರಿನ ಕೆಲ ವಾರ್ಡ್‌ಗಳಿಗೆ ಸ್ವಾತಂತ್ರ್ಯ ಹೋರಾಟಗಾರರಾದ ಸರ್ದಾರ್ ಭಗತ್ ಸಿಂಗ್ ಮತ್ತು ರಾಮ್ ಪ್ರಸಾದ್ ಬಿಸ್ಮಿಲ್, ಭಗವಾನ್ ಹನುಮಾನ್, ದಿಗ್ವಿಜಯ್ ನಾಥ್ ಎಂದು ಮರು ನಾಮಕರಣ ಮಾಡಲಾಗಿದೆ. ದಾವೂದ್ ಪುರ್ ವಾರ್ಡ್ ಅನ್ನು ಪ್ರಸಿದ್ಧ ಉರ್ದು ಕವಿ ರಘುಪತಿ ಸಹಾಯ್ ಅಲಿಯಾಸ್ ಫಿರಾಕ್ ಗೋರಖಪುರಿ ಎಂದು ಹೆಸರಿಡಲಾಗಿದೆ.

ವಾರ್ಡ್‌ಗಳ ಮರುನಾಮಕರಣದ ಹಿಂದೆ ಯಾವುದೇ 'ಉದ್ದೇಶ' ಇದೆ ಎಂಬ ಸಮರ್ಥನೆಯನ್ನು ಜಿಲ್ಲಾ ಅಧಿಕಾರಿಗಳು ತಿರಸ್ಕರಿಸಿದರು. 'ಹಿಂದೂ ಹೆಸರಿನ ಹಲವು ವಾರ್ಡ್‌ಗಳಿಗೆ ಮರು ನಾಮಕರಣ ಮಾಡಲಾಗಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಬದೌನ್ ಜಾಮಾ ಮಸೀದಿ ಜಾಗದಲ್ಲಿ ಶಿವ ದೇಗುಲ'

ಬದೌನ್ (ಉತ್ತರ ಪ್ರದೇಶ)(ಪಿಟಿಐ): ಇಲ್ಲಿನ ಜಾಮಾ ಮಸೀದಿ ಶಂಸಿಯು ಶಿವನ ದೇಗುಲವಾಗಿತ್ತು. ಹೀಗಾಗಿ ಸನಾತನ ಧರ್ಮ ಪಾಲಕರಿಗೆ ಇಲ್ಲಿ ಪೂಜೆ ಸಲ್ಲಿಸಲು ಅವಕಾಶ ನೀಡಬೇಕೆಂದು ಕೋರಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಲಾಗಿದೆ ಎಂದು ವಕೀಲರು ಶನಿವಾರ ತಿಳಿಸಿದ್ದಾರೆ.

'ಕಟ್ಟಡ ಜಾಮಾ ಮಸೀದಿ ಅಲ್ಲ, ನೀಲಕಂಠ ಮಹದೇವ ಮಹಾರಾಜ್ ಅವರ ಇಶಾನ್ ಮಂದಿರ' ಎಂದು ಅರ್ಜಿದಾರರ ಪರ ವಕೀಲರು ತಿಳಿಸಿದ್ದಾರೆ.

ಅಲ್ಲದೆ ಈ ಪ್ರದೇಶದಲ್ಲಿ ಸಮೀಕ್ಷೆ ನಡೆಸಲು ಆಯೋಗವೊಂದನ್ನು ರಚಿಸುವಂತೆ ಕೋರಿ ನ್ಯಾಯಾಲಯದಲ್ಲಿ ಪ್ರತ್ಯೇಕ ಅರ್ಜಿ ಸಲ್ಲಿಸಲಾಗಿದೆ.

ಐಸಿಯುನಲ್ಲಿ ಒತ್ತಾಯದ ನೃತ್ಯ: ಟೀಕೆ

ಕಟಕ್ (ಒಡಿಶಾ): ಅನಾರೋಗ್ಯಕ್ಕೀಡಾಗಿ ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆ ಕಮಲಾ ಪೂಜಾರಿ ಅವರಿಂದ ಸಾಮಾಜಿಕ ಕಾರ್ಯಕರ್ತೆಯೊಬ್ಬರು ಬಲವಂತವಾಗಿ ನೃತ್ಯ ಮಾಡಿಸಿದ್ದಾರೆ. ಈ ಕುರಿತ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗಿದ್ದು, ಕಾರ್ಯಕರ್ತೆಯ ವರ್ತನೆಗೆ ವ್ಯಾಪಕ ಟೀಕೆ ವ್ಯಕ್ತವಾಗಿದೆ.

2019ರಲ್ಲಿ ಪದ್ಮಶ್ರೀ ಪ್ರಶಸ್ತಿಗೆ ಪಾತ್ರರಾಗಿರುವ ಬುಡಕಟ್ಟು ಸಮುದಾಯದ ಕಮಲಾ ಪೂಜಾರಿ ಅವರು, ಇತ್ತೀಚೆಗೆ ತೀವ್ರ ಅನಾರೋಗ್ಯದ ಕಾರಣ ಕಟಕ್‌ನ ಸರ್ಕಾರಿ ಆಸ್ಪತ್ರೆಗೆ ದಾಖಲಾಗಿದ್ದರು. ಅವರಿಗೆ ತುರ್ತು ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿತ್ತು. ಆಗ ಅಲ್ಲಿಗೆ ಬಂದಿದ್ದ ಸಾಮಾಜಿಕ ಕಾರ್ಯಕರ್ತೆ ಮಮತಾ ಬೆಹೆರಾ ಎಂಬುವವರು ಕಮಲಾ ಅವರಿಂದ ನೃತ್ಯ ಮಾಡಿಸಿ, ತಾವೂ ನರ್ತಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಕಮಲಾ ಪೂಜಾರಿ, 'ಹಾಗೆ ನೃತ್ಯ ಮಾಡಲು ನನಗೆ ಇಷ್ಟವಿರಲಿಲ್ಲ. ಆದರೆ ಅವರು (ಬೆಹೆರಾ) ನನ್ನನ್ನು ಒತ್ತಾಯಿಸಿದರು. ನಾನು ಪದೇ ಪದೇ ನಿರಾಕರಿಸಿದೆ. ಆದರೆ ಅವರು ಕೇಳಲಿಲ್ಲ. ಕ್ಯಾಮೆರಾ ಮುಂದೆ ಧೆಮ್ಸಾ ನೃತ್ಯ ಮಾಡುವಂತೆ ಕೇಳಿಕೊಂಡರು. ನಾನು ಅನಾರೋಗ್ಯದಿಂದ ಬಳಲುತ್ತಿದ್ದೆ' ಎಂದಿದ್ದಾರೆ.

'ಕಮಲಾ ಪೂಜಾರಿ ಅವರು ಚಿಕಿತ್ಸೆಗಾಗಿ ಆಸ್ಪತ್ರೆಯಲ್ಲಿದ್ದಾಗ ಬಲವಂತವಾಗಿ ನೃತ್ಯ ಮಾಡಿಸಿರುವುದು ದುರದೃಷ್ಟಕರ. ನಾವು ವಿಷಯದ ಬಗ್ಗೆ ಮತ್ತಷ್ಟು ವಿವರಣೆ ಪಡೆಯುತ್ತೇವೆ' ಎಂದು ಕೊರಾಪುಟ್‌ನ ಜಿಲ್ಲಾಡಳಿತದ ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ. 'ನೃತ್ಯ ಮಾಡಿಸಿದ್ದರ ಹಿಂದೆ ಯಾವುದೇ ದುರುದ್ದೇಶವಿರಲಿಲ್ಲ. ಮಂಕಾಗಿದ್ದ ಅವರಲ್ಲಿ ಚೈತನ್ಯ ತುಂಬಲು ಹಾಗೆ ಮಾಡಿದ್ದೆ' ಎಂದು ಬೆಹೆರಾ ಹೇಳಿಕೊಂಡಿದ್ದಾರೆ.

ಪುರಸಭಾ ಕಾರ್ಯಾಲಯ, ಮಳವಳ್ಳಿ
ಸಂಖ್ಯೆ:ಪುಕಾಮ/15ನೇ ಹಕಾಯೋ/ಟೆಂಡರ್–08/2022–23 ದಿನಾಂಕ:01.09.2022

ಇ–ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಈ ಮೂಲಕ ಪ್ರಚುರಪಡಿಸುವುದೇನೆಂದರೆ, ಮಳವಳ್ಳಿ ಪುರಸಭಾ ವ್ಯಾಪ್ತಿಯಲ್ಲಿ 2022–23 ನೇ ಸಾಲಿನ 15ನೇ ಹಣಕಾಸು ಸಾಮಾನ್ಯ ಮೂಲ ಅನುದಾನದಡಿಯಲ್ಲಿನ ಈ ಕೆಳಕಂಡಂತೆ ಕೈಗೊಳ್ಳಲಿರುವ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧ್ಯಾದೇಶ 1999 ಮತ್ತು ನಿಯಮಗಳು 2000ದಂತೆ, ಕರ್ನಾಟಕ ಲೋಕೋಪಯೋಗಿ ಇಲಾಖೆ ಬೆಂಗಳೂರು ಮತ್ತು ಇ–ಪ್ರೊಕ್ಯೂರ್‌ಮೆಂಟ್, ಬೆಂಗಳೂರುರವರಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರುಗಳಿಂದ ಐಟಂವಾರು ಟೆಂಡರ್‌ನ್ನು KW-4 ನಿಯಮಗಳಂತೆ ಆಹ್ವಾನಿಸಲಾಗಿದ್ದು, ಆಸಕ್ತ ಗುತ್ತಿಗೆದಾರರು ತಮ್ಮ ದರ ನಮೂದಿಸಿದ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಈ ಕೆಳಗೆ ನಿಗಧಿಪಡಿಸಿದ ಅವಧಿಯೊಳಗೆ ಆನ್‌ಲೈನ್‌ನಲ್ಲಿ ಸಲ್ಲಿಸತಕ್ಕದ್ದು. ಕಾಮಗಾರಿಗಳ ವಿವರ ಹಾಗೂ ಟೆಂಡರ್ ಪ್ರಕಟಣೆ ವಿವರಗಳನ್ನು ಟೆಂಡರ್ ಬುಲೆಟಿನ್, ಜಿಲ್ಲಾ ನಗರಾಭಿವೃದ್ಧಿ ಕೋಶ ಹಾಗೂ ಪುರಸಭೆ ಮಳವಳ್ಳಿ ಕಛೇರಿ ಸೂಚನಾ ಫಲಕದಲ್ಲಿ ಮತ್ತು ವೆಬ್‌ಸೈಟ್ **www.malavallitown.mrc.gov.in** ನಲ್ಲಿ ವೀಕ್ಷಿಸಬಹುದು. **Visit:https://www.eproc.karnataka.gov.in/.** (ಮ್ಯಾನುಯೆಲ್ ಟೆಂಡರ್‌ಗಳನ್ನು ಸ್ವೀಕರಿಸಲಾಗುವುದಿಲ್ಲ) (1) ಟೆಂಡರ್ ಅಪ್‌ಲೋಡ್ ಮಾಡುವ ದಿನಾಂಕ : **01.09.2022 ರಿಂದ.** (2) ಪ್ರೀ ಬಿಡ್ ಮೀಟಿಂಗ್ ದಿನಾಂಕ ಹಾಗೂ ಸ್ಥಳ : **09.09.2022ರ ಬೆಳಿಗ್ಗೆ 11.00 ಗಂಟೆಗೆ, ಪುರಸಭೆ ಕಛೇರಿ, ಮಳವಳ್ಳಿ.** (3) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **17.09.2022 upto 5.00 pm.** (4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **19.09.2022 upto 11.00 am.** (5) ಆರ್ಥಿಕ ಬಿಡ್ ತೆರೆಯುವ ದಿನಾಂಕ : **22.09.2022 at 11.00 am or any other convenient date notified later.** (6) ಟೆಂಡರ್ ಫಾರಂ ಬೆಲೆ ರೂ.ಗಳಲ್ಲಿ : **ಇ–ಪೋರ್ಟಲ್‌ನಲ್ಲಿರುವಂತೆ.** (7) ಕಾಮಗಾರಿ ಪೂರ್ಣಗೊಳಿಸುವ ಅವಧಿ : 180 ದಿನಗಳು (ಮಳೆಗಾಲ ಸೇರಿ). ಕ್ರ. ಸಂ : **01.** ಇ–ಪ್ರೊಕ್ಯೂರ್‌ಮೆಂಟ್ ಇಂಡೆಂಟ್ ನಂ. : **DMA/2022-23/BD/ WORK_INDENT135565.** ಕಾಮಗಾರಿ ವಿವರ : Construction of Processing Shed at SWM Plant near Devalingannapura Malavalli TMC. ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ) : **183.44.** ಇ.ಎಂ.ಡಿ ಮೊತ್ತ ರೂ. : **2,75,000/–.** ಗುತ್ತಿಗೆದಾರರ ದರ್ಜೆ : 3ನೇ ದರ್ಜೆ ಹಾಗೂ ಮೇಲ್ಪಟ್ಟ ಸಿವಿಲ್.

ಸಹಿ/–ಅಧ್ಯಕ್ಷರು, ಪುರಸಭೆ, ಮಳವಳ್ಳಿ ಸಹಿ/–ಮುಖ್ಯಾಧಿಕಾರಿ, ಪುರಸಭೆ, ಮಳವಳ್ಳಿ
ವಾಸಾಸಂಇ/ಸನಿ–ಮಂಡ್ಯ/ಎಂಸಿ&ಎ/317/2022–23

ಸಂಕ್ಷಿಪ್ತ ಸುದ್ದಿ

ಉಗ್ರ ಸಂಘಟನೆಗೆ ಮಾಹಿತಿ ರವಾನೆ: ಮದರಸಾ ಶಿಕ್ಷಕ ಬಂಧನ

ಜಮ್ಮು (ಪಿಟಿಐ): ಪಾಕಿಸ್ತಾನ ಮೂಲದ ಉಗ್ರ ಸಂಘಟನೆಯೊಂದಕ್ಕೆ ಭದ್ರತಾ ವ್ಯವಸ್ಥೆ ಕುರಿತ ಸೂಕ್ಷ್ಮ ಮಾಹಿತಿಗಳನ್ನು ರವಾನಿಸುತ್ತಿದ್ದ ಆರೋಪದ ಮೇಲೆ ಮದರಸಾವೊಂದರ ಶಿಕ್ಷಕನನ್ನು ಜಮ್ಮು ಮತ್ತು ಕಾಶ್ಮೀರದ ಕಿಶ್ತ್ವಾರ್ ಜಿಲ್ಲೆಯಲ್ಲಿ ಬಂಧಿಸಲಾಗಿದೆ ಎಂದು ಅಧಿಕಾರಿಯೊಬ್ಬರು ಶನಿವಾರ ತಿಳಿಸಿದ್ದಾರೆ.

ಬಂಧಿತ ಖಾರಿ ಅಬ್ದುಲ್ ವಹೀದ್ (25) ಮೌಲ್ವಿ ಕೂಡಾ ಹೌದು. ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ ಮತ್ತು ಅಪರಾಧ ಪ್ರಕ್ರಿಯೆ ಸಂಹಿತೆ ಅಡಿ ಆತನ ವಿರುದ್ಧ ಮೊಕದ್ದಮೆ ದಾಖಲಿಸಲಾಗಿದೆ. ಕಾಶ್ಮೀರ್ ಜನ್ಬಾಜ್ ಫೋರ್ಸ್ ಎಂಬ ಉಗ್ರ ಸಂಘಟನೆಗೆ 2020ರ ಡಿಸೆಂಬರ್‌ನಿಂದ ಭದ್ರತಾ ಸ್ಥಾಪನೆ ಕುರಿತು ಮಾಹಿತಿ ನೀಡುತ್ತಿರುವುದಾಗಿ ಆತ ವಿಚಾರಣೆ ವೇಳೆ ಒಪ್ಪಿಕೊಂಡಿದ್ದಾನೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಂಗಾಂಗ ಸಾಗಣೆಗೆ ಡ್ರೋನ್ ತಂತ್ರಜ್ಞಾನದ ಮಾದರಿ ಅನಾವರಣ

ಚೆನ್ನೈ (ಪಿಟಿಐ): ಆಸ್ಪತ್ರೆಗಳಲ್ಲಿ ತ್ವರಿತ ಅಂಗಾಂಗ ಕಸಿ ಮಾಡಲು ಮಾನವ ಅಂಗಾಂಗಗಳನ್ನು ಡ್ರೋನ್ ಮೂಲಕ ಸಾಗಿಸುವ ದೇಶದ ಮೊದಲ ಮಾದರಿಯನ್ನು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರು ಶನಿವಾರ ಇಲ್ಲಿ ಅನಾವರಣಗೊಳಿಸಿದರು.

ಈ ಡ್ರೋನ್‌ನಿಂದ ವಿಮಾನನಿಲ್ದಾಣ ಅಥವಾ ಒಂದು ಸ್ಥಳದಿಂದ 20 ಕಿ.ಮೀ.ದೂರದವರೆಗೆ ಅಂಗಾಂಗ ಹೊಂದಿರುವ ಪೆಟ್ಟಿಗೆಯನ್ನು ಸಾಗಿಸುವುದು ಸಾಧ್ಯವಿದೆ ಎಂದು ಈ ಡ್ರೋನ್ ಮಾದರಿ ಅಭಿವೃದ್ಧಿಪಡಿಸಿದ ಎಂಜಿಎಂ ಹೆಲ್ತ್‌ಕೇರ್‌ನ ನಿರ್ದೇಶಕ ಡಾ.ಪ್ರಶಾಂತ್ ರಾಜಗೋಪಾಲನ್ ಹೇಳಿದ್ದಾರೆ. ನಗರ ಮೂಲದ ಡ್ರೋನ್ ಕಂಪನಿಯೊಂದು ಆಸ್ಪತ್ರೆಯೊಂದಿಗೆ ಕೈಜೋಡಿಸಿ ಈ ಯೋಜನೆ ಸಿದ್ಧಪಡಿಸಿದೆ.

ದೆಹಲಿ: ಇಂದು ಕಾಂಗ್ರೆಸ್ ಪ್ರತಿಭಟನೆ

ನವದೆಹಲಿ (ಪಿಟಿಐ): ಬೆಲೆ ಏರಿಕೆ, ನಿರುದ್ಯೋಗ ಮತ್ತು ಅಗತ್ಯ ವಸ್ತುಗಳ ಮೇಲಿನ ಜಿಎಸ್‌ಟಿ ಹೆಚ್ಚಳ ಖಂಡಿಸಿ ಬಿಜೆಪಿ ಸರ್ಕಾರದ ವಿರುದ್ಧ ಭಾನುವಾರ ದೆಹಲಿಯ ರಾಮಲೀಲಾ ಮೈದಾನದಲ್ಲಿ ಕಾಂಗ್ರೆಸ್ ಪ್ರತಿಭಟನೆ ನಡೆಸಲಿದೆ.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮತ್ತು ಪಕ್ಷದ ಹಲವು ನಾಯಕರು 'ಮೆಹಂಗಾಯಿ ಪರ್ ಹಲ್ಲಾ ಬೋಲ್' ರ‍್ಯಾಲಿ ಉದ್ದೇಶಿಸಿ ಮಾತನಾಡಲಿದ್ದಾರೆ. ದೆಹಲಿ, ಹರಿಯಾಣ, ಉತ್ತರ ಪ್ರದೇಶ ಹಾಗೂ ದೇಶದ ಇತರೆ ಭಾಗಗಳ ಪಕ್ಷದ ಕಾರ್ಯಕರ್ತರು ಭಾಗವಹಿಸುವರು.

ಇದೇ 7ರಂದು ಪ್ರಾರಂಭವಾಗುವ 'ಭಾರತ ಒಗ್ಗೂಡಿಸು' ಯಾತ್ರೆ ಪೂರ್ವಭಾವಿಯಾಗಿ ಈ ರ‍್ಯಾಲಿ ಆಯೋಜಿಸಲಾಗಿದೆ.

ನವೋದಯ ವಿದ್ಯಾಲಯ ಸಮಿತಿ
(ಶಿಕ್ಷಣ ಸಚಿವಾಲಯದ ಅಧೀನ ಸ್ವಾಯತ್ತ ಸಂಸ್ಥೆ)
ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ವಿಭಾಗ, ಭಾರತ ಸರ್ಕಾರ
Azadi Ka Amrit Mahotsav

9ನೇ ತರಗತಿಯಲ್ಲಿ ಖಾಲಿ ಇರುವ ಸ್ಥಾನಗಳಿಗೆ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ. (2023–24)

2023–2024 ರ ಸಾಲಿನ 9ನೇ ತರಗತಿಯಲ್ಲಿ ಖಾಲಿ ಇರುವ ಸ್ಥಾನಗಳಿಗೆ ನವೋದಯ ವಿದ್ಯಾಲಯ ಸಮಿತಿಯು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸುವ ಆನ್‌ಲೈನ್ ಪೋರ್ಟಲ್ 02ನೇ ಸೆಪ್ಟೆಂಬರ್ 2022 ರಿಂದ ತೆರೆಯಲಾಗುತ್ತದೆ. ಅರ್ಜಿಗಳನ್ನು ನವೋದಯ ವಿದ್ಯಾಲಯ ಸಮಿತಿಯ ಜಾಲತಾಣ **www.navodaya.gov.in OR www.nvsadmissionclassnine.in** ಮೂಲಕ ಉಚಿತವಾಗಿ ಆನ್‌ಲೈನ್ ಮೂಲಕ ಸಲ್ಲಿಸಬಹುದು.

ಆನ್‌ಲೈನ್ ಅರ್ಜಿ ಸಲ್ಲಿಸುವ ಪ್ರಕ್ರಿಯೆ ಆರಂಭ **02–09–2022** → ಆನ್‌ಲೈನ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ **15–10–2022** → ಆಯ್ಕೆ ಪರೀಕ್ಷೆಯ ದಿನಾಂಕ **11–02–2023**

ಸಾಮಾನ್ಯ ಲಕ್ಷಣಗಳು
- ಜಿಲ್ಲೆಗೊಂದರಂತೆ ಇರುವ ಸಹ ಶಿಕ್ಷಣ ವಸತಿ ಶಾಲೆ
- ಬಾಲಕ–ಬಾಲಕಿಯರಿಗೆ ಪ್ರತ್ಯೇಕ ವಸತಿ ನಿಲಯಗಳು
- ಉಚಿತ ಊಟ ವಸತಿಯೊಂದಿಗೆ ಶಿಕ್ಷಣ ವಲಸೆ ನೀತಿಯ ಮೂಲಕ ವಿಶಾಲ ಸಾಂಸ್ಕೃತಿಕ ವಿನಿಮಯ
- ಕ್ರೀಡೆ ಮತ್ತು ಆಟೋಟಗಳಿಗೆ ಪ್ರೋತ್ಸಾಹ
- ಎನ್.ಸಿ.ಸಿ., ಸ್ಕೌಟ್ಸ್&ಗೈಡ್ಸ್ ಮತ್ತು ಎನ್.ಎಸ್.ಎಸ್.

ವಿಶೇಷ ಲಕ್ಷಣಗಳು
- ಉತ್ತಮ ಗುಣಮಟ್ಟದ ಶಿಕ್ಷಣಕ್ಕೆ ಒತ್ತು ನೀಡಲಾಗಿದೆ ಇದರ ಪರಿಣಾಮವಾಗಿ;
- 2021ರ JEE MAIN ನಲ್ಲಿ ಪರೀಕ್ಷೆಗೆ ಹಾಜರಾದ 10247 ವಿದ್ಯಾರ್ಥಿಗಳಲ್ಲಿ 4292 (41.88%) ವಿದ್ಯಾರ್ಥಿಗಳು ಅರ್ಹತೆ ಪಡೆದಿದ್ದಾರೆ.
- 2021ರ JEE Advanced ನಲ್ಲಿ ಪರೀಕ್ಷೆಗೆ ಹಾಜರಾದ 2770 ವಿದ್ಯಾರ್ಥಿಗಳಲ್ಲಿ 1121(40.47%) ವಿದ್ಯಾರ್ಥಿಗಳು ಅರ್ಹತೆ ಪಡೆದಿದ್ದಾರೆ
- 2021ರ NEET ನಲ್ಲಿ ಪರೀಕ್ಷೆಗೆ ಹಾಜರಾದ 17520 ವಿದ್ಯಾರ್ಥಿಗಳಲ್ಲಿ 14025 (80.05%) ವಿದ್ಯಾರ್ಥಿಗಳು ಅರ್ಹತೆ ಪಡೆದಿದ್ದಾರೆ
- 10ನೇ ಮತ್ತು 12ನೇ ತರಗತಿ ಪರೀಕ್ಷೆಯ ಫಲಿತಾಂಶ (2021–22): 10ನೇ ತರಗತಿ : 99.71% 12ನೇ ತರಗತಿ : 98.93%

ಸರ್ಕಾರಿ ಅಥವಾ ಸರ್ಕಾರದಿಂದ ಮಾನ್ಯತೆ ಪಡೆದಿರುವ ಶಾಲೆಯಲ್ಲಿ 8ನೇ ತರಗತಿಯಲ್ಲಿ 2022–23ನೇ ಶೈಕ್ಷಣಿಕ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ಹಾಗೂ ಪ್ರವೇಶ ಬಯಸುವ ವಿದ್ಯಾರ್ಥಿಗಳು ಆಯಾ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಜನವಿಗಳಿಗೆ ನೋಂದಾಯಿಸಲು ಅರ್ಹರಾಗಿರುತ್ತಾರೆ. ಅರ್ಜಿ ಸಲ್ಲಿಸುವ ಅಭ್ಯರ್ಥಿ 01.05.2008 ರಿಂದ 30.04.2010 ರ (ಎರಡೂ ದಿನಗಳೂ ಸೇರಿ) ಒಳಗೆ ಜನಿಸಿರಬೇಕು. ಇದು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಇತರ ಹಿಂದುಳಿದ ವರ್ಗ ಸಹಿತ ಎಲ್ಲಾ ವರ್ಗಗಳ ಅಭ್ಯರ್ಥಿಗಳಿಗೂ ಅನ್ವಯಿಸುತ್ತದೆ.
ಇನ್ನೂ ಹೆಚ್ಚಿನ ವಿವರಗಳಿಗಾಗಿ ಅಧಿಸೂಚನೆ ಪರೀಕ್ಷಾ ಮಾದರಿಯನ್ನು ಒಳಗೊಂಡಂತೆ ಜವಾಹರ ನವೋದಯ ವಿದ್ಯಾಲಯಗಳಲ್ಲಿ ಖಾಲಿ ಇರುವ ಸ್ಥಾನಗಳ ಲಭ್ಯತೆಯ ವಿವರಗಳನ್ನು ನವೋದಯ ವಿದ್ಯಾಲಯ ಸಮಿತಿಯ ಜಾಲತಾಣ **www.navodaya.gov.in** ನಲ್ಲಿ ನೋಡಬಹುದು ಅಥವಾ ಆಯಾ ಜಿಲ್ಲೆಯ ಜವಾಹರ ನವೋದಯ ವಿದ್ಯಾಲಯದ ಪ್ರಾಚಾರ್ಯರನ್ನು ಸಂಪರ್ಕಿಸಬಹುದು.
ನವೋದಯ ವಿದ್ಯಾಲಯ ಸಮಿತಿಯಿಂದ ನೀಡಲಾಗಿದೆ.

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ),
ಡಾ. ಎಂ.ಹೆಚ್. ಮರಿಗೌಡ ರಸ್ತೆ, ಬೆಂಗಳೂರು–560 029.
ದೂರವಾಣಿ: 91-80-26560722 / 26560723 / 66697999 E-mail: kidwai@nic.in
No.KMIO/SME(1)/Tender/M.Equip/350/2022-23 Date: 02.09.2022

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಈ ಕೆಳಗಿನ ವೈದ್ಯಕೀಯ ಸಲಕರಣೆಗಳ ಪೂರೈಕೆಗಾಗಿ ದ್ವಿ–ಲಕೋಟೆ ಪದ್ಧತಿಯಲ್ಲಿ ಆನ್‌ಲೈನ್ ಮುಖಾಂತರ ಟೆಂಡರುಗಳನ್ನು ಆಹ್ವಾನಿಸಲಾಗಿದೆ.

Sl. No.	Tender No. & Date	Name of the Equipment / Works
1.	No. KMIO/SME(1)/Tender/M. Equip/350/2022-23 dated: 02.09.2022.	Procurement of ABG Machines – 2 Nos. to KMIO.,
2.	No. KMIO/SME(1)/Tender/CW/351/2022-23 dated: 02.09.2022.	Construction of Connecting Bridge between Infosys OPD & Sri. Manjunatheswara Block at KMIO.,
3.	No. KMIO/SME(1)/Tender/CW/352/2022-23 dated: 02.09.2022.	Conversion of Old Medical OPD to Rooms for Resident Medical Officer, Nursing Superintendent Gr.I, II & Staff Nurses, Public Relations Officer Section at KMIO.,
4.	No. KMIO/SME(1)/Tender/CW/353/2022-23 dated: 02.09.2022.	Construction of Faculty Halls for Micro Biology & Biochemistry Department at Terrace Floor of Main Block at KMIO.

ಆನ್‌ಲೈನ್‌ನಲ್ಲಿ ಬಿಡ್ ದಾಖಲೆಗಳ ಲಭ್ಯತೆ ದಿನಾಂಕ: **06.09.2022** ರಿಂದ **05.10.2022.** ಬಿಡ್ಡರ್‌ಗಳು ಬಿಡ್ ದಾಖಲೆಗಳನ್ನು ವೆಬ್‌ಸೈಟ್: **https://eproc.karnataka. gov.in**ನಲ್ಲಿ ನೋಡಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಶುಲ್ಕ **ರೂ.500/–**ನ್ನು ಪಾವತಿಸಿ, ಬಿಡ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಬಹುದಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಬಿಡ್ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ **05.10.2022** ರಂದು ಮಧ್ಯಾಹ್ನ **3:00 p.m.** ಗಂಟೆಗೆ. ಟೆಂಡರ್ ಸ್ವೀಕರಿಸುವ ಪ್ರಾಧಿಕಾರವು ಯಾವುದೇ ಕಾರಣ ನೀಡದೆ ಟೆಂಡರನ್ನು ಸ್ವೀಕರಿಸುವ/ತಿರಸ್ಕರಿಸುವ/ರದ್ದುಪಡಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ.

ಸಹಿ/–
ನಿರ್ದೇಶಕರು
DIPR/CP/AAPL/RO2050/22-23

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಎರಡಂಕಿ ಬೆಳವಣಿಗೆ ನಿರ್ಮಲಾ ವಿಶ್ವಾಸ

ಹೈದರಾಬಾದ್ (ಪಿಟಿಐ): ಪ್ರಸಕ್ತ ಹಣಕಾಸು ವರ್ಷದಲ್ಲಿ ದೇಶದ ಒಟ್ಟು ಆಂತರಿಕ ಉತ್ಪಾದನೆಯು (ಜಿಡಿಪಿ) ಎರಡಂಕಿ ಬೆಳವಣಿಗೆ ಕಾಣಲಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಬೇರೆ ದೇಶಗಳಿಗೆ ಹೋಲಿಸಿದರೆ ಭಾರತದ ಸ್ಥಿತಿ ಉತ್ತಮವಾಗಿದೆ. ಅಗತ್ಯ ಇರುವ ವಲಯಗಳಿಗೆ ಸರ್ಕಾರ ನೆರವಾಗಲಿದೆ. ಆ ಮೂಲಕ ಆರ್ಥಿಕ ಬೆಳವಣಿಗೆಗೆ ಉತ್ತೇಜನ ನೀಡಲಾಗುವುದು ಎಂದು ಹೇಳಿದ್ದಾರೆ.

ಆರ್ಥಿಕ ಹಿಂಜರಿತದ ಯಾವುದೇ ಸಾಧ್ಯತೆಯೂ ಇಲ್ಲ ಎಂದೂ ತಿಳಿಸಿದ್ದಾರೆ. ಮೊದಲ ತ್ರೈಮಾಸಿಕದಲ್ಲಿ ಜಿಡಿಪಿ ಶೇ 1.35ರಷ್ಟು ಬೆಳವಣಿಗೆ ಕಂಡಿದೆ.

ಭಾರತ: 5ನೇ ಅತಿದೊಡ್ಡ ಆರ್ಥಿಕತೆ



ನವದೆಹಲಿ (ಪಿಟಿಐ): ಅಂತರರಾಷ್ಟ್ರೀಯ ಹಣಕಾಸು ನಿಧಿಯ (ಐಎಂಎಫ್) ಅಂದಾಜಿನ ಪ್ರಕಾರ, ಭಾರತವು ಜಗತ್ತಿನ ಐದನೇ ಅತಿದೊಡ್ಡ ಆರ್ಥಿಕತೆಯಾಗಿ ಹೊರಹೊಮ್ಮಿದೆ. ಇದರಿಂದಾಗಿ ಇಂಗ್ಲೆಂಡ್ ಆರನೇ ಸ್ಥಾನಕ್ಕೆ ಇಳಿಕೆ ಕಂಡಿದೆ.

ದಶಕದ ಹಿಂದೆ ಭಾರತವು 11ನೇ ಸ್ಥಾನದಲ್ಲಿ ಇದ್ದರೆ, ಇಂಗ್ಲೆಂಡ್ 5ನೇ ಸ್ಥಾನದಲ್ಲಿ ಇತ್ತು.

ಏಪ್ರಿಲ್–ಜೂನ್ ತ್ರೈಮಾಸಿಕದಲ್ಲಿ ಕಂಡಿರುವ ದಾಖಲೆಯ ಜಿಡಿಪಿ ಬೆಳವಣಿಗೆಯಿಂದಾಗಿ ಭಾರತವು ಇಂಗ್ಲೆಂಡ್ ಅನ್ನು ಹಿಂದಿಕ್ಕಿದೆ. ಹೀಗಾಗಿ ಇಂಗ್ಲೆಂಡ್ ಆರನೇ ಸ್ಥಾನಕ್ಕೆ ಇಳಿಕೆ ಕಂಡಿದೆ. ರಾಷ್ಟ್ರೀಯ ಸಾಂಖ್ಯಿಕ ಕಚೇರಿಯ ಅಂಕಿ–ಅಂಶಗಳ ಪ್ರಕಾರ, ಭಾರತದ ಜಿಡಿಪಿಯು ಏಪ್ರಿಲ್–ಜೂನ್ ತ್ರೈಮಾಸಿಕದಲ್ಲಿ ಶೇ 13.5ರಷ್ಟು ಬೆಳವಣಿಗೆ ಕಂಡಿದ್ದು, ಒಂದು ವರ್ಷದಲ್ಲಿಯೇ ಅತ್ಯಂತ ವೇಗದ ಬೆಳವಣಿಗೆ ಇದಾಗಿದೆ.

ಜಗತ್ತಿನ ಅತಿದೊಡ್ಡ ಆರ್ಥಿಕತೆಗಳಲ್ಲಿ ಅಮೆರಿಕ ಮೊದಲ ಸ್ಥಾನದಲ್ಲಿದೆ. ಚೀನಾ, ಜಪಾನ್ ಮತ್ತು ಜರ್ಮನಿ ನಂತರದ ಸ್ಥಾನದಲ್ಲಿವೆ.

ಐಎಂಎಫ್‌ನ ದತ್ತಾಂಶ ಮತ್ತು ವಿನಿಮಯ ದರವನ್ನು ಆಧಾರವಾಗಿ ಇಟ್ಟುಕೊಂಡು ಬ್ಲೂಮ್‌ಬರ್ಗ್ ಸಹ ಭಾರತವು 5ನೇ ಸ್ಥಾನಕ್ಕೆ ಏರಿಕೆ ಎಂದು ಹೇಳಿದೆ. ಭಾರತದ ಆರ್ಥಿಕತೆಯ ಮೌಲ್ಯವು ಮಾರ್ಚ್ ತ್ರೈಮಾಸಿಕದಲ್ಲಿ ₹68.20 ಲಕ್ಷ ಕೋಟಿ ಆಗಿದೆ. ಇದೇ ಅವಧಿಯಲ್ಲಿ ಇಂಗ್ಲೆಂಡ್‌ನ ಆರ್ಥಿಕತೆಯ ಮೌಲ್ಯವು ₹65.11 ಲಕ್ಷ ಕೋಟಿ ಇದೆ ಎಂದು ಬ್ಲೂಮ್‌ಬರ್ಗ್ ವರದಿಯಲ್ಲಿ ತಿಳಿಸಲಾಗಿದೆ.

ಭಾರತವು 2021ರ ಡಿಸೆಂಬರ್‌ನಲ್ಲಿಯೇ ಇಂಗ್ಲೆಂಡ್ ಅನ್ನು ಹಿಂದಿಕ್ಕಿ 5ನೇ ಸ್ಥಾನಕ್ಕೆ ಏರಿದೆ ಎಂದು ಎಸ್‌ಬಿಐನ ಆರ್ಥಿಕ ತಜ್ಞರು ತಿಳಿಸಿದ್ದಾರೆ.

'ಇದೊಂದು ಮಹತ್ವದ ಮೈಲಿಗಲ್ಲು. ಕೆಲವೇ ವರ್ಷಗಳಲ್ಲಿ ನಾವು ಮೂರನೇ ಅತಿದೊಡ್ಡ ಆರ್ಥಿಕತೆ ಆಗಲಿದ್ದೇವೆ' ಎಂದು ವೇದಾಂತ ಸಮೂಹದ ಅಧ್ಯಕ್ಷ ಅನಿಲ್ ಅಗರ್ವಾಲ್ ಟ್ವೀಟ್ ಮಾಡಿದ್ದಾರೆ.

ದೇಶದ ಷೇರುಪೇಟೆಗಳ ವಾರದ ವಹಿವಾಟು ನಕಾರಾತ್ಮಕ ಅಂತ್ಯ

3 ಕಂಪನಿಗಳ ನಷ್ಟ ₹1.22 ಲಕ್ಷ ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಷೇರುಪೇಟೆಗಳ ವಹಿವಾಟು ಸತತ ಎರಡನೇ ವಾರವೂ ನಕಾರಾತ್ಮಕವಾಗಿ ಅಂತ್ಯವಾಗಿದೆ. ಇದರಿಂದಾಗಿ ಷೇರುಪೇಟೆ ನೋಂದಾಯಿತ ಕೆಲವು ಕಂಪನಿಗಳ ಮಾರುಕಟ್ಟೆ ಬಂಡವಾಳ ಮೌಲ್ಯ ಇಳಿಕೆ ಆಗಿದೆ.

ಶುಕ್ರವಾರಕ್ಕೆ ಕೊನೆಗೊಂಡ ವಾರದ ವಹಿವಾಟಿನಲ್ಲಿ ಪ್ರಮುಖ 10 ಕಂಪನಿಗಳ ಪೈಕಿ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ (ಆರ್‌ಐಎಲ್), ಟಿಸಿಎಸ್ ಮತ್ತು ಇನ್ಫೊಸಿಸ್ ಕಂಪನಿಗಳ ಮಾರುಕಟ್ಟೆ ಬಂಡವಾಳ ಮೌಲ್ಯದಲ್ಲಿ ₹1.22 ಲಕ್ಷ ಕೋಟಿ ಇಳಿಕೆ ಕಂಡುಬಂದಿದೆ. ರಿಲಯನ್ಸ್ ಕಂಪನಿಯು ₹60,177 ಕೋಟಿಯಷ್ಟು ಗರಿಷ್ಠ ನಷ್ಟ ಅನುಭವಿಸಿದೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ವಾರದ ವಹಿವಾಟಿನಲ್ಲಿ 31 ಅಂಶ ಇಳಿಕೆ ಕಂಡರೆ, ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 19 ಅಂಶ ಇಳಿಕೆ ಆಗಿದೆ. ಇದಕ್ಕೂ ಹಿಂದಿನ ವಾರವೂ ನಕಾರಾತ್ಮಕ ವಹಿವಾಟು ನಡೆದಿತ್ತು.

ಎಫ್‌ಐಐ ಒಳಹರಿವು: ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ನಾಲ್ಕು ದಿನಗಳ ವಾರದ ವಹಿವಾಟಿನಲ್ಲಿ ಮೂರು ದಿನವೂ ಷೇರುಗಳನ್ನು ಮಾರಾಟ ಮಾಡಿದ್ದರೆ, ಒಂದು ದಿನ ಮಾತ್ರವೇ ಖರೀದಿ ನಡೆಸಿದ್ದಾರೆ. ಮೂರು ದಿನಗಳ ವಹಿವಾಟಿನಲ್ಲಿ ₹2,852 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದು, ಮಂಗಳವಾರ ₹4,166 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ. ಹೀಗಾಗಿ ಒಟ್ಟಾರೆ ಒಳಹರಿವು ₹1,314 ಕೋಟಿ ಆಗಿದೆ.

ಕಂಪನಿಗಳ ಬಂಡವಾಳ ಮೌಲ್ಯ (₹ ಕೋಟಿಗಳಲ್ಲಿ)

ಕಂಪನಿ	ಬಂಡವಾಳ ಮೌಲ್ಯ	ಇಳಿಕೆ/ಏರಿಕೆ
ರಿಲಯನ್ಸ್	17,11,468	60,177 ▼
ಟಿಸಿಎಸ್	11,45,155	33,663 ▼
ಎಚ್‌ಡಿಎಫ್‌ಸಿ ಬ್ಯಾಂಕ್	8,26,605	12,653 ▲
ಹಿಂದುಸ್ತಾನ್ ಯೂನಿಲಿವರ್	6,11,692	7,612 ▲
ಇನ್ಫೊಸಿಸ್	6,11,339	29,012 ▼
ಐಸಿಐಸಿಐ ಬ್ಯಾಂಕ್	6,07,352	1,022 ▲
ಎಸ್‌ಬಿಐ	4,78,760	11,289 ▲
ಎಚ್‌ಡಿಎಫ್‌ಸಿ	4,44,052	9,408 ▲
ಬಜಾಜ್ ಫೈನಾನ್ಸ್	4,35,346	7,740 ▲
ಅದಾನಿ ಟ್ರಾನ್ಸ್‌ಮಿಷನ್	4,30,842	12,493 ▲

ಮಾಹಿತಿ: ಬಿಎಸ್‌ಇ, ಕೆಬಿಕೆ ಗ್ರಾಫಿಕ್ಸ್

ಕಚ್ಚಾ ತೈಲ ದರ ಇಳಿಕೆ

ವಾರದ ವಹಿವಾಟಿನಲ್ಲಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಒಂದು ಬ್ಯಾರಲ್‌ಗೆ 8.2 ಡಾಲರ್‌ನಷ್ಟು ಇಳಿಕೆ ಕಂಡಿದ್ದು, 94.22 ಡಾಲರ್‌ಗೆ ತಲುಪಿದೆ.

ಮಂದಗತಿಯ ಆರ್ಥಿಕ ಬೆಳವಣಿಗೆ ಮತ್ತು ಆರ್ಥಿಕ ಹಿಂಜರಿತದ ಆತಂಕದಿಂದಾಗಿ ತೈಲ ದರ ಇಳಿಕೆ ಕಂಡಿದೆ.

ಒಪೆಕ್ + ದೇಶಗಳು ಸೋಮವಾರ ಸಭೆ ನಡೆಸಲಿದ್ದು, ತೈಲ ಉತ್ಪಾದನೆಯ ಪ್ರಮಾಣವನ್ನು ನಿರ್ಧರಿಸಲಿವೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಸವಿನೆನಪು

10ನೇ ವರ್ಷದ ಸ್ಮರಣೆ 04.09.2022

ಎಸ್. ದೊರೈ ರಾಜು IAS (Retd)

ನೀವು ಯಾವಾಗಲೂ ನಮ್ಮ ಹೃದಯದಲ್ಲಿ ವಾಸಿಸುತ್ತೀರಿ
ನಿಮ್ಮ ಪ್ರೀತಿಯ ಧರ್ಮಪತ್ನಿ, ಮಕ್ಕಳು ಮತ್ತು ಕುಟುಂಬದವರು

ನಿಧನ

ರೇಖಾ ಕೆ.
(ಜನನ: 15.05.1986 ● ಮರಣ: 29.08.2022)
ನೀವು ಎಂದೆಂದಿಗೂ ನಮ್ಮ ಹೃದಯದಲ್ಲಿ ವಾತ್ಸಲ್ಯಮಯ ತಾಯಿಯಾಗಿ, ಸಮರ್ಪಿತ ಮಡದಿಯಾಗಿ ಮತ್ತು ಅನುರಾಗಭರಿತ ಮಹಿಳೆಯಾಗಿ ಶಾಶ್ವತವಾಗಿ ನೆಲೆಸಿರುವಿರಿ.
ಸೆಪ್ಟೆಂಬರ್ 11 ರಂದು ಬೆಂಗಳೂರಿನಲ್ಲಿ ಅಂತಿಮ ವಿಧಿವಿಧಾನಗಳು ನೆರವೇರಲಿವೆ.
ಇಂತಿ ದುಃಖತಪ್ತ ಕುಟುಂಬ: ಪತಿ–ಗುಣ ಸುಂದರ್. ಆರ್, ಮಗಳು – ಗಾರ್ಗಿ ಜಿ. ಸುಂದರ್ ಮತ್ತು ಮಗ – ಗಜನ್ ಜಿ. ಸುಂದರ್.
99722 40240

LOOKING FOR JOB OPPORTUNITY
Refer Classifieds on Wednesday

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1640 (1655)
ಸೋಯಾ (ರಿಫೈನ್ಡ್)	₹1240 (1240)
ಸೂರ್ಯಕಾಂತಿ (ರಿಫೈನ್ಡ್)	₹1450 (1450
ಪಾಮೋಲಿನ್	₹1000 (1000)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹475
12 ಮೊಟ್ಟೆಗೆ	₹62

ಮೈಸೂರು

100 ಮೊಟ್ಟೆಗೆ	₹475

ಮುಂಬೈ ಧಾರಣೆ

ಶೇಂಗಾ

3–9–2022

ಜಾವಾ 70/80(ಹೊಸ)	11650-11700
ಜಾವಾ 80/90(ಹೊಸ)	10950-11000
ದಪ್ಪ ಮಧ್ಯಪ್ರದೇಶ(ಹೊಸ)	10300-10400
ದಪ್ಪ ಗುಜರಾತ್(ಹೊಸ)	10700-10800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1650 (1660)
ಒಂದು ವಾರದ ಡೆಲಿವರಿ	1645 (1665)
ಸೋಯಾ ಕಚ್ಚಾ	1165 (1175)
ಪಾಮ್ ವಾರದ ಡೆಲಿವರಿ	998 (998)
ಸೂರ್ಯಕಾಂತಿ ಎಣ್ಣೆ ಕಚ್ಚಾ	1350 (1350)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 50,550 (50,450)

ಬೆಳ್ಳಿ ಕೆ.ಜಿ 52,800 (52,250)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500-600
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	500
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಚಿತ್ರದುರ್ಗ	
ಆಪಿ	54219-54629
ಬೆಟ್ಟೆ	41110-41559
ಕೆಂಪುಗೋಟು	31300-31700
ರಾಶಿ	53739-54169
ಕಾರ್ಕಳ	
ಹೊಸತು	40000-47500
ಪುತ್ತೂರು	
ಹೊಸತು	34500-47500
ಶಿರಸಿ	
ಬೆಟ್ಟೆ	43301-48119
ಬಿಳಿಗೋಟು	29899-36200
ಚಾಲಿ	39299-43912
ರಾಶಿ	47289-52899

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

ಮೂಡಿಗೆರೆ	ಹಾಸನ			
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	16000	16200	228.80 ಸೆಂಟ್ಸ್
ಎಸಿ	---	8500	8800	
ಆರ್‌ಪಿ	---	9800	9800	ಲಂಡನ್
ಆರ್‌ಸಿ	---	4500	4650	2023 ಡಾಲರ್ಸ್

ವ್ಯಾಪಾರ ಕೊರತೆ ಅಂತರ ಎರಡು ಪಟ್ಟು ಹೆಚ್ಚಳ

ನವದೆಹಲಿ (ಪಿಟಿಐ): ದೇಶದ ವ್ಯಾಪಾರ ಕೊರತೆ ಅಂತರವು 2021ರ ಆಗಸ್ಟ್‌ಗೆ ಹೋಲಿಸಿದರೆ 2022ರ ಆಗಸ್ಟ್‌ನಲ್ಲಿ ಎರಡು ಪಟ್ಟು ಹೆಚ್ಚಾಗಿದೆ.

ಕೇಂದ್ರ ವಾಣಿಜ್ಯ ಸಚಿವಾಲಯ ಶನಿವಾರ ಬಿಡುಗಡೆ ಮಾಡಿರುವ ಪ್ರಾಥಮಿಕ ಅಂಕಿ–ಅಂಶಗಳ ಪ್ರಕಾರ 2022ರ ಆಗಸ್ಟ್‌ನಲ್ಲಿ ₹2.28 ಲಕ್ಷ ಕೋಟಿ ಆಗಿದೆ. 2021ರ ಆಗಸ್ಟ್‌ನಲ್ಲಿ ವ್ಯಾಪಾರ ಕೊರತೆಯು ₹93,445 ಕೋಟಿ ಇತ್ತು.

ರಫ್ತು ವಹಿವಾಟು ಶೇ 1.15ರಷ್ಟು ಇಳಿಕೆ ಕಂಡು ₹2.63 ಲಕ್ಷ ಕೋಟಿಗೆ ತಲುಪಿದೆ. ಆದರೆ, ಆಮದು ವಹಿವಾಟು ಶೇ 37 ರಷ್ಟು ಏರಿಕೆಯಾಗಿ ₹4.92 ಲಕ್ಷ ಕೋಟಿಗೆ ಏರಿಕೆ ಆಗಿದೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ರಫ್ತು ₹35.91 ಲಕ್ಷ ಕೋಟಿಗೆ ತಲುಪಲಿದೆ ಎಂದು ವಾಣಿಜ್ಯ ಕಾರ್ಯದರ್ಶಿ ಬಿ.ವಿ. ಆರ್. ಸುಬ್ರಹ್ಮಣ್ಯಂ ತಿಳಿಸಿದ್ದಾರೆ.

2022–23ರ ಏಪ್ರಿಲ್–ಆಗಸ್ಟ್ ಅವಧಿಯಲ್ಲಿ ರಫ್ತು ವಹಿವಾಟು ಶೇ 17ರಷ್ಟು ಹೆಚ್ಚಾಗಿದೆ. ಆಮದು ಶೇ 46ರಷ್ಟು ಏರಿಕೆ ಕಂಡಿದೆ.

ಜೈಲಿನಿಂದ ಹೊರ ಬಂದ ತೀಸ್ತಾ

ಅಹಮದಬಾದ್ (ಪಿಟಿಐ): 2002ರ ಗುಜರಾತ್ ಗಲಭೆಗೆ ಸಂಬಂಧಿಸಿದಂತೆ ನಕಲಿ ಸಾಕ್ಷ್ಯಾಧಾರ ಸೃಷ್ಟಿಸಿದ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಶುಕ್ರವಾರ ಮಧ್ಯಂತರ ಜಾಮೀನು ಮಂಜೂರು ಮಾಡಿದ ಹಿನ್ನೆಲೆಯಲ್ಲಿ ಸಾಮಾಜಿಕ ಕಾರ್ಯಕರ್ತೆ ತೀಸ್ತಾ ಸೆಟಲ್‌ವಾಡ್ ಅವರು ಶನಿವಾರ ಜೈಲಿನಿಂದ ಹೊರ ಬಂದರು.

ಜೂನ್ 26 ರಂದು ಅವರನ್ನು ಬಂಧಿಸಿದಾಗಿನಿಂದ ಇಲ್ಲಿನ ಸಬರಮತಿ ಕೇಂದ್ರ ಕಾರಾಗೃಹದಲ್ಲಿ ಇರಿಸಲಾಗಿತ್ತು. ಸುಪ್ರೀಂ ಕೋರ್ಟ್ ಆದೇಶ ಪ್ರಕಾರ ಅವರನ್ನು ಜಾಮೀನು ಪ್ರಕ್ರಿಯೆಯಗಾಗಿ ಸೆಷನ್ಸ್ ನ್ಯಾಯಾಧೀಶ ವಿ.ಎ.ರಾಣಾ ಎದುರು ಹಾಜರುಪಡಿಸಲಾಯಿತು.

'ಸೆಷನ್ಸ್ ನ್ಯಾಯಾಲಯವು ಎರಡು ಷರತ್ತುಗಳನ್ನು ವಿಧಿಸಿದೆ. ₹ 25 ಸಾವಿರಗಳ ವೈಯಕ್ತಿಕ ಬಾಂಡ್ ಒದಗಿಸಬೇಕು ಮತ್ತು ಕೋರ್ಟ್ ಪೂರ್ವಾನುಮತಿ ಇಲ್ಲದೆ ಭಾರತ ತೊರೆಯದಂತೆ ಸೂಚಿಸಿದೆ' ಎಂದು ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಅಮಿತ್ ಪಟೇಲ್ ಹೇಳಿದರು.

ಅಯೋಧ್ಯೆಯಲ್ಲಿ ಮಸೀದಿ ನಿರ್ಮಾಣಕ್ಕೆ ಸಿಗುತ್ತಿಲ್ಲ 'ಎನ್‌ಒಸಿ'

ಅಯೋಧ್ಯೆ (ಪಿಟಿಐ): ಅಯೋಧ್ಯೆಯ ನಿಗದಿತ ಜಾಗದಲ್ಲಿ ಮಸೀದಿ ನಿರ್ಮಾಣ ಮಾಡಲು ಅವಕಾಶ ನೀಡಿ ಸುಪ್ರೀಂ ಕೋರ್ಟ್ ಆದೇಶ ನೀಡಿ ಸುಮಾರು ಮೂರು ವರ್ಷಗಳಾಗುತ್ತಿವೆ. ಆದರೆ, ಅಗ್ನಿಶಾಮಕ ಸೇವೆಗಳು, ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ನಾಗರಿಕ ಪ್ರಾಧಿಕಾರಗಳಿಂದ ನಿರಾಕ್ಷೇಪಣಾ ಪ್ರಮಾಣಪತ್ರಗಳು (ಎನ್‌ಒಸಿ) ದೊರೆಯದ ಕಾರಣ ನಿರ್ಮಾಣ ಕಾರ್ಯ ವಿಳಂಬವಾಗುತ್ತಲೇ ಇದೆ.

ಸುಪ್ರೀಂ ಕೋರ್ಟ್‌ನ ನಿರ್ದೇಶನದ ಮೇರೆಗೆ ಮಸೀದಿ ನಿರ್ಮಾಣಕ್ಕಾಗಿ 'ಉತ್ತರ ಪ್ರದೇಶ ಸುನ್ನಿ ಸೆಂಟ್ರಲ್ ವಕ್ಫ್ ಬೋರ್ಡ್'ಗೆ ಧನ್ನಿಪುರ ಗ್ರಾಮದಲ್ಲಿ ಐದು ಎಕರೆ ಭೂಮಿಯನ್ನು ಮಂಜೂರು ಮಾಡಲಾಗಿದೆ.

ಮಂಡಳಿಯು ಮಸೀದಿ, ಆಸ್ಪತ್ರೆ ಮತ್ತು ವಸ್ತು ಸಂಗ್ರಹಾಲಯ ನಿರ್ಮಾಣಕ್ಕಾಗಿ 'ಇಂಡೋ-ಇಸ್ಲಾಮಿಕ್ ಕಲ್ಚರಲ್ ಫೌಂಡೇಶನ್ (ಐಐಸಿಎಫ್) ಟ್ರಸ್ಟ್' ಅನ್ನು ಸ್ಥಾಪಿಸಿದೆ. .

ಮಸೀದಿ ನಿರ್ಮಾಣಕ್ಕೆ ಎನ್‌ಒಸಿ ನೀಡಿ ಎಂದು ಅಯೋಧ್ಯೆ ಅಭಿವೃದ್ಧಿ ಪ್ರಾಧಿಕಾರವು ಜುಲೈ 15ರಂದು ಅಗ್ನಿಶಾಮಕ ಸೇವೆಗಳು, ನಾಗರಿಕ ವಿಮಾನಯಾನ, ಅಯೋಧ್ಯೆ ಮುನ್ಸಿಪಲ್ ಕಾರ್ಪೊರೇಷನ್, ನೀರಾವರಿ, ಲೋಕೋಪಯೋಗಿ, ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಜಿಲ್ಲಾಡಳಿತ ಸೇರಿದಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದೆ ಎಂದು ಐಐಸಿಎಫ್ ಕಾರ್ಯದರ್ಶಿ ಅಥರ್ ಹುಸೇನ್ ಸಿದ್ದಿಕಿ ಹೇಳಿದ್ದಾರೆ.

ಅಗ್ನಿಶಾಮಕ ದಳ ಹೊರತುಪಡಿಸಿ ಉಳಿದ ಯಾವುದೇ ಇಲಾಖೆಯೂ ಸ್ಥಳ ಪರಿಶೀಲನೆ ನಡೆಸಿಲ್ಲ. ಯಾವ ಇಲಾಖೆಗಳು ಎನ್‌ಒಸಿ ನೀಡಿಲ್ಲ ಎಂದು ಹುಸೇನ್ ತಿಳಿಸಿದ್ದಾರೆ.

ಉದ್ದೇಶಿತ ಮಸೀದಿಗೆ ತಲುಪುವ ಕಿರಿದಾದ ರಸ್ತೆಯ ಬಗ್ಗೆ ಪ್ರಶ್ನೆ ಮಾಡಿರುವ ಅಗ್ನಿಶಾಮಕ ಸೇವಾ ಇಲಾಖೆ, ಎನ್‌ಒಸಿ ನಿರಾಕರಿಸಿದೆ. 'ಮಸೀದಿ ತಲುಪುವ ರಸ್ತೆಯು 12-ಮೀಟರ್ ಅಗಲವಾಗಿರಬೇಕು. ಆದರೆ, ಅಸ್ತಿತ್ವದಲ್ಲಿರುವ ಎರಡೂ ರಸ್ತೆಗಳು ಆರು ಮೀಟರ್ ಮೀರಿಲ್ಲ. ಮುಖ್ಯ ಮಾರ್ಗದ ಅಗಲವು ಕೇವಲ ನಾಲ್ಕು ಮೀಟರ್‌ಗಳಿವೆ ಎಂದು ಅಗ್ನಿಶಾಮಕ ಇಲಾಖೆ ಹೇಳಿರುವುದಾಗಿ ಹುಸೇನ್ ಮಾಹಿತಿ ನೀಡಿದ್ದಾರೆ.

ಅಗಲವಾದ ರಸ್ತೆಯನ್ನು ಆದಷ್ಟು ಬೇಗ ನಿರ್ಮಿಸಲು ಉತ್ತರ ಪ್ರದೇಶ ಸರ್ಕಾರ ಮತ್ತು ಅಯೋಧ್ಯಾ ಆಡಳಿತವನ್ನು ಹುಸೇನ್ ವಿನಂತಿಸಿದ್ದಾರೆ.

2019ರ ನವೆಂಬರ್ 9 ರಂದು ರಾಮ ಜನ್ಮಭೂಮಿ-ಬಾಬರಿ ಮಸೀದಿ ವಿವಾದದಲ್ಲಿ ಸುಪ್ರೀಂ ಕೋರ್ಟ್ ತನ್ನ ತೀರ್ಪು ನೀಡಿತ್ತು. ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣಕ್ಕೆ ಅವಕಾಶ ನೀಡಿದ್ದ ಕೋರ್ಟ್, ಮಸೀದಿ ನಿರ್ಮಾಣಕ್ಕೆ ಪ್ರತ್ಯೇಕ ಐದು ಎಕರೆ ಭೂಮಿಯನ್ನು ಮಂಜೂರು ಮಾಡಲು ಸೂಚಿಸಿತ್ತು.

ಭಾರತೀಯನಿಗೆ ಜನಾಂಗೀಯ ನಿಂದನೆ

ಲಂಡನ್(ಪಿಟಿಐ): ಪೋಲೆಂಡ್‌ನಲ್ಲಿ ಜನಾಂಗೀಯ ನಿಂದನೆಗೆ ಗುರಿಯಾಗಿರುವ ಭಾರತೀಯ ವ್ಯಕ್ತಿಯನ್ನು 'ಪರಾವಲಂಬಿ', 'ಆಕ್ರಮಣಕಾರ' ಎಂದು ಜರಿದಿರುವ ಅಮೆರಿಕದ ವ್ಯಕ್ತಿ, 'ನಿಮ್ಮ ದೇಶಕ್ಕೆ ಹಿಂತಿರುಗು' ಎಂದು ಹೇಳಿದ್ದಾನೆ.

ಭಾರತೀಯನ ಗುರುತು ಇನ್ನೂ ಪತ್ತೆಯಾಗಿಲ್ಲ. ವಿಡಿಯೊ ಚಿತ್ರೀಕರಿಸಲಾಗಿದ್ದು, ಅದು ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡಿದೆ. ವಿಡಿಯೊವನ್ನು ಯಾವ ನಗರದಲ್ಲಿ ಚಿತ್ರೀಕರಿಸಲಾಗಿದೆ ಎಂಬುದು ಸ್ಪಷ್ಟವಾಗಿಲ್ಲ. ಆದರೆ, ಟ್ವಿಟರ್ ಬಳಕೆದಾರರು ಅದಕ್ಕೆ ಪ್ರತಿಕ್ರಿಯಿಸುವಾಗ ವಾರ್ಸಾ ಪೊಲೀಸರನ್ನು ಟ್ಯಾಗ್ ಮಾಡುತ್ತಿದ್ದಾರೆ.

ಮಾಲ್ ಬಳಿ ನಡೆದುಕೊಂಡು ಹೋಗುವ ಭಾರತೀಯನನ್ನು ಉದ್ದೇಶಿಸಿ 'ಯುರೋಪಿನಲ್ಲಿ ಏಕೆ ಇದ್ದೀಯಾ? ರೆಕಾರ್ಡ್ ಮಾಡುವುದನ್ನು ನಿಲ್ಲಿಸಿ' ಎಂದು ಅಮೆರಿಕ ವ್ಯಕ್ತಿ ಹೇಳುವುದು ವಿಡಿಯೊದಲ್ಲಿದೆ.

ಇದು ಯಾವಾಗ ನಡೆಯಿತು? ಇಬ್ಬರ ನಡುವಿನ ಸಂಭಾಷಣೆಗೆ ಕಾರಣವೇನು ಎಂಬುದು ಸ್ಪಷ್ಟವಾಗಿಲ್ಲ.

ಇಂಡಿಯಾ ಡೇ ಪರೇಡ್‌ನಲ್ಲಿ ಬುಲ್ಡೋಜರ್: ಖಂಡನೆ

ವಾಷಿಂಗ್ಟನ್: ಕಳೆದ ತಿಂಗಳು ನ್ಯೂಜೆರ್ಸಿಯ ಎಡಿಸನ್‌ನಲ್ಲಿ ನಡೆದ 'ಇಂಡಿಯಾ ಡೇ ಪರೇಡ್'ನಲ್ಲಿ ಬುಲ್ಡೋಜರ್ ಪ್ರದರ್ಶಿಸಿದ್ದನ್ನು ಅಮೆರಿಕದ ಇಬ್ಬರು ಸೆನೆಟರ್‌ಗಳು ಖಂಡಿಸಿದ್ದಾರೆ.

ಭಾರತೀಯ – ಅಮೆರಿಕನ್ ಮುಸ್ಲಿಂ ಕೌನ್ಸಿಲ್, ಸಿಎಐಆರ್‌ನ ನ್ಯೂಜೆರ್ಸಿ ನಿಯೋಗ ಮತ್ತು 'ಇಂಡಿಯಾ ಡೇ ಪರೇಡ್'ನಲ್ಲಿ ಬುಲ್ಡೋಜರ್ ಪ್ರದರ್ಶನವನ್ನು ವಿರೋಧಿಸಿದ್ದವರು ನಮ್ಮನ್ನು ಎಡಿಸನ್ ಸಿಟಿಯಲ್ಲಿ ಭೇಟಿಯಾಗಿದ್ದರು ಎಂದು ಸೆನೆಟರ್‌ಗಳಾದ ಬಾಬ್ ಮೆನೆಂಡೆಜ್ ಮತ್ತು ಕೋರಿ ಬೂಕರ್ ತಿಳಿಸಿದ್ದಾರೆ.

'ಭಾರತದಲ್ಲಿ ಬುಲ್ಡೋಜರ್ ಎಂಬುದು ಮುಸ್ಲಿಮರು ಮತ್ತು ಇತರ ಧಾರ್ಮಿಕ ಅಲ್ಪಸಂಖ್ಯಾತರನ್ನು ಬೆದರಿಸುವ ಸಂಕೇತವಾಗಿದೆ. ಪರೇಡ್‌ನಲ್ಲಿ ಅದನ್ನು ಪ್ರದರ್ಶಿಸಿದ್ದು ತಪ್ಪು' ಎಂದು ಇಬ್ಬರೂ ನಾಯಕರು ಅಭಿಪ್ರಾಯಪಟ್ಟಿದ್ದಾರೆ.

'ದಕ್ಷಿಣ ಏಷ್ಯಾದ ಸಮುದಾಯಗಳಿಗೆ ಮತ್ತು ದೇಶದ ಕೆಲವು ವೈವಿಧ್ಯಮಯ ಸಮುದಾಯಗಳಿಗೆ ನ್ಯೂಜೆರ್ಸಿಯು ನೆಲೆವೀಡಾಗಿದೆ. ಎಲ್ಲಾ ಜನಾಂಗೀಯ ಮತ್ತು ಧಾರ್ಮಿಕ ಗುಂಪುಗಳು ಇಲ್ಲಿ ಯಾವುದೇ ಬೆದರಿಕೆ ಅಥವಾ ಭಯವಿಲ್ಲದೆ ಬದುಕುವ ಹಕ್ಕನ್ನು ಹೊಂದಿವೆ' ಎಂದು ಇಬ್ಬರೂ ಸೆನೆಟರ್‌ಗಳು ಜಂಟಿ ಹೇಳಿಕೆಯಲ್ಲಿ ಉಲ್ಲೇಖಿಸಿದ್ದಾರೆ.

ಆಗಸ್ಟ್ 14 ರಂದು ಓಕ್ ಟ್ರೀ ರಸ್ತೆಯಲ್ಲಿ ನಡೆದ 'ಇಂಡಿಯಾ ಡೇ ಪರೇಡ್' ಸಂದರ್ಭದಲ್ಲಿ, ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಚಿತ್ರಗಳನ್ನು ಹೊಂದಿರುವ ಬುಲ್ಡೋಜರ್ ಅನ್ನು ಪ್ರದರ್ಶಿಸಲಾಯಿತು. ಎಡಿಸನ್ ಮೇಯರ್ ಸ್ಯಾಮ್ ಜೋಶಿ ಇದನ್ನು ಕಟುವಾಗಿ ಟೀಕಿಸಿದ್ದರು.

ನಟಿ ನೋರಾ ಫತೇಹಿ ಮತ್ತೆ ವಿಚಾರಣೆ

ದೆಹಲಿ (ಪಿಟಿಐ): ಬೆಂಗಳೂರು ಮೂಲದ ಸುಕೇಶ್ ಚಂದ್ರಶೇಖರ್ ಮುಖ್ಯ ಆರೋಪಿಯಾಗಿರುವ ₹200 ಕೋಟಿ ಅಕ್ರಮ ಹಣ ವರ್ಗಾವಣೆ ಹಾಗೂ ವಂಚನೆ ಪ್ರಕರಣದಲ್ಲಿ ಬಾಲಿವುಡ್ ನಟಿ ನೋರಾ ಫತೇಹಿ ಅವರನ್ನು ದೆಹಲಿ ಪೊಲೀಸರು ಶುಕ್ರವಾರ ಹಲವು ಗಂಟೆಗಳ ಕಾಲ ವಿಚಾರಣೆ ನಡೆಸಿದರು.

ನಟಿ ಜಾಕ್ವೆಲಿನ್ ಫರ್ನಾಂಡೀಸ್ ಈ ಪ್ರಕರಣದಲ್ಲಿ ಆರೋಪಿಯಾಗಿದ್ದಾರೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಅಧಿಕಾರಿಗಳು ನ್ಯಾಯಾಲಯಕ್ಕೆ ಚಾರ್ಜ್‌ಶೀಟ್ ಸಲ್ಲಿಕೆ ಮಾಡಿದ್ದಾರೆ. ನೋರಾ ಅವರಿಗೆ ಬೆಲೆ ಬಾಳುವ ವಾಚ್, ಬ್ಯಾಗ್, ಬಿಎಂಡಬ್ಲ್ಯೂ ಕಾರು ಹಾಗೂ ಸ್ವಲ್ಪ ಹಣವನ್ನು ಉಡುಗೊರೆಯಾಗಿ ನೀಡಿರುವುದಾಗಿ ಸುಕೇಶ್ ವಿಚಾರಣೆ ವೇಳೆ ಅಧಿಕಾರಿಗಳಿಗೆ ಹೇಳಿದ್ದರು. ಹೀಗಾಗಿ ಪೊಲೀಸರು ಮತ್ತೆ ವಿಚಾರಣೆ ನಡೆಸಿದ್ದಾರೆ.

ಇ.ಡಿ ದಾಳಿ: ₹ 17 ಕೋಟಿ ಜಪ್ತಿ

ಒಂದನೇ ಪುಟದಿಂದ

'ಚೀನಾದ ವ್ಯಕ್ತಿಗಳ ನಿಯಂತ್ರಣದಲ್ಲಿರುವ ಈ ಮೊಬೈಲ್ ಅಪ್ಲಿಕೇಷನ್‌ಗಳನ್ನು ಬಳಸಿಕೊಂಡು ಸಾಲ ನೀಡಿ, ನಂತರದಲ್ಲಿ ಜನರಿಗೆ ಕಿರುಕುಳ ನೀಡುತ್ತಿರುವುದು ತನಿಖೆಯಲ್ಲಿ ಪತ್ತೆಯಾಗಿದೆ. ಅಂತಹ ಕಂಪನಿಗಳು ಕೆಲವು ಸಂಸ್ಥೆಗಳನ್ನು ಬಳಸಿಕೊಂಡು ವಹಿವಾಟು ನಡೆಸುತ್ತಿರುವುದು ಕಂಡುಬಂದಿದೆ. ಈ ಮಾಹಿತಿ ಆಧರಿಸಿ ಆರು ಸ್ಥಳಗಳಲ್ಲಿ ಶೋಧ ನಡೆಸಲಾಗಿದೆ' ಎಂದು ಇ.ಡಿ ಹೇಳಿದೆ.

ಈ ಕಂಪನಿಗಳು ನೋಂದಾಯಿತ ವಿಳಾಸದಲ್ಲಿ ಕಾರ್ಯನಿರ್ವಹಿಸುತ್ತಿಲ್ಲ. ಬೇರೆ ಸಂಸ್ಥೆಗಳ ನೆರವಿನಲ್ಲಿ ಸಾಲ ನೀಡುವುದು, ಸಾಲ ವಸೂಲಿ ಹೆಸರಿನಲ್ಲಿ ಜನರಿಗೆ ಕಿರುಕುಳ ನೀಡುತ್ತಿರುವುದೂ ಪತ್ತೆಯಾಗಿದೆ. ಭಾರತೀಯ ನಾಗರಿಕರ ದಾಖಲೆಗಳನ್ನು ನಕಲು ಮಾಡಿ ದುಷ್ಕೃತ್ಯಕ್ಕೆ ಬಳಸುತ್ತಿರುವುದೂ ಕಂಡುಬಂದಿದೆ ಎಂದು ಮಾಹಿತಿ ನೀಡಿದೆ.

ಸಂಕ್ಷಿಪ್ತ ಸುದ್ದಿ

ನ್ಯಾಯಾಧೀಶರ ಮೃತದೇಹ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆ

ಕಟಕ್ (ಪಿಟಿಐ): ಒಡಿಶಾದ ಕಟಕ್‌ನಲ್ಲಿರುವ 'ಪೋಕ್ಸೊ' ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸುಭಾಷ್ ಕುಮಾರ್ ಬೆಹಾರಿ (49) ಅವರ ಮೃತದೇಹ ಅವರ ಅಧಿಕೃತ ನಿವಾಸದಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ನ್ಯಾಯಾಧೀಶರ ಮೃತದೇಹ ಸೀಲಿಂಗ್ ಫ್ಯಾನ್‌ಗೆ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದೆ. ಅವರ ಕುತ್ತಿಗೆಯಲ್ಲಿ ಗಾಯದ ಗುರುತುಗಳಿವೆ ಎಂದು ಕಟಕ್ ನಗರ ವಲಯ 3ರ ಸಹಾಯಕ ಪೊಲೀಸ್ ಕಮಿಷನರ್ ತಪಸ್ ಪ್ರಧಾನ್ ಹೇಳಿದ್ದಾರೆ.

ಘಟನೆ ನಡೆದಾಗ ನ್ಯಾಯಾಧೀಶರ ಪತ್ನಿ ಮನೆಯಲ್ಲಿರಲಿಲ್ಲ. ಮಕ್ಕಳು ಶಾಲೆಗೆ ಹೋಗಿದ್ದರು. ಕಳೆದೆರಡು ದಿನಗಳಿಂದ ರಜೆಯಲ್ಲಿದ್ದ ನ್ಯಾಯಾಧೀಶರು ಶುಕ್ರವಾರ ಕೆಲಸಕ್ಕೆ ಹಾಜರಾಗಬೇಕಿತ್ತು ಎಂದಿದ್ದಾರೆ. ಇದೊಂದು ಆತ್ಮಹತ್ಯೆ ಆಗಿರಬಹುದು ಎಂದು ಪೊಲೀಸರು ಶಂಕಿಸಿದ್ದು, ತನಿಖೆಯನ್ನು ಮುಂದುವರಿಸಿದ್ದಾರೆ.

ಯುಎಇ ಅಧ್ಯಕ್ಷರಿಗೆ ಮೋದಿ ಪತ್ರ

ದುಬೈ(ಪಿಟಿಐ): ಎರಡೂ ರಾಷ್ಟ್ರಗಳ ನಡುವಿನ ದ್ವಿಪಕ್ಷೀಯ ಸಂಬಂಧ ವೃದ್ಧಿಗೆ ಸಂಬಂಧಿಸಿದಂತೆ ಪ್ರಧಾನಿ ನರೇಂದ್ರ ಮೋದಿ ಅವರು ಯುಎಇ ಅಧ್ಯಕ್ಷ ಶೇಖ್ ಮಹಮ್ಮದ್ ಬಿನ್ ಜಾಯೇದ್ ಅಲ್ ನಹ್ಯಾನ್ ಅವರಿಗೆ ಪತ್ರ ಬರೆದಿದ್ದಾರೆ ಎಂದು ಮಾಧ್ಯಮಗಳು ವರದಿ ಮಾಡಿವೆ. ಗಲ್ಫ್ ದೇಶಗಳಿಗೆ ಭೇಟಿ ನೀಡಿದ್ದ ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರ ಮೂಲಕ ಯುಎಇ ಅಧ್ಯಕ್ಷರಿಗೆ ಪತ್ರವನ್ನು ರವಾನಿಸಲಾಗಿದೆ.

ನೆರವು ಕೋರಿದ ಪಾಕಿಸ್ತಾನ

ಇಸ್ಲಾಮಾಬಾದ್ (ಪಿಟಿಐ): ಪ್ರವಾಹದಿಂದ ತತ್ತರಿಸಿರುವ ಪಾಕಿಸ್ತಾನವು ನೆರವಿಗಾಗಿ ಅಂತರರಾಷ್ಟ್ರೀಯ ಸಮುದಾಯಗಳ ಮೊರೆ ಹೋಗಿದೆ. ಸಾವಿನ ಪ್ರಮಾಣದಲ್ಲಿ ಏರಿಕೆಯಾಗುತ್ತಲೇ ಇದ್ದು, ಕಳೆದ 24 ಗಂಟೆಗಳಲ್ಲಿ 57 ಜನರು ಮೃತಪಟ್ಟಿದ್ದಾರೆ. ಹೀಗಾಗಿ ಸತ್ತವರ ಒಟ್ಟು ಸಂಖ್ಯೆ 1,265ಕ್ಕೆ ಏರಿಕೆಯಾಗಿದೆ.

ವಾಲ್‌ಮಾರ್ಟ್ ಮೇಲೆ ವಿಮಾನ ದಾಳಿ ಬೆದರಿಕೆ

ಮಿಸಿಸಿಪ್ಪಿ (ರಾಯಿಟರ್ಸ್): ಇಲ್ಲಿನ ವಾಲ್‌ಮಾರ್ಟ್ ಶಾಂಪಿಂಗ್ ಮಾಲ್ ಮೇಲೆ ವಿಮಾನ ದಾಳಿ ನಡೆಸುವುದಾಗಿ ಬೆದರಿಕೆ ಒಡ್ಡಿದ್ದ ಪೈಲಟ್‌ನನ್ನು ಸ್ಥಳೀಯ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಶನಿವಾರ ಬೆಳಿಗ್ಗೆ ಪರಿಸ್ಥಿತಿಯ ಕುರಿತು ಮಾಹಿತಿ ಬಂದಿತ್ತು. ಈ ಕೂಡಲೇ ಪೈಲಟ್‌ನೊಂದಿಗೆ ನೇರವಾಗಿ ಮಾತುಕತೆ ಆರಂಭಿಸಲಾಯಿತು. ಜೊತೆಗೆ ವಾಲ್‌ಮಾರ್ಟ್ ಮತ್ತು ಗ್ಯಾಸ್ ಸ್ಟೇಶನ್‌ಗಳಿಂದ ಜನರನ್ನು ಸ್ಥಳಾಂತರಿಸಲಾಯಿತು ಎಂದು ತಿಳಿಸಿದ್ದಾರೆ.

ವಾಲ್‌ಮಾರ್ಟ್ ಮೇಲೆ ಅತ್ಯಂತ ಕಡಿಮೆ ಎತ್ತರದಲ್ಲಿ ಸಣ್ಣ ವಿಮಾನವೊಂದು ಹಾರಾಡುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ: 18,000-20,000 ಪ್ರತಿ ತಿಂಗಳು+ ಕುಟುಂಬಕ್ಕೆ ಖಾಸಗಿ ವಿಮೆ +ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/- ರವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

Cook

"ಇಂದಿರಾನಗರದಲ್ಲಿರುವ ಮನೆಗೆ ಮಹಿಳಾ ಅಡಿಗೆಕೆಲಸದವರು ಮತ್ತು ಮಹಿಳಾ ಮನೆಕೆಲಸದವರು ಬೇಕಾಗಿದ್ದಾರೆ. ಉತ್ತಮ_ಸಂಬಳ ಹಾಗೂ ಇಬ್ಬರಿಗೂ_ಪ್ರತ್ಯೇಕ ವಸತಿಸೌಲಭ್ಯ ನೀಡಲಾಗುತ್ತದೆ. ಸಂಪರ್ಕಿಸಿ: 9845058243"

Engg/ Production Technical

WANTED ELEVATOR TECHNICIAN
Experience: 1 - 4 yrs
Education: ITI/ diploma/ BE/ B.tech
Location: Bangalore
Age: 18-33 | Gender: Male
Local residents: Karnataka
Language: Hindi, English & kannada
MUST HAVE EXPERIENCE IN ELEVATOR / LIFT INSTALLATION PROCESS
dhivya.murugaiyan@eliteelevators.com
mohammed.aadil@nibavlifts.com
+91 89251 96664
+91 98400 14226
NIBAV

ಬಿಲ್ಡರ್ ಎಸೆನ್ಶಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಮತ್ತು ರೆಡಿಮೇಡ್ ಪ್ರಿಕ್ಯಾಸ್ಟಿಂಗ್ ಕಾಂಪೌಂಡ್‌ಗೋಡೆ ಕೆಲಸಕ್ಕಾಗಿ ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಸೆಲ್ಲಿಂಗ್

General

South

FOR SALE Vacant Converted Two Acres, 3 lakhs percent, Road, Water, Electricity, Ideal for Naturopathyclinic, Bajal Mangaluru. paisclarence@gmail.com, Advocate Notary, 9449821928

Sites

Nelamangala

SITE FOR Sale in Nelamangala Karnataka Postal & Telecom Housing Co-operative society BMRDA Approval Rs 1050/ Sqft Booking Open for Public Bank Loan Available #8660519436

ವ್ಯಾಪಾರ

Business Offers

Franchise

4 ಲಕ್ಷ ಮತ್ತು 350ಚದರ ಅಡಿ ಅಂಗಡಿಯೊಂದಿಗೆ ನಿಮ್ಮದೇ ಆದ ಯಶಸ್ವಿ ಆನ್‌ಲೈನ್ ದಿನಸಿ ವಿತರಣಾ ಫ್ರ್ಯಾಂಚೈಸ್‌ಅನ್ನು ಪ್ರಾರಂಭಿಸಿ. ತಿಂಗಳಿಗೆ 1ಲಕ್ಷಗಳಿಸಿ. ಸಂಪರ್ಕಿಸಿ 9148411825

ಸಾರ್ವಜನಿಕ ಪ್ರಕಟಣೆ

PUBLIC NOTICE

General Public are hereby notified that, my client intends to purchase the below mentioned schedule properties from its respective owners. The Owners represent that apart from them there are no other person/s having any right or claim over the schedule properties and they have instructed to carry out search report to trace the marketable title and lawful possession of the holder of the schedule properties and that the same are free from all encumbrances and have offered to sell the same to my client for consideration. Therefore, any person/s, financial Institutions or statutory authorities having any demand or Interest in the schedule properties or any portion thereof or intending to oppose the sale of the same or any portion thereof to third parties, may forward their written objections with supporting documents to the undersigned, within FOURTEEN (14) days from the date of publication hereof for scrutiny. Any objections received thereafter will not be considered and my client would proceed with the completion of the sale, as If there are no third party claims or interest, and if any, are deemed to have been waived.

SCHEDULE PROPERTY

All that piece and parcel of Agricultural land bearing Sy No. 203, Extent 35 Guntas out of 1 Acre 20 guntas land situated at Beguru Village, Sulibele Hobli, Hoskote Taluk, Bangalore Rural District and bounded on: East by: Land Belongs to Hanumanthapa, West by: Ekharajapura Boundary and road, North by: land Belongs to Muniyappa, South by: Remaining Land in same SY No. 203.

Srinivasappa B.Sc, LLB, Advocate,
K.A.R No. 1082/1992 Skhanda Enterprises #3048/11, SMLV Complex, K.R Road, Hosakote - 562114, Karnataka

ಭವಿಷ್ಯ

Astrology

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ವೈವಾಹಿಕ

Brides Wanted

Kannada

NAIDU FAMILY wants a suitable match for their only son M.tech (Uk) working in an MNC (080-69074916)

Muslim

BRIDE WANTED for 1983 born Bangalore based Sunni Muslim boy, BE/ MBA-NITIE, Working as a Senior Associated in a Reputed MNC, Father AGM In an MNC (080-69103008)

Grooms Wanted

Kannada

WELL EDUCATED Lingayat family of Bangalore seeks alliance for their '97 born B.Tech girl working as a software professional in a reputed MNC (080-69103046)

ವೈಯಕ್ತಿಕ

Change of Name

ನಾನು, ಶಚೀಂದ್ರ ಶೆಟ್ಟಿ @ ಶಚೀಂದ್ರ ಬಿನ್ ಶೇಖರ್ ಶೆಟ್ಟಿ, ವಯಸ್ಸು 40 ವರ್ಷ, ವಿಳಾಸ ನಂ.3-22-1, ಮಾತೃಶ್ರೀ ನಿಲಯ, ನಾಯರಕೋಡು, ಶಿವಪುರ ಅಂಚೆ, ಹೆಬ್ರಿ,ಉಡುಪಿ, ಕರ್ನಾಟಕ 576112 ಆದ ನಾನು ಈ ಮೂಲಕ ಘೋಷಿಸುವುದು ಏನೆಂದರೆ, ಮೇಲಿನ ಎರಡೂ ಹೆಸರುಗಳು ನನಗೇ ಸಂಬಂಧಿಸಿರುತ್ತವೆ. ಕಾರಣ 30-08-2022ರಂದು ಬೆಂಗಳೂರು ನೆಲಮಂಗಲದ ನೋಟರಿಗಳಾದ ಗಂಗರಾಜ ರವರ ಎದುರು ಪ್ರತಿಜ್ಞಾಪತ್ರ ಮಾಡಿರುತ್ತೇನೆ.

ಪ್ರವಾಸ

Travel

★ಶ್ರೇಯಸ್ ಟೂರ್ಸ್★ ಹಾರ್ನೋಬಿಲ್ ಫೆಸ್ಟಿವಲ್ ವಿಶೇಷ ಈಶಾನ್ಯರಾಜ್ಯಗಳ(ಸೆವೆನ್ ಸಿಸ್ಟರ್ಸ್)ಪ್ರವಾಸ 28.11.2022 12/15/21ದಿನಗಳು ಅಸ್ಸಾಂ ಮೇಘಾಲಯ,ಅರುಣಾಚಲ ನಾಗಲ್ಯಾಂಡ್,ಮಣಿಪುರ ಮಿಝೋರಾಂ,ತ್ರಿಪುರ. 24.11.2022,16.12.2022 10/21ದಿನಗಳು ತ್ರಿಪುರ ಮಿಝೋರಾಂ,ಮಣಿಪುರ ನಾಗಲ್ಯಾಂಡ್,ಅಸ್ಸಾಂ ಅರುಣಾಚಲ,ಮೇಘಾಲಯ. 8073824856 9206979202 6366322639

★ಶ್ರೇಯಸ್ ಟೂರ್ಸ್★ 08.10.2022 12ದಿನಗಳು ಅಖಂಡ ಗುಜರಾತ್‌ರಾಜ್ಯ ಪ್ರವಾಸ.12.10.2022 10ದಿನಗಳು ಅಖಂಡ ರಾಜಸ್ಥಾನ ರಾಜ್ಯ ಪ್ರವಾಸ. 01.11.2022 15ದಿನಗಳು ಅಖಂಡ ಮಧ್ಯಪ್ರದೇಶ ರಾಜ್ಯ ಪ್ರವಾಸ.04.11.2022 10ದಿನಗಳು ಅಖಂಡ ನೇಪಾಳರಾಷ್ಟ್ರ(ಮುಕ್ತಿನಾಥ) 25.10.2022 8ದಿನಗಳು ಅಖಂಡ ಕೇರಳರಾಜ್ಯ ಪ್ರವಾಸ.8073824856 9206979202 6366322639

15/9/22, 8/10/22 ಯಮುನೋತ್ರಿ, ಗಂಗೋತ್ರಿ, ಕೇದಾರ್‌ನಾಥ್, ಬದ್ರಿನಾಥ್, 6/10/22 ನೇಪಾಳ್, ಮುಕ್ತಿನಾಥ್, ಕಾಶಿ. ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ್) 9845035349, 9482435755

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH DECCAN HERALD ಪ್ರಜಾವಾಣಿ

BOOK YOUR REAL ESTATE
Classified Advertisement In Deccan Herald & Prajavani

SATURDAY & SUNDAY COMBO OFFER

Ordinary Per word	Bold Per word	Ordinary Semi Display Per word	Bold Semi Display Per word	Single Col CD Per sqcm
100	150	120	190	600

For More Details Contact:
Ph:080- 45557160 | 163 | 164 |
M: 9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com
condition apply*

ಸಂಕ್ಷಿಪ್ತ ಸುದ್ದಿ

ಟೆನಿಸ್: ಸಾಕೇತ್–ಯೂಕಿಗೆ ಪ್ರಶಸ್ತಿ

ಮಲ್ಲೋರ್ಕಾ, ಸ್ಪೇನ್ (ಪಿಟಿಐ): ಭಾರತದ ಸಾಕೇತ್ ಮೈನೇನಿ ಮತ್ತು ಯೂಕಿ ಭಾಂಬ್ರಿ ಅವರು ಸ್ಪೇನ್‌ನಲ್ಲಿ ನಡೆದ ರಫಾ ನಡಾಲ್ ಓಪನ್ ಟೆನಿಸ್ ಟೂರ್ನಿಯ ಡಬಲ್ಸ್ ವಿಭಾಗದಲ್ಲಿ ಚಾಂಪಿಯನ್ ಆದರು.

ಶನಿವಾರ ನಡೆದ ಫೈನಲ್‌ನಲ್ಲಿ ಸಾಕೇತ್– ಯೂಕಿ ಜೋಡಿ 6–2, 6–2 ರಲ್ಲಿ ಜೆಕ್ ರಿಪಬ್ಲಿಕ್‌ನ ಮರೆಕ್ ಜೆಂಜೆಲ್– ಲೂಕಾಸ್ ರೊಸೋಲ್ ವಿರುದ್ಧ ಜಯಿಸಿತು.

ಪ್ರಶಸ್ತಿಗೆ ಯೋಧಾಸ್–ಒಡಿಶಾ ಪೈಪೋಟಿ

ಪುಣೆ: ತೆಲುಗು ಯೋಧಾಸ್ ಮತ್ತು ಒಡಿಶಾ ಜಗರ್‌ನಾಟ್ಸ್ ತಂಡಗಳು ಚೊಚ್ಚಲ ಅಲ್ಟಿಮೇಟ್ ಕೊಕ್ಕೊ ಲೀಗ್‌ನ ಪ್ರಶಸ್ತಿಗೆ ಭಾನುವಾರ ಪೈಪೋಟಿ ನಡೆಸಲಿವೆ.

ಶನಿವಾರ ನಡೆದ ಎರಡನೇ ಕ್ವಾಲಿಫೈಯರ್‌ನಲ್ಲಿ ಯೋಧಾಸ್ 67–44 ರಲ್ಲಿ ಗುಜರಾತ್ ಜೈಂಟ್ಸ್ ತಂಡವನ್ನು ಮಣಿಸಿ ಫೈನಲ್ ಪ್ರವೇಶಿಸಿತು. ಒಡಿಶಾ ತಂಡ ಶುಕ್ರವಾರ ನಡೆದ ಮೊದಲ ಕ್ವಾಲಿಫೈಯರ್‌ನಲ್ಲಿ ಯೋಧಾಸ್ ತಂಡವನ್ನು ಸೋಲಿಸಿ ಪ್ರಶಸ್ತಿ ಸುತ್ತು ತಲುಪಿತ್ತು. ಇದೀಗ ಫೈನಲ್‌ನಲ್ಲಿ ಮತ್ತೆ ಇವೆರಡು ತಂಡಗಳು ಪೈಪೋಟಿ ನಡೆಸಲಿವೆ.

10ರಂದು 'ಕನ್ನಡ ಜಾಗೃತಿ ಓಟ'

ಬೆಂಗಳೂರು: ಕನ್ನಡ ಅಭಿವೃದ್ಧಿ ಪ್ರಾಧಿಕಾರ, ದಂಡು ಪ್ರದೇಶ ಕನ್ನಡ ಸಂಘಟನೆಗಳ ಒಕ್ಕೂಟ, ಸರ್ವಜ್ಞನಗರ ಕನ್ನಡ ಸಾಹಿತ್ಯ ಪರಿಷತ್ತು ಇವುಗಳ ಸಂಯುಕ್ತ ಆಶ್ರಯದಲ್ಲಿ ಸೆಪ್ಟೆಂಬರ್ 10ರಂದು 'ಕನ್ನಡ ಜಾಗೃತಿ ಓಟ' ಆಯೋಜಿಸಲಾಗಿದೆ.ಎಚ್.ಬಿ.ಆರ್ ಬಡಾವಣೆಯ ದಕ್ಷಿಣ ಅಯೋಧ್ಯಾ ಆಟದ ಮೈದಾನದಲ್ಲಿ ಸ್ಪರ್ಧೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ. ಮಾಹಿತಿಗಾಗಿ ಎಸ್. ಮುನಿರಾಜು (ಮೊ.ಸಂ. 9449455581), ಎನ್. ರವಿಶಂಕರ್ (9480080886) ಅವರನ್ನು ಸಂಪರ್ಕಿಸಬೇಕು.

ಅಮೆರಿಕ ಓಪನ್ ಟೂರ್ನಿಯ ಮೂರನೇ ಸುತ್ತಿನಲ್ಲಿ ಸೋಲು; ವಿದಾಯದತ್ತ ಹೆಜ್ಜೆ

ಟೆನಿಸ್ ಮಿನುಗುತಾರೆ ಸೆರೆನಾ

ಅಭಿಮಾನಿಗಳತ್ತ ಕೈಬೀಸಿದ ಸೆರೆನಾ ವಿಲಿಯಮ್ಸ್ –ಎಎಫ್‌ಪಿ ಚಿತ್ರ

ನ್ಯೂಯಾರ್ಕ್ (ರಾಯಿಟರ್ಸ್/ ಎಎಫ್‌ಪಿ): ಎರಡು ದಶಕಗಳಿಗೂ ಹೆಚ್ಚು ಕಾಲ ಮಹಿಳಾ ಟೆನಿಸ್‌ನಲ್ಲಿ ಮಿನುಗಿ ನಿಂತ ಸೆರೆನಾ ವಿಲಿಯಮ್ಸ್ ಅಮೆರಿಕ ಓಪನ್ ಗ್ರ್ಯಾನ್‌ಸ್ಲಾಮ್ ಟೂರ್ನಿಯ ಮೂರನೇ ಸುತ್ತಿನಲ್ಲಿ ಸೋಲು ಅನುಭವಿಸಿದರು. ಇದರೊಂದಿಗೆ ಅವರ ವರ್ಣರಂಜಿತ ಟೆನಿಸ್ ವೃತ್ತಿಬದುಕು ಬಹುತೇಕ ಕೊನೆಗೊಂಡಿದೆ.

ಶುಕ್ರವಾರ ನಡೆದ ಪಂದ್ಯದಲ್ಲಿ ಕ್ರೊವೇಷ್ಯ ಮೂಲದ ಆಸ್ಟ್ರೇಲಿಯಾದ ಆಟಗಾರ್ತಿ ಅಯ್ಲಾ ಟೊಮ್ಲಾನೊವಿಚ್ 7-5, 6-7 (4/7), 6-1 ರಲ್ಲಿ ಅಮೆರಿಕದ ದಿಗ್ಗಜ ಆಟಗಾರ್ತಿಯನ್ನು ಮಣಿಸಿದರು.

'ನಿವೃತ್ತಿಗೆ ಕ್ಷಣಗಣನೆ ಶುರುವಾಗಿದೆ' ಎಂದು ಸೆರೆನಾ ಒಂದು ತಿಂಗಳ ಹಿಂದೆಯೇ ಪ್ರಕಟಿಸಿದ್ದರು. ವಿದಾಯದ ಬಗ್ಗೆ ಅಧಿಕೃತವಾಗಿ ಏನೂ ಹೇಳಿಲ್ಲವಾದರೂ, ಶುಕ್ರವಾರ ಆಡಿದ ಪಂದ್ಯವೇ ಅವರ ವೃತ್ತಿಜೀವನದ ಕೊನೆಯ ಪಂದ್ಯ ಎಂದು ಭಾವಿಸಲಾಗಿದೆ.

ಸೋಲು ಅನುಭವಿಸಿದ ಸೆರೆನಾ ಭಾವುಕರಾಗಿ ಅಭಿಮಾನಿಗಳತ್ತ ಕೈಬೀಸಿ ಅಂಗಳದಿಂದ ನಿರ್ಗಮಿಸಿದರು. ಈ ಪಂದ್ಯ ವೀಕ್ಷಿಸಲು ಆರ್ಥರ್ ಆ್ಯಷ್ ಕ್ರೀಡಾಂಗಣದಲ್ಲಿ 23,859 ಮಂದಿ ನೆರೆದಿದ್ದರು.

ಸೆ.26ಕ್ಕೆ 41ನೇ ವಯಸ್ಸಿಗೆ ಕಾಲಿಡಲಿರುವ ಸೆರೆನಾ, ತವರು ನೆಲದಲ್ಲಿ ಮತ್ತೊಂದು ಗ್ರ್ಯಾನ್‌ಸ್ಲಾಮ್ ಗೆದ್ದು ವೃತ್ತಿಬದುಕಿಗೆ ತೆರೆ ಎಳೆಯಬೇಕು ಎಂದು ಬಯಸಿದ್ದರು. ಅದಕ್ಕೆ ಟೊಮ್ಲಾನೊವಿಚ್ ಅವಕಾಶ ನೀಡಲಿಲ್ಲ.

ನಿವೃತ್ತಿ ನಿರ್ಧಾರವನ್ನು ಮುಂದೂಡುವ ಸಾಧ್ಯತೆಯಿದೆಯೇ ಎಂಬ ಪ್ರಶ್ನೆಗೆ ಸೆರೆನಾ, 'ನಿರ್ಧಾರ ಪುನರ್ ಪರಿಶೀಲಿಸುವುದಿಲ್ಲ. ಆದರೆ ಭವಿಷ್ಯದ ಬಗ್ಗೆ ಏನನ್ನೂ ಹೇಳಲಾಗದು' ಎಂದು ಉತ್ತರಿಸುವ ಮೂಲಕ ಕುತೂಹಲ ಮೂಡಿಸಿದ್ದಾರೆ.

'ವೃತ್ತಿಜೀವನದಲ್ಲಿ ನನಗೆ 'ಮುನ್ನುಗ್ಗು ಸೆರೆನಾ' ಎಂದು ಹುರಿದುಂಬಿಸಿದ ಪ್ರತಿಯೊಬ್ಬ ಅಭಿಮಾನಿಗೂ ಚಿರಋಣಿಯಾಗಿದ್ದೇನೆ. ನಿಮ್ಮ ಬೆಂಬಲದಿಂದಾಗಿ ನಾನು ಈ ಹಂತದವರೆಗೆ ಬೆಳೆದಿದ್ದೇನೆ' ಎಂದು ಹೇಳಿ ಸೆರೆನಾ ಕಣ್ಣೀರಾದರು.

ಸೆರೆನಾ ಇದೇ ವೇಳೆ ತಮ್ಮ ಅಕ್ಕ ವೀನಸ್ ವಿಲಿಯಮ್ಸ್ ಅವರ ಬೆಂಬಲವನ್ನು ಸ್ಮರಿಸಿಕೊಂಡರು. 'ಒಂದು ವೇಳೆ ವೀನಸ್ ಇಲ್ಲದೇ ಹೋಗಿದ್ದರೆ ಸೆರೆನಾ ಇರುತ್ತಿರಲಿಲ್ಲ. ವೀನಸ್, ನಿನಗೆ ಧನ್ಯವಾದಗಳು. ವೀನಸ್ ಅವರಿಂದಾಗಿಯೇ ಸೆರೆನಾ ನಿಮ್ಮೆಲ್ಲರ ಮುಂದೆ ಬೆಳೆದು ನಿಂತಿದ್ದಾಳೆ' ಎಂದು ಹೇಳಿದರು.

ಸೆರೆನಾ 1999 ರಲ್ಲಿ ತಮ್ಮ 17ನೇ ವರ್ಷದಲ್ಲಿ ಇಲ್ಲಿ ಚಾಂಪಿಯನ್ ಆಗಿ, ಚೊಚ್ಚಲ ಗ್ರ್ಯಾನ್‌ಸ್ಲಾಮ್ ಕಿರೀಟ ಮುಡಿಗೇರಿಸಿಕೊಂಡಿದ್ದರು. ಆ ಬಳಿಕ ಎರಡು ದಶಕಗಳಿಗೂ ಹೆಚ್ಚು ಸಮಯ ಮಹಿಳಾ ಟೆನಿಸ್ ಜಗತ್ತನ್ನು ಆಳಿದರಲ್ಲದೆ, 23 ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿದ್ದಾರೆ. ಅತಿಹೆಚ್ಚು ಗ್ರ್ಯಾನ್‌ಸ್ಲಾಮ್ ಗೆದ್ದವರ ಪಟ್ಟಿಯಲ್ಲಿ ಮಾರ್ಗರೆಟ್ ಕೋರ್ಟ್ (24 ಪ್ರಶಸ್ತಿ) ಬಳಿಕ ಎರಡನೇ ಸ್ಥಾನದಲ್ಲಿದ್ದಾರೆ.

2017ರಲ್ಲಿ ಗೆದ್ದ ಆಸ್ಟ್ರೇಲಿಯಾ ಓಪನ್ ಟೂರ್ನಿಯೇ ಅವರ ಕೊನೆಯ ಗ್ರ್ಯಾನ್‌ಸ್ಲಾಮ್ ಆಗಿದೆ. ಆ ಬಳಿಕ ಗಾಯದ ಸಮಸ್ಯೆ ಹಾಗೂ ವೈಯಕ್ತಿಕ ಕಾರಣಗಳಿಂದ ಕೆಲವು ಸಮಯ ಟೆನಿಸ್‌ನಿಂದ ದೂರವುಳಿದಿದ್ದರು. ಮರಳಿ ಕಣಕ್ಕಿಳಿದರೂ ಹಳೆಯ ಲಯ ಕಂಡುಕೊಳ್ಳಲು ಆಗಿರಲಿಲ್ಲ. 2020ರಲ್ಲಿ ಆಕ್ಲೆಂಡ್‌ನಲ್ಲಿ ನಡೆದ ಎಎಸ್‌ಬಿ ಕ್ಲಾಸಿಕ್ ಟೂರ್ನಿಯ ಬಳಿಕ ಯಾವುದೇ ಡಬ್ಲ್ಯುಟಿಎ ಪ್ರಶಸ್ತಿಯನ್ನೂ ಜಯಿಸಿಲ್ಲ.

ಸೆರೆನಾ ಸಾಗಿದ ಹಾದಿ...

1995: ವೃತ್ತಿಪರ ಆಟಗಾರ್ತಿಯಾಗಿ ಕಣಕ್ಕೆ

1999: ಅಮೆರಿಕ ಓಪನ್‌ನಲ್ಲಿ ಗೆದ್ದು ಮೊದಲ ಗ್ರ್ಯಾನ್‌ಸ್ಲಾಮ್ ಕಿರೀಟ ಮುಡಿಗೆ. ಅಲ್ತಿಯಾ ಗಿಬ್ಸನ್ (1958) ಬಳಿಕ ಗ್ರ್ಯಾನ್‌ಸ್ಲಾಮ್ ಗೆದ್ದ ಮೊದಲ ಆಫ್ರಿಕನ್– ಅಮೆರಿಕನ್ ಮಹಿಳೆ ಎಂಬ ಗೌರವ

2002-03: ಗಾಯದ ಕಾರಣ 2002ರ ಆಸ್ಟ್ರೇಲಿಯಾ ಓಪನ್‌ಗೆ ಗೈರು. ಬಳಿಕದ ಆರು ಗ್ರ್ಯಾನ್‌ಸ್ಲಾಮ್‌ಗಳಲ್ಲಿ ಐದರಲ್ಲಿ ಚಾಂಪಿಯನ್‌ಪಟ್ಟ.

2004-07: ಗಾಯದ ಸಮಸ್ಯೆಯಿಂದ ವೃತ್ತಿಜೀವನದಲ್ಲಿ ಹಿನ್ನಡೆ. ಆದರೂ 2005, 2007ರ ಆಸ್ಟ್ರೇಲಿಯಾ ಓಪನ್‌ನಲ್ಲಿ ಪ್ರಶಸ್ತಿ

2012: ವಿಂಬಲ್ಡನ್ ಕಿರೀಟ ಹಾಗೂ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಸಾಧನೆ

2014: ಅಮೆರಿಕ ಓಪನ್ ಗೆದ್ದು ಕ್ರಿಸ್ ಎವರ್ಟ್ ಮತ್ತು ಮಾರ್ಟಿನಾ ನವ್ರಾಟಿಲೋವಾ (18 ಗ್ರ್ಯಾನ್‌ಸ್ಲಾಮ್) ಅವರ ದಾಖಲೆ ಸರಿಗಟ್ಟಿದ ಸಾಧನೆ

2015: ಆಸ್ಟ್ರೇಲಿಯಾ ಓಪನ್ ಜಯಿಸಿ, 19ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆದ್ದ ಹಿರಿಮೆ

2016: ಸ್ಟೆಫಿ ಗ್ರಾಫ್ ಅವರ 22 ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳ ದಾಖಲೆ ಸರಿಗಟ್ಟಿದ ಸಾಧನೆ

2017: ಆಸ್ಟ್ರೇಲಿಯಾ ಓಪನ್ ಗೆದ್ದು ಸ್ಟೆಫಿ ಗ್ರಾಫ್ ಹಿಂದಿಕ್ಕಿ 23ನೇ ಗ್ರ್ಯಾನ್‌ಸ್ಲಾಮ್ ಕಿರೀಟ ಮುಡಿಗೆ.

2018-19: ಪುತ್ರಿ ಒಲಿಂಪಿಯಾಗೆ ಜನ್ಮನೀಡಿದ ಬಳಿಕ ಟೆನಿಸ್ ಕಣಕ್ಕೆ ಮರಳಿ, ವಿಂಬಲ್ಡನ್ ಮತ್ತು ಅಮೆರಿಕ ಓಪನ್‌ನಲ್ಲಿ ಫೈನಲ್ ಪ್ರವೇಶಿಸಿದ ಸಾಧನೆ

2021-22: 2021ರ ವಿಂಬಲ್ಡನ್ ಟೂರ್ನಿಯಲ್ಲಿ ಆಡುವಾಗ ಗಾಯಗೊಂಡು ಹೊರಕ್ಕೆ. 12 ತಿಂಗಳು ಟೆನಿಸ್‌ನಿಂದ ದೂರ

2022: ವಿಂಬಲ್ಡನ್ ಮೊದಲ ಸುತ್ತಿನಲ್ಲಿ ಸೋಲು. ಅಮೆರಿಕ ಓಪನ್‌ನ ಮೂರನೇ ಸುತ್ತಿನಲ್ಲಿ ನಿರ್ಗಮನ

ಸೆರೆನಾ ವಿಲಿಯಮ್ಸ್ ಸಾಧನೆ

ಗ್ರ್ಯಾನ್‌ಸ್ಲಾಂ	ವರ್ಷ
ಆಸ್ಟ್ರೇಲಿಯಾ ಓಪನ್	2003,2005,2007, 2009, 2010,2015,2017
ಫ್ರೆಂಚ್ ಓಪನ್	2002,2013,2015
ವಿಂಬಲ್ಡನ್	2002,2003,2009,2010,2012, 2015,2016
ಅಮೆರಿಕ ಓಪನ್	1999, 2002, 2008,2012, 2013, 2014

ದೇಶ	ಅಮೆರಿಕ
ಜನ್ಮದಿನ	ಸೆ.26, 1981
ಹುಟ್ಟೂರು	ಸಾಗಿನಾ, ಮಿಷಿಗನ್
ವಾಸ ಸ್ಥಳ	ಪಾಮ್ ಬೀಚ್ ಗಾರ್ಡನ್ಸ್, ಫ್ಲಾರಿಡಾ
ಎತ್ತರ	1.75 ಮೀ.
ಒಟ್ಟು ಪ್ರಶಸ್ತಿ ಹಣ	₹755.72 ಕೋಟಿ
ಒಟ್ಟು ಪ್ರಶಸ್ತಿ	73
ಗ್ರ್ಯಾನ್‌ಸ್ಲಾಮ್ ಕಿರೀಟ	23
ಗೆಲುವು/ ಸೋಲು	858/156

ಡೇನಿಯಲ್ ಮೆಡ್ವೆಡೆವ್– ಎಎಫ್‌ಪಿ ಚಿತ್ರ

ಮರೆಗೆ ಸೋಲು, ಮೆಡ್ವೆಡೆವ್‌ಗೆ ಗೆಲುವು

ನ್ಯೂಯಾರ್ಕ್ (ಎಎಫ್‌ಪಿ): ಅಗ್ರ ರ್‍ಯಾಂಕ್‌ನ ಆಟಗಾರ ರಷ್ಯಾದ ಡೇನಿಯಲ್ ಮೆಡ್ವೆಡೆವ್ ಪುರುಷರ ಸಿಂಗಲ್ಸ್ ವಿಭಾಗ ಮೂರನೇ ಸುತ್ತು ಪ್ರವೇಸಿದರು. ಮೂರನೇ ಸುತ್ತಿನಲ್ಲಿ ಅವರು 6-4, 6-2, 6-2 ರಲ್ಲಿ ಚೀನಾದ ವು ಯಿಬಿಂಗ್ ವಿರುದ್ಧ ಗೆದ್ದರು.

ಬ್ರಿಟನ್‌ನ ಆ್ಯಂಡಿ ಮರೆ ಮೂರನೇ ಸುತ್ತಿನಲ್ಲಿ ಮುಗ್ಗರಿಸಿದರು. ಇಟಲಿಯ ಮಟೆಯೊ ಬೆರೆಟಿನಿ 6-4, 6-4, 6-7, 6-3 ರಲ್ಲಿ ಮರೆ ಅವರನ್ನು ಮಣಿಸಿದರು.

ಮಹಿಳೆಯರ ಸಿಂಗಲ್ಸ್ ವಿಭಾಗದ ಪಂದ್ಯಗಳಲ್ಲಿ ಅಮೆರಿಕದ ಕೊಕೊ ಗಾಫ್ 6–2, 6–3 ರಲ್ಲಿ ತಮ್ಮದೇ ದೇಶದ ಮ್ಯಾಡಿಸನ್ ಕೀಸ್ ವಿರುದ್ಧ ಗೆದ್ದರೆ, ಟ್ಯುನಿಷಿಯಾದ ಆನ್ಸ್ ಜಬೇರ್ 4–6, 6–4, 6–3 ರಲ್ಲಿ ಅಮೆರಿಕದ ಶೆಲ್ಬಿ ರೋಜರ್ಸ್ ಅವರನ್ನು ಮಣಿಸಿದರು.

ಚೆಸ್: ಅಪೂರ್ವ, ಅಕ್ಷಯಾ ಮುನ್ನಡೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಬೆಂಗಳೂರಿನ ಅಪೂರ್ವ ಕಾಂಬ್ಳೆ ಮತ್ತು ಕಾರವಾರದ ಅಕ್ಷಯಾ ಅವರು ಉಡುಪಿಯ ಶ್ರೀ ನಾರಾಯಣ ಗುರು ಸ್ಕೂಲ್ ಆಫ್ ಚೆಸ್ ಮತ್ತು ಕುಂದಾಪುರದ ಶ್ರೀ ಸಿದ್ಧಿವಿನಾಯಕ ಚೆಸ್ ಅಕಾಡೆಮಿ ಆಯೋಜಿಸಿರುವ ಫಿಡೆ ರೇಟೆಡ್ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಮುಕ್ತ ಮತ್ತು ಬಾಲಕಿಯರ ವಿಭಾಗದಲ್ಲಿ ಅಗ್ರಸ್ಥಾನ ಕಾಯ್ದುಕೊಂಡರು.

ಉಡುಪಿಯ ಎಲ್‌ಐಸಿಓ ಬ್ಯಾಂಕ್ ಸಭಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಶನಿವಾರ 5ನೇ ಸುತ್ತಿನ ಮುಕ್ತಾಯಕ್ಕೆ ಅಪೂರ್ವ ಕಾಂಬ್ಳೆ ಮತ್ತು ಅಕ್ಷಯಾ ತಲಾ ಐದು ಪಾಯಿಂಟ್‌ಗಳನ್ನು ಗಳಿಸಿದ್ದಾರೆ. ಅಪೂರ್ವ ಐದನೇ ಸುತ್ತಿನಲ್ಲಿ ಬೆಂಗಳೂರಿನ ಸ್ಯಾಮ್ಯುಯೆಲ್ ಮ್ಯಾಥ್ಯೂ ಅವರನ್ನು ಮಣಿಸಿದರು. 1218 ರೇಟಿಂಗ್ ಹೊಂದಿರುವ ಅಕ್ಷಯಾ ಉಡುಪಿಯ ದಿಶಾ ವಿರುದ್ಧ ಗೆಲುವು ಸಾಧಿಸಿದರು.

5ನೇ ಸುತ್ತಿನ ಅಂತ್ಯಕ್ಕೆ ಅಗ್ರ ಸ್ಥಾನಗಳಲ್ಲಿರುವವರು: ಮುಕ್ತ ವಿಭಾಗ: ಅಪೂರ್ವ ಕಾಂಬ್ಳೆ (ಬೆಂಗಳೂರು)–5 ಪಾಯಿಂಟ್, ಧನುಷ್ ರಾಮ್ (ದಕ್ಷಿಣ ಕನ್ನಡ)–4.5, ವಿಕ್ರಾಂತ್ ಕೃಷ್ಣಕುಮಾರ್ (ಬೆಂಗಳೂರು)–4.5, ಆರಾಧ್ಯೊ ಭಟ್ಟಾಚಾರ್ಯ (ದ.ಕನ್ನಡ)–4.5. ಬಾಲಕಿಯರ ವಿಭಾಗ: ಅಕ್ಷಯಾ (ಉತ್ತರ ಕನ್ನಡ)–5, ರುದ್ರಾ ರಾಜೀವ್ (ದಕ್ಷಿಣ ಕನ್ನಡ)–4.5, ಗೋಪಿಕಾ ಎಂ (ಬೆಂಗಳೂರು)–4.5.

ರಾಕೆಟ್ ಉಡಾವಣೆ ಮತ್ತೆ ಮುಂದಕ್ಕೆ

ಕೇಪ್ ಕ್ಯಾನವೆರಲ್(ಎಪಿ): ಚಂದಿರನ ಅಂಗಳಕ್ಕೆ ಮನುಷ್ಯನನ್ನು ಪುನಃ ಕಳುಹಿಸಿ ಇತಿಹಾಸ ಸೃಷ್ಟಿಸುವ ಅಮೆರಿಕದ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ನಾಸಾ) ಮಹತ್ವಾಕಾಂಕ್ಷೆ ಯೋಜನೆಗೆ ಶನಿವಾರ ಮತ್ತೊಮ್ಮೆ ಅಡ್ಡಿ ಎದುರಾಯಿತು.

ಉಡಾವಣೆಗೆ ಸಜ್ಜಾಗಿದ್ದ 322 ಅಡಿ ಉದ್ದದ ರಾಕೆಟ್‌ನಲ್ಲಿ ಇಂಧನ ಸೋರಿಕೆ ಆಗುತ್ತಿರುವುದು ಪತ್ತೆಯಾದ ಹಿನ್ನೆಲೆಯಲ್ಲಿ ವಿಜ್ಞಾನಿಗಳ ತಂಡ ಕಾರ್ಯಾಚರಣೆಯನ್ನು ರದ್ದುಗೊಳಿಸಿತು. ಇಂಧನ ಸೋರಿಕೆಯಿಂದ ಯಾವುದೇ ಹಾನಿಯಾಗಿಲ್ಲ ಎಂದು ನಾಸಾ ತಿಳಿಸಿದೆ. ಎಂಜಿನಿಯರ್‌ಗಳು ದೋಷವನ್ನು ಸರಿಪಡಿಸಲು ಪ್ರಯತ್ನಿಸಿದರೂ ಸಮಸ್ಯೆ ಬಗೆಹರಿಯಲಿಲ್ಲ.

ನಾಸಾದ ಆರ್ಟೆಮಿಸ್ ರಾಕೆಟ್

ಸೋಮವಾರ ಕೂಡ ಇಂಧನ ಸೋರಿಕೆ ಮತ್ತು ಎಂಜಿನ್‌ನಲ್ಲಿ ದೋಷ ಪತ್ತೆಯಾದ ಹಿನ್ನೆಲೆಯಲ್ಲಿ ಕೊನೇ ಕ್ಷಣದಲ್ಲಿ ರಾಕೆಟ್ ಉಡಾವಣೆಯನ್ನು ಸ್ಥಗಿತಗೊಳಿಸಲಾಗಿತ್ತು.

ಮಿಖಾಯಿಲ್ ಗೊರ್ಬಚೇವ್ ಅವರ ಮಗಳು ಐರಿನಾ ವಿರ್ಗಾನ್ಸ್ಕಾಯಾ ಅವರು ಪಾರ್ಥಿವ ಶರೀರದ ಬಳಿ ದುಃಖತಪ್ತರಾಗಿದ್ದರು –ಎಎಫ್‌ಪಿ ಚಿತ್ರ

ಗೊರ್ಬಚೆವ್‌ಗೆ ಅಂತಿಮ ವಿದಾಯ, ಪುಟಿನ್ ಗೈರು

ಮಾಸ್ಕೊ(ಎಎಫ್‌ಪಿ): ಆಗಸ್ಟ್ 30ರಂದು ನಿಧನ ಹೊಂದಿದ ರಷ್ಯಾ ಸಂಯುಕ್ತ ಸಂಸ್ಥಾನದ ಕೊನೆಯ ಅಧ್ಯಕ್ಷ ಮಿಖಾಯಿಲ್ ಗೊರ್ಬಚೆವ್ ಅವರಿಗೆ ಶನಿವಾರ ರಷ್ಯಾದ ಜನರು ಭಾವಪೂರ್ಣ ವಿದಾಯ ಹೇಳಿದರು. ಆದರೆ, ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಗೈರು ಹಾಜರಾಗಿದ್ದರು.

ಇಲ್ಲಿನ ಐತಿಹಾಸಿಕ ಹಾಲ್ ಆಫ್ ಕಾಲಮ್ಸ್‌ನಲ್ಲಿ ತೆರೆದ ಪೆಟ್ಟಿಗೆಯಲ್ಲಿ ಇರಿಸಿದ್ದ ಪಾರ್ಥಿವ ಶರೀರಕ್ಕೆ ಸಾವಿರಾರು ಜನರು ಸರತಿ ಸಾಲಿನಲ್ಲಿ ನಿಂತು ಗೌರವ ಸಲ್ಲಿಸಿದರು. ರಷ್ಯಾದ ಧ್ವಜ ಹಿಡಿದಿದ್ದ ಸಿಬ್ಬಂದಿ ಗೌರವ ರಕ್ಷೆ ನೀಡಿದರು.

ಮಾಸ್ಕೊದ ಪ್ರತಿಷ್ಠಿತ ನೊವೊಡೆವಿಚಿ ಸ್ಮಶಾನದಲ್ಲಿ ಪತ್ನಿ ರೈಸಾ ಪಕ್ಕದಲ್ಲಿಯೇ ಅವರ ಸಮಾಧಿ ಮಾಡಲಾಯಿತು.

ಪುಟಿನ್ ಅವರು ಆಸ್ಪತ್ರೆಯಲ್ಲಿ-ಗೊರ್ಬಚೇವ್ ಮೃತದೇಹಕ್ಕೆ ಕೆಂಪು ಗುಲಾಬಿಗಳ ಪುಷ್ಪಗುಚ್ಛವನ್ನು ಇಡುತ್ತಿರುವ ಚಿತ್ರಗಳನ್ನು ಸರ್ಕಾರಿ ಸ್ವಾಮ್ಯದ ಮಾಧ್ಯಮ ಪ್ರಸಾರ ಮಾಡಿದೆ. 'ಪೂರ್ವ ನಿಗದಿತ ಕಾರ್ಯಕ್ರಮಗಳಿಂದಾಗಿ ಅಂತ್ಯಕ್ರಿಯೆಯಲ್ಲಿ ಪುಟಿನ್ ಭಾಗವಹಿಸಲಿಲ್ಲ' ಎಂದು ಕೆಮ್ಲಿನ್ ಹೇಳಿದೆ.

1985 ರಿಂದ 1991ರ ಅಂತ್ಯದವರೆಗೂ ಅವರು ರಷ್ಯಾ ಸಂಯುಕ್ತ ಸಂಸ್ಥಾನದ ಅಧ್ಯಕ್ಷರಾಗಿದ್ದರು. ಹಲವು ನಿರ್ಣಾಯಕ ನಿರ್ಧಾರಗಳನ್ನು ತೆಗೆದುಕೊಂಡಿದ್ದರು. ಶೀತಲ ಸಮರಕ್ಕೆ ಅಂತ್ಯ ಹಾಡಿದ ಅವರಿಗೆ 1990ರಲ್ಲಿ ನೊಬೆಲ್ ಶಾಂತಿ ಪ್ರಶಸ್ತಿ ಸಂದಿತ್ತು.

ತವರಿಗೆ ಮರಳಿದ ಗೋಟಬಯಗೆ ವಿಶೇಷ ಭದ್ರತೆ, ಸರ್ಕಾರಿ ಬಂಗಲೆ

ಕೊಲಂಬೊ (ಪಿಟಿಐ): ತವರಿಗೆ ಮರಳಿದ ಶ್ರೀಲಂಕಾದ ಮಾಜಿ ಅಧ್ಯಕ್ಷ ಗೊಟಬಯ ರಾಜಪಕ್ಸ (73) ಅವರಿಗೆ ವಿಶೇಷ ಭದ್ರತೆ ಮತ್ತು ವಾಸಕ್ಕೆ ಸರ್ಕಾರಿ ಬಂಗಲೆ ನೀಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಿಗಿ ಪೊಲೀಸ್ ಭದ್ರತೆಯಲ್ಲಿ ಶುಕ್ರವಾರ ತಡರಾತ್ರಿ ಕೊಲಂಬೊಗೆ ಬಂದಿಳಿದ ರಾಜಪಕ್ಸ ಅವರಿಗೆ ಅದ್ದೂರಿ ಸ್ವಾಗತ ನೀಡಲಾಯಿತು. ಬ್ಯಾಂಕಾಕ್‌ನಿಂದ ಸಿಂಗಪುರ ಮಾರ್ಗವಾಗಿ ಇಲ್ಲಿನ ಬಂಡಾರನಾಯಿಕೆ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದ ಅವರನ್ನು ಪಕ್ಷದ ಸಚಿವರು ಮತ್ತು ರಾಜಕೀಯ ನಾಯಕರು ಬರಮಾಡಿಕೊಂಡರು.

ಕೊಲಂಬೊದ ಪೂರ್ವ ಉಪನಗರ ಮಿರಿಹಾನದ ತಮ್ಮ ಖಾಸಗಿ ನಿವಾಸಕ್ಕೆ ತೆರಳಲು ರಾಜಪಕ್ಸ ಬಯಸಿದ್ದರು. ಆದರೆ, ಭದ್ರತೆಯ ಕಾರಣಕ್ಕಾಗಿ 2019ರಲ್ಲಿ ಅಧ್ಯಕ್ಷರಾದ ನಂತರವೂ ವಾಸಿಸುತ್ತಿದ್ದ ಅವರ ಖಾಸಗಿ ನಿವಾಸಕ್ಕೆ ಹೋಗಲು ಅವಕಾಶ ನೀಡಲಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ರಾಜಪಕ್ಸ ಮತ್ತೆ ರಾಜಕೀಯ ಆರಂಭಿಸುತ್ತಾರೆ ಎಂದು ಪಕ್ಷದ ಅನೇಕ ಸದಸ್ಯರು ನಿರೀಕ್ಷಿಸುತ್ತಿದ್ದರೂ ಅವರು ರಾಜಕೀಯದಲ್ಲಿ ತೊಡಗಿಸಿಕೊಳ್ಳುವುದಿಲ್ಲ' ಎಂದು ಆಡಳಿತಾರೂಢ ಎಸ್‌ಎಲ್‌ಪಿಪಿಯ ಮೂಲಗಳು ಎಕಾನಮಿ ವೆಬ್‌ಸೈಟ್‌ಗೆ ತಿಳಿಸಿವೆ.

ಮಾಜಿ ಅಧ್ಯಕ್ಷರು ಸರ್ಕಾರಿ ವಸತಿ, ಭದ್ರತಾ ಸಿಬ್ಬಂದಿ ಮತ್ತು ಇತರೆ ಸವಲತ್ತು ಪಡೆಯಲು ಅರ್ಹರಾಗಿದ್ದಾರೆ.

ಅಧ್ಯಕ್ಷ ರಾನಿಲ್ ವಿಕ್ರಮಸಿಂಘೆ ನೇತೃತ್ವದ ಹೊಸ ಸರ್ಕಾರಕ್ಕೆ ರಾಜಪಕ್ಸ ಹಿಂದಿರುಗಿರುವುದು ಸೂಕ್ಷ್ಮ ವಿಷಯವಾಗಿದೆ. ಹೆಚ್ಚಿನ ಪ್ರತಿಭಟನೆಗಳು ನಡೆಯುವುದನ್ನು ಬಯಸುವುದಿಲ್ಲ ಮತ್ತು ಅವರ ಭದ್ರತೆಗೆ ಆದ್ಯತೆ ನೀಡಿದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಕೆಂಪೇಗೌಡ ಬಸ್ ನಿಲ್ದಾಣ ವಿಭಾಗ, ಬೆಂಗಳೂರು.
ಸಂಖ್ಯೆ: ಕರಾಸಾ/ಕೆಂಬನಿ/ವಾ–1/687/2022–23 ದಿನಾಂಕ: 03–09–2022
ಇ–ಟೆಂಡರ್ ಪ್ರಕಟಣೆ ಸಂಖ್ಯೆ–03/2022–23
ಕೆಂಪೇಗೌಡ ಬಸ್ ನಿಲ್ದಾಣ ವಿಭಾಗದ ವ್ಯಾಪ್ತಿಯಲ್ಲಿ ಬರುವ ಮೈಸೂರು ರಸ್ತೆ ಬಸ್ ನಿಲ್ದಾಣ, ಬೆಂಗಳೂರು ... https://www.eproc.karnataka.gov.in ... ksrtc.karnataka.gov.in ... 7760990554 / 7760990557 ... 8046010000 / 8068948777.
ಸಹಿ/– ವಿಭಾಗೀಯ ನಿಯಂತ್ರಣಾಧಿಕಾರಿ ಕೆಂಬನಿ ವಿಭಾಗ, ಬೆಂಗಳೂರು.

ಆಯುಕ್ತರು, ಖಜಾನೆ ಇಲಾಖೆ
5ನೇ & 6ನೇ ಮಹಡಿ, ಕೆ.ಪಿ.ಸಿ.ಎಲ್. ಗ್ರೀನ್ ಕಟ್ಟಡ, ಅರಮನೆ ರಸ್ತೆ, ಬೆಂಗಳೂರು–560001. ದೂ: 080–22028210 ಫ್ಯಾಕ್ಸ್: 080–22028209
ಸಂ.: ಖ.ಆ/ಸಂಗ್ರಹಣೆ/52/2021–22 ದಿನಾಂಕ : 02.09.2022
ಅಲ್ಪಾವಧಿ ಟೆಂಡರ್
... www.eproc.karnataka.gov.in ... 19.09.2022, ಸಂಜೆ 5.30ರೊಳಗೆ ...
ವಾಸಾಸಂ/ಆರ್–ಸಿ.ಪಿ/2041/ಎಂಸಿಎ/2022–23

ರೈಲು ಗಾಲಿ ಕಾರ್ಖಾನೆ
ಯಲಹಂಕ, ಬೆಂಗಳೂರು–560064
ವೆಬ್‌ಸೈಟ್: www.rwf.indianrailways.gov.in
ಇ. ಟೆಂಡರ್ ಸೂಚನೆ ಸಂಖ್ಯೆ. ಆರ್‌ಡಬ್ಲ್ಯೂಎಫ್/ಎಂ/ಓಟಿ/ಎಎಂಎಸ್/2022–23/16 ದಿನಾಂಕ: 02/09/2022
ಇ–ಟೆಂಡರ್: ಭಾರತದ ರಾಷ್ಟ್ರಪತಿಗಳ ಪರವಾಗಿ, ಪ್ರಧಾನ ಮುಖ್ಯ ಮೆಕ್ಯಾನಿಕಲ್ ಇಂಜಿನಿಯರ್ ಅವರು ಈ ಕೆಳಗಿನ ಕಾಮಗಾರಿಗೆ ದ್ವಿಲಕೋಟಿ ಪದ್ಧತಿಯಲ್ಲಿ ಎಲೆಕ್ಟ್ರಾನಿಕ್ ಟೆಂಡರ್ ಅನ್ನು ಭಾರತೀಯ ರೈಲ್ವೇ ಇ–ಪೋರ್ಟಲ್ http://www.ireps.gov.in (ಕೆಲಸ) ಮೂಲಕ ಆಹ್ವಾನಿಸಿದ್ದಾರೆ ...

ಭಾರತದ ಆಹಾರ ನಿಗಮ
ಪ್ರಾದೇಶಿಕ ಕಚೇರಿ: #10, ಈಸ್ಟ್ ಎಂಡ್ ಮುಖ್ಯ ರಸ್ತೆ, 4 ನೇ "ಟಿ" ಹಂತ, ಜಯನಗರ, ಬೆಂಗಳೂರು– 560041
ನೇಮಕಾತಿ ಪ್ರಕಟಣೆ
... https://fci.gov.in ...

ಶಿಶು ಅಭಿವೃದ್ಧಿ ಯೋಜನೆ, ಭರಮಸಾಗರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಚಿತ್ರದುರ್ಗ.
ದಿ: 01.09.2022
ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ
... http://eproc.karnataka.gov.in ...

ನಗರಸಭಾ ಕಾರ್ಯಾಲಯ, ಕಾರವಾರ
ಫೋನ್: 08382–227900 ಫ್ಯಾಕ್ಸ್: 08382–222170
ಇ–ಮೇಲ್: itstaff_ulb_karwar@yahoo.com ವೆಬ್‌ಸೈಟ್: www.karwarcity.mrc.gov.in
ದಿನಾಂಕ: 02/09/2022
ಟೆಂಡರ್ ಪ್ರಕಟಣೆ
... DMA/2021-22/OW/WORK_INDENT125424/call-3 ...
ಸಹಿ/– ಪೌರಾಯುಕ್ತರು, ನಗರಸಭೆ, ಕಾರವಾರ

ಕರ್ನಾಟಕ ಸರ್ಕಾರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಲಲಿತ ಟವರ್, ಕೆನರಾ ಬ್ಯಾಂಕ್ ಹತ್ತಿರ, ಸಕಲೇಶಪುರ–573134
ಅಂಗನವಾಡಿ ಕೇಂದ್ರಗಳಿಗೆ ಮೊಟ್ಟೆ ಸರಬರಾಜು ಟೆಂಡರ್ ಪ್ರಕಟಣೆ
... https://eproc.karnataka.gov.in ...
ಸಹಿ/– ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಸಕಲೇಶಪುರ.

ಮಹಾನಗರ ಪಾಲಿಕೆ ಕಾರ್ಯಾಲಯ, ದಾವಣಗೆರೆ.
ದಿ:02.09.2022
ಟೆಂಡರ್ ಪ್ರಕಟಣೆ ಮುಂದುವರಿಕೆ
... ಸಹಿ/– ಆಯುಕ್ತರು

ಉಪನಿರ್ದೇಶಕರ ಕಚೇರಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಮಗ್ರ ಶಿಕ್ಷಣ ಕರ್ನಾಟಕ ಗದಗ
ದಿನಾಂಕ: 02–9–2022
ಮರು ಟೆಂಡರ್ ಪ್ರಕಟಣೆ
... www.eproc.karnataka.gov.in ... 17–09–2022 ...
ಸಹಿ/– ಉಪನಿರ್ದೇಶಕರು(ಆ), ಸಮಗ್ರ ಶಿಕ್ಷಣ ಕರ್ನಾಟಕ, ಗದಗ

ನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಬೆಂಗಳೂರು–560 001. ದೂರವಾಣಿ: 080–22353778, E-mail: dwcd.est@gmail.com
ಸಂಖ್ಯೆ: E-Office File No: ಮಮಇ/765712/2022–23 ದಿನಾಂಕ: 02–09–2022
ಪ್ರಕಟಣೆ
... https://dwcd.karnataka.gov.in ...
DIPR/CP/RO2052/AAPL/2022-23 ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.

ತುಮಕೂರು ಮಹಾನಗರ ಪಾಲಿಕೆ, ತುಮಕೂರು
ದೂ–2278480, ಫ್ಯಾಕ್ಸ್: 2275106, ಇ–ಮೇಲ್: itstaff_ulb_tumkur@yahoo.com ವೆಬ್‌ಸೈಟ್: www.tumkurcity.mrc.gov.in
ದಿನಾಂಕ 01.09.2022
ಟೆಂಡರ್ ಪ್ರಕಟಣೆ
... http://www.eproc.karnataka.gov.in ... 05.09.2022 ರಿಂದ 20.09.2022 ಸಂಜೆ 4.30 ... 21.09.2022 ...
ಸಹಿ/– ಕಾರ್ಯಪಾಲಕ ಅಭಿಯಂತರರು ಮಹಾನಗರ ಪಾಲಿಕೆ, ತುಮಕೂರು
DIPR/TUM/470/MCA/2022-23

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ದಿನಾಂಕ: 03–09–2022
ಅಲ್ಪಾವಧಿ ಟೆಂಡರ್ ಪ್ರಕಟಣೆ – (2ನೇ ಕರೆ)
... www.eproc.karnataka.gov.in ... 832.00 ...

ಸಂಬಂಜ ಅನ್ನೋದು...

11

ಕಣ್ಮರೆಯಾದ ಜ್ಞಾನದ ಬೆಳಕು



ಅನಂತ ಅಮೃತಯಾನ

13

ಪರಂಪರೆಯ ಜಾಡು...

ಶಾಲಾ ಶಿಕ್ಷಕರಾಗಿ ವೃತ್ತಿಯನ್ನು ಆರಂಭಿಸಿದ ಎಷ್ಟೊಂದು ಜನ ಎಂತೆಂಥ ದೊಡ್ಡ ಸಾಧನೆ ಮಾಡಿದ್ದಾರೆ ಗೊತ್ತೆ? ಅಂತಹ ಸಾಧಕ ತಾರೆಗಳಲ್ಲಿ ಕೆಲವರನ್ನು ನಿಮ್ಮ ಮುಂದೆ ಮತ್ತೆ ಕರೆತಂದಿದ್ದಾರೆ **ಮಂಜುಶ್ರೀ ಎಂ. ಕಡಕೋಳ**. ಈ ಸಾಧಕರ ಸ್ಮರಣೆ ಗುರುಮಾರ್ಗದಲ್ಲಿ ಹೊಸ ಬೆಳಕನ್ನೂ ಚೆಲ್ಲಬಲ್ಲುದು

ಪಾ.ವೆಂ. ಆಚಾರ್ಯ

ಕನ್ನಡ ಪತ್ರಿಕೋದ್ಯಮದಲ್ಲಿ ತಮ್ಮದೇ ಆದ ಛಾಪು ಮೂಡಿಸಿರುವ ಪಾಡಿಗಾರು ವೆಂಕಟರಮಣ ಆಚಾರ್ಯ (ಪಾ.ವೆಂ. ಆಚಾರ್ಯ) ಅವರೂ ಒಂದುಕಾಲಕ್ಕೆ ಶಿಕ್ಷಕರಾಗಿದ್ದರು. ಎಸ್ಸೆಸ್ಸೆಲ್ಸಿಯವರೆಗೆ ಓದಿದ್ದ ಅವರು ಹೊಂದಿದ ವಿದ್ವತ್ತು ಮಾತ್ರ ವಿಶ್ವವಿದ್ಯಾಲಯದ ಪ್ರೊಫೆಸರ್‌ಗಳನ್ನು ಮೀರಿಸುವಂಥದ್ದಾಗಿತ್ತು.

ಪಾ.ವೆಂ. ಅವರಿಗೆ ಹಣದ ಕೊರತೆಯಿಂದ ಹೆಚ್ಚಿನ ಶಿಕ್ಷಣ ಪಡೆಯಲಾಗಲಿಲ್ಲ. ಆದರೆ, ಪತ್ರಿಕೋದ್ಯಮದಲ್ಲಿ ಕಲಿತದ್ದು ಅಪಾರ. ಉಡುಪಿಯಲ್ಲಿ ಶಾಲಾ ಮಾಸ್ತರರಾಗಿ ವೃತ್ತಿ ಜೀವನ ಆರಂಭಿಸಿದ ಆಚಾರ್ಯರು, ಮುದ್ರಣಾಲಯದ ಕಾರ್ಮಿಕ, ಅಂಗಡಿಯಲ್ಲಿ ಲೆಕ್ಕಿಗರಾಗಿಯೂ ಕಾರ್ಯನಿರ್ವಹಿಸಿದ್ದುಂಟು. ಹಂತಹಂತವಾಗಿ ಬರವಣಿಗೆಯ ರುಚಿ ಹಚ್ಚಿಸಿಕೊಂಡ ಆಚಾರ್ಯರು ಮುಂದೆ 'ಕಸ್ತೂರಿ' ಮಾಸಿಕಕ್ಕೆ ಸಂಪಾದಕರಾಗಿದ್ದು ಇತಿಹಾಸ.

'ಲಾಂಗೂಲಾಚಾರ್ಯ' ಎನ್ನುವ ಕಾವ್ಯನಾಮದ ಅವರ ಬರಹಗಳು, ಪದಾರ್ಥ ಚಿಂತಾಮಣಿ ಅಂಕಣದ ಮೂಲಕ ಅವರು ನಡೆಸುತ್ತಿದ್ದ ಚರ್ಚೆಗಳು ಓದುಗರ ಅರಿವನ್ನು ಹೆಚ್ಚಿಸುತ್ತಿದ್ದವು. ನಿತ್ಯ ಜೀವನದಲ್ಲಿ ನಾವು ಬಳಸುವ 'ಪದ'ವೊಂದಕ್ಕೆ ಇರುವ ನಾನಾ ಅರ್ಥಗಳು, ಅದರ ಬಳಕೆಯ ಸ್ವರೂಪ, ಪುರಾಣ– ಇತಿಹಾಸ– ವರ್ತಮಾನದಲ್ಲಿ ಆ ಪದದ ಬಳಕೆ ಇತ್ಯಾದಿ ಕುರಿತ 'ಪದಾರ್ಥ ಚಿಂತಾಮಣಿ' ಅಂಕಣವು ಅಪಾರ ಜನಪ್ರಿಯತೆಯನ್ನು ಗಳಿಸಿತ್ತು. ಸಾಹಿತ್ಯ, ಮನೋವಿಜ್ಞಾನ, ಖಗೋಳ ಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ ಹೀಗೆ ಹಲವು ಕ್ಷೇತ್ರಗಳಲ್ಲಿ ಅಗಾಧ ಪಾಂಡಿತ್ಯ ಹೊಂದಿದ್ದ ಆಚಾರ್ಯರು, ಡಿವಿಜಿ ಅವರ 'ಮಂಕುತಿಮ್ಮನ ಕಗ್ಗ' ಮಾದರಿಯಲ್ಲಿ 'ಪೆಂಗೋಪದೇಶ' ಪದ್ಯಗಳನ್ನೂ ರಚಿಸಿದ್ದಾರೆ.

'ಸಿಸು' ಸಂಗಮೇಶ



ಕನ್ನಡ ಶಿಶು ಸಾಹಿತ್ಯಕ್ಕೆ ಅಪೂರ್ವ ಕೊಡುಗೆ ನೀಡಿದ 'ಸಿಸು' ಸಂಗಮೇಶ ಕೂಡ ಶಾಲಾ ಮಾಸ್ತರರು. ಹುಟ್ಟಿದ್ದು ವಿಜಯಪುರ ಜಿಲ್ಲೆಯ ಬಾಗೇವಾಡಿ ಸಮೀಪದ ಯರನಾಳ ಗ್ರಾಮ. ಪೂರ್ಣ ಹೆಸರು ಸಂಗಮೇಶ ಸಿದ್ದರಾಮಪ್ಪ ಮನಗೊಂಡ.

ಶಾಲಾ ಮಾಸ್ತರರಾಗಿ ವೃತ್ತಿ ಜೀವನದ ಆರಂಭಿಸಿದ ಸಂಗಮೇಶ ಅವರು ಮುಖ್ಯೋಪಾಧ್ಯಾಯರಾಗಿ ನಿವೃತ್ತರಾದವರು. ಶಾಲಾ ಮಕ್ಕಳೊಂದಿಗೆ ಜೀವನದ ಬಹುಭಾಗವನ್ನು ಕಳೆದ ಸಂಗಮೇಶ ಅವರು, ಮಕ್ಕಳ ಮನೋಲೋಕ ಅರಿತು ಅನೇಕ ಕೃತಿಗಳನ್ನು ರಚಿಸಿದವರು. ಸಾಹಿತ್ಯದ ಆಸಕ್ತಿಯು ಕವಿತೆ, ಅನುವಾದ, ಸಂಪಾದನೆಯತ್ತ ಸೆಳೆಯಿತು. ಮಕ್ಕಳ ಸಾಹಿತ್ಯ ಪ್ರಕಾರವನ್ನು ಬೆಳೆಸುವಲ್ಲಿ ಅಪಾರ ಆಸಕ್ತಿ ವಹಿಸಿದವರು. ಇದಕ್ಕಾಗಿಯೇ 'ಬಾಲಭಾರತಿ' ಪ್ರಕಾಶನ ಸ್ಥಾಪಿಸಿ ಅದರಡಿ 80ಕ್ಕೂ ಹೆಚ್ಚು ಮಕ್ಕಳ ಕೃತಿಗಳನ್ನು ಮುದ್ರಿಸಿದರು. ಅಂತೆಯೇ 'ಬಾಲಭಾರತಿ' ಎನ್ನುವ ಮಕ್ಕಳ ಮಾಸಪತ್ರಿಕೆಯನ್ನು ನಾಲ್ಕು ವರ್ಷ ನಡೆಸಿದರು.

ಮಕ್ಕಳ ಸಾಹಿತ್ಯ ಪ್ರೋತ್ಸಾಹಿಸಲು ರಾಜ್ಯಮಟ್ಟದಲ್ಲಿ ಮಕ್ಕಳ ಸಾಹಿತ್ಯ ಅಕಾಡೆಮಿ ಸ್ಥಾಪಿಸಿದ್ದ ಸಂಗಮೇಶ ಅವರು, ಕನ್ನಡ ಸಾಹಿತ್ಯ ಪರಿಷತ್ತು ಚನ್ನಪಟ್ಟಣದಲ್ಲಿ ಸಂಘಟಿಸಿದ್ದ ಮಕ್ಕಳ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆ ವಹಿಸಿದ್ದರು. ಮಕ್ಕಳ ಸಾಹಿತ್ಯಕ್ಕೆ ಸಂಬಂಧಿಸಿದಂತೆ ದೇಶ, ವಿದೇಶಗಳಲ್ಲಿ ಅನೇಕ ಸಮ್ಮೇಳನ, ವಿಚಾರಗೋಷ್ಠಿಗಳಲ್ಲಿ ಭಾಗಿಯಾಗಿದ್ದರು.

ಸುದರ್ಶನ ದೇಸಾಯಿ

ಕನ್ನಡದ ಪತ್ತೇದಾರಿ ಕಾದಂಬರಿ ಲೋಕದಲ್ಲಿ ಸುದರ್ಶನ ದೇಸಾಯಿ ಅವರದ್ದು ಅಚ್ಚಳಿಯದ ಹೆಸರು. ಧಾರವಾಡದಲ್ಲಿ ಹುಟ್ಟಿ ಬೆಳೆದ ಸುದರ್ಶನ ಅವರು, ಆರಂಭಿಕ ಶಿಕ್ಷಣ ಪಡೆದಿದ್ದು, ಮುಂದೆ ಶಿಕ್ಷಕ ತರಬೇತಿ ಪೂರೈಸಿ ವೃತ್ತಿ ಜೀವನ ಆರಂಭಿಸಿದ್ದೂ ಸರ್ಕಾರಿ ಶಾಲೆಯಲ್ಲೇ.

34 ವರ್ಷಗಳ ಸುದೀರ್ಘ ಕಾಲ ಶಿಕ್ಷಕರಾಗಿ ಮಕ್ಕಳ ಒಡನಾಟದಲ್ಲಿದ್ದ ಸುದರ್ಶನ ಅವರು ಮಕ್ಕಳಲ್ಲಿನ ಕುತೂಹಲವನ್ನು ತಮ್ಮ ಪತ್ತೇದಾರಿ ಕಾದಂಬರಿಯಲ್ಲೂ ಕಾಪಿಟ್ಟುಕೊಂಡವರು. ಕನ್ನಡ ಸಾಹಿತ್ಯ ಲೋಕದಲ್ಲಿ ಪತ್ತೇದಾರಿ ಸಾಹಿತ್ಯಕ್ಕೊಂದು ಘನತೆ, ಗೌರವ ತಂದುಕೊಟ್ಟಿದ್ದ ಅವರು, ಮಕ್ಕಳ ಸಾಹಿತ್ಯ ಮತ್ತು ಹಾಸ್ಯ ಸಾಹಿತ್ಯ ಪ್ರಕಾರಗಳಲ್ಲೂ ಕೃತಿಗಳನ್ನು ರಚಿಸಿದ್ದಾರೆ.

ದ.ರಾ.ಬೇಂದ್ರೆ, ದಿನಕರ ದೇಸಾಯಿ ಅವರ ಪ್ರೇರಣೆಯಿಂದ ಸಾಹಿತ್ಯ ಲೋಕ ಪ್ರವೇಶಿಸಿದ ಸುದರ್ಶನ ಅವರು ಆರಂಭದ ದಿನಗಳಲ್ಲಿ ಕಥೆಗಾರರಾಗಿ ಖ್ಯಾತರಾದವರು. ಜಗತ್ತಿನಾದ್ಯಂತ ಓದುಗರ ಗಮನ ಸೆಳೆದ ಜೈಲಿನ ಕಥೆಗಳನ್ನು ಆಧರಿಸಿ 'ಸುಧಾ' ವಾರಪತ್ರಿಕೆಗೆ ಬರೆದ 'ಮೃತ್ಯುವಿಗೆ ಮುತ್ತಿಟ್ಟವರು' ಧಾರಾವಾಹಿ ಅವರಿಗೆ ದೊಡ್ಡ ಹೆಸರು ತಂದುಕೊಟ್ಟಿತ್ತು. 60ಕ್ಕೂ ಹೆಚ್ಚು ಕಾದಂಬರಿಗಳನ್ನು ಬರೆದು ಪತ್ತೇದಾರಿ ಕಾದಂಬರಿ ಪ್ರಿಯರ ಮನದಲ್ಲಿ ಇಂದಿಗೂ ತಮ್ಮ ಛಾಪು ಉಳಿಸಿಕೊಂಡಿರುವ ಅವರು, ಮಕ್ಕಳಿಗಾಗಿ ಜಾಣಮಗು, ಸರಕೆ ಭರಕೆ, ಪುಟ್ಟ ಹಕ್ಕಿ ಕವನ ಸಂಕಲನಗಳನ್ನೂ ರಚಿಸಿದ್ದಾರೆ.

ಸುದರ್ಶನ ಅವರ 'ತಿರುವು' ಕಾದಂಬರಿಯನ್ನು ಆಧರಿಸಿ ಪುಟ್ಟಣ್ಣ ಕಣಗಾಲ್ ಅವರು 'ಮಾನಸ ಸರೋವರ' ಸಿನಿಮಾ ಮಾಡಿದ್ದಾರೆ. ಅಂತೆಯೇ ಅವರ ರಚನೆಯ ಶರವೇಗದ ಸರದಾರ, ಕೆರಳಿದ ಸರ್ಪ, ಎಂಟೆದೆಯ ಭಂಟ, ಮೃತ್ಯು ಬಂಧನ ಮೊದಲಾದ ಕಾದಂಬರಿಗಳು ಸಿನಿಮಾಗಳಾಗಿ ಜನಪ್ರಿಯತೆ ಗಳಿಸಿವೆ. ಇಬ್ಬನಿ ಕರಗಿತು, ಮುದುಡಿದ ತಾವರೆ ಅರಳಿತು, ಅರುಣರಾಗ ಸಿನಿಮಾಗಳಿಗೆ ಸುದರ್ಶನ ಅವರು ಸಂಭಾಷಣೆಯನ್ನೂ ಬರೆದಿದ್ದಾರೆ. ರೇಡಿಯೊ ನಾಟಕಗಳನ್ನೂ ರಚಿಸಿದ್ದ ಅವರು, 1999ರಲ್ಲಿ ಕೇಂದ್ರ ಸರ್ಕಾರದಿಂದ 'ಆದರ್ಶ ಶಿಕ್ಷಕ' ಪುರಸ್ಕಾರಕ್ಕೆ ಪಾತ್ರರಾಗಿದ್ದರು.

ಸಿಂಪಿ ಲಿಂಗಣ್ಣ

'ಜಾನಪದ ದಿಗ್ಗಜ'ರೆಂದೇ ಖ್ಯಾತರಾಗಿದ್ದ ಸಿಂಪಿ ಲಿಂಗಣ್ಣ ಅವರು ತಮ್ಮ ಕೃತಿಗಳ ಮೂಲಕ ಗ್ರಾಮೀಣ ಸಾಂಸ್ಕೃತಿಕ ಸೊಗಡನ್ನು ಕಟ್ಟಿಕೊಟ್ಟವರು. ಮಕ್ಕಳ ಸಾಹಿತ್ಯ ಸೇರಿದಂತೆ ಸಾಹಿತ್ಯದ ಇನ್ನಿತರ ಪ್ರಕಾರಗಳಲ್ಲಿ ಹಲವು ಕೃತಿಗಳನ್ನು ರಚಿಸಿದವರು. ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಚಡಚಣ ಗ್ರಾಮದಲ್ಲಿ 1905ರ ಫೆ. 10ರಂದು ಜನಿಸಿದ ಅವರು, ಶಿಕ್ಷಕರ ತರಬೇತಿ ಪರೀಕ್ಷೆಯಲ್ಲಿ ಆಗಿನ ಮುಂಬೈ ಕರ್ನಾಟಕದ ನಾಲ್ಕು ಜಿಲ್ಲೆಗಳಲ್ಲಿ ಪ್ರಥಮ ಸ್ಥಾನ ಪಡೆದಿದ್ದರು.

ಶಿಕ್ಷಕರಾಗಿ ವೃತ್ತಿ ಜೀವನ ಆರಂಭಿಸಿದ ಅವರು ಭತಗುಣಕಿ, ಇಂಗಳೇಶ್ವರ, ಹಲಸಂಗಿ, ಇಂಡಿ, ಚಡಚಣ ಸೇರಿದಂತೆ ಮೊದಲಾದ ಕಡೆಗಳಲ್ಲಿ ಸೇವೆ ಸಲ್ಲಿಸಿದರು. ತಾಯಿ ಮತ್ತು ಅತ್ತಿಗೆ ಹಾಡುತ್ತಿದ್ದ ತ್ರಿಪದಿಗಳನ್ನು ಕೇಳುತ್ತಾ ಬೆಳೆದಿದ್ದ ಲಿಂಗಣ್ಣ ಅವರಿಗೆ ಬಾಲ್ಯದಿಂದಲೇ ಜನಪದ ಸಾಹಿತ್ಯದತ್ತ ಅಪಾರ ಒಲವು. ಜಾನಪದ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಅವರ ಕೃತಿಗಳ ಆಯ್ದ ಭಾಗಗಳು ಅನೇಕ ವಿಶ್ವವಿದ್ಯಾಲಯಗಳಲ್ಲಿ ಪಠ್ಯವೂ ಆಗಿವೆ. ಇತಿಹಾಸ, ಅಧ್ಯಾತ್ಮ, ಮಕ್ಕಳ ಸಾಹಿತ್ಯದಲ್ಲಿ ಕೃಷಿ ಮಾಡಿದ ಲಿಂಗಣ್ಣ ಅವರ ಸಾಧನೆ ಕುರಿತು ಅನೇಕ ವಿಶ್ವವಿದ್ಯಾಲಯಗಳಲ್ಲಿ ಸಂಶೋಧನೆಗಳು ನಡೆದಿವೆ.

ವಿಶ್ವಾಮಿತ್ರನ ಸಾಹಸ, ಲೊಬೊಲೊಬೊ, ಕಿರುಗನ್ನಡಿ, ಅಂದ ಚೆಂದ, ನಾಮದೇವ, ಗುಡ್ಡಾಪುರದ ದಾನಮ್ಮ ಸೇರಿದಂತೆ 16ಕ್ಕೂ ಹೆಚ್ಚಿನ ಮಕ್ಕಳ ಸಾಹಿತ್ಯ ಕೃತಿಗಳನ್ನು ರಚಿಸಿದ ಅಗ್ಗಳಿಕೆ ಅವರದ್ದು. ಸಿಂಪಿ ಲಿಂಗಣ್ಣ ಅವರು 'ಆದರ್ಶ ಶಿಕ್ಷಕ'ರೆಂದು ಅಂದಿನ ರಾಷ್ಟ್ರಪತಿ ಡಾ. ರಾಜೇಂದ್ರ ಪ್ರಸಾದ ಅವರಿಂದ ಪ್ರಶಸ್ತಿಗೂ ಭಾಜನರಾಗಿದ್ದರು.

ಮೊದಲೊಂದಿಪೆ ನಿನಗೆ ಗುರುದೇವ

ಸೋಮವಾರ ಶಿಕ್ಷಕರ ದಿನಾಚರಣೆ. ಹಾಗೆ ನೋಡಿದರೆ ಶಾಲೆಗಳಲ್ಲಿ ದಿನವೂ ಶಿಕ್ಷಕರ ದಿನಾಚರಣೆಯೇ. ಈ ದಿನದ ನೆಪದಲ್ಲಿ ನಮ್ಮ ಹಿಂದಿನ ಗುರುಪರಂಪರೆಯನ್ನೂ ಪ್ರಯೋಗಶೀಲ ಶಿಕ್ಷಕರ ಸಾಧನೆಯನ್ನೂ ಒಟ್ಟಿಗೆ ಓದುಗರ ಮುಂದೆ ಇಡುವ ಪ್ರಯತ್ನವೊಂದು ಇಲ್ಲಿದೆ

ಸೃಜನಶೀಲ ಶಿಕ್ಷಕರು, ಪ್ರಯೋಗಶೀಲ ಶಾಲೆಗಳು...

ನಾಡಿನ ಕೆಲವು ಪ್ರಯೋಗಶೀಲ ಶಿಕ್ಷಕರನ್ನು ಓದುಗರೊಂದಿಗೆ ಮುಖಾಮುಖಿಯಾಗಿಸಿದ್ದಾರೆ **ಸುಮಾ ಬಿ.** ಶಿಕ್ಷಕರ ಆ ಪ್ರಯೋಗಗಳಲ್ಲಿ ಇತರರಿಗೂ ಪಾಠಗಳು ಇವೆಯಲ್ಲವೇ?

ಬೋಧನೆಗೆ ಪಾಠೋಪಕರಣಗಳ ನಂಟು

ವಿದ್ಯಾರ್ಥಿಗಳ ಮನದಾಳಕ್ಕೆ ಜ್ಞಾನ ಇಳಿಯಬೇಕು ಎಂದರೆ ಪಠ್ಯ ಬೋಧನೆ ಮಾತ್ರ ಸಾಲದು, ಪಾಠೋಪಕರಣಗಳು ಅತಿ ಅಗತ್ಯ ಎಂಬುದನ್ನೇ ಧ್ಯಾನವಾಗಿಸಿಕೊಂಡ ಗದಗ ಜಿಲ್ಲೆ ಚಿಕ್ಕಹಂದಿಗೋಳ ಕ್ಲಸ್ಟರ್ ವ್ಯಾಪ್ತಿಯ ಶಿಕ್ಷಕ ಸಿದ್ದಯ್ಯ ಕೆ. ಮಠಪತಿ ವಿದ್ಯಾರ್ಥಿಗಳನ್ನೂ ಕ್ರಿಯಾಶೀಲ ಕಲಿಕೆಯಲ್ಲಿ ತೊಡಗಿಸಿದ್ದಾರೆ.

ಪಠ್ಯದಲ್ಲಿ ಇರುವ ಪಾಠಗಳನ್ನು ಪಾಠೋಪಕರಣಗಳ ಮೂಲಕ ವಿದ್ಯಾರ್ಥಿಗಳಿಗೆ ಮನದಟ್ಟು ಮಾಡುವ ಅವರು, ಶಾಲೆಯ ಇತರ ಶಿಕ್ಷಕರನ್ನೂ ಅದೇ ರೀತಿ ಬೋಧಿಸಲು ಅಣಿಗೊಳಿಸಿದ್ದಾರೆ. ಅವರು ತಯಾರಿಸುವ ಉಪಕರಣಗಳಲ್ಲಿ ತ್ಯಾಜ್ಯ ವಸ್ತುಗಳ ಬಳಕೆ ಹೆಚ್ಚಿರುತ್ತದೆ. ಬಳಸಿ ಬಿಸಾಡುವ ಮತ್ತು ಪ್ರಯೋಜನಕ್ಕೆ ಬಾರದ ವಸ್ತುಗಳಲ್ಲಿ ಅಮೂಲ್ಯವಾದುದನ್ನು ತಯಾರಿಸಿ ವಿದ್ಯಾರ್ಥಿಗಳ ಕಲಿಕೆಗೆ ಉತ್ತೇಜನ ನೀಡುತ್ತಿದ್ದಾರೆ. ಅವರು ತಯಾರಿಸಿದ 'ಆಲ್ಫಾಬೆಟ್ ಗೇಮ್', 'ರೇಖಾಗಣಿತದ ಆಕೃತಿಗಳು' ಸಂಸತ್ ಭವನದ ಮಾದರಿ ಹೀಗೆ ಹಲವು ಪಾಠೋಪಕರಣಗಳು ವಿದ್ಯಾರ್ಥಿಗಳ ಕಲಿಕೆಗೆ ಒತ್ತಾಸೆಯಾಗಿವೆ.

15 ವರ್ಷಗಳಿಂದ ಶಿಕ್ಷಕ ವೃತ್ತಿಯಲ್ಲಿ ತೊಡಗಿಕೊಂಡಿರುವ ಅವರು, ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಜ್ಞಾನ ಹೆಚ್ಚಿಸಲು ಶಾಲಾ ಮಟ್ಟದಲ್ಲೇ ನಡೆಸುವ ವಿಜ್ಞಾನ ಹಬ್ಬ, ಕೋವಿಡ್ ಸಮಯದಲ್ಲಿ ಕೈಗೊಂಡ ಕಲಿಕಾ ಚಟುವಟಿಕೆಗಳು ಇತರ ಶಿಕ್ಷಕರಿಗೆ ಪ್ರೇರಣೆಯಾಗಿವೆ.

ಇದಲ್ಲದೇ ನಿಧಾನಕ್ಕೆ ಪರದೆಯ ಹಿಂದಕ್ಕೆ ಸರಿಯುತ್ತಿರುವ ಜಾನಪದ ಕಲೆಯನ್ನು ವಿದ್ಯಾರ್ಥಿಗಳ ಕಲಿಕೆ ಮೂಲಕ ಮುನ್ನೆಲೆಗೆ ತರುವ ಕಾಯಕದಲ್ಲೂ ಸಿದ್ದಯ್ಯ ತೊಡಗಿದ್ದಾರೆ. ಸ್ಥಳೀಯ ಕಲಾವಿದರ ನೆರವಿನಿಂದ ಪಠ್ಯದಲ್ಲಿ ಬರುವ ಪಾಠಗಳನ್ನು ಸೋಬಾನೆ ಪದ, ದೊಡ್ಡಾಟ, ಜೋಗುಳದ ಹಾಡುಗಳ ಮೂಲಕ ಪ್ರಸ್ತುತ ಪಡಿಸುತ್ತ ಕಲೆಯನ್ನು, ಪಠ್ಯವನ್ನು ವಿದ್ಯಾರ್ಥಿಗಳ ಮನಕ್ಕೆ ಇಳಿಸುವ ಹಾಗೂ ಸ್ಥಳೀಯ ಕಲಾವಿದರ ಕಲೆಯನ್ನು ಮುನ್ನೆಲೆಗೆ ತರುವ ಪ್ರಯತ್ನ ಅವರದ್ದು. ಇದಕ್ಕಾಗಿ ಇಂಡಿಯನ್ ಫೌಂಡೇಶನ್ ಫಾರ್ ದಿ ಆರ್ಟ್ಸ್ (ಐಎಫ್‌ಎ) ಸಂಸ್ಥೆಯ ಸಹಾಯ ಪಡೆದಿದ್ದಾರೆ.

ಸಿದ್ದಯ್ಯ ಕೆ. ಮಠಪತಿ ಅವರು ಸಿದ್ಧಗೊಳಿಸಿದ ಪಾಠೋಪಕರಣ (ಮೇಲಿನ ಚಿತ್ರ), ಆಲ್ಫಾಬೆಟ್ ಗೇಮ್ ಮಾದರಿ

ಕಾಡಿನ ಊರುಗಳ ಮನಗೆದ್ದ ಶಿಕ್ಷಕಿ

ಅದು ಉತ್ತರ ಕನ್ನಡ ಜಿಲ್ಲೆಯ ಜೊಯಿಡಾ ತಾಲ್ಲೂಕಿನ ಅಣಶಿ ಗ್ರಾಮ. ಈ ಗ್ರಾಮ ಇರುವುದೇ ಹುಲಿ ಸಂರಕ್ಷಿತ ಅರಣ್ಯ ಪ್ರದೇಶದಲ್ಲಿ. ಅಲ್ಲಿರುವ ಸುಮಾರು 15ಕ್ಕೂ ಹೆಚ್ಚು ಕುಗ್ರಾಮಗಳ ಮಕ್ಕಳಿಗೆ ಅಣಶಿ ಸರ್ಕಾರಿ ಶಾಲೆಯೇ ಆಸರೆ. ಅಂತಹ ಶಾಲೆಯ ಶಿಕ್ಷಕಿಯಾಗಿ ರಾಜ್ಯದಲ್ಲಿ ಗಮನ ಸೆಳೆಯುವಂತಹ ಸಾಧನೆ ಮಾಡಿದವರು ಶಿಕ್ಷಕಿ ಅಕ್ಷತಾ ಕೃಷ್ಣಮೂರ್ತಿ. ದಟ್ಟ ಕಾಡಿನಲ್ಲಿರುವ ಈ ಶಾಲೆಯನ್ನು ತಲುಪುವುದೇ ದುಸ್ಸಾಹಸ ಆಗಿದ್ದರೂ ಕುಂಭದ್ರೋಣ ಮಳೆ ಸುರಿಯಲಿ, ಮೈನಡುಗಿಸುವ ಚಳಿ ಇರಲಿ ಈ ಶಾಲೆಯಲ್ಲಿ ಅಕ್ಷತಾ ಅವರ ಪಾಠ ತಪ್ಪುವುದಿಲ್ಲ. ಮಳೆ ಹೆಚ್ಚಾದಾಗ ಊರಲ್ಲಿಯೇ ಠಿಕಾಣಿ ಹೂಡುತ್ತಾರೆ. ಮಳೆ ಮಾಪನವನ್ನೂ ಅಕ್ಷತಾ ಅವರ ಶಾಲೆಯ ವಿದ್ಯಾರ್ಥಿಗಳು ಮಾಡುವುದು ವಿಶೇಷ.

ಕುಣಬಿ ಮಕ್ಕಳೇ ಹೆಚ್ಚಾಗಿರುವುದರಿಂದ ಅವರ ಕೌಶಲಕ್ಕೆ ಮೆರುಗು ತುಂಬುವ ಕೆಲಸವನ್ನೂ ಅಕ್ಷತಾ ಅವರು ಮಾಡಿದ್ದಾರೆ. ಕಾಡಿನಲ್ಲಿ ಸಿಗುವ ಜಿಗುಟು ಮಣ್ಣಿನಿಂದ ಪ್ರಾಣಿಗಳು ಮತ್ತು ತರಕಾರಿಗಳ ಪ್ರತಿಕೃತಿ ಮಾಡಿ, ಪಾಠ ಮಾಡುವ ಅವರು, ಮಕ್ಕಳೇ ಸಂಗ್ರಹಿಸಿದ ಬೀಜಗಳನ್ನು ಮಣ್ಣಿನಲ್ಲಿ ಉಂಡೆ ಮಾಡಿ, ಕಾಡಿನಲ್ಲಿ ಎಸೆಯುವಂತೆಯೂ ಮಾಡುತ್ತಾರೆ. ಅಕ್ಷತಾ ಅವರು ಸ್ವತಃ ಕವಯಿತ್ರಿ. ಸುಕ್ರಿ ಬೊಮ್ಮಗೌಡ ಅವರ ಜೀವನ ಚರಿತ್ರೆ ದಾಖಲಿಸುವ ಕೆಲಸವನ್ನೂ ಮಾಡಿದ್ದಾರೆ.

ಶಾಲಾಭಿವೃದ್ಧಿ ಹಂಬಲದ ಶಿಕ್ಷಕ

ಸ್ವಸ್ಥ, ಸ್ವಚ್ಛ, ಸುಸಂಸ್ಕೃತ ಶಾಲೆಯನ್ನಾಗಿ ರೂಪಿಸುವ ಆಶಯದೊಂದಿಗೆ 31 ವರ್ಷಗಳಿಂದ ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ತಾಲ್ಲೂಕಿನ ಒಡಿಲ್ನಾಳ ಗ್ರಾಮದ ಕಟ್ಟದಬೈಲು ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಎಡ್ವರ್ಡ್ ಡಿ'ಸೋಜ ಅವರು ಒಂದು ರೀತಿ 'ಲೆಕ್ಕಾಚಾರದ ಶಿಕ್ಷಕ' ಎಂದು ಹೇಳಿದರೆ ತಪ್ಪಾಗಲಾರದು.

ಶಾಲೆಯ ಅಭಿವೃದ್ಧಿಗಾಗಿಯೇ ಹಲವು ರೀತಿಯ ನಿಧಿಗಳನ್ನು ಸ್ಥಾಪಿಸಿ, ಆ ನಿಧಿಗಳಿಂದ ಬಂದ ಹಣವನ್ನು ಶಾಲೆಯ ಹಾಗೂ ವಿದ್ಯಾರ್ಥಿಗಳ ಕಲಿಕೆಗೆ ವಿನಿಯೋಗಿಸುತ್ತಿದ್ದಾರೆ. ಯಾವ ಖಾಸಗಿ ಶಾಲೆಗೂ ಕಡಿಮೆ ಇಲ್ಲ ಎಂಬಂತೆ ಕಟ್ಟದಬೈಲು ಶಾಲೆಯನ್ನು ಹೈಟೆಕ್ ಆಗಿ ಇರಿಸಿದ್ದಾರೆ.

2020ರಲ್ಲಿ ಈ ಶಾಲೆ ಸ್ವರ್ಣ ಮಹೋತ್ಸವವನ್ನು ಆಚರಿಸಿಕೊಂಡಿತ್ತು. ಇದರ ನೆನಪಿಗಾಗಿ 'ಸ್ವರ್ಣ ನಿಧಿ' ಸ್ಥಾಪಿಸಿದ್ದಾರೆ. 13 ತಿಂಗಳ ಸ್ವರ್ಣ ಸಿಂಚನ ಕಾರ್ಯಕ್ರಮ ನಡೆಸಿದ್ದಾರೆ. 'ದಿನಕ್ಕೊಂದು ರೂಪಾಯಿ' ಎಂಬ ಯೋಜನೆ ಹಾಕಿಕೊಂಡು ಸತತ 1071 ದಿನಗಳಲ್ಲಿ 300 ದಾನಿಗಳಿಂದ ₹ 3,33,333 ಹಣ ಸಂಗ್ರಹಿಸಿ ಶಿಕ್ಷಣ ನಿಧಿ ಸ್ಥಾಪಿಸಿದ್ದಾರೆ. ಈ ಹಣದಲ್ಲೇ 11 ವರ್ಷಗಳಿಂದ ವಿದ್ಯಾರ್ಥಿಗಳಿಗೆ ಅಗತ್ಯವಿರುವ ನೋಟ್‌ಬುಕ್, ಶಾಲಾ ಬ್ಯಾಗ್, 10ನೇ ತರಗತಿಯಲ್ಲಿ ಉತ್ತಮ ಅಂಕ ಪಡೆದ ಮೂವರಿಗೆ ತಲಾ ₹ 1,000 ಹಾಗೂ ಪಿಯುಸಿ ನಂತರ ವೃತ್ತಿ ಶಿಕ್ಷಣ ಪಡೆಯುವ ಮೂವರಿಗೆ ತಲಾ ₹ 5,000 ನೀಡುತ್ತಾ ಬರುತ್ತಿದ್ದಾರೆ.

ಇದೇ ರೀತಿ 'ವಜ್ರ ನಿಧಿ', 'ವಜ್ರ ಸಂಜೀವಿನಿ ನಿಧಿ'. 'ದಿ.ನೀಲಮ್ಮ ಸ್ಮಾರಕ ಶಿಕ್ಷಣ ನಿಧಿ' ಹೀಗೆ ಹಲವು 'ನಿಧಿ'ಗಳನ್ನು ಆರಂಭಿಸಿ, ದಾನಿಗಳಿಂದ, ಕೆಲವೊಮ್ಮೆ ಸ್ವಂತ ಖರ್ಚಿನಲ್ಲಿ ಹಣ ಭರಿಸಿ ಶಾಲೆಯ ಇಂದಿನ ಹಾಗೂ ಭವಿಷ್ಯದ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ ಎಡ್ವರ್ಡ್. ಶಾಲೆಯಲ್ಲಿ ಓದುತ್ತಿದ್ದ ಆಕಾಶ್ ಎಂಬ ಬಾಲಕನ ನೆನಪಿಗಾಗಿ ಪ್ರತಿವರ್ಷ 'ಆಕಾಶ್ ಜಯಂತಿ'ಯನ್ನು ಶಾಲೆಯಲ್ಲಿ ಆಚರಿಸಲಾಗುತ್ತಿದೆ. ಆ ಸಮಯದಲ್ಲಿ ದಾನಿಗಳಿಂದ ನೆರವು ಪಡೆದು ಶಾಲೆಯ ಏಳ್ಗೆಗೆ ಆ ಹಣವನ್ನು ಬಳಕೆ ಮಾಡಲಾಗುತ್ತದೆ. 'ದೇಹ ದಾನ' ಮಾಡುವ ವಾಗ್ದಾನವನ್ನೂ ಮಾಡುವ ಮೂಲಕ ಸಾಮಾಜಿಕ ಕಳಕಳಿ ಮೆರೆದಿರುವ ಅಪರೂಪದ ಶಿಕ್ಷಕ ಎಡ್ವರ್ಡ್.

ಪಾಠ ಬೋಧನೆಗೆ ಕರ್ಪಲ್ ಕಲೆ

ಸಂಜ್ಞೆಗಳ ಮೂಲಕ ಅಕ್ಷರಗಳನ್ನು ತೋರಿಸುತ್ತಿರುವ ವಿದ್ಯಾರ್ಥಿಗಳು

'ಕರ್ಪಲ್ ಕಲೆ' ಈ ಪದ ಇಂದಿನ ಯುವಜನರ ಕಿವಿಗೆ ಬೀಳದಷ್ಟು ಹಿಂದಕ್ಕೆ ಸರಿದಿದೆ. ಈ ಕಲೆಯನ್ನು ಮುನ್ನೆಲೆಗೆ ತರುವ ಸದಾಶಯ ಹೊಂದಿರುವ ಧಾರವಾಡ ಜಿಲ್ಲೆ ಅಣ್ಣಿಗೇರಿ ತಾಲ್ಲೂಕಿನ ದುಂದೂರು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಎಫ್.ಎ.ಕರಬುಡ್ಡಿ, ಕರ್ಪಲ್ ಕಲೆಯನ್ನು ವಿದ್ಯಾರ್ಥಿಗಳ ಮನದಾಳಕ್ಕೆ ಇಳಿಸಿ ಸಂಜ್ಞೆಗಳ ಮೂಲಕ ಅಕ್ಷರ ಕಲಿಕೆಯಲ್ಲಿ ನಾಂದಿ ಹಾಡಿದ್ದಾರೆ.

ಜಾನಪದ ಕಲೆಗಳಲ್ಲಿ ಒಂದಾಗಿರುವ 'ಕರ್ಪಲ್ ಕಲೆ', ಪುರಾತನ ಕಾಲದಲ್ಲಿ ರಾಜರು ವೈರಿಗಳ ಎದುರಿನಲ್ಲೇ ತಮ್ಮ ಆಪ್ತರಿಗೆ ಕೈಸಂಜ್ಞೆ ಮೂಲಕ ಮಹತ್ವದ ವಿಷಯಗಳನ್ನು ತಿಳಿಸುವ ಭಾಗವಾಗಿ ಉದಯಿಸಿತು. ಕ್ರಮೇಣ ಜಂಗಮ ಸಮುದಾಯದವರು ಹೊಟ್ಟೆಪಾಡಿಗಾಗಿ 'ಸಾರೋ ಐನೋರು' ಎಂಬ ಹೆಸರನ್ನಿಟ್ಟುಕೊಂಡು ತಮ್ಮ ದಿನ ನಿತ್ಯದ ಉಪಜೀವನಕ್ಕಾಗಿ ಈ ಕಲೆಯನ್ನು ಬಳಸುತ್ತಿದ್ದರು.

ನಶಿಸುತ್ತಿರುವ ಈ ಕಲೆಯನ್ನು ಜೀವಂತವಾಗಿರಿಸುವ ಕಾಳಜಿ ಹೊಂದಿರುವ ಕರಬುಡ್ಡಿ ಅವರು ಶಾಲೆಯ ಮುಖ್ಯ ಶಿಕ್ಷಕ ಡಿ.ಎಂ. ನಾವಳ್ಳಿ ಅವರ ಸಹಕಾರದಿಂದ ವಿದ್ಯಾರ್ಥಿಗಳಿಗೆ ಈ ಕಲೆಯ ಮೂಲಕ ಅಕ್ಷರಗಳನ್ನು ಕಲಿಸಿದ್ದಾರೆ. ಈ ಕಲೆಯ ಮೂಲಕವೇ ವಿದ್ಯಾರ್ಥಿಗಳು ಸುಲಲಿತವಾಗಿ ಕನ್ನಡ ಓದುವ, ಬರೆಯುವ ಮಟ್ಟಕ್ಕೆ ಬೆಳೆದಿದ್ದಾರೆ. ಕೇವಲ ಬಲಗೈನ ಬೆರಳುಗಳ ಮೂಲಕ ವಿದ್ಯಾರ್ಥಿ ಮಾಡುವ ಸಂಜ್ಞೆಯನ್ನು ಉಳಿದ ವಿದ್ಯಾರ್ಥಿಗಳು ಗುರುತಿಸಿ ಪದವನ್ನು ಹೇಳುತ್ತಾರೆ.

ಇಂಗ್ಲಿಷ್, ಹಿಂದಿ ಭಾಷೆಯನ್ನೂ ಇದೇ ಶೈಲಿಯಲ್ಲಿ ಕಲಿಸುತ್ತಿದ್ದಾರೆ. ಕನ್ನಡದ ಒತ್ತಕ್ಷರ, ಕಾಗುಣಿತಗಳನ್ನು ಈ ಕಲೆಯ ಮೂಲಕವೇ ವಿದ್ಯಾರ್ಥಿಗಳ ಮನಕ್ಕೆ ಇಳಿಸಿದ್ದು, ಯಾವುದೇ ಶಬ್ದವನ್ನು ಸಂಜ್ಞೆಯ ಮೂಲಕವೇ ಸಂವಹನ ನಡೆಸುವಷ್ಟು ಚತುರರಾಗಿದ್ದಾರೆ ಇಲ್ಲಿನ ವಿದ್ಯಾರ್ಥಿಗಳು. ಕರ್ಪಲ್ ಕಲೆಗೆಂದೇ ವಿಶಿಷ್ಟ ಸಮವಸ್ತ್ರವಿದ್ದು, ಅದನ್ನು ಧರಿಸಿ ವಿದ್ಯಾರ್ಥಿಗಳು ಸಂಜ್ಞಾ ಭಾಷೆಯನ್ನು ಪ್ರದರ್ಶಿಸುತ್ತಾರೆ.

ಇದರ ಜತೆಗೆ ಶಾಲೆಯನ್ನು ಪರಿಸರ ಸ್ನೇಹಿಯಾಗಿ ರೂಪಿಸಿರುವ ಅಗ್ಗಳಿಕೆ ಕರಬುಡ್ಡಿ ಇವರದ್ದು. ಶಾಲೆಯ ಆವರಣವನ್ನು ಸಸ್ಯಕಾಶಿಯಂತೆ ರೂಪಿಸಿರುವ ಅವರು ವಿದ್ಯಾರ್ಥಿಗಳನ್ನು ಈ ಕಾರ್ಯದಲ್ಲಿ ಸಕ್ರಿಯವಾಗಿ ತೊಡಗಿಸಿದ್ದಾರೆ. ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ 'ಹಸಿರು ಶಾಲೆ' ಜಿಲ್ಲಾ ಪ್ರಶಸ್ತಿಗೆ ಈ ಶಾಲೆ ಭಾಜನವಾಗಿದೆ. ಅಲ್ಲದೇ 'ಪರಿಸರ ಮಿತ್ರ ಶಾಲೆ' ಪ್ರಶಸ್ತಿಯನ್ನು ಪಡೆದುಕೊಂಡಿದೆ.

ಬುಡಕಟ್ಟು ಮಕ್ಕಳಲ್ಲಿ 'ಅಕ್ಷರ ಕ್ರಾಂತಿ'

'ಮಕ್ಕಳೇ ವಿಶ್ವ, ಮಕ್ಕಳೇ ದೇಶ, ಮಕ್ಕಳೇ ಭವಿಷ್ಯ, ಮಕ್ಕಳೇ ನನ್ನ ಅನ್ನದಾತರು' ಎನ್ನುವ ಭಾವವನ್ನು ಮನಸ್ಸಿನಲ್ಲಿ ಇಳಿಸಿಕೊಂಡು ಬುಡಕಟ್ಟು ಸಮುದಾಯದ ಮಕ್ಕಳಿಗೆ ಅಕ್ಷರ ಜ್ಞಾನದ ಜತೆಗೆ ಜೀವನದ ಮೌಲ್ಯವನ್ನೂ ತುಂಬುತ್ತಿರುವ ಶಿಕ್ಷಕ ಟಿ.ಪಿ.ಉಮೇಶ್ ಇತರರಿಗೆ ಮಾದರಿ.

ಗೊಲ್ಲ ಜನಾಂಗದವರು ವಾಸಿಸುತ್ತಿರುವ, ಇಂದಿಗೂ ಬಸ್ ಸೌಲಭ್ಯ ಕಾಣದ ಗಡಿಗ್ರಾಮ ಅಮೃತಾಪುರದಲ್ಲಿ 'ಅಕ್ಷರ ಕ್ರಾಂತಿ'ಯ ಜೊತೆಗೆ ಗ್ರಾಮದ ಸಾಮಾಜಿಕ ಅಭಿವೃದ್ಧಿಗೂ ಅವಿರತ ಶ್ರಮಿಸುತ್ತಿದ್ದಾರೆ ಉಮೇಶ್. ಕಟ್ಟಡವೇ ಇಲ್ಲದಿದ್ದ ಶಾಲೆ ಈಗ ಹೈಟೆಕ್ ಶಾಲೆಯಾಗಿ ರೂಪುಗೊಂಡಿದೆ. 2015ರಲ್ಲಿ ಜೋರು ಮಳೆಗೆ ಶಾಲಾ ಕಟ್ಟಡ ಕುಸಿಯಿತು. ಆರು ತಿಂಗಳು ದೇವಸ್ಥಾನದ ಆವರಣ, ತಾತ್ಕಾಲಿಕ ಟೆಂಟ್‌ನಲ್ಲಿಯೇ ಪಾಠ ಮಾಡಿದ ಅವರು, ಸರ್ಕಾರದಿಂದ ನೆರವು ಸಿಗದಾದಾಗ ಎನ್‌ಜಿಒಗಳು ಮತ್ತು ರೋಟರಿ ಸಂಸ್ಥೆಯಿಂದ ಧನಸಹಾಯ ಪಡೆದು ₹ 35 ಲಕ್ಷ ವೆಚ್ಚದಲ್ಲಿ ಶಾಲಾ ಕಟ್ಟಡವನ್ನು ನಿರ್ಮಿಸಿದ್ದಾರೆ.

ಶಾಲೆಯೆಂದರೆ ಪಾಠ ಮಾಡಲು ತರಗತಿಗಳಷ್ಟೇ ಇದ್ದರೆ ಸಾಲದು ಎಂಬುದು ಉಮೇಶ್ ಅವರ ಅಂಬೋಣ. ಹಾಗಾಗಿ ಈ ಶಾಲೆಯಲ್ಲಿ ಮಕ್ಕಳ ವಿಶೇಷ ಕಲಿಕೆಗಾಗಿ ವಿಜ್ಞಾನದ ಲ್ಯಾಬ್, ಗ್ರಂಥಾಲಯ, ರಂಗಮಂದಿರ, ಕಂಪ್ಯೂಟರ್ ಲ್ಯಾಬ್ ಸಹ ಸ್ಥಾನ ಪಡೆದಿವೆ. ಮಕ್ಕಳ ದಾಖಲಾತಿ ಪ್ರಮಾಣ ಹೆಚ್ಚಳಕ್ಕೂ ಅವರು ಶ್ರಮಿಸಿದ್ದು, ಆರಂಭದಲ್ಲಿ 39 ಇದ್ದ ದಾಖಲಾತಿ ಸಂಖ್ಯೆ ಈಗ 80ಕ್ಕೆ ಏರಿದೆ.

ಕೋವಿಡ್ ಸಂಕಷ್ಟ ಕಾಲದಲ್ಲಿ ವಿದ್ಯಾರ್ಥಿಗಳು ಕಲಿಕೆಯಿಂದ ಹಿಂದೆ ಬೀಳದಂತೆ ಮಾಡಲು ಹಲವು ವಿನೂತನ ಪ್ರಯೋಗಗಳನ್ನು ಮಾಡಿದ್ದರು. ಗ್ರಾಮದ ಶಾಲೆಯಲ್ಲೇ ಆರು ತಿಂಗಳು ತಂಗಿದ್ದು, ನಿರಂತರ ವಿದ್ಯಾರ್ಥಿಗಳ ಸಂಪರ್ಕದಲ್ಲಿದ್ದರು. ಕೂಲಿ ಕಾರ್ಮಿಕರೇ ಇರುವ ಗ್ರಾಮದಲ್ಲಿ, ಸ್ಮಾರ್ಟ್ ಫೋನ್ ಮೂಲಕ ಆನ್‌ಲೈನ್ ತರಗತಿ ಮಾಡುವುದು ಅಸಾಧ್ಯದ ಮಾತು. ಈ ವಾಸ್ತವವನ್ನು ಸೂಕ್ಷ್ಮಮತಿಯಿಂದ ಗಮನಿಸಿದ ಉಮೇಶ್ 'ಮಿಸ್ ಕಾಲ್ ಕೊಡಿ ನನ್ನ ಪಾಠ ಕೇಳಿ' ಅಭಿಯಾನ ನಡೆಸಿದ್ದರು.

ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲ್ಲೂಕಿನ ತೊಡರನಾಳು ಗ್ರಾಮದ ಉಮೇಶ್ ಅವರು 2004ರಲ್ಲಿ ಬಳ್ಳಾರಿ ಜಿಲ್ಲೆಯ ಸಿರಗುಪ್ಪ ತಾಲ್ಲೂಕಿನ ಚಿಕ್ಕಬಳ್ಳಾರಿ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕ ವೃತ್ತಿ ಆರಂಭಿಸಿದವರು. ಸಾಹಿತ್ಯದಲ್ಲೂ ಅಭಿರುಚಿ ಹೊಂದಿರುವ ಅವರು, 'ಫೋಟೊಕ್ಕೊಂದು ಫ್ರೇಮು', 'ನನ್ನಯ ಸೈಕಲ್ ಟ್ರಿಣ್ ಟ್ರಿಣ್', 'ವಚನಾಂಜಲಿ', 'ವಚನವಾಣಿ', 'ದೇವರಿಗೆ ಬೀಗ', 'ಅಪ್ಪನು ಕೊಡಿಸಿದ ಮೊದಲ ಪುಸ್ತಕ' ಹೀಗೆ ಹಲವು ಕೃತಿಗಳನ್ನು ಪ್ರಕಟಿಸಿದ್ದಾರೆ.

ವಿಜ್ಞಾನ ಶಿಕ್ಷಕಿಗೆ ಹಸಿರು ಕಾಳಜಿ

ಹಸಿರೀಕರಣದ ಮಹತ್ವವನ್ನು ತಿಳಿಸುತ್ತಲೇ, ವಿದ್ಯಾರ್ಥಿಗಳನ್ನು ರಚನಾತ್ಮಕ ಕಲಿಕೆಯಲ್ಲಿ ತೊಡಗಿಸುವ ಮೂಲಕ ವಿಜ್ಞಾನದ ವಿಷಯವನ್ನು ಸುಲಲಿತವಾಗುವಂತೆ ಬೋಧಿಸುವ ತುಮಕೂರಿನ ಕೇಂದ್ರೀಯ ವಿದ್ಯಾಲಯದ ಶಿಕ್ಷಕಿ ವಿ.ಪೊನಶಂಕರಿ ಎಂದರೆ ಎಲ್ಲ ಮಕ್ಕಳಿಗೂ ಅಚ್ಚುಮೆಚ್ಚು.

ಬಹುತೇಕ ವಿದ್ಯಾರ್ಥಿಗಳಿಗೆ ವಿಜ್ಞಾನ ಎಂದರೆ ನಿರಾಸಕ್ತಿಯ ವಿಷಯ. ಆದರೆ ಪೊನಶಂಕರಿ ಅವರ ಪಾಠ ಕೇಳುವ ಮಕ್ಕಳೆಲ್ಲರಿಗೂ ವಿಜ್ಞಾನ ಇಷ್ಟದ ವಿಷಯ. ಹಲವು ಪ್ರಯೋಗಗಳಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸುವ ಮೂಲಕ ವಿಷಯದ ಒಳಹೊರಗನ್ನು ಅರಿಕೆ ಮಾಡುವ ಛಾತಿ ಪೊನಶಂಕರಿ ಅವರದ್ದು. ಕೋವಿಡ್ ಸಮಯದಲ್ಲೂ ವಿದ್ಯಾರ್ಥಿಗಳಿಗೆ ಮನೆಯಲ್ಲಿಯೇ ಪ್ರಯೋಗಗಳನ್ನು ಮಾಡಲು ಉತ್ತೇಜಿಸಿದ ಕಾರ್ಯ ಕಂಡು ಪೋಷಕರೂ ಬೆರಗಾಗಿದ್ದರು. ಪರಿಸರಕ್ಕೆ ಪೂರಕವಾಗಿರುವ ಪ್ರಯೋಗಗಳನ್ನು ಮಾಡುವ ಮೂಲಕ ಅವರು ವಿದ್ಯಾರ್ಥಿಗಳನ್ನು ಉತ್ತೇಜಿಸುತ್ತಿದ್ದಾರೆ. ಅವರ ಬೋಧನಾ ಶೈಲಿ, ಪರಿಸರ ಜಾಗೃತಿ, ಸಾಮಾಜಿಕ ಕಳಕಳಿ ಇತರರಿಗೆ ಮಾದರಿ. ಅದನ್ನು ಗುರುತಿಸಿ ಅವರನ್ನು ಹಲವು ಪ್ರಶಸ್ತಿಗಳು ಅರಸಿ ಬಂದಿವೆ.

ಕನ್ನಡದ ಮಹತ್ವದ ಇತಿಹಾಸಕಾರರಾಗಿದ್ದ ಪ್ರೊ.ಬಿ.ಶೇಖ್ ಅಲಿ ಅವರು ಎರಡು ವಿಶ್ವವಿದ್ಯಾಲಯಗಳನ್ನು ಕಟ್ಟಿ ಬೆಳೆಸಿದವರು. ಅವರ ಅಗಲಿಕೆಯಿಂದ ಜ್ಞಾನದ ಬೆಳಕೊಂದು ಆರಿ ಹೋಗಿದೆ...

ಕಣ್ಮರೆಯಾದ ಜ್ಞಾನದ ಬೆಳಕು

ಬಿ.ಎ. ವಿವೇಕ ರೈ

ಸ್ಮರಣೆ

ಎರಡು ಶತಮಾನಗಳ ಹರಹಿನಲ್ಲಿ ಶಿಕ್ಷಣ ಮತ್ತು ಸಂಶೋಧನೆಯ ಕ್ಷೇತ್ರಗಳಲ್ಲಿ ಮೇರು ವ್ಯಕ್ತಿತ್ವದಿಂದ ಹೊಳೆಯುತ್ತಿದ್ದ ಪ್ರೊ.ಬಿ.ಶೇಖ್ ಅಲಿ ಅವರು ನೂರರ ಅಂಚಿನಲ್ಲಿ ಅಗಲಿದಾಗ ಜ್ಞಾನದ ಬೆಳಕೊಂದು ಕಣ್ಮರೆಯಾಯಿತು. ಇತಿಹಾಸ, ಧರ್ಮ ಮತ್ತು ಸಂಸ್ಕೃತಿಯ ಜ್ಞಾನಶಿಸ್ತುಗಳಲ್ಲಿ ಮಹಾನ್ ವಿದ್ವಾಂಸರಾಗಿದ್ದ ಹಾಗೆಯೇ ಅವರೊಬ್ಬ ಅದ್ಭುತ ಮಾನವತಾವಾದಿಯೂ ಆಗಿದ್ದರು, ಶೈಕ್ಷಣಿಕ ಹೊಸಪ್ರತಿಭೆಗಳ ಅನ್ವೇಷಕರಾಗಿದ್ದರು. ಜಾತ್ಯತೀತತೆ, ನೈತಿಕತೆ ಮತ್ತು ಸರಳತೆಗಳ ಸಂಗಮವಾಗಿದ್ದರು.

ಪ್ರೊ. ಅಲಿ ಅವರು 1980ರ ಸೆಪ್ಟೆಂಬರ್ 10ರಂದು ಹೊಸತಾಗಿ ಆರಂಭವಾದ ಮಂಗಳೂರು ವಿಶ್ವವಿದ್ಯಾನಿಲಯದ ಮೊದಲ ಕುಲಪತಿಯಾಗಿ ಬಂದರು. 1985ರವರೆಗೆ ನಾಲ್ಕೂವರೆ ವರ್ಷಗಳ ಕಾಲ ಅವರು 'ಸ್ಥಾಪಕ ಕುಲಪತಿ' ಎಂಬ ಹೆಸರಿಗೆ ಬಹುರೂಪಿಯಾಗಿ ಜೀವ ತುಂಬಿದರು. ಮೈಸೂರು ವಿಶ್ವವಿದ್ಯಾನಿಲಯವು ಮಂಗಳೂರಿನಲ್ಲಿ ಸ್ಥಾಪಿಸಿದ ಸ್ನಾತಕೋತ್ತರ ಕೇಂದ್ರದಲ್ಲಿ ಕನ್ನಡ ವಿಭಾಗದಲ್ಲಿ ಹತ್ತು ವರ್ಷಗಳ ಕಾಲ ಉಪನ್ಯಾಸಕನಾಗಿದ್ದ ನಾನು, ಅಲಿ ಅವರನ್ನು ಕಂಡದ್ದು ಅವರು 1980ರಲ್ಲಿ ಮಂಗಳೂರು ವಿ.ವಿ.ಗೆ ಮೊದಲ ಕುಲಪತಿಯಾಗಿ ಬಂದಾಗಲೇ.

ಅಲಿ ಅವರು ಕುಲಪತಿ ಆಗಿ ಬಂದಾಗ ಕಚೇರಿ ಇರಲಿಲ್ಲ, ಕಚೇರಿ ಸಿಬ್ಬಂದಿ ಇರಲಿಲ್ಲ. ಮಂಗಳೂರಿನ ಬಾವುಟ ಗುಡ್ಡೆಯಲ್ಲಿ ಅಲೋಸಿಯಸ್ ಕಾಲೇಜಿನ ಒಂದು ಹಳೆಯ ಕಟ್ಟಡದಲ್ಲಿ ಆಡಳಿತ ಕಚೇರಿ ಮಾಡಿ, ಆಡಳಿತ ಸಿಬ್ಬಂದಿಯನ್ನು ಸರ್ಕಾರದ ಬೇರೆ ಬೇರೆ ಇಲಾಖೆಗಳಿಂದ ಎರವಲು ಸೇವೆಯಲ್ಲಿ ಪಡೆಯಲು ಅವರು ಪಟ್ಟ ಶ್ರಮ ವಿಶೇಷವಾದುದು. ಮಾಲತಿ ದಾಸ್ ಅವರನ್ನು ಸರ್ಕಾರಿ ಸೇವೆಯಿಂದ ಪಡೆದು ರಿಜಿಸ್ಟ್ರಾರ್ ಆಗಿ ನೇಮಿಸಿದರು. ಇದರಿಂದ ಆಡಳಿತಕ್ಕೆ ಅನುಕೂಲ ಆಯಿತು. ಹೀಗೆಯೇ ಉತ್ತಮ ಅಧಿಕಾರಿಗಳನ್ನು ಎರವಲು ಸೇವೆಯಲ್ಲಿ ಬಳಸಿಕೊಂಡರು. ತಾವು ಮಾರ್ಗನ್ ಗೇಟ್ ಬಳಿಯ ಹಳೆಯ ಬಂಗಲೆಯೊಂದರಲ್ಲಿ ಮನೆ ಮಾಡಿಕೊಂಡರು.

ಸ್ಥಳೀಯವಾದ ಅಧ್ಯಾಪಕರೊಬ್ಬರು ಸಹಾಯಕ್ಕೆ ಬೇಕು ಎಂದು ನನ್ನನ್ನು ಅವರ ಆಪ್ತ ಕಾರ್ಯದರ್ಶಿಯಾಗಿ ಬರಲು ಕೇಳಿಕೊಂಡರು. ಅಧ್ಯಾಪಕನಾಗಿದ್ದ ನನಗೆ ಆಡಳಿತದ ಕೆಲಸಕ್ಕೆ ಬರಲು ಮನಸ್ಸಿರಲಿಲ್ಲ. ಜತೆಗೆ ನನ್ನ ಪಿಎಚ್.ಡಿಯ ಕೆಲಸ ಅಂತಿಮ ಹಂತದಲ್ಲಿ ಇತ್ತು. ಆದರೆ, ಅಲಿ ಅವರ ವಿಶ್ವಾಸದ ಕೋರಿಕೆಗೆ ಇಲ್ಲ ಅನ್ನಲಾಗಲಿಲ್ಲ. 1981ರ ಫೆಬ್ರವರಿಯಲ್ಲಿ ಕುಲಪತಿ ಅಲಿಯವರ ಆಪ್ತಕಾರ್ಯದಶಿಯಾಗಿ ಸೇರಿದೆ. ಅವರು ನನ್ನನ್ನು ಕುಟುಂಬದ ಬಂಧುವಿನಂತೆ ನೋಡಿಕೊಳ್ಳುತ್ತಿದ್ದರು. ಆಡಳಿತ ಸಮಸ್ಯೆಗಳನ್ನು ಅವರು ನನ್ನ ಜತೆಗೆ ಹಂಚಿಕೊಳ್ಳುತ್ತಿದ್ದರು.

ಕುಲಪತಿಯಾಗಿ ಅವರ ಮುಂದೆ ಬೆಟ್ಟದಷ್ಟು ಸಮಸ್ಯೆಗಳು, ಸವಾಲುಗಳು ಇದ್ದುವು. ಹೊಸ ಅಧ್ಯಯನ ವಿಭಾಗಗಳ ಸ್ಥಾಪನೆ ಮತ್ತು ಅವುಗಳಿಗೆ ಹುದ್ದೆಗಳ ಮಂಜೂರಾತಿ, ಈಗಾಗಲೇ ಇರುವ ವಿಭಾಗಗಳಿಗೆ ಹೊಸ ಹುದ್ದೆಗಳ ಸೃಜನೆ, ಅಧ್ಯಯನ ವಿಭಾಗಗಳು, ಹಾಸ್ಟೆಲ್‌ಗಳು, ಗ್ರಂಥಾಲಯ ಕಟ್ಟಡಗಳ ನಿರ್ಮಾಣ, ನೀರಿನ ಪೂರೈಕೆ, ಸಾರಿಗೆ ವ್ಯವಸ್ಥೆ - ಇಂತಹ ಹತ್ತು ಹಲವು. ಇಂತಹ ಕೆಲಸಗಳ ಕಡತಗಳ ಸಲ್ಲಿಕೆ ಮತ್ತು ಮಂಜೂರಾತಿಗಾಗಿ ಕುಲಪತಿಯವರು ತಮ್ಮ ಜತೆಗೆ ನನ್ನನ್ನು ಕರೆದುಕೊಂಡು ಹೋಗುತ್ತಿದ್ದರು.

ನಾನು ವಿಧಾನಸೌಧದ ಕಚೇರಿಗಳನ್ನು ಮತ್ತು ರಾಜಭವನವನ್ನು ಮೊದಲು ಪ್ರವೇಶಮಾಡಿ ಪರಿಚಯ ಮಾಡಿಕೊಂಡದ್ದು ಅವರ ಜತೆಗೆ ಹೋದಾಗ 1981ರಲ್ಲಿ. ಅವರು ಪ್ರಧಾನ ಕಾರ್ಯದರ್ಶಿಯವರನ್ನು ಮಾತ್ರ ಕಾಣುತ್ತಿರಲಿಲ್ಲ; ಉಪ ಕಾರ್ಯದರ್ಶಿ, ಅಧೀನ ಕಾರ್ಯದರ್ಶಿ, ಹಾಗೆಯೇ ಕೇಸ್ ವರ್ಕರ್‌ಗಳ ಬಳಿಗೆ ಹೋಗಿ, ಅವರ ಎದುರಿನ ಕಬ್ಬಿಣದ ಕುರ್ಚಿಯಲ್ಲಿ ಕುಳಿತು ವಿನಯದಿಂದ ಮಾತಾಡುತ್ತಿದ್ದರು. 'ದಯವಿಟ್ಟು ಮಾಡಿಕೊಡಿ' ಎನ್ನುವ ಮಾತನ್ನು ಅವರು ಹೇಳುವುದನ್ನು ನಾನು ಅನೇಕ ಬಾರಿ ಕೇಳಿದ್ದೇನೆ. ಹಾಗಾಗಿ ಅವರು ಕೇಳಿದ ಹೆಚ್ಚಿನ ಎಲ್ಲ ಪ್ರಸ್ತಾವಗಳಿಗೆ ಅನುಮೋದನೆ ದೊರೆಯುತ್ತಿತ್ತು.

ಅಲಿ ಅವರು ಕೇವಲ ಒಂದು ವರ್ಷದ ಅವಧಿಯಲ್ಲಿ ಎಂಟು ಹೊಸ ಸ್ನಾತಕೋತ್ತರ ವಿಭಾಗಗಳನ್ನು ಹುದ್ದೆಗಳ ಸಹಿತ ಸ್ಥಾಪಿಸಿದರು. ಇತಿಹಾಸ, ಇಂಗ್ಲಿಷ್, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ರಸಾಯನಶಾಸ್ತ್ರ, ಸಂಖ್ಯಾಶಾಸ್ತ್ರ, ಎಂಬಿಎ, ಗ್ರಂಥಾಲಯ ವಿಜ್ಞಾನ - ಇವುಗಳಿಗೆ 1981ರಲ್ಲೇ ಅನುಮೋದನೆ ಸಿಕ್ಕಿದ್ದು ಬಹಳ ದೊಡ್ಡ ಸಾಧನೆ. ಈ ಹೊಸ ವಿಭಾಗಗಳಿಗೆ ಅಧ್ಯಾಪಕರ ನೇಮಕಾತಿಯಲ್ಲಿ ಪ್ರೊ. ಅಲಿಯವರು ಪಾರದರ್ಶಕವಾಗಿ ವಿದ್ವತ್ತಿಗೆ ಮನ್ನಣೆಯನ್ನು ಕೊಟ್ಟು ಆಯ್ಕೆಗಳನ್ನು ಮಾಡಿದರು.

ಈಗ ಕನ್ನಡದ ಶ್ರೇಷ್ಠ ವಿಮರ್ಶಕರಾಗಿ ಪ್ರಸಿದ್ಧರಾಗಿರುವ ಪ್ರೊ.ಸಿ.ಎನ್. ರಾಮಚಂದ್ರನ್ ಅವರಿಗೆ ಅಧ್ಯಾಪನದ ಅವಕಾಶವನ್ನು ಮೊದಲು ಕಲ್ಪಿಸಿದವರು ಪ್ರೊ. ಅಲಿ. ರಾಮಚಂದ್ರನ್ ಅವರು ಅಲಿ ಅವರ ಬಗ್ಗೆ ಮೊನ್ನೆ ನನಗೆ ಬರೆದ ಸಂದೇಶದ ವಾಕ್ಯ: 'ಅವರು ತುಂಬಾ ಸ್ನೇಹಪರರು ಮತ್ತು ಇತರರ ಬಗ್ಗೆ ಕಾಳಜಿ ಉಳ್ಳವರು. ನಾನು ಮೊದಲು 1983ರಲ್ಲಿ ಅವರನ್ನು ಲೈಟ್ ಹೌಸ್‌ನಲ್ಲಿ ಭೇಟಿಮಾಡಿದಾಗ, ತುಂಬಾ ಆಪ್ತವಾಗಿ ನನ್ನೊಡನೆ ಅರ್ಧಗಂಟೆ ಮಾತನಾಡಿ, ನನಗೆ ವಿ.ವಿ.ಯಲ್ಲಿ ಇಂಗ್ಲಿಷ್ ವಿಭಾಗವನ್ನು ಸೇರಲು ಅರ್ಜಿ ಹಾಕಲು ಪ್ರೋತ್ಸಾಹಿಸಿ, ಅರ್ಜಿ ಫಾರ್ಮ್ ಕೂಡ ಕೂಡಲೇ ತರಿಸಿಕೊಟ್ಟರು.'

ಅಲಿ ಅವರು ಹಳೆಯ ಅಧ್ಯಯನ ವಿಭಾಗಗಳಲ್ಲಿ ದೀರ್ಘಕಾಲದಿಂದ ಸೇವೆ ಸಲ್ಲಿಸುತ್ತಿದ್ದ ಅಧ್ಯಾಪಕರಿಗೆ ಬಡ್ತಿಗಳನ್ನು ಕೊಟ್ಟು, ವಿ.ವಿ.ಯ ಶೈಕ್ಷಣಿಕ ವಿಭಾಗಗಳಿಗೆ ಹೊಸ ಶಕ್ತಿಯನ್ನು ತುಂಬಿದರು. ವಿ.ವಿ.ಯ ಆರಂಭದ ಕಾಲದಿಂದ ಸಹೋದ್ಯೋಗಿಗಳಾಗಿದ್ದ ಬಯೋಸೈನ್ಸ್ ವಿಭಾಗದ ಸ್ನೇಹಿತ ಪ್ರೊ.ಅಬ್ದುಲ್ ರೆಹಮಾನ್ ಮತ್ತು ಪ್ರೊ.ಕೆ.ಎಂ. ಕಾವೇರಿಯಪ್ಪ ಅವರ ಜತೆಗೆ ಅಲಿ ಅವರ ನೆನಪುಗಳನ್ನು ಮೊನ್ನೆ ಹಂಚಿಕೊಂಡೆ. ಅವರಿಬ್ಬರೂ ಮುಂದೆ ಕುಲಪತಿಗಳಾದವರು. ಅವರೆಲ್ಲರೂ ನೆನಪಿಸಿಕೊಳ್ಳುವುದು - ಮಾನವೀಯತೆ, ಸರಳತೆ ಮತ್ತು ಪ್ರೀತಿಯ ಸಂಬಂಧದ ಮೂಲಕ ಬಹಳ ಕ್ಲಿಷ್ಟ ಸನ್ನಿವೇಶಗಳನ್ನು ಎದುರಿಸಿ ಹೊಸ ವಿ.ವಿ.ಯನ್ನು ಶೈಕ್ಷಣಿಕವಾಗಿ ಭದ್ರಗೊಳಿಸಿದ ಅಲಿ ಅವರ ಅಪೂರ್ವ ಮಾದರಿಯನ್ನು. 1980–2000ರ ಕಾಲಘಟ್ಟದಲ್ಲಿ ಮಂಗಳೂರು ವಿ.ವಿ. ಶೈಕ್ಷಣಿಕವಾಗಿ ಕರ್ನಾಟಕದಲ್ಲಿ ಉನ್ನತ ಸ್ಥಾನವನ್ನು ಪಡೆದುದರಲ್ಲಿ ಮೊದಲ ಕುಲಪತಿಯಾಗಿ ಪ್ರೊ. ಅಲಿ ಅವರು ಹಾಕಿದ ಬುನಾದಿ ಮಹತ್ವದ ಪಾತ್ರವನ್ನು ವಹಿಸಿದೆ.

ಅಲಿ ಅವರಿಗಿದ್ದ ಶೈಕ್ಷಣಿಕ ಕಾಳಜಿಯ ಒಂದು ವೈಯಕ್ತಿಕ ನಿದರ್ಶನ. 1981ರಲ್ಲಿ ನಾನು ಅವರ ಆಪ್ತಕಾರ್ಯದರ್ಶಿಯಾಗಿ ಆಡಳಿತಕ್ಕೆ ಬಂದಕಾರಣ ನನ್ನ ಪಿಎಚ್.ಡಿ ಸಲ್ಲಿಕೆ ತಡವಾಗುತ್ತಿತ್ತು. ನನ್ನ ಮಾರ್ಗದರ್ಶಕರಾದ ಡಾ.ಹಾ.ಮಾ. ನಾಯಕರು ಮೈಸೂರಿನಿಂದ ನನಗೆ ಎಚ್ಚರಿಕೆಯ ನೋಟಿಸ್ ಕಳುಹಿಸಿದ್ದರು. ಈ ವಿಷಯವನ್ನು ಪ್ರೊ. ಅಲಿ ಅವರಲ್ಲಿ ತಿಳಿಸಿದಾಗ ಅದೇ ವರ್ಷ ನವೆಂಬರ್‌ನಲ್ಲಿ ನನ್ನನ್ನು ಕನ್ನಡ ವಿಭಾಗಕ್ಕೆ ಹಿಂದಕ್ಕೆ ಕಳುಹಿಸಿದರು. ಜತೆಗೆ ಥೀಸಿಸ್ ಅನ್ನು ಇಬ್ಬರು ಟೈಪಿಸ್ಟ್‌ರಲ್ಲಿ ಟೈಪ್ ಮಾಡಿಸಿದರೆ ಬೇಗನೆ ಸಲ್ಲಿಸಬಹುದು ಎನ್ನುವ ಪ್ರಾಯೋಗಿಕ ಸಲಹೆಯನ್ನು ಕೊಟ್ಟರು. ಇದರಿಂದ ನನಗೆ ಬಹಳ ಅನುಕೂಲವಾಗಿ ಸಕಾಲಕ್ಕೆ ಸಲ್ಲಿಸಿ ಪಿಎಚ್.ಡಿ ಪದವಿ ದೊರೆಯಿತು.

ನಾನು ಮಂಗಳೂರು ವಿ.ವಿ.ಯ ಕನ್ನಡ ವಿಭಾಗದ ಮುಖ್ಯಸ್ಥನಾಗಿ ನಡೆಸಿದ ಮೊದಲನೆಯ ವಿಚಾರಸಂಕಿರಣ ಐತಿಹಾಸಿಕವಾಗಿ ಮಹತ್ವದ್ದು. 'ಕನ್ನಡ ಕಾದಂಬರಿಯ ಮೊದಲ ಹೆಜ್ಜೆಗಳು' ಎಂಬ ವಿಚಾರ ಸಂಕಿರಣವನ್ನು 1984ರ ಡಿಸೆಂಬರ್ 8 ಮತ್ತು 9ರಂದು ಮಂಗಳೂರಿನಲ್ಲಿ ನಡೆಸಲಾಯಿತು. ಡಾ. ಶಿವರಾಮ ಕಾರಂತರು ಉದ್ಘಾಟಿಸಿದ ಆ ಸಂಕಿರಣದ ಅಧ್ಯಕ್ಷತೆಯನ್ನು ವಹಿಸಿದ್ದ ಕುಲಪತಿ ಅಲಿ ಅವರು ಬಹಳ ಮಹತ್ವದ ವಿಚಾರಗಳನ್ನು ಹಂಚಿಕೊಂಡರು. ಆ ದಿನ ಅವರು ಹೇಳಿದ ಕೆಲವು ಮಾತುಗಳು: 'ಶಾಂತಿ, ಪ್ರಗತಿ, ಒಳ್ಳೆಯತನ, ಮಹತ್ತು ಇವುಗಳ ದಾರಿಯಲ್ಲಿ ಚಲಿಸುವುದು; ಮತ್ತು ಕ್ರೌರ್ಯ, ಸ್ವಾರ್ಥ, ವಂಚನೆಯಂತಹ ದುರಂತಗಳನ್ನು ದೂರ ಮಾಡುವುದು ಸಾಹಿತ್ಯದ ಉದ್ದೇಶ. ವಾಲ್ಟರ್ ಸ್ಕಾಟ್‌ನಂತಹ ಐತಿಹಾಸಿಕ ಕಾದಂಬರಿಕಾರರು ಕಲೆ ಸಂಸ್ಕೃತಿ ನಡವಳಿಕೆಗಳ ಪರಿಚಯವನ್ನು ಮಾಡುತ್ತ ತಮ್ಮ ಕೃತಿಗಳ ಮೂಲಕ ಹೊಸ ಇತಿಹಾಸವನ್ನು ಬರೆದರು.'

ಮಂಗಳೂರು ವಿ.ವಿ.ಯ ಮೊದಲನೆಯ ಘಟಿಕೋತ್ಸವವು ಪ್ರೊ. ಅಲಿ ಅವರು ಕುಲಪತಿ ಆಗಿದ್ದ ಅವಧಿಯಲ್ಲಿ 1983ರಲ್ಲಿ ಮಂಗಳೂರು ಪುರಭವನದಲ್ಲಿ ನಡೆಯಿತು. ಆ ವರ್ಷ ಗೌರವ ಡಾಕ್ಟರೇಟ್ ಪದವಿ ಪಡೆದವರು ಶಿವರಾಮ ಕಾರಂತ, ಶಿಲ್ಪಿ ರೆಂಜಾಳ ಗೋಪಾಲ ಶೆಣೈ ಮತ್ತು ಜನರಲ್ ಕೆ.ಎಂ. ಕಾರಿಯಪ್ಪ. ಉನ್ನತ ವ್ಯಕ್ತಿತ್ವದವರಿಗೆ ಗೌರವ ಕೊಟ್ಟ ಸಾರ್ಥಕತೆಯನ್ನು ಅಲಿ ಅವರು ನಮ್ಮೆಲ್ಲರ ಜತೆಗೆ ಹಂಚಿಕೊಂಡಿದ್ದರು. ಅವರು ಮಂಗಳೂರು ವಿ.ವಿ.ಯ ಲಾಂಛನದ ಧ್ಯೇಯವಾಕ್ಯವನ್ನು ರೂಪಿಸುವಾಗ 'ಜ್ಞಾನವೇ ಬೆಳಕು' ಎನ್ನುವ ನುಡಿಯನ್ನು ಇಷ್ಟಪಟ್ಟಿದ್ದರು. ಲಾಂಛನದ ಚಿತ್ರದಲ್ಲಿ ಕರಾವಳಿಯ ಯಕ್ಷಗಾನದ ಕಿರೀಟ ಮತ್ತು ಕೊಡಗಿನ ಕಾಫಿ ಹಣ್ಣುಗಳ ಗೊಂಚಲುಗಳನ್ನು ಇರಿಸಲು ಸೂಚಿಸಿದ್ದರು.

ಕುಲಪತಿಯಾಗಿ ಮೂರು ವರ್ಷಗಳ ಅವಧಿ ಮುಗಿದ ಬಳಿಕ ಅಲಿ ಅವರಿಗೆ ಮತ್ತೆ ಮೂರು ವರ್ಷಗಳ ಅವಧಿಯ ವಿಸ್ತರಣೆ ಸಿಗಲಿಲ್ಲ. ಆರಂಭದಲ್ಲಿ ಒಂದು ವರ್ಷದ ವಿಸ್ತರಣೆ ದೊರಕಿತು. ಆ ವೇಳೆಗೆ ಅವರ ವಿರುದ್ಧ ಸುಳ್ಳು ಆರೋಪಗಳ ಅಪಪ್ರಚಾರ ಆರಂಭವಾಯಿತು. ಮತೀಯ ಮತ್ತು ರಾಜಕೀಯದ ಕೆಲವು ಶಕ್ತಿಗಳು ಮುಷ್ಕರದ, ಗೊಂದಲದ ವಾತಾವರಣ ನಿರ್ಮಾಣಮಾಡುವ ಕೆಲಸದಲ್ಲಿ ತೊಡಗಿದವು. ನಾವು ಅಧ್ಯಾಪಕರು, ಸ್ನಾತಕೋತ್ತರ ಕೇಂದ್ರದಲ್ಲಿ ಹತ್ತು ಹನ್ನೆರಡು ವರ್ಷಗಳ ಕಾಲ ಎಲ್ಲ ಸಂಕಷ್ಟಗಳನ್ನು ಸಹಿಸಿಕೊಂಡು ಕೊಣಾಜೆಯಲ್ಲಿ ವಿಶ್ವವಿದ್ಯಾನಿಲಯ ಉಳಿಯಬೇಕೆಂದು ಬಯಸಿದವರು, ಅಲಿ ಅವರ ಪರವಾಗಿ ಗಟ್ಟಿಯಾಗಿ ನಿಂತೆವು. ಆಗಿನ ಸಿಂಡಿಕೇಟ್‌ನ ಎಲ್ಲ ಮುತ್ಸದ್ದಿ ಹಿರಿಯರು ಕುಲಪತಿ ಅವರಿಗೆ ಬೆಂಬಲವಾಗಿ ನಿಂತರು. ಆದರೆ ಅಲಿ ಅವರು ನೊಂದಿದ್ದರು.

ಬದಲಾದ ರಾಜಕೀಯ ಸಂದರ್ಭಕ್ಕೆ ಅನುಗುಣವಾಗಿ ಕುಲಪತಿಯಾಗಿ ಅವರ ವಿಸ್ತರಣೆಯನ್ನು ತಿಂಗಳುಗಳ ಮಟ್ಟಕ್ಕೆ ಇಳಿಸಿದಾಗ, ಹಿತೈಷಿಗಳ ಸಲಹೆಯಂತೆ ಅಲಿ ಅವರು ರಾಜೀನಾಮೆಯನ್ನು ಸಲ್ಲಿಸಿ ತಮಗೆ ವಿಸ್ತರಣೆ ಬೇಡವೆಂದು ತಿಳಿಸಿದರು. ಹೀಗೆ ಮೊದಲ ಕುಲಪತಿಯಾಗಿ ಅವರು ಮಂಗಳೂರು ವಿ.ವಿ.ಯಲ್ಲಿ ಇದ್ದದ್ದು ನಾಲ್ಕೂವರೆ ವರ್ಷಗಳ ಕಾಲ.

ಅಲಿ ಅವರ ಪ್ರಾಮಾಣಿಕತೆ ಮತ್ತು ದಕ್ಷತೆಗೆ ಪ್ರತಿಫಲವಾಗಿ ಅವರನ್ನು ಗೋವಾದಲ್ಲಿ ಸ್ಥಾಪನೆಯಾದ ಹೊಸ ವಿ.ವಿ.ಗೆ ಮೊದಲನೆಯ ಕುಲಪತಿಯಾಗಿ ನೇಮಕ ಮಾಡಲಾಯಿತು. ಅಲ್ಲಿ ಅವರು ಮತ್ತೆ ಶೂನ್ಯದಿಂದ ವಿ.ವಿ.ಯನ್ನು ಕಟ್ಟಿದರು. ಕರ್ನಾಟಕದ ಅನೇಕ ಮಂದಿ ತರುಣರನ್ನು ಅವರು ಗೋವಾ ವಿ.ವಿ.ಯಲ್ಲಿ ಅಧ್ಯಾಪಕರಾಗಿ ನೇಮಕಮಾಡಿದ್ದನ್ನು ಅವರ ಒಡನಾಟದಲ್ಲಿ ನಾನು ಕಂಡಿದ್ದೇನೆ. ನಾನು ಕನ್ನಡ ವಿ.ವಿ. ಹಂಪಿಯ ಕುಲಪತಿ ಆದಾಗ 2004ರಲ್ಲಿ ಪ್ರೊ. ಅಲಿ ಅವರ ಆಶೀರ್ವಾದ ಪಡೆಯಲು ಮೈಸೂರಿನ ಸರಸ್ವತಿಪುರಂನ ಅವರ ಮನೆಗೆ ಹೋದೆ. ಅವರು ನನಗೆ ಕುಲಪತಿಯಾದವರು ಮಾಡಬೇಕಾದ ಕರ್ತವ್ಯಗಳ ಸಂಹಿತೆಯನ್ನು ಬರೆದ ಒಂದು ಪರಿಪತ್ರವನ್ನು ಕೊಟ್ಟು ಅದರ ಕುರಿತು ವಿವರಿಸಿದರು. ಎರಡು ವಿ.ವಿ.ಗಳ ಸ್ಥಾಪಕ ಕುಲಪತಿಯಾಗಿ ಅವರ ಅನುಭವ ಅದರಲ್ಲಿ ಒಡಮೂಡಿತ್ತು. ಕರ್ನಾಟಕ ರಾಜ್ಯ ಮುಕ್ತ ವಿ.ವಿ.ಯ 2008ರ ಘಟಿಕೋತ್ಸವದಲ್ಲಿ ಪ್ರೊ. ಅಲಿ ಅವರು ಗೌರವ ಡಾಕ್ಟರೇಟ್ ಪದವಿ ಸ್ವೀಕರಿಸಿದ್ದು ನನಗೆ ಧನ್ಯತೆಯ ಕ್ಷಣ.

ಮಂಗಳೂರು ವಿ.ವಿ. ಸ್ಥಾಪನೆಯಾಗಿ ಈ ಸೆಪ್ಟೆಂಬರ್ 10ಕ್ಕೆ 42 ವರ್ಷಗಳು ತುಂಬುತ್ತವೆ. ಈ ನಾಲ್ಕು ದಶಕಗಳಲ್ಲಿ ನೇತ್ರಾವತಿ ನದಿಯಲ್ಲಿ ಸಾಕಷ್ಟು ನೀರು ಹರಿದುಹೋಗಿದೆ. ವಿಶ್ವವಿದ್ಯಾನಿಲಯವು ಸರ್ವತೋಮುಖವಾಗಿ ಬೆಳೆದಿದೆ. ಪ್ರೊ.ಅಲಿ ಅವರು ಕಂಡ ಕನಸುಗಳು, ಶಿಕ್ಷಣದ ಮೂಲಕ ಸಾಧಿತವಾಗಬೇಕಾದ ಮಾನವೀಯತೆ ಮತ್ತು ಸೌಹಾರ್ದತೆ ಅವು ಎಂದೂ ಅಳಿಯುವುದಿಲ್ಲ, ಅಳಿಯಬಾರದು. ❖

ಸಂಬಂಜ ಅನ್ನೋದು ದೊಡ್ಡದು ಕನಾ ನಾಟಕದ ದೃಶ್ಯಗಳು

ಸಂಬಂಜ ಅನ್ನೋದು...

ಕೆ.ನರಸಿಂಹಮೂರ್ತಿ

ರಂಗಭೂಮಿ

'ಸಂಬಂಜ ಅನ್ನೋದು ದೊಡ್ಡದು ಕನಾ'– ದೇವನೂರ ಮಹಾದೇವರ 'ಕುಸುಮಬಾಲೆ'ಯಲ್ಲಿ ಕೊಲೆಯಾದ ಚೆನ್ನನ ತಂದೆಯು ತನ್ನ ಪತ್ನಿಗೆ ಹೇಳುವ ಮಾತು. ಮಗನನ್ನು ಕಳೆದುಕೊಂಡ ಹತಾಶೆಯ ಸನ್ನಿವೇಶದಲ್ಲಿ ಬರುವ ಈ ಮಾತು, ಕನ್ನಡ ಸಾಹಿತ್ಯವನ್ನು ಓದಿ ಬಲ್ಲವರು, ನಾಡಿನ ಆಗುಹೋಗುಗಳಿಗೆ ಮನಮಿಡಿದು ಪ್ರತಿಕ್ರಿಯಿಸುವವರು ಸಾಂತ್ವನಕ್ಕಾಗಿ ಹೇಳಿಕೊಳ್ಳುವ, ಇತರರಿಗೆ ಹೇಳುವ ಮಾತೂ ಹೌದು. ಕಾದಂಬರಿಯಲ್ಲಿ ವ್ಯಕ್ತವಾಗುವ ದಟ್ಟ ವಿಷಾದದಾಚೆಗೆ, ಮನುಷ್ಯ ಸಂಬಂಧಗಳ ಕುರಿತ ದೊಡ್ಡ ಭರವಸೆಗೆ ಅನ್ವರ್ಥಕವಾಗಿಯೂ ಈ ಮಾತು ಮತ್ತೆ ಮತ್ತೆ ಎಲ್ಲೆಲ್ಲೂ ಬಳಕೆಯಾಗುತ್ತಿದೆ.

ಈ ಮಾತನ್ನೇ ತಲೆಬರಹವಾಗಿಸಿ, ಮಹಾದೇವರ ಐದು ಕತೆಗಳನ್ನು ಆಧರಿಸಿ ರಂಗರೂಪಕ್ಕೆ ತಂದರೆ ಹೇಗಿರುತ್ತದೆ ಎಂಬ ಪ್ರಶ್ನೆಗೆ ಪ್ರಾಥಮಿಕ ಉತ್ತರವೆಂಬಂತೆ ಮೈಸೂರು ಕಳೆದ ವಾರ (ಆ.27, 28) 'ಸಂಬಂಜ ಅನ್ನೋದು ದೊಡ್ಡದು ಕನಾ' ನಾಟಕ ಪ್ರದರ್ಶನಕ್ಕೆ ಸಾಕ್ಷಿಯಾಯಿತು.

ನಾಟಕದಲ್ಲಿ 'ಮಾರಿಕೊಂಡವರು', 'ಮೂಡಲಸೀಮೇಲಿ ಕೊಲೆ ಗಿಲೆ ಮುಂತಾಗಿ', 'ಡಾಂಬರು ಬಂದುದು', 'ಅಮಾಸ' ಹಾಗೂ 'ಒಡಲಾಳ' ಕತೆಗಳು ಒಂದು ಗಂಟೆ ನಲವತ್ತು ನಿಮಿಷದ ಅವಧಿಯಲ್ಲಿ, ಒಂದರ ಹಿಂದೊಂದು ಅನಾವರಣಗೊಳ್ಳುತ್ತವೆ. ಐದೂ ಕತೆಗಳ 'ಒಡಲಾಳ' ಅಮಾಯಕ ಹಳ್ಳಿಜನರ ಶೋಷಣೆಯೇ. ಶೋಷಿತರು ಮತ್ತು ಶೋಷಕರ ರೂಪಗಳು ಬದಲಾಗುತ್ತವೆ. ಬದುಕು ಬದಲಾಗುವುದಿಲ್ಲ. ಈ ಆಶಯ ದೇವನೂರರ ಕೃತಿಗಳಲ್ಲಿ ತಣ್ಣಗೆ ಹರಿಯುವ ನದಿಯಂತೆ ಹರಡಿಕೊಂಡಿದೆ.

ನಾಟಕದೊಂದಿಗೆ, ಕತೆಗಳ ಓದಿನ ಅನುಭವದ ಹೋಲಿಕೆಯು ಸಹಜವಾಗಿಯೇ ಬರುತ್ತದೆ. ಈ ಕತೆಗಳನ್ನು ಪ್ರತಿಬಾರಿಯೂ ಏಕಾಂತದಲ್ಲಿ ಓದುವಾಗ ವಿಷಣ್ಣ ಭಾವ ಮೂಡುತ್ತದೆ. ಓದಿದ ಎಷ್ಟೋ ಕಾಲದ ಬಳಿಕವೂ ಅದು ಕರಗದೇ ಉಳಿದಿರುವುದು ಕತೆಗಳ ವಿಶೇಷ.

ಆದರೆ, ಲೋಕಾಂತದ ರಂಗರೂಪದಲ್ಲಿ ಅದೇ ಭಾವವನ್ನು ಮೂಡಿಸುವಲ್ಲಿ ಪಾತ್ರಧಾರಿಗಳಿಗೆ, ನಿರ್ದೇಶಕ ಜನಾರ್ದನ (ಜನ್ನಿ) ಅವರಿಗೆ ಸಿಗುವುದು ಅಲ್ಪಗೆಲುವು. ರಂಗರೂಪಕ್ಕೆ ತಂದ ಪ್ರೊ.ರಾಜಪ್ಪ ದಳವಾಯಿ ಕತೆಗಳನ್ನು, ಆಶಯವನ್ನು ಅತ್ತಿತ್ತ ಅಲುಗಾಡಲು ಬಿಟ್ಟಿಲ್ಲ. ಮೈಮನವನ್ನು ಕಂಪಿಸುವಂತೆ ಮಾಡುವ ಸಂಗೀತದ ಸಮ್ಮೋಹಕತೆಯನ್ನು ಮೈಗೂಡಿಸಿಕೊಂಡಿರುವ ಕತೆಗಳ ಶಕ್ತಿಯು ನಾಟಕದ ಸಂಗೀತಕ್ಕೂ (ಚಿಂತನ್ ವಿಕಾಸ್) ಬಹುಪಾಲು ದಕ್ಕಿರುವುದು ಸಮಾಧಾನಕರ. ಜನಮನ ಸಾಂಸ್ಕೃತಿಕ ಸಂಘಟನೆಯ ಮಹತ್ವಾಕಾಂಕ್ಷೆಯ ಪ್ರಯತ್ನವಾಗಿ, ಕೇವಲ ಎರಡು ತಿಂಗಳ ಅವಧಿಯಲ್ಲಿ ಬಹುತೇಕ ಹೊಸ ಕಲಾವಿದರನ್ನೇ ತರಬೇತುಗೊಳಿಸಿ ರೂಪಿಸಿದ ನಾಟಕ. ಅವಸರವಾಯಿತು ಎನ್ನಿಸದೇ ಇರದು. ಕತೆಗಳ ಹಂಗು ತೊರೆದು ನೋಡಿದರೂ ತಂಡದ ಮಹತ್ವಾಕಾಂಕ್ಷೆಯು ಅಬ್ಬರ, ಗಲಾಟೆ, ಅತಿಯಾದ ಸಂಭಾಷಣೆ, ಮಾಗದ ಅಭಿನಯದಲ್ಲಿ ನಲುಗುವುದು ಕಾಣುತ್ತದೆ.

ದೇಶದ ಮಹತ್ವದ ಲೇಖಕರಾದ ದೇವನೂರರ ಕತೆಗಳನ್ನು ಇನ್ನೊಂದು ಪ್ರಕಾರಕ್ಕೆ ಅಳವಡಿಸುವಾಗ, ಮೂಲದ ನೆರಳು, ಪ್ರಭಾವ ಕಾಡದೇ ಬಿಡದು. ನಟ, ನಿರ್ದೇಶಕ, ಸಂಗೀತಗಾರ ಏಕಕಾಲಕ್ಕೆ ಆ ಪ್ರಭಾವ ವಲಯದೊಳಗಿದ್ದುಕೊಂಡೇ, ಅದರಾಚೆ ನೆಗೆದು ಮೂಲದ್ರವ್ಯ ಕೆಡದಂತೆ, ಪ್ರಭಾವ ಮಸುಕಾಗದಂತೆ ಹೊಸರೂಪದಲ್ಲಿ ಅದನ್ನು ಮಂಡಿಸಬೇಕಾಗುತ್ತದೆ. ದನಿಗಳು, ಧಾರೆಗಳು ಬೇರೆಯಾದರೂ ಐದೂ ಕತೆಗಳು ಗ್ರಾಮೀಣ ಭಾರತದ ಬಡವರ ಕಥಾನಕವೇ.

ಆದರೆ, ನಾಟಕದಲ್ಲಿ ಐದೂ ಕತೆಗಳು ಪ್ರತ್ಯೇಕ ಘಟಕಗಳಾಗಿಯೇ ನಿರೂಪಿಸಲ್ಪಡುತ್ತವೆಯೇ ಹೊರತು, ಅವುಗಳನ್ನು ಕೂಡಿ ಹಿಡಿಯುವ 'ಸಂಬಂಜ'ದ ಕೇಂದ್ರವನ್ನು ಪ್ರೇಕ್ಷಕರೇ ಹುಡುಕಬೇಕು. ಅದು ಅವರಿಗೆಷ್ಟೇ ಎದುರಾಗುವ ಸವಾಲಲ್ಲ. ನಟ, ನಿರ್ದೇಶಕರಿಗೂ ಎದುರಾಗಿರುವ ಸವಾಲು. ಏಕೆಂದರೆ, 'ಸಂಬಂಜ ಅನ್ನೋದು ದೊಡ್ಡದು ಕನಾ'

ಜನ್ನಿ ಎಂಭತ್ತರ ದಶಕದಲ್ಲೇ 'ಒಡಲಾಳ', 'ಕುಸುಮಬಾಲೆ'ಯನ್ನು ರಂಗಕ್ಕೆ ತಂದಿದ್ದವರು. ಮತ್ತೀಗ ಐದು ಕತೆಗಳನ್ನು ಒಟ್ಟಿಗೇ ರಂಗಕ್ಕೆ ತಂದಿರುವ ಅವರು, ಆಹ್ವಾನಿತರಿಗಷ್ಟೇ ಏರ್ಪಡಿಸಿದ್ದ ಪ್ರದರ್ಶನದ ಉದ್ಘಾಟನೆ ವೇಳೆ, 'ಹೊಸ ಹುಡುಗರನ್ನು ಕಟ್ಟಿಕೊಂಡು, ಮಹಾದೇವರ ಕತೆಗಳನ್ನು ನಾಟಕ ಮಾಡುವ ಭಂಡ ಧೈರ್ಯ ಮಾಡಿದ್ದೀವಿ' ಎಂದಿದ್ದರು. ಆದರೆ, ಅವರದ್ದು ಗಟ್ಟಿ ಧೈರ್ಯವೇ. ಅವರ ಬೆನ್ನಿಗೆ ನಿಂತಿರುವ, ರಂಗಭೂಮಿ ಹಿನ್ನೆಲೆಯ ನಟ ಪ್ರಕಾಶ್ ರಾಜ್ ಅವರ ಬೆಂಬಲವು, ನಟನೆಯ ವಿಷಯದಲ್ಲೂ ಹುಡುಗರಿಗೆ ಸಿಕ್ಕಿದ್ದರೆ ನಾಟಕ ಇನ್ನಷ್ಟು ಪರಿಣಾಮ ಬೀರುವ ಸಾಧ್ಯತೆ ಇತ್ತು.

'ಮಹಾದೇವ ಕತೆಗಾರರೇ, ನಾಟಕಕಾರರೇ ಎಂಬುದು ನನ್ನ ಅನುಮಾನ. ಅದನ್ನು ಪ್ರೇಕ್ಷಕರೇ ನಿಜ ಮಾಡಬೇಕು' ಎಂದು ಅದೇ ಕಾರ್ಯಕ್ರಮದಲ್ಲಿ ರಾಜಪ್ಪ ದಳವಾಯಿ ಹೇಳಿದ್ದರು. ಈ ನಾಟಕವನ್ನು ನೋಡಿದ ಬಳಿಕ, 'ದೇವನೂರರು ಕತೆಯ ಒಡಲಲ್ಲೇ ನಾಟಕದ ರಚನೆಯ ದಾರಿಯನ್ನೂ ಹೇಳಿಕೊಟ್ಟಿರುವ ಅಪರೂಪದ ಲೇಖಕ' ಎನ್ನಲೇಬೇಕು. ಅವರು ಏಕಕಾಲಕ್ಕೆ ನಂಜನಗೂಡು ಭಾಷೆಯ ಸೊಗಡಿನಲ್ಲಿ 'ಓದುವ ಕತೆ' ಹಾಗೂ 'ನೋಡುವ ಕತೆ'ಯನ್ನು ಬರೆದು ನಕ್ಕವರು. ಅವರ ಹೆಸರಿನ ಬಲದ ಮೇಲೆಯೇ ಈ ನಾಟಕದ ಯಶಸ್ಸು ಕೂಡ ನಿಂತಿದೆ.

'ಕುಸುಮಬಾಲೆ', 'ಆಳ–ಅಗಲ', ದೇವನೂರರ ಸಮಗ್ರ ಕೃತಿಗಳನ್ನು ಆಧರಿಸಿದ ಎರಡನೇ ರಂಗ ಪ್ರದರ್ಶನವನ್ನು ರೂಪಿಸುವ ಚಿಂತನೆ'ಯೂ ಈ ತಂಡಕ್ಕೆ ಇದೆ. ಈ ಪ್ರಯತ್ನಕ್ಕಿಂತ ಮುಂಚೆ, ಐದು ಕತೆಗಳ ರಂಗರೂಪದ ಸಾಧ್ಯತೆ ಮತ್ತು ಮಿತಿಗಳ ಬಗ್ಗೆ ಇನ್ನಷ್ಟು ಗಂಭೀರವಾಗಿ ಚಿಂತಿಸುವ ಅಗತ್ಯವೂ ಹೆಚ್ಚಿದೆ. ❖

ಮುನ್ನೋಟ 04-09-2022 ರಿಂದ 10-09-2022

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಸದಾಕಾಲ ಪಕ್ಕದಲ್ಲೇ ಇರುವ ಶತ್ರುಗಳ ಬಗ್ಗೆ ಹೆಚ್ಚು ಎಚ್ಚರ ವಹಿಸಿರಿ. ಗುಪ್ತಚರ ದಳದಲ್ಲಿ ಕೆಲಸ ಮಾಡುವವರಿಗೆ ಹೆಚ್ಚು ಕಾರ್ಯಭಾರಗಳು ಇರುತ್ತವೆ. ಕೆಲವು ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಕೆಲವು ತ್ಯಾಗಗಳನ್ನು ಮಾಡಬೇಕಾದೀತು. ಸಂಘ-ಸಂಸ್ಥೆಗಳಲ್ಲಿ ಕೆಲಸ ಮಾಡುವವರು ಸರಿಯಾದ ಲೆಕ್ಕಪತ್ರಗಳನ್ನು ಇಟ್ಟುಕೊಳ್ಳುವುದು ಉತ್ತಮ. ಹಣದ ಒಳಹರಿವು ಮಂದಗತಿಯಲ್ಲಿ ಇರುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಕುಸ್ತಿಪಟುಗಳಿಗೆ ಹೆಚ್ಚು ಬೇಡಿಕೆ ಬರುತ್ತದೆ. ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡುವವರಿಗೆ ಹೆಚ್ಚು ಲಾಭ ಇರುತ್ತದೆ. ಕುಟುಂಬ ವ್ಯವಹಾರದಲ್ಲಿರುವ ಸಂಬಂಧಿಕರು ಮೋಸ ಮಾಡುವ ಸಾಧ್ಯತೆಗಳಿವೆ, ಎಚ್ಚರವಹಿಸಿರಿ. ಸೋದರರೊಂದಿಗೆ ಇದ್ದ ಮನಃಸ್ತಾಪ ದೂರವಾಗುವ ಸಾಧ್ಯತೆ ಇದೆ. ತೀವ್ರ ಯಾತನೆ ಕೊಡುತ್ತಿದ್ದ ಕಾಯಿಲೆಗಳು ಈಗ ಕಡಿಮೆಯಾಗುವ ಸಾಧ್ಯತೆ ಇದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಬುದ್ಧಿವಂತಿಕೆಯಿಂದ ಶತ್ರುನಿಗ್ರಹ ಮಾಡಿಕೊಳ್ಳಲು ದಾರಿ ಹುಡುಕುವಿರಿ. ಆಟೊಮೊಬೈಲ್ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ಸಿದ್ಧಪಡಿಸಿದ ವಸ್ತ್ರ ವ್ಯಾಪಾರಿಗಳಿಗೆ ಹೆಚ್ಚು ಧನ ಆದಾಯವಿರುತ್ತದೆ. ಹಣದ ಒಳಹರಿವು ಅಗತ್ಯಕ್ಕಿಂತ ಹೆಚ್ಚು ಬರಬಹುದು. ಕುಟುಂಬದ ದಾಖಲೆಗಳನ್ನು ಈಗ ಸರಿಪಡಿಸಿಕೊಳ್ಳಬಹುದು.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಅತ್ತೆ-ಸೊಸೆಯರ ಸಂಬಂಧಗಳಲ್ಲಿ ಕಾವೇರಿದ ವಾತಾವರಣ ಬರಬಹುದು. ಬಹಳ ದಿನಗಳಿಂದ ನಡೆಯುತ್ತಿದ್ದ ಭೂ ವ್ಯವಹಾರ ಪೂರ್ಣಗೊಂಡು ಸಂಪೂರ್ಣ ಹಣ ಮತ್ತು ದಾಖಲೆ ನಿಮ್ಮ ಕೈ ಸೇರುತ್ತದೆ. ಅಡುಗೆ ಕೆಲಸ ಮಾಡುವವರಿಗೆ ಹೆಚ್ಚಿನ ಕೆಲಸ ದೊರೆಯುವ ಸಂದರ್ಭವಿದೆ. ನಿಮ್ಮ ವಿರೋಧಿಗಳು ನಿಮ್ಮೊಂದಿಗೆ ರಾಜಿಯಾಗಲು ಈಗ ಸಿದ್ಧರಾಗಿ ಬರುವರು. ಹಣದ ಒಳಹರಿವು ಉತ್ತಮವಾಗಿರುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಹಲವು ಯೋಜನಾ ಕೆಲಸಗಳಲ್ಲಿ ಮುಂದಾಳತ್ವವಹಿಸಿ ಸಮಸ್ಯೆಗಳನ್ನು ದೂರ ಮಾಡುವಿರಿ. ವ್ಯಾವಹಾರಿಕವಾಗಿ ಬಾಕಿ ಇರುವ ಕೆಲಸಗಳನ್ನು ಪೂರ್ಣಗೊಳಿಸಲು ಸಾಕಷ್ಟು ಸಮಯ ಮೀಸಲಿಡುವಿರಿ. ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಲು ಸಾಕಷ್ಟು ಆಸಕ್ತಿ ತೋರುವಿರಿ. ಸಂಗೀತಗಾರರಿಗೆ ಅವರ ಗುರಿಯನ್ನು ತಲುಪಲು ಪೂರಕವಾದ ವಾತಾವರಣ ದೊರೆಯುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಈ ವಾರ ಬಹಳ ಬುದ್ಧಿವಂತಿಕೆಯಿಂದ ನಡೆಯುವಿರಿ. ಒಟ್ಟಿನ ವ್ಯವಹಾರದಲ್ಲಿ ಹೆಚ್ಚು ಆದಾಯ ಬರುತ್ತದೆ. ಹೆಚ್ಚಿನ ಜವಾಬ್ದಾರಿಗಳನ್ನು ನಿರ್ವಹಿಸಲು ತಯಾರಾಗಿರಿ. ರಫ್ತು ವ್ಯವಹಾರ ಮಾಡುವವರಿಗೆ ಸ್ವಲ್ಪ ಅಡೆತಡೆಗಳು ಬರಬಹುದು. ಪ್ರೀತಿ ಪಾತ್ರರೊಂದಿಗೆ ಇಂದಿನ ಹಾಗೂ ಭವಿಷ್ಯದ ಯೋಜನೆಗಳ ಬಗ್ಗೆ ಚರ್ಚೆ ಮಾಡುವಿರಿ. ನಿಮ್ಮ ಹಿರಿಯರ ಸಲಹೆಗಳು ಬಹಳ ಅತ್ಯಮೂಲ್ಯವಾಗಿರುತ್ತವೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ವ್ಯಂಗ್ಯಚಿತ್ರ ಕಲಾವಿದರುಗಳಿಗೆ ಹೆಚ್ಚು ಬೇಡಿಕೆ ಬರುವ ಸಾಧ್ಯತೆ ಇದೆ. ಹಣದ ಒಳಹರಿವು ಸಾಮಾನ್ಯವಾಗಿರುತ್ತದೆ. ಕೃಷಿ ಕಾರ್ಮಿಕರಿಗೆ ಬೇಡಿಕೆ ಹೆಚ್ಚುತ್ತದೆ, ತನ್ಮೂಲಕ ಹೆಚ್ಚು ಸಂಪಾದನೆಯಾಗುತ್ತದೆ. ನಿಮ್ಮ ಮಕ್ಕಳ ನಡವಳಿಕೆ ಬೇಸರ ತರಿಸುತ್ತದೆ. ವಿದ್ಯಾರ್ಥಿಗಳಿಗೆ ಅಲ್ಪಯಶಸ್ಸಿನ ಕಾಲವಾಗಿರುತ್ತದೆ. ವಿದೇಶಿ ವ್ಯವಹಾರಗಳನ್ನು ಮಾಡುವವರಿಗೆ ಹೆಚ್ಚಿನ ಮುನ್ನಡೆ ಇರುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ನಿರ್ಮಾಣ ಕಾರ್ಯದಲ್ಲಿ ತೊಡಗಿರುವವರಿಗೆ ಆಶಿಸುತ್ತಿದ್ದ ಸಾಲ ಸೌಲಭ್ಯಗಳು ದೊರೆಯುತ್ತವೆ. ಹಳೆಯ ಸಾಲಗಳನ್ನು ಈಗ ತೀರಿಸಿ ಋಣಮುಕ್ತರಾಗುವಿರಿ. ಕೆಲವೊಂದು ಗುಂಪು ಚಟುವಟಿಕೆಗಳಲ್ಲಿ ನಿಮ್ಮ ಮುಂದಾಳತ್ವ ಇರುತ್ತದೆ. ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಮನಸ್ಸಿರುತ್ತದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ವ್ಯಾಪಾರ-ವ್ಯವಹಾರದಲ್ಲಿ ಇರುವವರು ಸಾಕಷ್ಟು ಪೈಪೋಟಿಯನ್ನು ಎದುರಿಸಬೇಕಾದೀತು. ಸತತ ಪ್ರಯತ್ನದಲ್ಲಿ ಜಯ ನಿಮ್ಮದಾಗುವುದು. ದಾನ ಮಾಡುವ ಮನಸ್ಸು ಹೆಚ್ಚಾಗುತ್ತದೆ. ಹಣದ ಒಳಹರಿವು ಮಂದಗತಿಯಲ್ಲಿ ಇರುತ್ತದೆ. ಕೆಲವೊಂದು ಆರೋಗ್ಯ ಸಮಸ್ಯೆಗಳಿಂದ ಗುಣಮುಖರಾಗಬಹುದು. ನಿಮ್ಮ ಕೆಲವು ವಿಚಾರಗಳನ್ನು ಯಾರಲ್ಲೂ ಹೇಳಿಕೊಳ್ಳದಿರುವುದು ಉತ್ತಮ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಕಬ್ಬಿಣದ ವ್ಯಾಪಾರಿಗಳಿಗೆ ಭರ್ಜರಿ ವ್ಯಾಪಾರವಿರುತ್ತದೆ. ಧನಾದಾಯವು ನಿಮ್ಮ ನಿರೀಕ್ಷೆಯಷ್ಟು ಇರುತ್ತದೆ. ಧಾರ್ಮಿಕ ಕೆಲಸಕಾರ್ಯಗಳಲ್ಲಿ ಹೆಚ್ಚು ಆಸಕ್ತಿಯನ್ನು ಹೊಂದುವಿರಿ. ಕೃಷಿಕರಿಗೆ ಬಿಡುವಿಲ್ಲದ ಕೆಲಸವಿರುತ್ತದೆ. ನಿಮ್ಮ ಕಠಿಣ ನಿರ್ಧಾರಗಳಿಂದ ಹಿಡಿದ ಕೆಲಸವನ್ನು ಸಾಧಿಸುವಿರಿ. ಉಸಿರಾಟದ ಸಮಸ್ಯೆ ಕಾಡಬಹುದು. ಎಲೆಕ್ಟ್ರಾನಿಕ್ಸ್ ಉಪಕರಣಗಳನ್ನು ಮಾರಾಟ ಮಾಡುವವರಿಗೆ ಆದಾಯ ಹೆಚ್ಚುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ರೈತರಿಗೆ ಅವರ ಶ್ರಮಕ್ಕೆ ತಕ್ಕ ಫಲ ದೊರೆತು ಸಂತೋಷವಾಗುತ್ತದೆ. ಜಮೀನು ಕೊಡು-ಕೊಳ್ಳುವಿಕೆ ಮಾಡುವವರಿಗೆ ಹೆಚ್ಚಿನ ಆದಾಯ ಇರುತ್ತದೆ. ಪಶುಸಂಗೋಪನೆ ಮಾಡುವವರಿಗೆ ಉತ್ತಮ ಆದಾಯ ಬರುತ್ತದೆ. ಶೀತ ಸಂಬಂಧಿ ಕಾಯಿಲೆಗಳಿರುವವರು ಉಪೇಕ್ಷೆ ಮಾಡಬೇಡಿ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ತಾಯಿಯ ಆರೋಗ್ಯದಲ್ಲಿ ಸಾಕಷ್ಟು ಸುಧಾರಣೆಯಾಗಿ ಗೆಲುವಿನ ನಗೆ ಬೀರುವರು. ನಿಮ್ಮ ಭವಿಷ್ಯದ ಭದ್ರತೆಗಾಗಿ ಹಣ ಕೂಡಿಡುವಿರಿ. ನಿಮ್ಮ ಆಸೆಯಂತೆ ವಸ್ತ್ರಗಳನ್ನು ಕೊಳ್ಳುವ ಯೋಗವಿದೆ. ವಿದ್ಯಾರ್ಥಿಗಳು ಪಠ್ಯೇತರ ಚಟುವಟಿಕೆಗಳಲ್ಲಿ ಹೆಚ್ಚು ತೊಡಗಿಸಿಕೊಂಡು ಸಂತೋಷಪಡುವರು. ಜಾನಪದ ಸಂಗೀತಗಾರರಿಗೆ ಹೆಚ್ಚಿನ ಪ್ರಾಧಾನ್ಯತೆ ದೊರೆಯುವ ಸಾಧ್ಯತೆ ಇದೆ.

ಪದಬಂಧ 2754



ಮೇಲಿನಿಂದ ಕೆಳಕ್ಕೆ

1. ಎಲ್ಲೆಯನ್ನು ಬಹಿರಂಗಪಡಿಸುವ ಈ ಪ್ರದೇಶ ಮಲೆನಾಡಲ್ಲ 5
2. ಹಸೆಮಣೆಯೇರಿರುವ ಪುತ್ರಿ 5
3. ಮನಸ್ಸಿನಲ್ಲಿ ಉಕ್ಕಿ ಬರುವ ಆಂತರ್ಯದ ಜೊತೆ ಕೂಡು 4
4. ನಮ್ಮ ರಾಜ್ಯದ ಪ್ರಜಾಪ್ರತಿನಿಧಿಗಳ ಗೋಷ್ಠಿ 6
5. ನೇರವಾಗಿ ವಿಷಯಕ್ಕೆ ಬರದೆ ವೃತ್ತಾಕಾರದಲ್ಲಿ ತಿರುಗಾಡು 5
6. ಕಾಡಿನ ಮಧ್ಯೆ ಸುಂದರ ಬದುಕು 5
11. ಇದಕ್ಕೆ ಭಾರಿ ಬೆಲೆ 3
13. ಅದರಕ್ಕೆ ಮೃದುವಾದ ಲೇಪ 3
14. ಗೆಲುವಿನ ಪಂಡರಿನಾಥ- ಇದು ದಾಸರೊಬ್ಬರ ನಾಮಾಂಕಿತ 6
15. ವಾರದಲ್ಲಿ ವಿಷ್ಣುವಿಗೆ ಮೀಸಲಾದ ದಿನವೇ ಇದು 5
16. ಮರಗಳಿಂದ ತುಂಬಿಹೋಗಿರುವ ಕಾಡು 5
17. ಭಾದ್ರಪದದಲ್ಲಿ ಬರುವ ಶಿವ ಪತ್ನಿ ಪುತ್ರ 5
18. ಹೆಣ್ಣಿಗೆ ವರನನ್ನು ಹುಡುಕುವ ಮಹಾಸಾಹಸ 5
20. ಮಾನವ ಸ್ವರೂಪದ ಪುರುಷ ಮತ್ತು ಸ್ತ್ರೀ 4

ಎಡದಿಂದ ಬಲಕ್ಕೆ

1. ಗ್ರಾಮ್ಯ ಭಾಷೆಯಲ್ಲಿ ವಿರಳವಾಗುವ ಬ್ರಹ್ಮ 3
3. ಭಾರದಿಂದ ಕವಿಯುವ ಇವಳು ಲಕ್ಷ್ಮೀ ಪಾರ್ವತಿ ಸ್ವರೂಪಿಣಿ 3
5. ನಮ್ಮ ಭಾಗ್ಯದ ಒಳ್ಳೆಯ ಅಗೋಚರ ಶಕ್ತಿ 3
7. ಜಗಳ ಬಗೆಹರಿಸಲು ಮಾಡುವ ಮಧ್ಯಸ್ತಿಕೆ 3
8. ಕರ್ನಾಟಕ ಭಾರತ ಕಥಾಮಂಜರಿಯ ವೀರ ನಾರಾಯಣನ ಸ್ಥಳ 3
9. ಶುಭಪ್ರದ ಕೆಂಪು ಗ್ರಹ 3
10. ತಲೆಯಲ್ಲಿರುವ ಬುದ್ಧಿಶಕ್ತಿಯ ಸ್ಥಾನ 3
12. ಒಳ್ಳೆಯ ಅಂತರಂಗದ ಹುಡುಗಿ 3
14. ಬ್ರಹ್ಮಾಂಡದಂತೆ ಮನಸ್ಸಿನ ವಿಸ್ತಾರ 3
15. ವಿಷ್ಣುವಿನ ನಾಮ ಸೇರಿದ್ದರೂ ಇದು ಮೊನಚು 3
17. ಸಮಾಜದಲ್ಲಿ ನಾವು ಬಯಸುವ ಮನ್ನಣೆ ಮರ್ಯಾದೆ 3
19. ಹಿಂದಿಯಲ್ಲಿ ನಮ್ಮ ದೇಶದ ಹಣದ ರೂಪ 3
20. ಸಸಿಗಳನ್ನು ಬೆಳಸುವ ತೋಟದಂತಹ ಪುಟ್ಟ ಮಕ್ಕಳ ಶಾಲೆ 3
21. ಆಕಾರ ಕಳೆದುಕೊಂಡು ಕುರೂಪ 3
22. ಶಬ್ದೋತ್ಪತ್ತಿಗೆ ಹೆಸರಾದ ಕೋರೆ ಹಲ್ಲು 3
23. ಬಿಲಹರಿಯಲ್ಲಿರುವ ಮನೋಲ್ಲಾಸ 3
24. ಶಿವನಿಗಾಗಿ ತಲೆ ಬಾಗಿದ ಭಕ್ತೆ, ಅಕ್ಕಮಹಾದೇವಿಯಂತೆ 3

ಪದಬಂಧ ಉತ್ತರ -2753

ಮೇಲಿಂದ ಕೆಳಕ್ಕೆ

1. ಸಕಲ 2.ಶನಿ 3.ದಮ 4.ಶೀತೋಷ್ಣ 6.ಗಲಸ 8. ಶತ್ರುಕಾಟ 9.ರಾನ 11.ಮಾದಕ 13.ಅಂಕಣ 14.ಪತ್ರಿಕೆ 16.ಕಟಕ 18.ವರಕವಿ 21.ನಾರಿ 22.ನಕಲು 23.ಬಿರುಸು 25.ಕಥನ 26.ಕಾಳು 27.ವೆರ

ಎಡದಿಂದ ಬಲಕ್ಕೆ

1.ಸತ್ಯಪ್ರಕಾಶ 3.ದಕ್ಷಿಣಕಾಶೀ 5.ನಿಗಮ 7.ಲವಕುಶ 9.ರಾಧಾಕೃಷ್ಣ 10.ತೃಣಸಮಾನ 12.ಡಲಂ 14.ಪಕ್ಷಿ 15.ಕರ್ನಾಟಕ 17.ಕವಯತ್ರಿ 19.ಹಣ 20.ಕೆಲ 21.ನಾಕನರಕ 23.ಬಿಳಿಗಿರಿ 24.ವಿಧೇಯಕ 26.ಕಾಲುವೆ 28.ಸುಗಮಬಾಳು 29.ರಕ್ತಚಂದ

ಬಾನಾಡಿಗಳ ಲೋಕದಲ್ಲಿ ವಿಹಾರ

ಎಪಿಎಸ್

ಯಾವುದೇ ವ್ಯಕ್ತಿಗೆ ಛಾಯಾಗ್ರಹಣದ ಹುಚ್ಚು ಆರಂಭವಾದಾಗ ಸಾಮಾನ್ಯವಾಗಿ ಪ್ರಕೃತಿ, ಪಕ್ಷಿಗಳು ಮತ್ತು ಚಿಟ್ಟೆಗಳೇ ಆತನನ್ನು ಸೆಳೆಯುವ ಮೊದಲ ಅತಿಥಿಗಳು. ಒತ್ತಡದ ಜೀವನದಿಂದ ಒಂದಿಷ್ಟು ಹೊರಬರಲು ಹಲವರು ಇಂದು ಕೊರಳಲ್ಲಿ ಕ್ಯಾಮೆರಾದೊಂದಿಗೆ ಪ್ರಕೃತಿಯ ಮಡಿಲು ಸೇರುತ್ತಿದ್ದಾರೆ. ಹವ್ಯಾಸಗಳ ಪಟ್ಟಿಯಲ್ಲಿ ಪಕ್ಷಿ ವೀಕ್ಷಣೆಯೂ ಇತ್ತೀಚೆಗೆ ಅಗ್ರಸ್ಥಾನ ಪಡೆಯುತ್ತಿದೆ. ಹಲವರು ಈ ಬಾನಾಡಿಗಳನ್ನು ನೋಡುತ್ತಾ, ಅವುಗಳ ಚಲನವಲನಗಳನ್ನು ಗಮನಿಸುತ್ತಾ ಕಾಲ ಕಳೆದರೆ, ಇನ್ನೂ ಕೆಲವರು ಇವುಗಳನ್ನು ಕ್ಯಾಮೆರಾ ಕಣ್ಣಿನಲ್ಲಿ ಸೆರೆಹಿಡಿದು ತಾವೂ ಅವುಗಳ ಲೋಕದಲ್ಲಿ ಕಳೆದು ನೋಡುಗರನ್ನೂ ಅಲ್ಲಿಗೆ ಕರೆದೊಯ್ಯುತ್ತಾರೆ. ವಿಶ್ವನಾಥ ಸುವರ್ಣ ಇಂತಹ ಛಾಯಾಗ್ರಾಹಕರಲ್ಲಿ ಒಬ್ಬರು.

ನಾಲ್ಕು ವರ್ಷಗಳ ಹಿಂದೆ 'ಕರುನಾಡ ಕೋಟೆಗಳ ಸುವರ್ಣ ನೋಟ' ಎಂಬ ಬೃಹತ್ ಛಾಯಾಚಿತ್ರ ಸಂಪುಟವನ್ನು ಓದುಗರ ಎದುರಿಗಿರಿಸಿ, ಉತ್ತರದ ಬೀದರ್‌ನಿಂದ ದಕ್ಷಿಣದ ಕೊಡಗಿನವರೆಗೆ, ಪೂರ್ವದ ಚಿತ್ರದುರ್ಗದಿಂದ ಕರಾವಳಿಯ ಸುಲ್ತಾನ್ ಬತೇರಿಯವರೆಗೂ ಕೋಟೆ, ಅರಮನೆಗಳ ಕಥೆಗಳನ್ನು ಚಿತ್ರಗಳ ಮೂಲಕ ಕಟ್ಟಿಕೊಟ್ಟವರು 'ಪ್ರಜಾವಾಣಿ' ಪತ್ರಿಕೆಯ ಛಾಯಾಗ್ರಾಹಕರಾಗಿದ್ದ ಸುವರ್ಣ.

ಈ ಛಾಯಾಗ್ರಾಹಕನ ಕ್ಷೇತ್ರಕಾರ್ಯದ ಕುರಿತು ಅಚ್ಚರಿಯನ್ನು ಉಂಟುಮಾಡಿದ್ದ ಆ ಕೃತಿಯಲ್ಲಿ ಕೋಟೆ, ಅರಮನೆಗಳ ಚಿತ್ರಗಳ ಜೊತೆಗೆ ಅವುಗಳ ಬಗ್ಗೆ ಚಿಕ್ಕ ಟಿಪ್ಪಣಿಗಳು ಇದ್ದವು. ಆ ಅನುಭವವೇ ಹೊಸ ಕೃತಿಗೆ ಜೀವಾಳ. ಕೋಟೆ ಸುತ್ತಿ ಬಂದ ಸುವರ್ಣ, ಬಾನಾಡಿಗಳ ಲೋಕದಲ್ಲೇಕೆ ತಾವೂ ಹಾರಡಬಾರದು ಎಂದು ಪಣತೊಟ್ಟವರಂತೆ ಹಾರಿದ್ದಾರೆ. ಈ ಕೃತಿಯ ಗಾತ್ರವೇ ಅದಕ್ಕೆ ಸಾಕ್ಷ್ಯ ನುಡಿಯುತ್ತಿದೆ. ಸುಮಾರು 680 ಪುಟಗಳಲ್ಲಿ ಪಕ್ಷಿಲೋಕವನ್ನೇ ಹೊತ್ತು ತಂದಿರುವ ಈ ಕೃತಿ ಭರಪೂರ ಮಾಹಿತಿಯ ಆಗರವೂ ಹೌದು.

ಪಕ್ಷಿ ವೀಕ್ಷಣೆ ಮಾಡುವುದು ಅಥವಾ ಪಕ್ಷಿಗಳನ್ನು ಕ್ಯಾಮೆರಾದೊಳಗೆ ಸೆರೆ ಹಿಡಿಯುವುದು ಅಷ್ಟು ಸುಲಭದ ಮಾತಲ್ಲ. ಈ ಸಾಹಸಕ್ಕೆ ಅದೆಷ್ಟು ತಾಳ್ಮೆ ಇದ್ದರೂ ಸಾಲದು. ಈ ಮಾತಿಗೆ ನನ್ನದೇ ಅನುಭವವಿದೆ. ಆಗಿನ್ನೂ ಕ್ಯಾಮೆರಾ ಹುಚ್ಚು ಆರಂಭವಾಗಿತ್ತು. ನಮ್ಮ ಹಂಚಿನ ಮನೆಯ ಒಂದು ಬದಿಯಲ್ಲಿ ಸೂರಕ್ಕಿಯೊಂದು ಗೂಡುಕಟ್ಟಿ ಮೊಟ್ಟೆ ಇಟ್ಟಿತ್ತು. ಮೊಟ್ಟೆ ಒಡೆದು ಮರಿಯಾದಾಗ ಅದಕ್ಕೆ ಗುಟುಕು ನೀಡಲು ಬರುತ್ತಿದ್ದ ಸೂರಕ್ಕಿಯನ್ನು ಸೆರೆಹಿಡಿಯಲು ಕ್ಯಾನಾನ್ 1000ಡಿ 55-250 ಲೆನ್ಸ್ ಹಿಡಿದು ಹಲವು ದಿನ ಒದ್ದಾಡಿದ್ದೆ. ಇಷ್ಟೆಲ್ಲ ಪರಿಶ್ರಮದ ಬಳಿಕ ಸಿಕ್ಕಿದ್ದು ಒಂದೆರಡು ಚಿತ್ರಗಳಷ್ಟೇ. ಇದನ್ನೇಕೆ ನೆನಪಿಸಿಕೊಂಡೆ ಎಂದರೆ, ಈ ಕೃತಿಯಲ್ಲಿ ಮೇಲ್ನೋಟಕ್ಕೇ ಎರಡು ಸಾವಿರಕ್ಕಿಂತಲೂ ಅಧಿಕ ಛಾಯಾಚಿತ್ರಗಳು ಕಾಣುತ್ತವೆ. ಲೆಕ್ಕ ಹಾಕಿದರೆ ಅದಕ್ಕಿಂತಲೂ ಮಿಗಿಲಿರಬಹುದು. ಸುವರ್ಣ ಅವರ ಪರಿಶ್ರಮ ಹಾಗೂ ತಾಳ್ಮೆಗೆ ಈ ಚಿತ್ರಸಂಪುಟವೇ ಉದಾಹರಣೆ.

ಬಾನಾಡಿಯ ಒಂದೊಂದು ಟೇಕ್ ಆಫ್‌ಗೆ, ಲ್ಯಾಂಡಿಂಗ್‌ಗೆ, ಮರಿಗೆ ಗುಟುಕು ನೀಡುವ ದೃಶ್ಯಕ್ಕೆ, ಪ್ರಣಯದ ಕೇಳಿಗೆ ಛಾಯಾಗ್ರಾಹಕ ಭಾರವಾದ ಕ್ಯಾಮೆರಾವನ್ನು ಸನ್ನದ್ಧ ಸ್ಥಿತಿಯಲ್ಲಿ ಇರಿಸಿಕೊಂಡು ಜಪ್ಪಿಸಿ ಕುಳಿತು ಕಾಯಬೇಕು. ಸುವರ್ಣ ಅವರ ಗಡಿಬಿಡಿಯನ್ನು ಬಲ್ಲವರಿಗೆ ಅವರು ಹೇಗೆ ಧ್ಯಾನಸ್ಥ ಸ್ಥಿತಿಯಲ್ಲಿ ಹೀಗೆ ಕಾಯುತ್ತಾರೆ ಎನ್ನುವುದೇ ಅಚ್ಚರಿ. ಕಾಡಿನಿಂದ, ಕೆರೆಯ ಏರಿಯಿಂದ, ನದಿಯ ದಡದಿಂದ ಅವರು ಹೆಕ್ಕಿ ತಂದ 'ಆ್ಯಕ್ಷನ್' ಚಿತ್ರಗಳು ಅವರ ಪರಿಶ್ರಮದ ಕಥೆಯನ್ನು ತಾವೇ ಹೇಳುತ್ತವೆ.

ಪಕ್ಷಿ ವೀಕ್ಷಣೆ ಬಗ್ಗೆ ಟಿಪ್ಸ್ ನೀಡುತ್ತಾ ಓದುಗರ ಪ್ರವೇಶಿಕೆ ಬಯಸುವ ಈ ಕೃತಿಯು ರಾಜ್ಯ ಪಕ್ಷಿ 'ನೀಲಕಂಠ'ನಿಂದ ಆರಂಭವಾಗಿ ಕರುನಾಡ ಬಾನಲ್ಲಿ ಹಾರಾಡುವ 80 ಬಗೆಯ ಪಕ್ಷಿ ಪ್ರಭೇದಗಳ ಬಗ್ಗೆ ಸ್ಥೂಲವಾದ ಪರಿಚಯವನ್ನು ಹೊಂದಿದೆ. 80 ಪ್ರಭೇದಗಳಿದ್ದರೂ ಸುಮಾರು 200 ಹಕ್ಕಿಗಳ ಪರಿಚಯ ಈ ಕೃತಿಯಲ್ಲಿದೆ. ಹಕ್ಕಿಗಳ ಪ್ರಣಯ, ಮರಿಗಳ ಲಾಲನೆ-ಪಾಲನೆ, ಬದುಕನ್ನು ಸೂಕ್ಷ್ಮವಾದ ಕಣ್ಣುಗಳಿಂದ ನೋಡಿದ್ದಾರೆ ಸುವರ್ಣ.

ಪಕ್ಷಿಗಳ ಪ್ರಾದೇಶಿಕ ಹೆಸರು, ವೈಜ್ಞಾನಿಕ ಹೆಸರುಗಳ ಜತೆಗೆ ಅವುಗಳ ಗುಣಲಕ್ಷಣ, ಬದುಕು, ಆಹಾರ ಪದ್ಧತಿ, ಅವುಗಳು ಮುಖ್ಯವಾಗಿ ಕಂಡುಬರುವ ಸ್ಥಳ, ಅವುಗಳಿಂದಾಗುವ ಪ್ರಯೋಜನ, ಅವುಗಳ ಮೇಲೆ ನಡೆಸಲಾಗುತ್ತಿರುವ ಅಧ್ಯಯನ, ಅಳಿವಿನಂಚಿನಲ್ಲಿರುವ ಪ್ರಭೇದಗಳ ವಿವರವೂ ಇಲ್ಲಿದೆ. ಮಾಹಿತಿ ಹೆಕ್ಕಿ ಕೊಡುವಲ್ಲಿ ಕಲ್ಲುಂಡಿ ನವೀನ್ ಅವರ ಕ್ಷೇತ್ರ ಕಾರ್ಯ, ವಿಷಯ ಸಂಗ್ರಹದ ವ್ಯಾಪ್ತಿ ಇಲ್ಲಿ ಉಲ್ಲೇಖಾರ್ಹ.

ಇಂಗ್ಲಿಷ್ ಭಾಷೆಯಲ್ಲಿ ಸಲೀಂ ಅಲಿ, ಬಿಕ್ರಂ ಗ್ರೆವಾಲ್ ಮುಂತಾದ ಲೇಖಕರು ಪಕ್ಷಿ ಲೋಕವನ್ನು ಪರಿಚಯಿಸಿದ್ದಾರೆ. ಪ್ರಾದೇಶಿಕ ಭಾಷೆಗಳಲ್ಲಿ ಇವುಗಳ ಕೊರತೆ ಇದೆ. ಕನ್ನಡದಲ್ಲಿ ಪಕ್ಷಿಲೋಕದ ಸುತ್ತು ಹೊಡೆಸುವ ಕೃತಿಗಳಿದ್ದರೂ, ಕಾಫಿ ಟೇಬಲ್ ಪುಸ್ತಕದ ಮಾದರಿಯ ಈ ಕೃತಿ ತನ್ನದೇ ಶೈಲಿಯಲ್ಲಿ ವಿಭಿನ್ನವಾಗಿದೆ. ಪಕ್ಷಿಗಳ ಕುರಿತು ಇಂತಹ ಸಮಗ್ರ ಚಿತ್ರ ಸಂಪುಟ ಈ ಹಿಂದೆ ಬಂದಿಲ್ಲ.

ಕೃತಿಗೆ ಬಳಸಿದ ಗ್ಲೇಜ್ಡ್ ಕಾಗದವೂ ಫೋಟೊ ಪ್ರಿಂಟ್ ಹಾಕಿಕೊಡುವ ಕಾಗದದಷ್ಟೇ ಉತ್ಕೃಷ್ಟವಾಗಿದ್ದು, ಇದರಿಂದ ಛಾಯಾಚಿತ್ರಗಳೂ ಕಣ್ಮುಂದೆ ಜೀವಪಡೆಯುತ್ತವೆ. ಪಕ್ಷಿವೀಕ್ಷಣೆ ಮತ್ತು ಛಾಯಾಗ್ರಹಣದ ಹವ್ಯಾಸಿಗಳಿಗೆ ಈ ಕೃತಿ ಒಂದು ಕೈಪಿಡಿಯಂತಿದೆ. ಶಾಲೆಗಳ ಗ್ರಂಥಾಲಯಗಳಲ್ಲೂ ಇರಲೇಬೇಕಾದ ಕೃತಿ ಇದಾಗಿದೆ. ಹಕ್ಕಿಗಳ ಲೋಕವನ್ನು ಮಕ್ಕಳಿಗೆ ಪರಿಚಯಿಸಲು ಇದರಿಂದ ಸಾಧ್ಯವಾಗಲಿದೆ.

ಪಕ್ಷಿ ವೀಕ್ಷಣೆಯ ಟಿಪ್ಸ್ ಜತೆಗೆ ಪಕ್ಷಿಗಳ ಛಾಯಾಗ್ರಹಣ, ಕ್ಯಾಮೆರಾ ಲೆನ್ಸ್, ಶಟರ್‌ಸ್ಪೀಡ್, ಐಎಸ್‌ಒ ಮುಂತಾದ ತಾಂತ್ರಿಕ ಮಾಹಿತಿಯೂ ಇದ್ದಿದ್ದರೆ ಪಕ್ಷಿಲೋಕದತ್ತ ಕಣ್ತೆರೆದು ನೋಡಲಿಚ್ಛಿಸುವ ಹವ್ಯಾಸಿ ಛಾಯಾಗ್ರಾಹಕರಿಗೆ ಇನ್ನಷ್ಟು ಅನುಕೂಲವಾಗಿರುತ್ತಿತ್ತು. ಪ್ರತೀ ಛಾಯಾಚಿತ್ರಕ್ಕೆ ಅಥವಾ ಚಿತ್ರಗಳ ಗುಂಪಿಗೆ ಒಂದೊಂದು ಅಡಿಬರಹವಿದ್ದಿದ್ದರೆ ಚಿತ್ರಗಳು ಮತ್ತಷ್ಟು ಜೀವಂತಿಕೆ ಪಡೆಯುತ್ತಿದ್ದವು ಎನ್ನಿಸದಿರಲಾರದು. ಕೆಲವೆಡೆ ಕಾಗುಣಿತ ದೋಷಗಳೂ ಓದಿನ ಓಘಕ್ಕೆ ಅಡ್ಡಿಯಾಗುತ್ತವೆ. ❖

ಕನ್ನಡ ನಾಡಿನ ಬಣ್ಣದ ಬಾನಾಡಿಗಳು

ಪುಸ್ತಕ ಯೋಜನೆ ಹಾಗೂ ಛಾಯಾಗ್ರಹಣ: ವಿಶ್ವನಾಥ ಸುವರ್ಣ

ಕೃತಿಯ ಪಠ್ಯ ಲೇಖಕ: ಕಲ್ಲುಂಡಿ ನವೀನ್

ಪ್ರ: ಸುವರ್ಣ ಪಬ್ಲಿಕೇಷನ್, ಬೆಂಗಳೂರು

ಸಂ: 9916977442

ಪು: 688 ₹3000

ಒಳನೋಟ

ಹೆಣ್ಣುತನವೇ ತನ್ನತನವಾದಾಗ...

ವಿಕ್ರಮ ವಿಸಾಜಿ

ಸ್ತ್ರೀವಾದವು ಕನ್ನಡ ವಿಮರ್ಶೆಯ ಸ್ವರೂಪವನ್ನು ದಟ್ಟವಾಗಿ ಪ್ರಭಾವಿಸಿದೆ. ನಮ್ಮ ಸಾಮಾಜಿಕ ಆಗುಹೋಗು ಹಾಗೂ ಸಾಹಿತ್ಯಿಕ ಪಠ್ಯಗಳನ್ನು ನೋಡಲು ಬೇಕಾದ ಹೊಸ ವ್ಯಾಕರಣವನ್ನೂ ಕಲ್ಪಿಸಿದೆ. ಇದಕ್ಕೊಂದು ಸೂಕ್ಷ್ಮ ನಿದರ್ಶನವೆಂಬಂತೆ ಗೀತಾ ವಸಂತ ಅವರ 'ಅವಳ ಅರಿವು' ಕೃತಿಯಿದೆ. ಇದನ್ನವರು ಲೋಕಾಂತ ಮತ್ತು ಏಕಾಂತದ ಟಿಪ್ಪಣಿಗಳೆಂದು ಕರೆದಿದ್ದಾರೆ. ಇಲ್ಲಿ ಲೋಕಾಂತ ಮತ್ತು ಏಕಾಂತಗಳು ಪರಸ್ಪರ ಬೆಸೆದು ಹೊಸ ನಾದ ಹೊರಡಿಸಿವೆ. ಲೋಕಾಂತವನ್ನು ತೀವ್ರವಾದ ತನ್ಮಯತೆಯಿಂದಲೂ, ತನ್ನ ಖಾಸಗಿ ಅರಿವಿನ ಅಗತ್ಯವಾಗಿಯೂ, ಏಕಾಂತವನ್ನು ಸಾಮಾಜಿಕ ಅರಿವಿನ ಕಣ್ಣುಗಳಿಂದಲೂ, ಹೊಸ ಪಾವಿತ್ರ್ಯದ ಹುಡುಕಾಟವಾಗಿಯೂ ನೋಡಲಾಗಿದೆ. ಹೀಗಾಗಿಯೇ ಇಲ್ಲಿನ ಬರಹಗಳಲ್ಲಿ ಕಾವ್ಯ ಭಾಷೆ ಮತ್ತು ಸೈದ್ಧಾಂತಿಕ ಭಾಷೆಗಳೆರಡಕ್ಕೂ ನೆಲೆ ಒದಗಿದೆ. ಅವಳ ಅರಿವಿನ ವಿಸ್ತಾರವಾದ ನಿಗೂಢವಾದ ಲೋಕಗಳಿಗೆ ಕೈಚಾಚಲು ಸಾಧ್ಯವಾಗಿದೆ.

ಗೀತಾ ಅವರು ಇಲ್ಲಿ ಹಲವು ಪ್ರಶ್ನೆಗಳನ್ನು ತಮ್ಮೆದುರು ಇಟ್ಟುಕೊಂಡಿದ್ದಾರೆ; ಹೆಣ್ಣಿನ ಹಾದಿಗಳು ಇಕ್ಕಟ್ಟಿಗೆ ಸಿಲುಕಿದ್ದು ಹೇಗೆ? ಈ ಇಕ್ಕಟ್ಟು ಯಾವ ಬಗೆಯದು? ಇದಕ್ಕೆ ಕಾರಣವಾದ ಸಂಗತಿಗಳು ಯಾವುವು? ಇದರಿಂದ ಅವಳ ಕನಸುಗಳಿಗೆ ಉಂಟಾದ ಗಾಯಗಳೇನು? ಇದರಲ್ಲಿ ಧರ್ಮ, ರಾಜಕಾರಣ, ಕುಟುಂಬ ಮತ್ತು ಮಾಧ್ಯಮಗಳ ಪಾಲೆಷ್ಟು? ಹಾಗಾದರೆ ಸ್ತ್ರೀಚೈತನ್ಯದ ಸಹಜ ದಾರಿಗಳನ್ನು ಉಳಿಸಿಕೊಳ್ಳುವುದು ಹೇಗೆ? ತಮಗೆ ತಾವೇ ಹೊಸ ಹಾದಿಗಳನ್ನು ಕಟ್ಟಿಕೊಳ್ಳಲು ಮಾಡಬೇಕಾದದ್ದೇನು? ಇವುಗಳ ಸುತ್ತ ಅವರ ವಿಚಾರ ಲಹರಿ ಹರಡಿದೆ. ಈ ತಾತ್ವಿಕ ಪ್ರಶ್ನೆಗಳಿಗೆ ತಮ್ಮ ಸುತ್ತಲಿನ ಘಟನೆಗಳಿಂದ ದಕ್ಕಬಹುದಾದ ತಿಳಿವಳಿಕೆಯ ಬಗ್ಗೆ ಅವರಿಗೆ ಆಸಕ್ತಿಯಿದೆ. ಒಂದೊಂದೇ ತೊಡಕನ್ನು ಅರಿಯುತ್ತ, ಪ್ರತಿವಾದ ಹೂಡುತ್ತ, ಮುಚ್ಚಿದ ಕದಗಳನ್ನು ತಟ್ಟುತ್ತ, ಇದ್ದ ದಾರಿಗಳನ್ನು ಬಿಟ್ಟು ಹೊಸ ದಾರಿಗಳನ್ನು ಕಂಡುಕೊಳ್ಳುತ್ತ ಸಾಗಿದ್ದಾರೆ.

ಹೆಣ್ಣಿನ ದೇಹ ಮತ್ತು ಪ್ರಜ್ಞೆ ಇಲ್ಲಿನ ಬರಹದ ಕೇಂದ್ರದಲ್ಲಿರುವ ಸಂಗತಿಗಳು. ದೇಹವನ್ನು ಸಿದ್ಧ ಮಾದರಿಯ ಚರ್ಚೆಗಳ ಆಚೆಗೊಯ್ದು ಚರ್ಚಿಸಿರುವಂತೆಯೇ ಅವಳ ಪ್ರಜ್ಞೆಯ ನಿಗೂಢ ಲೋಕಗಳನ್ನು ಕಾಣಿಸಲು ಯತ್ನಿಸಲಾಗಿದೆ. ಗಂಡುತನದ ಮುಸುಕು ಸರಿಸಿದರಷ್ಟೇ ಹೆಣ್ಣಿನಪ್ರಜ್ಞೆಯ ನಿಜವಾದ ವಿಕಾಸಕ್ಕೆ ಅವಕಾಶವಾಗುವ ಹಲವು ಉದಾಹರಣೆಗಳನ್ನು ಗೀತಾ ಒದಗಿಸಿದ್ದಾರೆ. ಸಮಾಜದ ಎಲ್ಲಾ ನೆಲೆಗಳಲ್ಲಿ ಗಂಡು ರೂಪಿಸಿದ ಪಾವಿತ್ರ್ಯದ ಹಂಗು ಹರಿದುಕೊಳ್ಳುವ ದಾರಿಯನ್ನು ಇವು ಅರಸುತ್ತಿವೆ. ಹೆಣ್ಣುತನವೇ ತನ್ನತನವಾದಾಗ ಹುಟ್ಟಿಕೊಳ್ಳುವ ಹೊಸ ಪಾವಿತ್ರ್ಯಕ್ಕಾಗಿ ಹಂಬಲಿಸಿವೆ.

ಹೆಣ್ಣಿಗೆ ಬೇಕಾದ ಅರಿವನ್ನು ಸಮಾಜ ತನ್ನ ಬೌದ್ಧಿಕ ಮಾದರಿಗಳಲ್ಲಿ ಮುಚ್ಚಿಟ್ಟದ್ದನ್ನು ಈ ಲೇಖನಗಳು ಪ್ರಶ್ನಿಸಿವೆ. ಅತ್ಯಾಚಾರ, ಕೌಟುಂಬಿಕ ಹಿಂಸೆ, ಧಾರ್ಮಿಕ ಸಂದಿಗ್ಧತೆ ಮತ್ತು ರಾಜಕಾರಣದ ದಾಳವಾಗಿ ಹೆಣ್ಣಿನ ದೇಹ ಮತ್ತು ಪ್ರಜ್ಞೆಯನ್ನು ಬಳಸಿಕೊಂಡಿದ್ದೆ ಹೆಚ್ಚು. ಚರಿತ್ರೆ ಮತ್ತು ವರ್ತಮಾನದ ಈ ಬಿರುಕುಗಳನ್ನು ಹೊಸ ಘಟನೆಗಳೊಂದಿಗೆ ನಿರೂಪಿಸಿದ್ದು ಇಲ್ಲಿನ ಹೆಚ್ಚುಗಾರಿಕೆ. ಇದಕ್ಕಾಗಿ ಕೃತಿ ಸಿನಿಮಾ, ಸಾಹಿತ್ಯ, ಪುರಾಣ, ಅವಧೂತ ಪರಂಪರೆ, ನ್ಯಾಯವ್ಯವಸ್ಥೆ, ಶಿಕ್ಷಣ ವ್ಯವಸ್ಥೆ, ರಾಜಕಾರಣ, ಧರ್ಮ ಮತ್ತು ಪಂಥನಿಷ್ಠ ಬೌದ್ಧಿಕ ವಾತಾವರಣ ಹೀಗೆ ಹಲವು ಆಕರಗಳನ್ನು ಬಳಸಿಕೊಂಡಿದೆ. ಲಿಂಗಸಂವೇದನಾಶೀಲತೆ ಇಲ್ಲದೆ ನರಳುತ್ತಿರುವ ಸಮಾಜದ ವಿವಿಧ ಅಂಗಗಳ ವಿಮರ್ಶೆ ಇಲ್ಲಿದೆ.

ಹೆಣ್ಣುತನವನ್ನೇ ಒಂದು ಧರ್ಮವಾಗಿ ಸ್ವೀಕರಿಸಿರುವ ಇಲ್ಲಿನ ಲೇಖನಗಳು ಅದನ್ನು ಪ್ರಕೃತಿ ಧರ್ಮವೆಂದು ಕರೆದಿವೆ. ಈ ಪ್ರಕೃತಿ ಧರ್ಮ ನಿರಂತರವಾಗಿ ಸಾಂಸ್ಥಿಕ ಧರ್ಮಗಳ ವಿರುದ್ಧ ಬಂಡೇಳುತ್ತಲೇ ಇರಬೇಕಾದ ಅನಿವಾರ್ಯತೆಯನ್ನು ಪ್ರತಿಪಾದಿಸಿವೆ. ಇಂಥ ಅನಿವಾರ್ಯ ಕ್ರಿಯಾಶೀಲತೆಯಲ್ಲಿಯೇ ಅವಳ ಅರಿವಿನ ನೆಲೆಗಳನ್ನು ಗುರುತಿಸಿದೆ. ಒಟ್ಟಿನಲ್ಲಿ ಅವಳ ಚೈತನ್ಯ ಬತ್ತಿಹೋಗುವಂತೆ ಮಾಡುವ ಎಲ್ಲಾ ಸಾಂಸ್ಥಿಕ ನೆಲೆಗಳನ್ನು ಭಂಜಿಸಲು ಬೇಕಾದ ಅರಿವನ್ನು ಈ ಲೇಖನಗಳು ಕಾಣಿಸ ಹೊರಟಿವೆ.

ಇಲ್ಲಿಯೇ ಗಮನಿಸಬೇಕಾದ ಸಂಗತಿಯೊಂದಿದೆ. ಅವಳ ಅರಿವು ಒಂದು ಸಂಕೀರ್ಣ ಮತ್ತು ಬಹುಮುಖಿಯಾದ ಅರ್ಥವಿಸ್ತಾರ ಪಡೆದಕೊಂಡಿದೆ. 'ಅರಿವು' ಅವಳ ಒಳಪ್ರಜ್ಞೆ ಹೇಗೊ, ಹಾಗೆಯೇ ಅವಳ ಸಾಮಾಜಿಕ ಚಲನಶೀಲತೆ ಕೂಡ ಹೌದು. ತನ್ನ ಒಳಪ್ರಜ್ಞೆಯ ಮೂಲಕ ಸಾಮಾಜಿಕ ತೊಡಗುವಿಕೆ ಸಾಧ್ಯವಾದಾಗ ಮಾತ್ರ ಅದು ಅವಳ ನಿಜವಾದ ಅರಿವು. ಒಳಪ್ರಜ್ಞೆ ಒಂದು ಸಾಮಾಜಿಕ ಪ್ರಜ್ಞೆಯಾಗಿ, ನೈತಿಕ ಪ್ರಜ್ಞೆಯಾಗಿ ವಿಕಾಸಗೊಳ್ಳದಿದ್ದರೆ ಅಷ್ಟರ ಮಟ್ಟಿಗೆ ಅದು ನಿಶ್ಚಲ. ಅರಿವು ಎಂಬುದು ಅಂತಿಮವಾಗಿ ತೊಡಗುವಿಕೆ ಎಂಬ ಅರ್ಥವನ್ನು ಇಲ್ಲಿನ ಬರಹಗಳು ತೀವ್ರವಾಗಿ ಮನಗಂಡಿವೆ. ಹೀಗಾಗಿಯೇ ಈ ಏಕಾಂತ ಲೋಕಾಂತದ ಟಿಪ್ಪಣಿಗಳಿಗೆ ಒಂದು 'ಆ್ಯಕ್ಟಿವಿಸಂ'ನ ಗುಣ ಕೂಡ ಇದೆ. ಸೈದ್ಧಾಂತಿಕ ಸ್ಪಷ್ಟತೆ ಮತ್ತು ಸೈದ್ಧಾಂತಿಕ ಒಣ ಹಟಮಾರಿತನದ ನಡುವಿನ ವ್ಯತ್ಯಾಸ ಗೀತಾ ಅವರಿಗೆ ಗೊತ್ತಿದೆ. ಯಾವುದೂ ತನ್ನನ್ನು ಆಂತರಿಕವಾಗಿ ಕಟ್ಟಿಹಾಕದಂತೆ ನೋಡಿಕೊಳ್ಳಲು ಬೇಕಾದ ಸ್ವಾತಂತ್ರ್ಯವೂ ಅವರಿಗೆ ಮುಖ್ಯ. ವಿಚಾರ ಸ್ವಾತಂತ್ರ್ಯ ಮತ್ತು ಆಂತರಿಕ ಸ್ವಾತಂತ್ರ್ಯದ ಕೂಡುಸ್ಥಿತಿಯಲ್ಲೇ ಅವಳ ಅರಿವಿನ ನೆಲೆಗಳಿವೆ.

ಈ ಕೃತಿಯ ಇನ್ನೊಂದು ಭಾಗದಲ್ಲಿ ಕೃತಿ ವಿಮರ್ಶೆಯ ಬರಹಗಳಿವೆ. ಚೆನ್ನವೀರ ಕಣವಿ, ಬರಗೂರು ರಾಮಚಂದ್ರಪ್ಪ, ಎಚ್.ಎಸ್. ಶಿವಪ್ರಕಾಶ್, ವೈದೇಹಿ, ಸಿದ್ಧಲಿಂಗಯ್ಯ ಅವರ ಬರಹಗಳಿಗೆ ಸ್ಪಂದನೆಯಿದೆ. ವಿಠಲ ಭಂಡಾರಿಯವರ ವೈಚಾರಿಕ ಸಾಹಸಗಳನ್ನು ಆಪ್ತವಾಗಿ ಮಂಡಿಸಿದ ಬರಹ ಕೂಡ ಮುಖ್ಯವಾದದ್ದು. ಚ.ಸರ್ವಮಂಗಳಾ, ಸವಿತಾ ನಾಗಭೂಷಣ, ಎಂ.ಆರ್.ಕಮಲ, ಎಚ್.ಎಲ್.ಪುಷ್ಪಾ, ಎಚ್.ಆರ್.ಸುಜಾತಾ, ತಾರಿಣಿ ಶುಭದಾಯಿನಿ ಮತ್ತು ಶೋಭಾ ನಾಯಕರ ಕಾವ್ಯ ಮತ್ತು ವಿಮರ್ಶೆ ಕುರಿತು ಬರೆದ ಬರಹಗಳು ಅವಳ ಅರಿವಿನ ಮುಂದುವರಿಕೆ ಆಗಿವೆ. ಕನ್ನಡದ ಈ ಬರಹಗಾರ್ತಿಯರು ಮಾಡಿದ ಅವಳ ಅರಿವಿನ ಹುಡುಕಾಟವನ್ನು ಗೀತಾ ಇಲ್ಲಿ ಕಾಣಿಸಿದ್ದಾರೆ.

ಎಂಬತ್ತರ ದಶಕದಲ್ಲಿ ಭಾವಸಾಂದ್ರತೆಯ ಸ್ತ್ರೀಮಾದರಿಗಳನ್ನು ರೂಪಿಸಿದ್ದು, ಲೌಕಿಕತೆಯಲ್ಲಿಯೇ ಅಲೌಕಿಕ ಸ್ವರಗಳನ್ನು ಹೊರಡಿಸಿದ್ದು, ಕಳೆದುಕೊಳ್ಳುವುದು ಕೂಡ ಬೆಳೆಯುವುದರ ಒಂದು ಸಂಕೇತವೆಂದು ಬೀಗಿದ್ದು, ಆತ್ಮಕಥನವೇ ಕಾವ್ಯಕಥನವಾಗಿ ಮುಂದೆ ಸಮಾಜಕಥನವಾಗಿ ಬೆಳೆಯುವ ಪರಿ, ಶಾಕ್ತಸ್ತ್ರೀಪರಂಪರೆ ಕನ್ನಡ ಕಾವ್ಯದೊಳಗೆ ನುಸುಳುತ್ತಿರುವ ರೀತಿ, ಖಾಸಗೀ ಸ್ವರ್ಗವೇ ಆತ್ಯಂತಿಕ ಸ್ಥಿತಿಯೆಂದು ಭಾವಿಸಿದ ಕಾವ್ಯ ಉಂಟುಮಾಡಬಹುದಾದ ಸಂಚಲನ ಹೀಗೆ ತನ್ನ ಕಾಲದ ಮಹಿಳಾ ಕಾವ್ಯ ಮತ್ತು ಕಥನಗಳನ್ನು ತೀವ್ರವಾಗಿ ಒಳಗೊಳ್ಳುವ ಗುಣವೊಂದು ಇಲ್ಲಿಯ ಬರಹಗಳಿಗಿದೆ. ಪ್ರತಿಯೊಂದನ್ನು ನಿಧಾನವಾಗಿ ಅರಿಯುತ್ತ, ತೀರ್ಮಾನ ಕೊಡುವ ಅವಸರಕ್ಕೆ ಬೀಳದೆ, ಅಲ್ಲಿಯ ಸ್ತ್ರೀ ಚೈತನ್ಯದ ಸ್ವತಂತ್ರ ಮಾದರಿಗಳನ್ನು ಕಾಣಿಸಲಾಗಿದೆ.

ಕನ್ನಡದಲ್ಲಿ ಸ್ತ್ರೀವಾದದ ಈ ಬೌದ್ಧಿಕ ದಾರಿಯೊಳಗೆ ಹಲವರು ನಡೆದು ಬಂದಿದ್ದಾರೆ. ಗೀತಾ ವಸಂತರ ಈ ಕೃತಿ ಒಂದು ಹೊಸ ಸೇರ್ಪಡೆ. ❖

ಅವಳ ಅರಿವು

ಲೇ: ಡಾ. ಗೀತಾ ವಸಂತ

ಪ್ರ: ಜನ ಪ್ರಕಾಶನ

ಸಂ: 9632329955

ಪು: 192 ₹200

ವಿಮರ್ಶೆ

ಮೊದಲ ಓದು

ಪ್ರತಿಭೆ ಪಾಂಡಿತ್ಯಗಳ ಸಂಕಲನ

ಜಿ.ಎನ್. ದೇವಿ ನಮ್ಮ ಕಾಲದ ಪ್ರಮುಖ ಚಿಂತಕರಲ್ಲಿ ಒಬ್ಬರು. ಸಾಹಿತ್ಯ, ಭಾಷಾಶಾಸ್ತ್ರ, ತತ್ತ್ವಶಾಸ್ತ್ರ ಮತ್ತು ಸಂಸ್ಕೃತಿ ವಿಮರ್ಶೆಯಂಥ ನಾಲ್ಕಾರು ಕ್ಷೇತ್ರಗಳ ಬಗ್ಗೆ ಮರಾಠಿ, ಗುಜರಾತಿ ಮತ್ತು ಇಂಗ್ಲಿಷಿನಲ್ಲಿ ತೊಂಬತ್ತು ಕೃತಿಗಳನ್ನು ಅವರು ರಚಿಸಿದ್ದಾರೆ. ಅವರ ಆಯ್ದ ಬರಹಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ ಎಂ.ಜಿ. ಹೆಗಡೆ.

ಪ್ರಕೃತ ಅನುವಾದ ಕೃತಿಯಲ್ಲಿ ಒರ್ಫಿಯಸ್‌ನ ಹಾಡು, ಅಪೂರ್ಣ ರಕ್ತಕಣ, ಕಳ್ಳನೆನಿಸಿಕೊಂಡ ಅಲೆಮಾರಿ, ಹಿಂಸೆಯ ಪೂರ್ವಾಪರ, ಭಾಷೆಯ ಇರವು: ಜ್ಞಾನ, ಸಮಾಜ ಮತ್ತು ವಾಚೋಹೀನತೆ, ವಾಚೋಹೀನತೆ, ಸ್ಮೃತಿಯ ಭವಿಷ್ಯ – ಎಂಬ ಲೇಖನಗಳು ಸಂಕಲನಗೊಂಡಿವೆ. 'ಭಾಷೆಯ ಇರವು' – ಈ ಲೇಖನವು ಭಾಷೆಯ ದ್ರವ್ಯ, ಬರವಣಿಗೆ ಮತ್ತು ವಾಚೋಹೀನತೆ, ಮೌನ ಬುದ್ಧಿ ವಿಕಲ್ಪ ಮತ್ತು ಭಾಷೆ, ಕಥನದ ಕತೆ, ಸತ್ಯ ಕಲ್ಪಕತೆ ಸೈಬರ್ ವಲಯ, ಮಧ್ಯಸ್ಥ ವ್ಯವಸ್ಥೆ, ಮನೋಕ್ಷಮತೆ ವಿಚಾರಪ್ರಾಣಿಲಿ ಸೃಷ್ಟಿಶೀಲತೆ, ಜ್ಞಾನ ಮತ್ತು ಸ್ವಾತಂತ್ರ್ಯ – ಎಂಬ ಅಧ್ಯಾಯಗಳಲ್ಲಿ ಹರಡಿಕೊಂಡಿರುವುದು ವಿಷಯದ ವ್ಯಾಪ್ತಿಯನ್ನು ಸೂಚಿಸುವಂತಿದೆ. ಲೇಖನಗಳ ಸಂದರ್ಭಸೂಚಿಯನ್ನು ಒದಗಿಸಿರುವುದು ಪ್ರಯೋಜನಕಾರಿಯಾಗಿದೆ.

'ಪಶ್ಚಿಮ ಹಾಗೂ ಪೂರ್ವಗಳ ವಿದ್ವತ್ತು, ಜಗತ್ತಿನ ಮಹಾನ್ ಕೃತಿಗಳ ಆಳವಾದ ಓದು, ಚರಿತ್ರೆಯ ದಾರ್ಶನಿಕವಾದ ತಿಳುವಳಿಕೆ ಹಾಗೂ ಸಾಮಾಜಿಕ ಬದ್ಧತೆಗಳು ಮುಪ್ಪರಿಗೊಂಡು ಸೃಷ್ಟಿಸಿದ ಜ್ಞಾನವು ಈ ಬರಹಗಳಲ್ಲಿದೆ' ಎಂಬ ರಾಜೇಂದ್ರ ಚೆನ್ನಿಯವರ ಹಿನ್ನುಡಿಯ ಮಾತುಗಳು ಪ್ರಕೃತ ಕೃತಿಯ ವಿಶೇಷವನ್ನು ಹೇಳಿವೆ.



ಜಿ. ಎನ್. ದೇವಿ ಆಯ್ದ ಬರಹಗಳು

ಅನುವಾದಕರು: ಎಂ. ಜಿ. ಹೆಗಡೆ

ಪ್ರ: ಕ್ರಿಯಾ ಮಾಧ್ಯಮ

ಸಂ: 9036082005

ಪು: 224 ₹220

'ಋಣದ ಗಣಿ'ಯೊಳಗೆ ತೆರೆದ ಆತ್ಮಕಥೆ

ವೃತ್ತಿಯಲ್ಲಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿ ನಂತರದಲ್ಲಿ ಕರ್ನಾಟಕ ಆಡಳಿತ ಸೇವೆಯಲ್ಲಿದ್ದುಕೊಂಡು ಹಲವು ಹುದ್ದೆಗಳನ್ನು ನಿಭಾಯಿಸಿದ ರುದ್ರಪ್ಪ ಹನಗವಾಡಿ ಅವರ ಆತ್ಮಕಥೆ ಈ ಕೃತಿ.

ಒಟ್ಟಿನಲ್ಲಿ ಇದು ರುದ್ರಪ್ಪ ಅವರ ನೆನಪಿನ ಗಣಿ. ಈ ಗಣಿಗಾರಿಕೆಯಲ್ಲಿ ಸಿಗುವುದು ಹಲವು ಆಯಾಮಗಳು. ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕಿನ ಹನಗವಾಡಿ ಗ್ರಾಮದಲ್ಲಿರುವ ದಲಿತ ಕೇರಿಯಲ್ಲಿ ಅವರ ಜನ್ಮದಿಂದ ಹಿಡಿದು, ಊರಿನ ಪರಿಸರ, ಬದುಕು, ಶಿಕ್ಷಣ ಪಡೆಯಲು ಪಟ್ಟ ಕಷ್ಟ, ಹಣಕಾಸು ಬವಣೆಗಳು, ಹೆತ್ತಮ್ಮನ ಪ್ರೀತಿಯಿಂದ ದೂರವಾದದ್ದು, ಅಧಿಕಾರಿಯಾಗಿ ಅನುಭವಿಸಿದ ಘಟನೆಗಳನ್ನು ರುದ್ರಪ್ಪ ಅವರು ದಾಖಲಿಸಿದ್ದಾರೆ. ಕುಟುಂಬದ ವಿಚಾರ ಬಂದಾಗ, ಯಾವುದೇ ಅಳುಕಿಲ್ಲದೆ ಹಲವು ವಿಷಯಗಳನ್ನು ತೆರೆದಿಟ್ಟಿದ್ದಾರೆ. ತಮ್ಮ ಅಂತರ್ಜಾತಿ ವಿವಾಹ, ತದನಂತರದ ಘಟನಾವಳಿಗಳನ್ನು ರುದ್ರಪ್ಪ ಸೂಕ್ಷ್ಮವಾಗಿ ದಾಖಲಿಸಿದ್ದಾರೆ. ಇದು ಕೃತಿಯ ವಸ್ತುನಿಷ್ಠತೆಗೆ ಸಾಕ್ಷಿ.

ಸರ್ಕಾರಿ ಅಧಿಕಾರಿಯಾಗಿಯೂ ರುದ್ರಪ್ಪ ಅವರ ಬದುಕಿನ ಹಲವು ಆಯಾಮಗಳನ್ನು ಈ ಕೃತಿಯಲ್ಲಿ ಕಾಣಬಹುದು. ಪ್ರೊ.ಬಿ.ಕೃಷ್ಣಪ್ಪನವರ ಸಖ್ಯ, ದಲಿತ ಸಂಘರ್ಷ ಸಮಿತಿಯ ಜೊತೆಗಿನ ಒಡನಾಟ, ಸಾಮಾಜಿಕ ಹೋರಾಟದ ಕಥನವೂ ಇಲ್ಲಿದೆ. ಇಲ್ಲಿಯವರೆಗೂ ಇಟ್ಟ ಹೆಜ್ಜೆಗಳನ್ನು 'ಹಿಂದಿರುಗಿ ನೋಡುತ್ತಾ..' ಒಟ್ಟು 58 ಅಧ್ಯಾಯಗಳಲ್ಲಿ ಲೇಖಕರು ತಮ್ಮ ಬದುಕನ್ನು ದಾಖಲಿಸಿದ್ದಾರೆ. 'ಕೃತಿಯ ಕೊನೆಕೊನೆಯ ಪುಟಗಳಂತೂ ಕೇವಲ ಒಣದಾಖಲೆಗಳಾಗಿ ಉಳಿದಿವೆ. ಇನ್ನಷ್ಟು ಸಾವಧಾನದಿಂದ ಕೃತಿಯನ್ನು ಕಟ್ಟಿದ್ದರೆ...' ಎಂದು ಲೇಖಕರ ಒಡನಾಡಿ ಜಿ.ಪಿ.ಬಸವರಾಜು ಅವರು ಮುನ್ನುಡಿಯಲ್ಲಿ ಉಲ್ಲೇಖಿಸಿದ್ದಾರೆ. ಈ ದಾಖಲೆಗಳನ್ನು ದಟ್ಟ ಅನುಭವದ ಹಿನ್ನೆಲೆಯಲ್ಲಿ ಕಟ್ಟಿಕೊಟ್ಟಿದ್ದರೆ ಇನ್ನೂ ಚೆನ್ನಾಗಿರುತ್ತಿತ್ತು ಎಂದು ಓದುಗರಿಗೂ ಅನಿಸುವುದು ಸುಳ್ಳಲ್ಲ.



ಋಣದ ಗಣಿ– ಆತ್ಮಕಥೆ

ಲೇ: ರುದ್ರಪ್ಪ ಹನಗವಾಡಿ

ಪ್ರ: ಪ್ರೊ. ಬಿ. ಕೃಷ್ಣಪ್ಪ ಟ್ರಸ್ಟ್

ಸಂ: 9739032600

ಪು: 333 ₹450

ಆತ್ಮಾವಲೋಕನದ ಬದಲು ಅಸಹನೆ, ಅನುಮಾನ ಮತ್ತು ಆರೋಪ...

ಪ್ರತಿಕ್ರಿಯೆ

ಆ.28ರ ಭಾನುವಾರದ ಪುರವಣಿಯಲ್ಲಿ ಪುರುಷೋತ್ತಮ ಬಿಳಿಮಲೆಯವರ 'ಗೌಣವಾಗುತ್ತಿರುವ ಬುದ್ಧಿಜೀವಿಗಳು' ಲೇಖನ ಬಂದಿದೆಯಷ್ಟೆ. ಮೊದಲ ವಾಕ್ಯದಿಂದಲೇ ಇದು ಸಮಸ್ಯಾತ್ಮಕವಾಗಿದೆ. ಅದೇನೆಂದರೆ, ದೇಶದ ಸಮಸ್ಯೆಗಳೆಲ್ಲ 2014ರಲ್ಲೇ ಶುರುವಾದವೆನ್ನುವ ಅನುಕೂಲಸಿಂಧು ಗ್ರಹಿಕೆ. ಇದು 'ಬುದ್ಧಿಜೀವಿಗಳು' ಬಿತ್ತುತ್ತಿರುವ ಚಿತ್ರಣವೋ ಅಥವಾ ವಾಸ್ತವವೋ?

ಬಿಳಿಮಲೆ ಮೆಚ್ಚಿಕೊಂಡಿರುವವರಲ್ಲಿ ರಾಜೀವ್ ಗಾಂಧಿಯೂ ಒಬ್ಬರು. ಅವರು ಪ್ರಧಾನಿಯಾಗಿದ್ದಾಗ ಸಲ್ಮಾನ್ ರಶ್ದಿಯವರ 'ಸೆಟಾನಿಕ್ ವರ್ಸಸ್' ಅನ್ನು ನಿಷೇಧಿಸಿದರು. ಬಿಳಿಮಲೆ ಪ್ರಕಾರ 'ಡೆಮಾಕ್ರಸಿ ಮತ್ತು ಸಂವಾದ ಸಂಸ್ಕೃತಿಯ ಪರ ಇದ್ದವರಾದ' ಅವರಿಗೆ ಆಗ ಮುಸ್ಲಿಮರ ವೋಟುಗಳ ಮೇಲೆ ಕಣ್ಣಿತ್ತಷ್ಟೆ. ಇದರ ಬಗ್ಗೆ ನಮ್ಮ ಬುದ್ಧಿಜೀವಿಗಳನ್ನು ಪ್ರಶ್ನಿಸಿ ನೋಡಿ, ಸಾರಾಸಗಟಾಗಿ 'ಅಸಹಿಷ್ಣು' ಎನ್ನುವ ಲೇಬಲ್ಲನ್ನು ಅಂಟಿಸಿ ಬಿಡುತ್ತಾರಷ್ಟೆ!

ನೆಹರು ಪ್ರಧಾನಿಯಾದ ಹೊಸದರಲ್ಲಿ ಗಾಂಧೀಜಿ ಕೊಲೆಯಾಯಿತು. ಅದು ದುರ್ದೈವ. ಆಗ ಕಾಂಗ್ರೆಸ್ ಹಿನ್ನೆಲೆಯುಳ್ಳ ದುರುಳರು ಏಳೆಂಟು ಸಾವಿರ ಚಿತ್ಪಾವನ ಬ್ರಾಹ್ಮಣರನ್ನು-ಗೋಡ್ಸೆಯ ಜಾತಿಗೆ ಸೇರಿದವರೆಂದು-ಬರ್ಬರವಾಗಿ ಕೊಂದರು. ಆಮೇಲೆ ಇಂದಿರಾ ಗಾಂಧಿ ಎಮರ್ಜೆನ್ಸಿ ಹೇರಿದರು. ಕನ್ನಡ ಲೇಖಕರ ಪೈಕಿ ಆಗ ಜೈಲಿಗೆ ಹೋಗಿದ್ದು ಚಂಪಾ ಒಬ್ಬರೇ. ಒಂದೆರಡು ಅಪವಾದಗಳನ್ನು ಬಿಟ್ಟು ಮಿಕ್ಕ ಬುದ್ಧಿಜೀವಿಗಳು ಕರ್ತವ್ಯ ನಿಭಾಯಿಸಿದರೇ? ಬಳಿಕ, ಇಂದಿರಾ ಗಾಂಧಿಯವರ ಕಗ್ಗೊಲೆಯ ಬಳಿಕ ಕಾಂಗ್ರೆಸ್ ಹಿನ್ನೆಲೆ ಹೊಂದಿದ್ದ ಪುಂಡರು ಸಾವಿರಾರು ಸಿಖ್ಖರನ್ನು ಕೊಂದರು. ಆಗ ರಾಜೀವ್ ಗಾಂಧಿ 'ದೊಡ್ಡ ಆಲದಮರ ಬಿದ್ದಾಗ ಅಕ್ಕಪಕ್ಕದ ಮರಗಿಡಗಳೂ ಬುಡಮೇಲಾಗುತ್ತವೆ' ಎಂದಿದ್ದರು. ಅಯೋಧ್ಯೆಯ ದೇವಸ್ಥಾನದ ಬೀಗವನ್ನು ತೆಗೆದಿದ್ದೂ ಅವರೇ! ಅದರ ಲಾಭವನ್ನು ಬಿಜೆಪಿ ಬಾಚಿಕೊಂಡಿತು, ನಿಜ. ಶಾಬಾನೋ ಪ್ರಕರಣದ ಕುಣಿಕೆಯಿಂದ ಪಾರಾಗಲು ಹಿಂದೂಗಳ ವೋಟ್ ಮೇಲೆ ಕಣ್ಣಿಟ್ಟ ಕಾಂಗ್ರೆಸ್ಸಿನ ಪಾಪದ ಪಾಲೂ ಇದರಲ್ಲಿದೆ. ಬಿಳಿಮಲೆ ಅವರು ಇದ್ಯಾವುದನ್ನೂ ಪ್ರಸ್ತಾಪಿಸಿಲ್ಲ. ಇರಲಿ, ಅವರು ಹೇಳಿರುವ ಅವಸ್ಥೆಗೆ ಈ ಅಂಶಗಳು ಕಾರಣವೆನ್ನಬಹುದು:

(1) ಬುದ್ಧಿಜೀವಿಗಳು ವಿಶ್ವಾಸಾರ್ಹತೆಯ ತೀವ್ರ ಕೊರತೆ ಎದುರಿಸುತ್ತಿದ್ದಾರೆ. ಜತೆಗೆ ಇವರು ಯಾರಿಗೂ ಉತ್ತರದಾಯಿಗಳಾಗಿಲ್ಲ.

(2) ವ್ಯವಸ್ಥೆಯನ್ನು ಸುಧಾರಿಸುವ ಬದಲು ಇರುವ ವ್ಯವಸ್ಥೆಯನ್ನೂ ಬುಡಮೇಲು ಮಾಡುವ ದುರುದ್ದೇಶ ಹೆಚ್ಚಿನ ಬುದ್ಧಿಜೀವಿಗಳಿಗಿದೆ.

(3) ಬುದ್ಧಿಜೀವಿಗಳು ಮಾನಸಿಕವಾಗಿ 1970-80ರ ಕಾಲಘಟ್ಟದಲ್ಲೇ ಇದ್ದಾರೆ. 30 ವರ್ಷಗಳಲ್ಲಿ ಭಾರತದಲ್ಲಾಗಿರುವ ಬದಲಾವಣೆಯ ಫಲಗಳನ್ನು ತಾವು ಅನುಭವಿಸುತ್ತಿದ್ದರೂ ಅದನ್ನು ಬೇಕೆಂದೇ ನಿರಾಕರಿಸುವ ಚಪಲ ಇವರಿಗೆ ಜಾಸ್ತಿ!

(4) ಬುದ್ಧಿಜೀವಿ ಎನಿಸಿಕೊಳ್ಳಬೇಕಾದರೆ ಬಿಜೆಪಿಯನ್ನು ವಿರೋಧಿಸಲೇಬೇಕು ಎನ್ನುವುದು ಅಲಿಖಿತ ನಿಯಮವಾಗಿದೆ (ಬಿಳಿಮಲೆಯವರ ಲೇಖನವನ್ನು ನೋಡಿದರೇ ಇದು ಗೊತ್ತಾಗುತ್ತದೆ!)

(5) ತಮ್ಮನ್ನು ಸೆಕ್ಯುಲರಿಸ್ಟ್‌ಗಳು ಎಂದು ಬಿಂಬಿಸಿಕೊಳ್ಳುವ ಬುದ್ಧಿಜೀವಿಗಳು ರಾಜಕಾರಣಿಗಳಿಗಿಂತ ಹೆಚ್ಚು ಜಾತಿವಾದಿಗಳಾಗಿದ್ದಾರೆ. ತಮ್ಮ ಇಷ್ಟದ ಪಕ್ಷ ಅಧಿಕಾರಕ್ಕೆ ಬಂದಾಗ ಇದೇ ಬುದ್ಧಿಜೀವಿಗಳು ಅಲ್ಲೇ ಠಳಾಯಿಸುತ್ತಿರುತ್ತಾರೆ.

(6) ತಾವು ಒಲ್ಲದ ವಿಚಾರಗಳ ಬಗ್ಗೆ ಯಾರಾದರೂ ಮಾತನಾಡಿದರೆ ಅಂಥವರನ್ನು ಬಹಿಷ್ಕರಿಸುವವರು ಇವರೇ. ಇವರಿಗೆ ಸಮಗ್ರ ಸತ್ಯ ಬೇಕಾಗಿಲ್ಲ. ಜತೆಗೆ, ತಾವು 'ಕಿಂಗ್-ಮೇಕರ್ಸ್' ಎನ್ನುವ ಭ್ರಮೆ! ತಮ್ಮನ್ನು ಪೊರೆಯುವ 'ಆಸ್ಥಾನಗಳು' ಇಲ್ಲದಿದ್ದರೆ ಬೇಕೆಂದೇ ಹುಯಿಲೆಬ್ಬಿಸುವ ವಿಕೃತಿ ಇವರಲ್ಲಿ ಮೇರೆ ಮೀರಿದೆ.

(7) ಬುದ್ಧಿಜೀವಿಗಳದು ಎಲ್ಲವನ್ನೂ ಬ್ಲ್ಯಾಕ್ ಆ್ಯಂಡ್ ವೈಟ್ ಆಗಿ ನೋಡುವ ಸುಲಭೋಪಾಯ! ಉದಾ: ಬ್ರಾಹ್ಮಣ-ಶೂದ್ರ, ಬಹುಸಂಖ್ಯಾತ-ಅಲ್ಪಸಂಖ್ಯಾತ, ಎಡ-ಬಲ. ಆದರೆ, ನಮ್ಮ ವ್ಯವಸ್ಥೆಯ ಸಂಕೀರ್ಣತೆ ಸಾಮಾಜಿಕ ಆಯಾಮದಿಂದಷ್ಟೇ ಸೃಷ್ಟಿಯಾಗಿಲ್ಲ.

(8) ಝಂಡಾ ಹಿಡಿದುಕೊಂಡಿರುವ ಬಲಪಂಥೀಯ ರಾಜಕಾರಣವನ್ನು ಇವರು ಆಕ್ಷೇಪಿಸುವುದು ಒಳ್ಳೆಯದೇ. ಆದರೆ, ತಮ್ಮ 'ಹಿಡನ್ ಅಜಂಡಾ'ದ ಬಗ್ಗೆ ಅವರಿಗೆ ಕಿಂಚಿತ್ತೂ ಅನುಮಾನವಿಲ್ಲ.

(9) ಇವತ್ತಿನ ಬುದ್ಧಿಜೀವಿಗಳು 'ಪೊಲಿಟಿಕಲ್ ಆ್ಯಕ್ಟಿವಿಸ್ಟ್'ಗಳಷ್ಟೆ! ನೈಜ ಸಾಹಿತಿಗೆ ಕೊಡುವ ಬೆಲೆಯನ್ನೇ ಇವರಿಗೂ ಕೊಡಬೇಕೆನ್ನುವ ನಿರೀಕ್ಷೆ ದುಬಾರಿ!

ಬಿ. ಎಸ್. ಜಯಪ್ರಕಾಶ ನಾರಾಯಣ, ಬೆಂಗಳೂರು

ಪ್ರಜಾವಾಣಿ

ದೀಪಾವಳಿ ವಿಶೇಷಾಂಕ 2022

ಓದುಗರ ವೇದಿಕೆಗೆ ಬರಹಗಳ ಆಹ್ವಾನ

ದೇಶದಾದ್ಯಂತ ಈ ವರ್ಷ ಹೆಚ್ಚು ಸದ್ದು ಮಾಡಿದ ಪದವೆಂದರೆ ಅದು ಕೋಮು ಸಂಘರ್ಷ. ಸಂಘರ್ಷದಿಂದ ಉಂಟಾದ ತಾಪಕ್ಕೆ ಸಾಮರಸ್ಯದ ಸಿಂಚನ ಮಾತ್ರ ತಂಪೆರೆಯಬಲ್ಲದು. ಕೋಮು ಸಾಮರಸ್ಯಕ್ಕೆ ಸಂಬಂಧಿಸಿದಂತೆ ನಿಮ್ಮಲ್ಲಿ ಹಂಚಿಕೊಳ್ಳಲು ಆಪ್ತವಾದ ಅನುಭವಗಳ ಕಥೆಗಳಿವೆಯೇ? ಅಂತಹ ಕಥೆಗಳನ್ನು ಕೇಳಲು ವಿಶೇಷಾಂಕ ಉತ್ಸುಕವಾಗಿದೆ.

ಬರಹದ ಮಿತಿ: 200 ಪದ

ಬರಹಗಳು ನಮಗೆ ತಲುಪಲು ಕೊನೆಯ ದಿನಾಂಕ: ಸೆಪ್ಟೆಂಬರ್ 15, 2022

ಬರಹದೊಂದಿಗೆ ನಿಮ್ಮ ಭಾವಚಿತ್ರವಿರಲಿ



ವಿಳಾಸ:
ಸಂಪಾದಕರು, ದೀಪಾವಳಿ ವಿಶೇಷಾಂಕ ವಿಭಾಗ,
ಪ್ರಜಾವಾಣಿ
ನಂ.75,
ಮಹಾತ್ಮ ಗಾಂಧಿ ರಸ್ತೆ,
ಬೆಂಗಳೂರು–560001

ಇಮೇಲ್- deepavali@prajavani.co.in

ಕಥೆ

ಅಜಯ್ ಕುಮಾರ್ ಎಂ. ಗುಂಬಳ್ಳಿ ಅವರ

ಇಬ್ಬನಿ

ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/short-story

ಕವನ

ಸಂತೆಬೆನ್ನೂರು ಫೈಜ್ನಟ್ರಾಜ್ ಅವರ

ಅಮ್ಮನ ಕಾಲುಗಳು

https://www.prajavani.net/poetry

ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಅನಂತ ಅಮೃತಯಾನ

ಕನ್ನಡದ ಬಹುಮುಖ ಪ್ರತಿಭೆಯ ನಟ ಅನಂತನಾಗ್ ಅವರು ಸೆ. 4ರಂದು 75ನೇ ವರ್ಷಕ್ಕೆ ಕಾಲಿಡಲಿದ್ದಾರೆ. ಬದುಕಿನ ಅಮೃತವರ್ಷದ ಸಂಭ್ರಮದಲ್ಲಿರುವ ಅವರೊಂದಿಗೆ ಒಂದು ಆಪ್ತ ಮಾತುಕತೆ

ಅಭಿಲಾಷ್ ಪಿ.ಎಸ್.

• 75 ಎಂದರೆ ಒಮ್ಮೆ ಹಿಂದಿರುಗಿ, ಹಾಕಿದ ಹೆಜ್ಜೆಗಳನ್ನು ಮತ್ತೆ ಮೆಲುಕು ಹಾಕುವ ಸಮಯ...

ನಿಜ. ಸಾಮಾನ್ಯವಾಗಿ ಎಲ್ಲವನ್ನೂ ಹೇಗೆ ನೋಡುತ್ತೇನೋ ಅದೇ ದೃಷ್ಟಿಕೋನದಿಂದ '75' ಎನ್ನುವ ಸಂಖ್ಯೆಯನ್ನೂ ನೋಡುತ್ತಿದ್ದೇನೆ. ಎಲ್ಲರಿಗೂ ಈ ಭಾಗ್ಯ ಸಿಗುವುದಿಲ್ಲ. ಭಗವಂತ ಅಷ್ಟು ಆಯುಷ್ಯ ಕೊಡುವುದಿಲ್ಲ. ನನಗೆ ಕೊಟ್ಟಿದ್ದಾನೆ. This year and now, today ಎನ್ನುತ್ತಾರಲ್ಲವೇ ಅದರಲ್ಲಿ ಹೆಚ್ಚು ನಂಬಿಕೆಯಿಟ್ಟು ನಾನಿರುತ್ತೇನೆ. ಹಿಂದೆ ನೋಡಿದರೂ ಸಾಮಾನ್ಯವಾಗಿಯೇ ನೋಡುತ್ತೇನೆಯೇ ವಿನಾ ಅದರಲ್ಲಿ ಯಾವುದೇ ವಿಶೇಷ ಇರುವುದಿಲ್ಲ. ಒಂದೇ ಮಾತಿನಲ್ಲಿ ಹೇಳುವುದಾದರೆ ಭೂತ ಮತ್ತು ಭವಿಷ್ಯದ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳದೆ, ಈ ಕ್ಷಣ, ಈ ದಿನದಲ್ಲಿ ಸಮಾಧಾನ, ಆನಂದದಿಂದ ಇರಲು ಪ್ರಯತ್ನಿಸುತ್ತೇನೆ.

ನನ್ನ ಜೀವನವೂ ಹೆಚ್ಚು ಕಡಿಮೆ 'ಲಂಬೋದರ'ನಂತೆ! ಹೆಚ್ಚು ಖರ್ಚು ಮಾಡದೆ 74 ವರ್ಷ ಕಳೆದುಹೋಗಿವೆ. ನಾನು ಹೀಗೆ ಆಗಬೇಕು, ಹಾಗೆ ಮಾಡಬೇಕು ಎಂದು ಯೋಚಿಸಿದ, ಪ್ರಯತ್ನಿಸಿದ ಯಾವ ನಿರ್ಧಾರಗಳೂ ಯಶಸ್ವಿಯಾಗಲಿಲ್ಲ. ಹೀಗಾಗಿ ನನ್ನನ್ನು ನಾನು ಪ್ರವಾಹಕ್ಕೆ ಹಾಕಿಕೊಂಡೆ. ಭಗವಂತ ನಡೆಸಿದಂತೆ ಆಗಲಿ ಎಂದು. ಬದುಕಲ್ಲಿ ಈಜಿಕೊಂಡು ನೋಡಿದೆ. ಅದೇ ಹೆಚ್ಚು ಸೂಕ್ತ ಎನಿಸಿತು. 74 ವರ್ಷಗಳು ಕಳೆದುಹೋದವು, ಮುಂದಿನ ವರ್ಷ ಸಿನಿಮಾ ಪಯಣದಲ್ಲಿ 50 ವರ್ಷ. ಈ ದಿಕ್ಕಿನಲ್ಲಿ ಹೋಗಬೇಕು ಎಂದು ಪ್ರಯತ್ನಿಸಿ ಇವೆಲ್ಲ ಆಗಿದ್ದಲ್ಲ. ನಾನು ಪ್ರಯತ್ನಿಸಿದರೂ ಇವು ಸಾಧ್ಯವಾಗುತ್ತಿರಲಿಲ್ಲ.

• ಕಾಸರಗೋಡಿನಿಂದ ಮುಂಬೈಯ ಪಯಣದ ಕುರಿತು...

ಬಾಲ್ಯದ ಮೊದಲ ಆರು ವರ್ಷ ಕಾಸರಗೋಡಿನ ಬಳಿಯ ಆನಂದಾಶ್ರಮದಲ್ಲಿ ಕಳೆದೆ. ತಂದೆ, ತಾಯಿಯೂ ಅಲ್ಲೇ ಇದ್ದರು. ಸ್ವಾಮಿ ರಾಮದಾಸ್ ಅವರ ಮೇಲ್ವಿಚಾರಣೆಯಲ್ಲಿ ಆಶ್ರಮ ನಡೆಯುತ್ತಿತ್ತು. ಚಿತ್ರಾಪುರ ಸಾರಸ್ವತರು ನಾವು. ಭಟ್ಕಳ ಸಮೀಪದ ಶಿರಾಲಿಯಲ್ಲಿನ ಚಿತ್ರಾಪುರ ಮಠದ ಗುರುಗಳು ಆನಂದಾಶ್ರಮಕ್ಕೆ ಬಂದು, ತಮ್ಮ ಮಠಕ್ಕೆ ಒಬ್ಬರು ಮೇಲ್ವಿಚಾರಕರು ಬೇಕಿತ್ತು ಎಂದಾಗ ರಾಮದಾಸರು ತಂದೆಯನ್ನೇ ಕರೆದುಕೊಂಡು ಹೋಗುವಂತೆ ತಿಳಿಸಿದರು. ಹೀಗಾಗಿ ನಾವು ಉಡುಪಿಗೆ ಸ್ಥಳಾಂತರಗೊಂಡೆವು. ಶಂಕರನೂ ಅಲ್ಲೇ ಹುಟ್ಟಿದ. ಹೊನ್ನಾವರದಲ್ಲಿ ನನ್ನ ಶಿಕ್ಷಣ ಮುಂದುವರಿಯಿತು. ಮುಂದಿನ ಓದಿಗೆ ತಂದೆಯವರು ನನ್ನನ್ನು ಮುಂಬೈಗೆ ಕಳುಹಿಸಿದರು. ಕಾನ್ವೆಂಟ್‌ನ ಇಂಗ್ಲಿಷ್‌ಗೆ ನಾನು ತಡವರಿಸಿದೆ. ಕ್ರಮೇಣ ಓದಿನಲ್ಲಿ ಆಸ್ಥೆ ಕಡಿಮೆಯಾಗಿ, 10ನೇ ತರಗತಿಯಲ್ಲಿ ಅನುತ್ತೀರ್ಣನಾದೆ. ವಿಜ್ಞಾನ, ಕಲಾ ವಿಭಾಗ ಹೀಗೆ ಎಲ್ಲ ಸ್ಟ್ರೀಮ್‌ಗಳಿಗೂ ಹೋದೆ.

ಚೀನಾ, ಪಾಕಿಸ್ತಾನದ ಯುದ್ಧದ ಬಳಿಕ ದೇಶಪ್ರೇಮದ ಅಲೆ ಎಲ್ಲೆಲ್ಲೂ ಎದ್ದಿತ್ತು. ಹೀಗಾಗಿ ವಾಯುಸೇನೆಗೆ ಸೇರಲು ಪ್ರಯತ್ನಿಸಿದೆ. ಆದರೆ ಎಡಗಣ್ಣಿನ ಸಮಸ್ಯೆಯಿಂದ ಅದು ಆಗಲಿಲ್ಲ. ನಂತರ ಭೂಸೇನೆ ಸೇರಲು ಹೋದರೆ, ನಿಗದಿತ ತೂಕವಿಲ್ಲದ ಕಾರಣ ಅಲ್ಲೂ ಆಗಲಿಲ್ಲ. ಆಸೆ ಈಡೇರುವುದಿಲ್ಲ ಎಂದು ತಂದೆಯವರಿಗೆ ಅನಿಸಿದಾಗ, ಕೆಲಸ ಮಾಡಿಕೊಂಡು ಓದು ಮುಂದುವರಿಸಲು ಸಲಹೆ ನೀಡಿದರು. ಅಷ್ಟರಲ್ಲಿ ರಂಗಭೂಮಿಯ ಪಯಣವೂ ಆರಂಭವಾಗಿತ್ತು. ಕೆಲಸ ಸಿಗಬಹುದೆಂದು ವಾಣಿಜ್ಯ ವಿಭಾಗಕ್ಕೆ ಸೇರಿ, ಓದಲು ಪ್ರಾರಂಭಿಸಿದೆ. ಈ ಐದು ವರ್ಷಗಳ ಅವಧಿಯಲ್ಲಿ ಕನ್ನಡ, ಕೊಂಕಣಿ, ಹಿಂದಿ, ಮರಾಠಿ ಭಾಷೆಯ 50ಕ್ಕೂ ಅಧಿಕ ನಾಟಕಗಳಲ್ಲಿ ನಟಿಸಿದೆ. 1972ರಲ್ಲಿ ಚಿತ್ರರಂಗಕ್ಕೆ ಕಾಲಿಟ್ಟೆ.

• ವಾಣಿಜ್ಯ ನಗರಿಯಲ್ಲಿ ಶಂಕರ ಅವರ ಜತೆಗಿನ ಅನುಭವಗಳು ಹೇಗಿದ್ದವು?

ನಾನು ಮುಂಬೈಗೆ ಹೆಜ್ಜೆ ಇಟ್ಟಿದ್ದ ಎರಡು ವರ್ಷದ ಅಂತರದಲ್ಲಿ ಶಂಕರನೂ ಅಲ್ಲಿಗೆ ಬಂದಿದ್ದ. ನಾವು ಜತೆಯಲ್ಲೇ ಇದ್ದೆವು. ನಾನು ರಂಗಭೂಮಿಗೆ ಹೆಜ್ಜೆ ಇಟ್ಟಾಗ, ಆತ ತೆರೆಯ ಹಿಂದೆ ಕೆಲಸ ಮಾಡಿದ. ಒಂದೆರಡು ನಾಟಕಗಳಲ್ಲಿ ಪಾತ್ರಗಳನ್ನೂ ಮಾಡಿದ. ನನಗೂ ಶಂಕರನಿಗೂ ಆರು ವರ್ಷಗಳ ಅಂತರ. ಮುಂಬೈನಲ್ಲಿ ನಾನು ಆತನಿಗೆ ಅಣ್ಣ ಆಗಿದ್ದೆ ನಿಜ. ಆದರೆ ನಿಜವಾಗಿಯೂ ನಾನು ಆತನ ಪಾಲಕನಾಗಿದ್ದೆ. (ನಗುತ್ತಾ) ಸ್ವಲ್ಪ ಅಣ್ಣಾಗಿರಿ ಇತ್ತು! ಆತ ಚೆನ್ನಾಗಿ ಓದುತ್ತಿದ್ದ. ನನಗೆ ಬ್ಯಾಂಕ್‌ನಲ್ಲಿ ಕೆಲಸ ಸಿಕ್ಕಿದ್ದು ಅನುಕೂಲವಾಯಿತು. ಕಾಲೇಜು ವಿದ್ಯಾರ್ಥಿಯಾಗಿದ್ದಾಗಲೇ ಬ್ಯಾಂಕ್‌ನಲ್ಲಿ ಶಂಕರಗೂ ಅರೆಕಾಲಿಕ ಕೆಲಸ ಸಿಕ್ಕಿತು.

ಶಂಕರನಿಗೆ ನಾಯಿಮರಿಗಳೆಂದರೆ ಇಷ್ಟ. ಮುಂಬೈನಲ್ಲಿ ನಾವಿದ್ದ ಮನೆಯೇ ಚಿಕ್ಕದಾಗಿತ್ತು. ಒಮ್ಮೆ ಶಂಕರ ಬೀದಿಬದಿಯ ನಾಯಿಮರಿಯೊಂದನ್ನು ಮನೆಗೆ ತಂದಿದ್ದ. ಮರುದಿನ ಆತ ಶಾಲೆಗೆ ಹೋದ ಬಳಿಕ ನಾನು ಅದನ್ನು ಮತ್ತೆ ಬಿಟ್ಟುಬಂದಿದ್ದೆ. ದೊಡ್ಡ ಮನೆ ತೆಗೆದುಕೊಂಡಾಗ ನಾಯಿ ಸಾಕೋಣ ಎಂದಿದ್ದೆ.

• ‘ಸಂಕಲ್ಪ’ ಅನಿರೀಕ್ಷಿತವಾಗಿತ್ತೇ?

1970ರ ದಶಕದಲ್ಲಿ ಕನ್ನಡದಲ್ಲಿ ‘ಸಂಸ್ಕಾರ’, ‘ವಂಶವೃಕ್ಷ’ ಹೀಗೆ ಕಾದಂಬರಿ ಆಧಾರಿತ ಹೊಸ ಅಲೆಯ ಚಿತ್ರಗಳು ಬಂದವು. ಗಿರೀಶ ಕಾರ್ನಾಡ, ಲಂಕೇಶ್, ಬಿ.ವಿ. ಕಾರಂತ, ಜಿ.ವಿ.ಅಯ್ಯರ್ ಮುಂತಾದವರ ಕಾಲವದು. ವೈ.ಎನ್.ಕೃಷ್ಣಮೂರ್ತಿ, ಜಿ.ವಿ.ಅಯ್ಯರ್, ಗಿರೀಶ ಅವರು ಸೇರಿ, ನಂಜರಾಜ್ ಅರಸ್ ನಿರ್ದೇಶನದ ‘ಸಂಕಲ್ಪ’ದ ಅವಕಾಶ ನೀಡಿದರು. ನಂತರದಲ್ಲಿ ಜಿ.ವಿ.ಅಯ್ಯರ್ ಅವರ ‘ಹಂಸಗೀತೆ’ ಮಾಡಿದೆ. ಹಲವು ಕಲಾತ್ಮಕ ಚಿತ್ರಗಳನ್ನು ಕನ್ನಡದಲ್ಲಿ ಮಾಡಿದೆ. ಮುಂಬೈನಲ್ಲಿ ‘ಅಂಕುರ್’, ‘ನಿಶಾಂತ್’, ‘ಮಂಥನ್’ ಹೀಗೆ ಶ್ಯಾಮ್ ಬೆನೆಗಲ್ ಅವರ ಜತೆಗೆ ಸತತ ಆರು ಚಿತ್ರಗಳಲ್ಲಿ ನಟಿಸಿದೆ. ಇದಾದ ನಂತರದಲ್ಲಿ ‘ಬಯಲುದಾರಿ’, ‘ನಾ ನಿನ್ನ ಬಿಡಲಾರೆ’, ‘ಚಂದನದ ಗೊಂಬೆ’ ಈ ರೀತಿ ಮೈನ್‌ಸ್ಟ್ರೀಮ್ ಸಿನಿಮಾ ಎಂದು ಏನು ಹೇಳುತ್ತಾರೋ ಅಂತಹ ಚಿತ್ರಗಳಲ್ಲಿ ಪಾತ್ರ ದೊರೆಯಿತು. ಹೀಗೆ ವೃತ್ತಿ ನಟನಾದೆ.

• ಸಿನಿಮಾ ಬದುಕಿನಲ್ಲಿ ಕಂಡ ಸಂಕ್ರಮಣಗಳನ್ನು ಹೇಗೆ ವ್ಯಾಖ್ಯಾನಿಸುತ್ತೀರಿ?

ನಾಟಕ ರಂಗದಲ್ಲೂ ಬದಲಾವಣೆಗಳನ್ನೂ ನೋಡುತ್ತಿದ್ದೆ. ಹೆಚ್ಚಾಗಿ ಮುಖ್ಯ ಪಾತ್ರಗಳು ಸಿಕ್ಕಿದ್ದರೂ ಭಿನ್ನ ಪಾತ್ರಗಳನ್ನು ಮಾಡುವ ಅವಕಾಶ ಸಿಕ್ಕಿತ್ತು. ಬಹುಮುಖ ಪ್ರತಿಭೆಗೆ ಹೆಚ್ಚು ಒತ್ತು ಕೊಡಬೇಕು ಎಂದು ರಂಗಭೂಮಿಯ ಗುರುಗಳು ಹೇಳಿದ್ದರು. ಈ ಮಾರ್ಗದರ್ಶನವನ್ನು ಚಿತ್ರರಂಗದಲ್ಲೂ ಮುಂದುವರಿಸಿದೆ. ಹೀಗಾಗಿ ವಿಭಿನ್ನ ಪಾತ್ರಗಳನ್ನು ಹುಡುಕಿದೆ.

ರಂಗಭೂಮಿಯಲ್ಲಿ ಹಾಸ್ಯದಲ್ಲಿ ವಿಶೇಷ ತರಬೇತಿ ಸಿಕ್ಕಿತ್ತು. ಅದಕ್ಕೆ ತಕ್ಕಂತೆ ಫಣಿ ರಾಮಚಂದ್ರ ಅವರ ‘ಗಣೇಶ’ ಸರಣಿ ಸಿನಿಮಾ ಬಂದವು. ಖಳನಾಯಕನ ಪಾತ್ರವನ್ನೂ ಮಾಡಿದೆ. ಆದರೆ ಜನಕ್ಕೆ ಅದು ಇಷ್ಟವಾಗಲಿಲ್ಲ. ‘ಸಂಕಲ್ಪ’ ಸಿನಿಮಾ ಮಾಡುವಾಗ ನನಗೆ 23 ವರ್ಷ. ಐವತ್ತು ತಲುಪುತ್ತಿದ್ದ ಹಾಗೆಯೇ, ಪೋಷಕ ಪಾತ್ರಗಳಲ್ಲಿ ಬಹಳ ಪರಿಪಕ್ವವಾದ ಪಾತ್ರಗಳನ್ನು ಮಾಡುವ ಅವಕಾಶ ಇದೆ ಎಂದು ಅರಿತು ಅಂತಹ ಚಿತ್ರಕಥೆಗಳನ್ನು ಆಯ್ದುಕೊಂಡೆ.

• ಕನ್ನಡದ ಬೇರು ನಿಮ್ಮನ್ನು ಹಿಡಿದಿಟ್ಟುಕೊಂಡಿತು ಅಲ್ಲವೇ?

ಹಲವು ಚಿತ್ರಗಳನ್ನು ಬೇರೆ ಭಾಷೆಗಳಲ್ಲಿ ಮಾಡಿದರೂ, ಕನ್ನಡದಲ್ಲಿನ ಪ್ರಯೋಗಾತ್ಮಕ ಪ್ರಯತ್ನಗಳು ನನ್ನನ್ನು ಹಿಡಿದಿಟ್ಟುಕೊಂಡವು. ಇಲ್ಲಿನ ಹಲವರು ನನಗೋಸ್ಕರವೇ ಕಥೆ ಬರೆಯಲು ಆರಂಭಿಸಿದರು. ಕೆ.ವಿ.ಜಯರಾಂ, ಕೆ.ವಿ.ರಾಜು, ದೊರೈ ಭಗವಾನ್ ಜತೆ, ಸುನೀಲ್ ಕುಮಾರ್ ದೇಸಾಯಿ, ಫಣಿ ರಾಮಚಂದ್ರ, ದಿನೇಶ್ ಬಾಬು, ಯೋಗರಾಜ್ ಭಟ್ ಅವರ ಸಿನಿಮಾಗಳಲ್ಲಿ ಭಿನ್ನಭಿನ್ನ ಪಾತ್ರಗಳನ್ನು ಮಾಡಿದೆ. ಬಹುಮುಖ ಪ್ರತಿಭೆಯ ಪಾತ್ರಗಳನ್ನು ಇವರು ನಿರ್ಮಿಸುತ್ತಿದ್ದರು. ಇಲ್ಲಿನ ನಿರ್ದೇಶಕರು, ನಿರ್ಮಾಪಕರು ನನ್ನನ್ನು ಚೆನ್ನಾಗಿ ಬೆಳೆಸಿದರು, ನೋಡಿಕೊಂಡರು.

ಇದೀಗ ನಾನು ಚಿತ್ರಕಥೆಯನ್ನು ನೋಡಿಕೊಂಡು ಸಿನಿಮಾ ಆಯ್ಕೆ ಮಾಡಿಕೊಳ್ಳುತ್ತಿದ್ದು, ನನ್ನ ಪಾತ್ರವಷ್ಟೇ ಅಲ್ಲದೆ ಇಡೀ ಚಿತ್ರದಲ್ಲಿನ ಪಾತ್ರಗಳು ಯಾವುದೇ ಅಶ್ಲೀಲತೆ ಇಲ್ಲದೆ ಜೀವಂತಿಕೆಯಿಂದ ಕೂಡಿರಬೇಕು ಎನ್ನುವುದನ್ನು ಬಯಸುತ್ತೇನೆ. ಎಂಜಿನಿಯರಿಂಗ್ ಪೂರೈಸಿದ ಹಲವು ಯುವ ನಿರ್ದೇಶಕರು ನಮ್ಮ ನಡುವಿದ್ದಾರೆ. ಎಲ್ಲಿಂದ, ಯಾರು ಬಂದರು ಎನ್ನುವುದು ಮುಖ್ಯವಲ್ಲ. ಇವರು ಒಂದು ಚಿತ್ರಕ್ಕೆ ನಾಲ್ಕೈದು ವರ್ಷ ಮೀಸಲಿಡುತ್ತಾರೆ. ಅದ್ಭುತವಾದ ಕಥೆಯನ್ನು ಹೆಣೆಯುತ್ತಾರೆ. ನಿರ್ದೇಶಕ ಹೇಮಂತ್ ಎಂ.ರಾವ್ ಇಂತಹ ನಿರ್ದೇಶಕರ ಸಾಲಿನಲ್ಲಿ ಉಲ್ಲೇಖಾರ್ಹ. ಹೀಗಾಗಿ ಹೊಸಬರ ತಂಡದ ಜತೆಗೂ ನಾಲ್ಕೈದು ಸಿನಿಮಾ ಮಾಡುತ್ತಿದ್ದೇನೆ. ಕರಾವಳಿಯಲ್ಲಿ ಬೆಳೆದು ಮುಂಬೈಗೆ ಹೋದವನಿಗೆ ಇಲ್ಲಿನ ಪ್ರೀತಿ, ಆತ್ಮೀಯತೆ, ವಿಶ್ವಾಸ ಕೂಡಿಹಾಕಿದೆ. ಕನ್ನಡದಲ್ಲೇ ಓದಿ ಬೆಳೆದವನು ನಾನು. ಕನ್ನಡದ ಅಪಾರವಾದ ಪ್ರಭಾವ ನನ್ನ ಮೇಲಿದೆ.

• ಅನಂತನಾಗ್ ಅವರನ್ನು ಬಹಳ ಕಾಡಿದ ಅವರದೇ ಸಿನಿಮಾ ಯಾವುದು?

ಪ್ರತಿಯೊಂದು ಪಾತ್ರದ ಹಿಂದೆ ಬಹಳ ಜನರ ಕೆಲಸವಿದೆ. ಹೀಗಾಗಿ ಭೇದಭಾವ ಮಾಡುವುದಿಲ್ಲ. ನಾವು ನಾಟಕದ ತಾಲೀಮು ಮಾಡುವಾಗ ಆ ಕಥೆ ಬರೆದ ಲೇಖಕರು ವೇದಿಕೆ ಮುಂದೆ ಕುಳಿತಿರುತ್ತಿದ್ದರು. ನಾವು ತಾಲೀಮು ವೇಳೆ ಕೊಂಚ ತಪ್ಪು ಮಾಡಿದರೂ ‘ಬಹಳ ಯೋಚನೆ ಮಾಡಿ ಆ ಸಾಲು ಬರೆದಿದ್ದೇನೆ. ದಯವಿಟ್ಟು ಅದನ್ನು ಸರಿಯಾಗಿ ಹೇಳು’ ಎಂದು ತಿದ್ದುತ್ತಿದ್ದರು. ಪ್ರತಿಯೊಂದು ಚಿತ್ರಕಥೆ ಹಿಂದೆ ಬಹಳ ಪರಿಶ್ರಮವಿದೆ. ಸಿನಿಮಾ ಮಾಡುವಾಗ ಪ್ರತೀ ಕಲಾವಿದನಿಗೂ ಹೊಣೆಗಾರಿಕೆ ಕ್ರಮೇಣ ಬರುತ್ತದೆ. ಹೀಗಾಗಿ ಸಿನಿಮಾಗಳ ನಡುವೆ ಆಯ್ಕೆ ತುಂಬಾ ಕಷ್ಟ. ಅದು ಫೇವರಿಟ್, ಇದು ಫೇವರಿಟ್ ಎನ್ನಲು ಸಾಧ್ಯವಿಲ್ಲ.

• ‘ಮುಂಗಾರು ಮಳೆ’ ಫಾರ್ಮ್‌ನಲ್ಲಿ ಇನ್ನೂ ಇದ್ದೀರಾ?

‘ಮುಂಗಾರು ಮಳೆ’ಗೂ ಮುನ್ನವೇ ಹಲವು ಸಿನಿಮಾಗಳಲ್ಲಿ ಪ್ರಮುಖ ಪಾತ್ರಗಳನ್ನು ನಾನು ನಿಭಾಯಿಸಿದ್ದೆ. ಮುಂಗಾರು ಮಳೆ ನಂತರ ಹೆಚ್ಚು ಹೆಸರು ಬಂತು. ಪಾತ್ರಗಳಲ್ಲಿ ವೈವಿಧ್ಯ ಇದ್ದಾಗ ನಟನಿಗೆ ನಟನೆ ಸಲೀಸು. ಈಗ ಕೊಂಚ ನಿಧಾನವಾಗಿದ್ದೇನೆ. 75ನೇ ವರ್ಷಕ್ಕೆ ಕಾಲಿಡುತ್ತಿರುವಾಗ ನಾನೂ ಆತ್ಮಾವಲೋಕನ ಮಾಡಿಕೊಳ್ಳಬೇಕು. ಇನ್ನು ಮುಂದೆ ಏನು ಮಾಡಬೇಕು? ಕೆಲಸ ಮಾಡಿದರೂ ಎಂಥ ಕೆಲಸ ಮಾಡಬೇಕು? 75ರ ಗಾಂಭೀರ್ಯ, ಘನತೆ ಅರಿತುಕೊಂಡು, ಯಾವುದು ಮಾಡಿದರೆ ಚೆಂದ, ಯಾವ ಪಾತ್ರ ಮಾಡದೇ ಇದ್ದರೆ ಒಳ್ಳೆಯದು ಎನ್ನುವ ಆಯ್ಕೆಯಲ್ಲಿ ಮತ್ತಷ್ಟು ಸೂಕ್ಷ್ಮವಾಗಬೇಕು.

ಕಣ್ಮುಂದೆಯೇ ಜನನ, ಮರಣವನ್ನು ನೋಡುತ್ತಿರುತ್ತೇವೆ. ತಮ್ಮ ಶಂಕರ 35ನೇ ವಯಸ್ಸಿಗೆ ನಿಧನನಾದ. ಮೊನ್ನೆ ಮೊನ್ನೆ ಅಪ್ಪು... ಇವೆಲ್ಲ ನಿಮಗೆ ಎಚ್ಚರ ಕೊಡುತ್ತವೆ. ಸಿನಿಮಾ ಬದುಕಲ್ಲ. ಬದುಕು ಸಿನಿಮಾ ಎಂದು. ಜೀವನ ಎನ್ನುವುದು ಹರಿಯುತ್ತಿರುತ್ತದೆ. ಅದರ ಒಂದು ಬೊಗಸೆ ತೆಗೆದು ಜನರಿಗೆ ತೋರಿಸುತ್ತೇವೆ. 74 ವಸಂತಗಳು ಮುಗಿದಾಗ ಅದರ ಕಡೆಯೂ ಗಮನ ಕೊಡಬೇಕಾಗುತ್ತದೆ. ಉದಾಹರಣೆಗೆ, ಆಶ್ರಮ, ಮಠದ ವಾತಾವರಣದಲ್ಲಿ ಬೆಳೆದ ನಾನು ನಾಟಕ, ಸಿನಿಮಾ ರಂಗಕ್ಕೆ ಹೆಜ್ಜೆ ಇಟ್ಟಾಗ ಗುರುಗಳೂ ಆಶ್ಚರ್ಯಪಟ್ಟಿದ್ದರು. ಅವರಿಗೆ ಅನಿಸಿದ ಹಾಗೆ ನನಗೂ ಅನಿಸುತ್ತಾ ಬಂದಿದೆ. ಎಲ್ಲರೂ ಹೆಚ್ಚಾಗಿ ಪ್ರಪಂಚದಿಂದ ಪಾರಮಾರ್ಥಕ್ಕೆ ಹೋದರೆ, ನಾನು ಪಾರಮಾರ್ಥದಲ್ಲಿದ್ದವನು ಪ್ರಪಂಚಕ್ಕೆ ಹೋದೆ. ಜೀವನ ಒಂದು ಹಳಿಯಲ್ಲಿದೆ. ಅದರ ಹಿಂದೆಯೇ ಸಿನಿಮಾ ಇದೆ. ಇವುಗಳಲ್ಲಿ ಯಾವುದು ಮುಖ್ಯ ಅನ್ನುವುದನ್ನು ಆಯ್ದುಕೊಂಡು ಮುಂದಿನ ಹೆಜ್ಜೆ ಇಡಬೇಕು.



ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ವರ್ಲಿ ಚಿತ್ರಕಲೆ

• ಕಲೆ–ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ



ಇದು ವರ್ಲಿ ಚಿತ್ರಕಲೆ. ಕರ್ನಾಟಕದಲ್ಲಿ ಹಸೆ, ಚಿತ್ತಾರ ಕಲೆ ಎಂದೂ ಕರೆಯಲಾಗುತ್ತದೆ. ಮಣ್ಣು, ಹೆಂಚಿನ ಪುಡಿ ಮತ್ತಿತರ ನೈಸರ್ಗಿಕ ಬಣ್ಣಗಳನ್ನೇ ಬಳಸಿಕೊಂಡು ಕೈಯಿಂದಲೇ ಬಿಡಿಸುವ ಚಿತ್ರಗಳಿವು. ರೇಖೆ, ಚುಕ್ಕಿ, ಆಕೃತಿ ಎಲ್ಲವೂ ಈ ಕಲೆಯಲ್ಲಿ ಮೇಳೈಸಿವೆ. ಜನಪದ ಮತ್ತು ಶಿಷ್ಟ ಪ್ರಕಾರ ಮೇಳೈಸಿರುವ ಈ ಕಲೆಯ ಚಿತ್ತಾರ ಬರೆಯಲು ತುಂಬಾ ಏಕಾಗ್ರತೆ ಬೇಕಾಗುತ್ತದೆ

ಈ ಕಲೆಯ ಮೂಲ ಮಹಾರಾಷ್ಟ್ರದ ವರ್ಲಿ ಎಂಬ ಪುಟ್ಟ ಹಳ್ಳಿ. ಅಲ್ಲಿ ಪ್ರತಿ ಮನೆಯ ಗೋಡೆಗಳಲ್ಲೂ ಇಂಥ ಚಿತ್ತಾರದ ಕಲೆಯನ್ನು ಕಾಣಬಹುದು. ಆಯಾ ಪ್ರಾದೇಶಿಕತೆಗೆ ತಕ್ಕಂತೆ ಮಾರ್ಪಾಡುಗೊಂಡು ಈಗ ನಮ್ಮ ನಾಡಿನಲ್ಲೂ ಈ ಚಿತ್ತಾರ ಕಲೆ ಜನಪ್ರಿಯವಾಗಿದೆ. ಈ ಚಿತ್ತಾರ ಕಲೆಗೆ ಎಲ್ಲ ಕಡೆಗಳಿಂದಲೂ ಬೇಡಿಕೆಯೂ ಇದೆ

ಕಂದು, ಕೆಂಪು, ಕೇಸರಿ, ಕಪ್ಪು ಮತ್ತು ಬಿಳಿ ಸಾಮಾನ್ಯವಾಗಿ ಈ ಕಲೆಯಲ್ಲಿ ಬಳಕೆಯಾಗುವ ಬಣ್ಣಗಳು. ಮನೆ, ಆವರಣ ಗೋಡೆಗಳಲ್ಲಿ ಇಂಥ ಚಿತ್ತಾರಗಳನ್ನು ಕಾಣಬಹುದು. ಚಿತ್ತಾರದ ನಡುವೆಯೇ ಶುಭ ಶಬ್ದಗಳನ್ನು ಬರೆಯುವುದೂ ಇದೆ. ಚಿತ್ರದಲ್ಲಿರುವುದು ಗೋಡೆಯ ಮೇಲೆ ಬರೆಯಲಾದ ಗ್ರಾಮೀಣ ಜನ ಜೀವನದ ಚಿತ್ರ

ಇದು ಉತ್ತರ ಕರ್ನಾಟಕದ ಪೊಲೀಸ್ ಠಾಣೆಯೊಂದರ ಆವರಣ ಗೋಡೆಯಲ್ಲಿ ಮೂಡಿಸಲಾದ ಚಿತ್ತಾರ. ಪೊಲೀಸ್ ಇಲಾಖೆಯ ಲಾಂಛನ ಮತ್ತು ವಿವಿಧ ಚಿತ್ತಾರಗಳನ್ನು ಕಾಣಬಹುದು. ಗೋಡೆಗೆ ಕಲಾತ್ಮಕ ನೋಟವನ್ನೂ ಈ ಕಲೆ ಕೊಟ್ಟಿದೆ

ಗಣಿತದಲ್ಲಿ ಗರ್ದಿ ಗಮ್ಮತ್ತು

ಏಜು–ಮೋಜು

ಇಲ್ಲಿ ಕೊಟ್ಟಿರುವ 259ಕ್ಕೆ ನಿಮ್ಮ ವಯಸ್ಸಿನ ಸಂಖ್ಯೆ ಹಚ್ಚಿ ಗುಣಿಸಿರಿ. ಬಂದ ಉತ್ತರಕ್ಕೆ ಮತ್ತೆ ಮಜಾ ಸಂಖ್ಯೆ 39ರಿಂದ ಗುಣಿಸಿದರೆ ಉತ್ತರದಲ್ಲಿ ನಿಮ್ಮ ವಯಸ್ಸಿನ ಸಂಖ್ಯೆಗಳೇ ಕಾಣಿಸಿಕೊಳ್ಳುತ್ತವೆ.

ಉದಾ:

259	
X 67	ನನ್ನ ವಯಸ್ಸು
1813	
1554	
17353	
X 39	ಮಜಾ ಸಂಖ್ಯೆ
156177	
52059	
67,67,67	ವಯಸ್ಸಿನ ಸಂಖ್ಯೆ

ಟ್ವೆಂಟಿ – 20 ಮ್ಯಾಚ್

ಇಲ್ಲಿ ಕೊಟ್ಟಿರುವ ಗಣಿತ ಚಿಹ್ನೆಗಳಿಗೂ ಹಾಗೂ ವಿವರಣೆಗಳಿಗೂ ಹೊಂದಿಸಿ

1	U	A ಸಮ
2	C	B ಕಿರಣ
3	Δ	C ಆದ್ದರಿಂದ
4	∴	D ಗುಣಿಸು
5	⊥	E ವರ್ಗ
6	□	F ಆಯತ
7	>	G ತ್ರಿಕೋನ
8	%	H ಅನುಪಾತ
9	÷	I ಉಪಗಣ
10	°	J ಭಾಗಿಸು
11	√	K ಏಕೆಂದರೆ
12	( )	L ಆವರಣ
13	,,	M ಸಂಯೋಗ
14	—	N ಕಳೆ
15	:	O ಕ್ಕಿಂತ ಕಡಿಮೆ
16	▭	P ಲಂಬಕೋನ
17	X	Q ವರ್ಗಮೂಲ
18	∵	R ಪ್ರತಿಶತ
19	→	S ಇಂಚು
20	=	T ವೃತ್ತ

ಜಾಣಪದ ಆಟ

	ಕ	ಲ	
1			ಬೀಗ
2			ವೇಳೆ
3			ಜಾತಿ
4			ಶೂರ
5			ಸಂಬಳ



ಅದಲು ಬದಲು ಕಂಚಿ ಕದಲು

ಇಲ್ಲಿರುವ ಪದಗಳ ಅಕ್ಷರಗಳನ್ನೇ ಪುನಃ ಬಳಸಿಕೊಂಡು ಬೇರೊಂದು

1. ಕಣಿವಾದನ
2. ಮಾನಸ
3. ಸರಕುದರ
4. ಮರಳಿದನಗು

ಪದ–ಆಟ

ಇಲ್ಲಿ ಕೊಟ್ಟಿರುವ ಜೋಡಿ ಪದಗಳ ಹಿಂದೆ ಒಂದಕ್ಷರ ತುಂಬಿ ಪ್ರಾಸ ಪದ ರಚಿಸಿ

1	---------ಣಿತ ---------ಣಿತ	5	---------ಕರ ---------ಕರ
2	---------ಕ್ಕಡಿ ---------ಕ್ಕಡಿ	6	---------ರಳ ---------ರಳ
3	---------ರಗು ---------ರಗು	7	---------ರಣ ---------ರಣ
4	---------ಗುರು ---------ಗುರು	8	---------ರಾಗ ---------ರಾಗ

ಅಕ್ಷರ ಪಟ್ಟಿ

ಶ	ಹ	ವಿ	ಶಂ
ಎ	ಷೆ	ಹ	ತ
ಚ	ಸ	ಕು	ಪ
ಸ	ಗ	ಚಿ	ಕಿಂ

ಕಳೆದ ಸಂಚಿಕೆಯ ಸರಿ ಉತ್ತರಗಳು

ಟ್ವೆಂಟಿ – 20 ಮ್ಯಾಚ್

1-K 2-G 3-O 4-J 5-M 6-C 7-P 8-N 9-H 10-E 11-L 12-R 13-S 14-Q 15-T 16-F 17-I 18-D 19-B 20-A

ಅದಲುಬದಲು

1 ಬದರಿಕಾಶ್ರಮ 2 ನೀರಿನಾಳ 3 ನೀರಿಗೆ ಹೋರಾಟ 4 ಅವಲೋಕನ

ಜಾಣಪದ ಆಟ

1 – ಬೆಲೆ 2 ಬಾಲೆ 3 ಬಿಲ 4 ಬಲೆ 5 ಬಲಿ

ಸಿನಿ ಒಗಟು

ಬಿಳಿಗಿರಿಯ ಬನದಲ್ಲಿ

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಏಷ್ಯಾಕಪ್: ಎಂಟು ದಿನದಲ್ಲಿ ಎರಡು ಬಾರಿ ಭಾರತ–ಪಾಕಿಸ್ತಾನ ಮುಖಾಮುಖಿ

ಜಯದತ್ತ ರೋಹಿತ್ ಪಡೆ ಚಿತ್ತ

ದುಬೈ (ಪಿಟಿಐ): ಹೋದ ಭಾನುವಾರವಷ್ಟೇ ಮುಖಾಮುಖಿಯಾಗಿದ್ದ ಏಷ್ಯಾ ಖಂಡದ ಬದ್ಧ ಪ್ರತಿಸ್ಪರ್ಧಿಗಳಾದ ಭಾರತ ಮತ್ತು ಪಾಕಿಸ್ತಾನ ತಂಡಗಳು ಮತ್ತೆ ಹಣಾಹಣಿ ನಡೆಸಲು ಸಿದ್ಧವಾಗಿವೆ. ಭಾನುವಾರ ನಡೆಯಲಿರುವ ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿಯ ಸೂಪರ್ 4 ಹಂತದಲ್ಲಿ ರೋಹಿತ್ ಶರ್ಮಾ ಹಾಗೂ ಬಾಬರ್ ಆಜಂ ಬಳಗಗಳು ತೊಡೆ ತಟ್ಟಲಿವೆ.

ಬಾಬರ್ ಆಜಂ ಹಾಗೂ ರೋಹಿತ್ ಶರ್ಮಾ –ಎಎಫ್‌ಪಿ ಚಿತ್ರ

ಬಲಾಬಲ

ಪಂದ್ಯಗಳು 10

ಭಾರತ ಜಯ 8

ಪಾಕ್ ಗೆಲುವು 2

ಪಂದ್ಯ ಆರಂಭ ರಾತ್ರಿ 7.30
(ಭಾರತೀಯ ಕಾಲಮಾನ)

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್ ಆ್ಯಪ್

ಗುಂಪು ಹಂತದಲ್ಲಿ ಅಗ್ರಸ್ಥಾನ ಪಡೆದಿರುವ ಭಾರತ ಹಾಗೂ ಎರಡನೇ ಸ್ಥಾನದಲ್ಲಿರುವ ಪಾಕ್ ಸೆಣಸಲಿವೆ. ಮೊದಲ ಪಂದ್ಯದಲ್ಲಿ ಹಾರ್ದಿಕ್ ಪಾಂಡ್ಯ ಆಲ್‌ರೌಂಡ್ ಆಟದ ಬಲದಿಂದ ಭಾರತವು ಕೊನೆಯ ಓವರ್‌ನಲ್ಲಿ ಪಾಕ್ ವಿರುದ್ಧ ರೋಚಕ ಜಯ ಗಳಿಸಿತ್ತು. ಆ ಪಂದ್ಯದಲ್ಲಿ ಮಿಂಚಿದ್ದ ರವೀಂದ್ರ ಜಡೇಜ ಗಾಯಗೊಂಡಿದ್ದು ಟೂರ್ನಿಯಿಂದಲೇ ಹೊರಬಿದ್ದಿದ್ದಾರೆ. ಅವರ ಬದಲಿಗೆ ಅಕ್ಷರ್ ಪಟೇಲ್ ಸ್ಥಾನ ಪಡೆದಿದ್ದಾರೆ.

ಆದರೆ ಕಳೆದೆರಡೂ ಪಂದ್ಯಗಳಲ್ಲಿ ಆರಂಭಿಕ ಬ್ಯಾಟರ್‌ಗಳು ಆತ್ಮವಿಶ್ವಾಸದಿಂದ ಆಡಿಲ್ಲ. ನಾಯಕ ರೋಹಿತ್ ಶರ್ಮಾ ಹೆಚ್ಚು ರನ್ ಗಳಿಸಿಲ್ಲ. ಕೆ.ಎಲ್. ರಾಹುಲ್ ಪಾಕ್ ಎದುರು ವೈಫಲ್ಯ ಅನುಭವಿಸಿದ್ದರು. ಹಾಂಗ್‌ಕಾಂಗ್ ವಿರುದ್ಧದ ಪಂದ್ಯದಲ್ಲಿ ವೇಗವಾಗಿ ಆಡಲು ಅವರಿಗೆ ಸಾಧ್ಯವಾಗಿರಲಿಲ್ಲ. ಆದರೆ ವಿರಾಟ್ ಕೊಹ್ಲಿ ಹಾಗೂ ಸೂರ್ಯಕುಮಾರ್ ಆ ಪಂದ್ಯದಲ್ಲಿ ಮಿಂಚಿದ್ದರು. ಆದರೆ ಈಗ ಪಾಕ್ ತಂಡದ ಬೌಲಿಂಗ್ ದಾಳಿಯ ಎದುರು ಗಟ್ಟಿಯಾಗಿ ನಿಲ್ಲಬೇಕಾದ ಸವಾಲು ಈ ಬ್ಯಾಟರ್‌ಗಳಿಗೆ ಇದೆ. ಮಧ್ಯಮ ಕ್ರಮಾಂಕದಲ್ಲಿ ಹಾರ್ದಿಕ್, ದಿನೇಶ್ ಕಾರ್ತಿಕ್ ಮತ್ತು ಅಕ್ಷರ್ ಇರುವುದರಿಂದ ಕೊನೆಯ ಹಂತದಲ್ಲಿ ರನ್‌ಗಳು ವೇಗವಾಗಿ ಹರಿದು ಬರುವ ನಿರೀಕ್ಷೆ ಇದೆ.

ಬೌಲಿಂಗ್ ವಿಭಾಗವು ಭುವನೇಶ್ವರ್ ಅನುಭವ ಹಾಗೂ ಹಾರ್ದಿಕ್ ಸಾಮರ್ಥ್ಯದ ಮೇಲೆ ಹೆಚ್ಚು ಅವಲಂಬಿತವಾಗಿದೆ. ಪಾಕ್ ತಂಡದ ಆರಂಭಿಕ ಮೊಹಮ್ಮದ್ ರಿಜ್ವಾನ್, ಫಕರ್ ಜಮಾನ್, ಖುಷ್ದಿಲ್ ಹಾಗೂ ಬಾಬರ್ ಆಜಂ ಅವರನ್ನು ಕಟ್ಟಿಹಾಕುವ ಪ್ರಮುಖ ಸವಾಲು ಭಾರತದ ಮುಂದಿದೆ.

19 ವರ್ಷದ ವೇಗಿ ನಸೀಮ್ ಶಾ ಹೋದ ಪಂದ್ಯದಲ್ಲಿ ಭಾರತ ಆರಂಭಿಕ ಆಘಾತ ನೀಡಿದ್ದರು. ನಂತರ ಗಾಯಗೊಂಡಿದ್ದ ಅವರು ಚೇತರಿಸಿಕೊಂಡಿದ್ದು ಹಾಂಗ್‌ಕಾಂಗ್ ಎದುರಿನ ಪಂದ್ಯದಲ್ಲಿಯೂ 2 ವಿಕೆಟ್ ಗಳಿಸಿದ್ದರು. ಶಾದಾಬ್ ಖಾನ್, ಮೊಹಮ್ಮದ್ ನವಾಜ್ ಕೂಡ ಉತ್ತಮ ಲಯದಲ್ಲಿದ್ದು, ಅವರನ್ನು ಎದುರಿಸಿ ನಿಲ್ಲುವ ಸವಾಲು ರೋಹಿತ್ ಪಡೆ ಮುಂದಿದೆ.

ಜಿಂಬಾಬ್ವೆ ಬೌಲರ್ ರಿಯಾನ್ ಬರ್ಲ್ –ಎಎಫ್‌ಪಿ ಚಿತ್ರ

ಆಸ್ಟ್ರೇಲಿಯಾಗೆ ಜಿಂಬಾಬ್ವೆ ಆಘಾತ

ಟೌನ್ಸ್‌ವಿಲ್ (ಎಪಿ): ಲೆಗ್‌ಸ್ಪಿನ್ನರ್ ರಿಯಾನ್ ಬರ್ಲ್ (10ಕ್ಕೆ 5) ಅವರ ಪ್ರಭಾವಿ ಬೌಲಿಂಗ್ ನೆರವಿನಿಂದ ಜಿಂಬಾಬ್ವೆ ತಂಡ ಮೂರನೇ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವನ್ನು 3 ವಿಕೆಟ್‌ಗಳಿಂದ ಮಣಿಸಿ ಅಚ್ಚರಿ ಮೂಡಿಸಿತು.

ಟೌನ್ಸ್‌ವಿಲ್‌ನಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಆಸ್ಟ್ರೇಲಿಯಾ 31 ಓವರ್‌ಗಳಲ್ಲಿ 141 ರನ್‌ಗಳಿಗೆ ಆಲೌಟಾಯಿತು. ಡೇವಿಡ್ ವಾರ್ನರ್ (94 ರನ್, 96 ಎ., 4X14, 6X2) ಹೊರತುಪಡಿಸಿ ಇತರ ಎಲ್ಲರೂ ವಿಫಲರಾದರು. ವಾರ್ನರ್ ಮತ್ತು ಗ್ಲೆನ್ ಮ್ಯಾಕ್ಸ್‌ವೆಲ್ (19) ಮಾತ್ರ ಎರಡಂಕಿ ಮೊತ್ತ ತಲುಪಿದರು. ಮೂರು ಓವರ್ ಬೌಲ್ ಮಾಡಿದ ಬರ್ಲ್ 5 ವಿಕೆಟ್ ಸಾಧನೆ ಮಾಡಿದರು.

ಜಿಂಬಾಬ್ವೆ ತಂಡ 39 ಓವರ್‌ಗಳಲ್ಲಿ 7 ವಿಕೆಟ್‌ಗೆ 142 ರನ್ ಗಳಿಸಿ ಜಯ ಸಾಧಿಸಿತು. ಟ್ಯಾಡಿವನಾಶೆ ಮರುಮನಿ (35) ಮತ್ತು ರೆಗಿಸ್ ಚಕಾಬ್ವಾ (ಔಟಾಗದೆ 37) ತಂಡಕ್ಕೆ ಸ್ಮರಣೀಯ ಗೆಲುವು ತಂದುಕೊಟ್ಟರು. ಜಿಂಬಾಬ್ವೆ ತಂಡ ಏಕದಿನ ಕ್ರಿಕೆಟ್‌ನಲ್ಲಿ ಆಸ್ಟ್ರೇಲಿಯಾ ತಂಡವನ್ನು ಅವರದ್ದೇ ನೆಲದಲ್ಲಿ ಮಣಿಸಿದ್ದು ಇದೇ ಮೊದಲು.ಮೊದಲ 2 ಪಂದ್ಯ ಜಯಿಸಿದ್ದ ಆಸ್ಟ್ರೇಲಿಯಾ ಸರಣಿಯನ್ನು 2–1 ರಲ್ಲಿ ತನ್ನದಾಗಿಸಿಕೊಂಡಿದೆ.

ಸಂಕ್ಷಿಪ್ತ ಸ್ಕೋರ್: ಆಸ್ಟ್ರೇಲಿಯಾ 31 ಓವರ್‌ಗಳಲ್ಲಿ 141 (ಡೇವಿಡ್ ವಾರ್ನರ್ 94, ಗ್ಲೆನ್ ಮ್ಯಾಕ್ಸ್‌ವೆಲ್ 19, ಆ್ಯರನ್ ಫಿಂಚ್ 5, ರಿಯಾನ್ ಬರ್ಲ್ 10ಕ್ಕೆ 5, ಬ್ರಾಡ್ ಇವಾನ್ಸ್ 35ಕ್ಕೆ 2). ಜಿಂಬಾಬ್ವೆ 39 ಓವರ್‌ಗಳಲ್ಲಿ 7 ವಿಕೆಟ್‌ಗೆ 142 (ಟ್ಯಾಡಿವನಾಶೆ ಮರುಮನಿ 35, ರೆಗಿಸ್ ಚಕಾಬ್ವಾ ಔಟಾಗದೆ 37, ಜೋಶ್ ಹ್ಯಾಜಲ್‌ವುಡ್ 30ಕ್ಕೆ 3)

ಗಾಯದಿಂದ ಬಳಲುತ್ತಿರುವ ಆಲ್‌ರೌಂಡರ್

ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಪಾಕಿಸ್ತಾನ ಎದುರಿನ ಪಂದ್ಯದಲ್ಲಿ ಭಾರತದ ಜಯಕ್ಕೆ ಜಡೇಜ ಉಪಯುಕ್ತ ಕಾಣಿಕೆ ನೀಡಿದ್ದರು.

ವಿಶ್ವಕಪ್ ಟೂರ್ನಿಯಿಂದಲೂ ರವೀಂದ್ರ ಜಡೇಜ ಔಟ್

ನವದೆಹಲಿ (ಪಿಟಿಐ): ಆಲ್‌ರೌಂಡರ್ ರವೀಂದ್ರ ಜಡೇಜ ಮುಂಬರುವ ಟಿ20 ವಿಶ್ವಕಪ್ ಟೂರ್ನಿಯಿಂದಲೂ ಹೊರಬಿದ್ದಿದ್ದಾರೆ. ಅವರ ಮೊಣಕಾಲಿನ ಗಾಯವು ಗಂಭೀರವಾಗಿದ್ದು ಶಸ್ತ್ರಚಿಕಿತ್ಸೆ ಪಡೆಯಲಿದ್ದಾರೆ.

ಇದರಿಂದಾಗಿ ಅವರು ಅನಿರ್ದಿಷ್ಟಾವಧಿಯವರೆಗೆ ಕ್ರಿಕೆಟ್‌ನಿಂದ ದೂರ ಉಳಿಯಬೇಕಾಗಿದೆ. 33 ವರ್ಷದ ಜಡೇಜ ಅಲಭ್ಯರಾಗಿರುವುದು ರೋಹಿತ್ ಶರ್ಮಾ ಬಳಗಕ್ಕೆ ದೊಡ್ಡ ಹಿನ್ನಡೆಯಾಗಿದೆ.

ದುಬೈನಲ್ಲಿ ನಡೆಯುತ್ತಿರುವ ಏಷ್ಯಾಕಪ್ ಟೂರ್ನಿಯಲ್ಲಿ ಹಾಂಗ್‌ಕಾಂಗ್ ವಿರುದ್ಧದ ಪಂದ್ಯದಲ್ಲಿ ಜಡೇಜ ಆಡಿದ್ದರು. ಆದರೆ, ಅವರು ಮೊಣಕಾಲು ನೋವಿನಿಂದಾಗಿ ಏಷ್ಯಾ ಕಪ್ ಟೂರ್ನಿಯ ಉಳಿದ ಪಂದ್ಯಗಳಲ್ಲಿ ಆಡುವುದಿಲ್ಲವೆಂದು ಶುಕ್ರವಾರ ಬಿಸಿಸಿಐ ತಿಳಿಸಿತ್ತು.

‘ಜಡೇಜ ಬಲಮೊಣಕಾಲಿನ ಗಾಯವು ತೀವ್ರತರವಾಗಿದೆ. ಅದಕ್ಕಾಗಿ ಅವರು ಉನ್ನತವಾದ ಶಸ್ತ್ರಚಿಕಿತ್ಸೆ ಪಡೆಯುವುದು ಅನಿವಾರ್ಯವಾಗಿದೆ. ಇದರಿಂದಾಗಿ ಅವರಿಗೆ ಅನಿರ್ದಿಷ್ಟಾವಧಿಯವರೆಗೆ ವಿಶ್ರಾಂತಿ ಹಾಗೂ ಆರೈಕೆ ಅಗತ್ಯವಿದೆ. ಇಂತಿಷ್ಟೇ ಅವಧಿಯಲ್ಲಿ ಅವರು ಚೇತರಿಸಿಕೊಳ್ಳುವರು ಎಂದು ಹೇಳುವುದು ಕಷ್ಟ’ ಎಂದು ಬಿಸಿಸಿಐ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮೆಂಡಿಸ್, ಪಥುಮ್ ಮಿಂಚು: ಗುರ್ಬಾಜ್ ಆಟ ವ್ಯರ್ಥ

ಕ್ರಿಕೆಟ್: ಶ್ರೀಲಂಕಾ ಜಯಭೇರಿ

ಶಾರ್ಜಾ (ಪಿಟಿಐ): ಬ್ಯಾಟರ್‌ಗಳ ಸಂಘಟಿತ ಆಟದ ಬಲದಿಂದ ಶ್ರೀಲಂಕಾ ತಂಡವು ಏಷ್ಯಾ ಕಪ್ ಟಿ20 ಕ್ರಿಕೆಟ್ ಚಾಂಪಿಯನ್‌ಷಿಪ್‌ನ ಸೂಪರ್ ಫೋರ್ ಪಂದ್ಯದಲ್ಲಿ ಜಯ ಗಳಿಸಿತು.

ಶಾರ್ಜಾ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ನಾಲ್ಕು ವಿಕೆಟ್‌ಗಳಿಂದ ಅಫ್ಗಾನಿಸ್ತಾನ ತಂಡಕ್ಕೆ ಸೋಲುಣಿಸಿತು. ಟಾಸ್ ಗೆದ್ದ ಲಂಕಾ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ರೆಹಮಾನುಲ್ಲಾ ಗುರ್ಬಾಜ್ (84; 45ಎಸೆತ) ಅಮೋಘ ಬ್ಯಾಟಿಂಗ್ ನೆರವಿನಿಂದ ಅಫ್ಗಾನಿಸ್ತಾನ 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 175 ರನ್‌ಗಳನ್ನು ಗಳಿಸಿತು. ಶ್ರೀಲಂಕಾ ಈ ಗುರಿಯನ್ನು 19.1 ಓವರ್‌ಗಳಲ್ಲಿ ಆರು ವಿಕೆಟ್ ಕಳೆದುಕೊಂಡು ತಲುಪಿತು.

ಕುಶಾಲ್ ಮೆಂಡಿಸ್– ಪಿಟಿಐ ಚಿತ್ರ

ಲಂಕಾದ ಕುಶಾಲ್ ಮೆಂಡಿಸ್ (36), ಪಥುಮ್ ನಿಸ್ಸಂಕಾ (35) ಮೊದಲ ವಿಕೆಟ್ ಜೊತೆಯಾಟದಲ್ಲಿ 62 ರನ್ ಸೇರಿಸಿ ಭದ್ರಬುನಾದಿ ಹಾಕಿಕೊಟ್ಟರು. ಬಳಿಕ ಧನುಷ್ಕ ಗುಣತಿಲಕ (33) ಮತ್ತು ಭಾನುಕ ರಾಜಪಕ್ಷ (31) ಗೆಲುವಿಗೆ ಕೊಡುಗೆ ನೀಡಿದರು.

ಅಫ್ಗನ್ ತಂಡಕ್ಕಾಗಿ ಮುಜೀಬುರ್ ರೆಹಮಾನ್ (30ಕ್ಕೆ 2) ಮತ್ತು ನವೀನ್ ಉಲ್ ಹಕ್ (40ಕ್ಕೆ 2) ತಲಾ ಎರಡು ವಿಕೆಟ್ ಗಳಿಸಿದರು.

ಅಫ್ಗಾನಿಸ್ತಾನ ಬ್ಯಾಟಿಂಗ್‌ನಲ್ಲಿ ಇಬ್ರಾಹಿಂ ಜದ್ರಾನ್ (40) ಮಿಂಚಿದರು. ನಜೀಬುಲ್ಲಾ ಜದ್ರಾನ್ 17 ರನ್ ಗಳಿಸಿ ಅಲ್ಪಕಾಣಿಕೆ ನೀಡಿದ್ದರು.

ಸಂಕ್ಷಿಪ್ತ ಸ್ಕೋರು: ಅಫ್ಗಾನಿಸ್ತಾನ:20 ಓವರ್‌ಗಳಲ್ಲಿ 6ಕ್ಕೆ 175 (ರೆಹಮಾನುಲ್ಲಾ ಗುರ್ಬಾಜ್ 84, ಇಬ್ರಾಹಿಂ ಜದ್ರಾನ್ 40, ನಜೀಬುಲ್ಲಾ ಜದ್ರಾನ್ 17, ದಿಲ್ಶಾನ್ ಮಧುಶಂಕಾ 37ಕ್ಕೆ2). ಶ್ರೀಲಂಕಾ: 19.1 ಓವರ್‌ಗಳಲ್ಲಿ 6ಕ್ಕೆ 179 (ಪಥುಮ್ ನಿಸ್ಸಂಕಾ 35, ಕುಶಾಲ್ ಮೆಂಡಿಸ್ 36, ಧನುಷ್ಕಾ ಗುಣತಿಲಕ 33, ಭಾನುಕ ರಾಜಪಕ್ಷ 31, ವನಿಂದು ಹಸರಂಗ ಔಟಾಗದೆ 16; ಮುಜೀಬುರ್ ರೆಹಮಾನ್ 30ಕ್ಕೆ 2, ನವೀನ್ ಉಲ್ ಹಕ್ 40ಕ್ಕೆ 2, ರಶೀದ್ ಖಾನ್ 39ಕ್ಕೆ 1, ಮೊಹಮ್ಮದ್ ನಬಿ 34ಕ್ಕೆ 1). ಫಲಿತಾಂಶ: ಶ್ರೀಲಂಕಾಕ್ಕೆ 4 ವಿಕೆಟ್‌ಗಳ ಜಯ

ಸನ್‌ರೈಸರ್ಸ್‌ಗೆ ಲಾರಾ ಕೋಚ್

ನವದಹಲಿ (ಪಿಟಿಐ): ವೆಸ್ಟ್ ಇಂಡೀಸ್ ಕ್ರಿಕೆಟ್ ತಂಡದ ಬ್ಯಾಟಿಂಗ್ ದಿಗ್ಗಜ ಬ್ರಯನ್ ಲಾರಾ ಅವರು ಸನ್‌ರೈಸರ್ಸ್ ಹೈದರಾಬಾದ್ (ಎಸ್‌ಆರ್‌ಎಚ್) ತಂಡದ ಮುಖ್ಯ ಕೋಚ್ ಆಗಿ ನೇಮಕವಾಗಿದ್ದಾರೆ. ಇಂಡಿಯನ್ ಪ್ರೀಮಿಯರ್ ಲೀಗ್ ಫ್ರಾಂಚೈಸ್ ಶನಿವಾರ ಈ ವಿಷಯ ತಿಳಿಸಿದೆ.


ಬ್ರಯನ್ ಲಾರಾ

ಆಸ್ಟ್ರೇಲಿಯಾ ಕ್ರಿಕೆಟಿಗ ಟಾಮ್ ಮೂಡಿ ಅವರು ಹೈದರಾಬಾದ್‌ನ ಮುಖ್ಯ ಕೋಚ್ ಆಗಿ 2013ರಿಂದಲೂ ಕಾರ್ಯನಿರ್ವಹಿಸಿದ್ದರು. 53 ವರ್ಷದ ಲಾರಾ ಇದೇ ಮೊದಲ ಬಾರಿಗೆ ಟಿ20 ತಂಡವೊಂದಕ್ಕೆ ಮುಖ್ಯ ಕೋಚ್ ಆಗಿ ನೇಮಕವಾಗಿದ್ದಾರೆ. ತಂಡದ ತಾಂತ್ರಿಕ ಸಲಹೆಗಾರ ಮತ್ತು ಬ್ಯಾಟಿಂಗ್ ಕೋಚ್ ಆಗಿ ಕಳೆದ ವರ್ಷ ಡಿಸೆಂಬರ್‌ನಲ್ಲಿ ಅವರು ಹೈದರಾಬಾದ್ ಬಳಗ ಸೇರಿಕೊಂಡಿದ್ದರು.

ಪಂಜಾಬ್ ಕಿಂಗ್ಸ್‌ಗೆ ಬೇಲಿಸ್?: ಆಸ್ಟ್ರೇಲಿಯಾದ ಟ್ರೆವರ್ ಬೇಲಿಸ್ ಅವರು ಪಂಜಾಬ್ ಕಿಂಗ್ಸ್ ತಂಡದೊಂದಿಗೆ ತರಬೇತುದಾರರಾಗುವ ಸಾಧ್ಯತೆಯಿದೆ. 59 ವರ್ಷದ ಬೇಲಿಸ್ ಇತ್ತೀಚೆಗೆ ಹೈದರಾಬಾದ್ ತಂಡಕ್ಕೆ ತರಬೇತಿ ನೀಡಿದ್ದರು. 2019ರಲ್ಲಿ ಬೇಲಿಸ್ ಮಾರ್ಗದರ್ಶನದಲ್ಲಿ ಇಂಗ್ಲೆಂಡ್ ಏಕದಿನ ವಿಶ್ವಕಪ್ ಚಾಂಪಿಯನ್ ಆಗಿತ್ತು.

‘ತವರು’ ಅಂಗಳದಲ್ಲಿ ರಜತ್ ಸಂಭ್ರಮ

ಭಾರತ ಎ ತಂಡಕ್ಕೆ ಇನಿಂಗ್ಸ್ ಮುನ್ನಡೆ; ಅಭಿಮನ್ಯು ಈಶ್ವರನ್ ಶತಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಆಟಗಾರ ರಜತ್ ಪಾಟೀದಾರ್‌ಗೆ ಚಿನ್ನಸ್ವಾಮಿ ಕ್ರೀಡಾಂಗಣವೇ ತವರು. ಶನಿವಾರ ಇದೇ ಅಂಗಳದಲ್ಲಿ ಅವರು ರನ್‌ಗಳ ಹೊಳೆ ಹರಿಸಿದರು.

ರಜತ್ (ಬ್ಯಾಟಿಂಗ್ 170; 241ಎ, 4X14, 6X4) ಹಾಗೂ ಅಭಿಮನ್ಯು ಈಶ್ವರನ್ (132; 194ಎ, 4X13, 6X1) ಅವರ ಸುಂದರ ಶತಕಗಳ ಬಲದಿಂದ ಭಾರತ ಎ ತಂಡವು ನ್ಯೂಜಿಲೆಂಡ್ ಎ ವಿರುದ್ಧದ ‘ಟೆಸ್ಟ್’ ಪಂದ್ಯದಲ್ಲಿ ಮೊದಲ ಇನಿಂಗ್ಸ್‌ನಲ್ಲಿ 92 ರನ್‌ಗಳ ಮುನ್ನಡೆ ಸಾಧಿಸಿತು.

ಮೂರನೇ ದಿನದಾಟದ ಅಂತ್ಯಕ್ಕೆ ಆತಿಥೇಯ ತಂಡವು 124 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 492 ರನ್ ಗಳಿಸಿತು. ರಜತ್ ಹಾಗೂ ಶತಕದತ್ತ ದಾಪುಗಾಲಿಟ್ಟಿರುವ ತಿಲಕ್ ವರ್ಮಾ (ಬ್ಯಾಟಿಂಗ್ 82) ಕ್ರೀಸ್‌ನಲ್ಲಿದ್ದಾರೆ. ಪಂದ್ಯದಲ್ಲಿ ಇನ್ನೊಂದು ದಿನ ಬಾಕಿ ಇದೆ.

ರಜತ್ ಪಾಟೀದಾರ್ ಬ್ಯಾಟಿಂಗ್– ಪ್ರಜಾವಾಣಿ ಚಿತ್ರ/ ಪುಷ್ಕರ್ ವಿ.

ಮೊದಲು ಬ್ಯಾಟಿಂಗ್ ಮಾಡಿದ್ದ ಪ್ರವಾಸಿ ಬಳಗವು ಪ್ರಥಮ ಇನಿಂಗ್ಸ್‌ನಲ್ಲಿ 400 ರನ್ ಗಳಿಸಿದೆ. ಅದಕ್ಕುತ್ತರವಾಗಿ ಶುಕ್ರವಾರದ ದಿನದಾಟದ ಮುಕ್ತಾಯಕ್ಕೆ ಆತಿಥೇಯ ತಂಡವು 37 ಓವರ್‌ಗಳಲ್ಲಿ 1 ವಿಕೆಟ್‌ಗೆ 156 ರನ್ ಗಳಿಸಿತ್ತು. 87 ರನ್ ಗಳಿಸಿದ್ದ ಅಭಿಮನ್ಯು ಈಶ್ವರನ್ ಹಾಗೂ 20 ರನ್ ಗಳಿಸಿದ್ದ ಋತುರಾಜ್ ಕ್ರೀಸ್‌ನಲ್ಲಿದ್ದರು. ಶನಿವಾರದ ಎರಡನೇ ಓವರ್‌ನಲ್ಲಿಯೇ ಋತುರಾಜ್ ವಿಕೆಟ್ ಗಳಿಸಿದ ರಚಿನ್ ರವೀಂದ್ರ ಸಂಭ್ರಮಿಸಿದರು. ಆದರೆ ಈ ಸಂತಸ ಬಹಳ ಹೊತ್ತು ಉಳಿಯಲಿಲ್ಲ.

ಕ್ರೀಸ್‌ಗೆ ಕಾಲಿಟ್ಟ ರಜತ್ ಅವರು ಅಭಿಮನ್ಯು ಜೊತೆಗೂಡಿ ಬೌಲರ್‌ಗಳ ದಾಳಿಯನ್ನು ಹಿಮ್ಮೆಟ್ಟಿಸಿದರು. ಮೂರನೇ ವಿಕೆಟ್ ಜೊತೆಯಾಟದಲ್ಲಿ 104 ರನ್‌ಗಳನ್ನು ಕೇವಲ 26 ಓವರ್‌ಗಳಲ್ಲಿ ಸೇರಿಸಿದರು. ಊಟದ ವಿರಾಮಕ್ಕೂ ಮುನ್ನವೇ ತಮ್ಮ ಶತಕ ಪೂರೈಸಿದ ಅಭಿಮನ್ಯು ಸಂಭ್ರಮಿಸಿದರು.

ಅಭಿಮನ್ಯು ಈಶ್ವರನ್

ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಇದು ಅವರ 16ನೇ ಶತಕ. ಎಡಗೈ ಸ್ಪಿನ್ನರ್ ಮಿಚೆಲ್ ರಿಪನ್ ಬೌಲಿಂಗ್‌ನಲ್ಲಿ ಔಟಾದರು.

ಆದರೆ ರಜತ್ ತಮ್ಮ ವಿಶ್ವಾಸಭರಿತ ಹಾಗೂ ಚುರುಕಿನ ಆಟವನ್ನು ನಿಲ್ಲಿಸಲಿಲ್ಲ. ಅವರೊಂದಿಗೆ ಸೇರಿದ ಸರ್ಫರಾಜ್ ಖಾನ್ ಕೂಡ ಬೌಲರ್‌ಗಳನ್ನು ದಂಡಿಸಿದರು. ಐದು ಬೌಂಡರಿಗಳನ್ನು ಹೊಡೆದ ಅವರು 67ಎಸೆತಗಳಲ್ಲಿ 36 ರನ್‌ಗಳನ್ನು ಗಳಿಸಿದರು.

ಸರ್ಫರಾಜ್ ಔಟಾದ ಮೇಲೆ ರಜತ್ ಜೊತೆಗೂಡಿದ ತಿಲಕ್ ವರ್ಮಾ ಕೂಡ ಬೀಸಾಟವಾಡಿದರು. ಈ ಇಬ್ಬರೂ ಐಪಿಎಲ್ ತಾರೆಗಳು ಮುರಿಯದ ಐದನೇ ವಿಕೆಟ್ ಜೊತೆಯಾಟದಲ್ಲಿ 167 ರನ್ ಪೇರಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ನ್ಯೂಜಿಲೆಂಡ್ ಎ: 400, ಭಾರತ ಎ: 124 ಓವರ್‌ಗಳಲ್ಲಿ 4ಕ್ಕೆ492 (ಅಭಿಮನ್ಯು ಈಶ್ವರನ್ 132, ಋತುರಾಜ್ ಗಾಯಕವಾಡ್ 21, ರಜತ್ ಪಾಟೀದಾರ್ ಬ್ಯಾಟಿಂಗ್ 170, ಸರ್ಫರಾಜ್ ಖಾನ್ 36, ತಿಲಕ್ ವರ್ಮಾ ಬ್ಯಾಟಿಂಗ್ 82, ರಚಿನ್ ರವೀಂದ್ರ 96ಕ್ಕೆ2, ಜೇಕಬ್ ಡಫಿ 73ಕ್ಕೆ1, ಮಿಚೆಲ್ ರಿಪನ್ 101ಕ್ಕೆ1)

ರಾಜಕೀಯ ಹಸ್ತಕ್ಷೇಪ ಆಘಾತಕಾರಿ: ಭುಟಿಯಾ

ನವದೆಹಲಿ (ಪಿಟಿಐ): ಎಐಎಫ್‌ಎಫ್ ಚುನಾವಣೆಯಲ್ಲಿ ‘ಉನ್ನತಮಟ್ಟದ ರಾಜಕೀಯ ಹಸ್ತಕ್ಷೇಪ’ ನಡೆದಿದ್ದು ಆಘಾತಕಾರಿ ಎಂದು ಭಾರತ ಫುಟ್‌ಬಾಲ್ ತಂಡದ ಮಾಜಿ ನಾಯಕ ಬೈಚುಂಗ್ ಭುಟಿಯಾ ಹೇಳಿದ್ದಾರೆ.

ಶುಕ್ರವಾರ ನಡೆದ ಎಐಎಫ್‌ಎಫ್ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಭುಟಿಯಾ ಅವರು, ಬಿಜೆಪಿ ನಾಯಕ ಕಲ್ಯಾಣ್ ಚೌಬೆ ಎದುರು ಸೋತಿದ್ದರು.

‘ಎದುರಾಳಿಗೆ (ಕಲ್ಯಾಣ್ ಚೌಬೆ) ಗೆಲುವಿನ ವಿಶ್ವಾಸವಿದ್ದಿದ್ದರೆ, ಕೇಂದ್ರದ ಪ್ರಭಾವಿ ಸಚಿವರೊಬ್ಬರು, ಮತದಾರರು ತಂಗಿದ್ದ ಹೋಟೆಲ್‌ಗೆ ಯಾಕೆ ಭೇಟಿಕೊಡಬೇಕಿತ್ತು’ ಎಂದು ಭುಟಿಯಾ ಪ್ರಶ್ನಿಸಿದ್ದಾರೆ. ಆದರೆ ಕೇಂದ್ರ ಸಚಿವರ ಹೆಸರನ್ನು ಅವರು ಉಲ್ಲೇಖಿಸಿಲ್ಲ.

ಶಾಜಿ ಪ್ರಧಾನ ಕಾರ್ಯದರ್ಶಿ: ದೆಹಲಿ ಫುಟ್‌ಬಾಲ್ ಸಂಸ್ಥೆಯ(ಫುಟ್‌ಬಾಲ್ ಡೆಲ್ಲಿ) ಅಧ್ಯಕ್ಷ ಶಾಜಿ ಪ್ರಭಾಕರನ್ ಅವರು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ಪ್ರಧಾನ ಕಾರ್ಯದರ್ಶಿಯಾಗಿ ನೇಮಕವಾಗಿದ್ದಾರೆ.

ಶೂಟಿಂಗ್: ಸನಿಕಾ, ವಿಶ್ವಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಮಂಗಳೂರು: ಕರ್ನಾಟಕದ ಸನಿಕಾ ಸುಲ್ತಾನ ಮತ್ತು ತಮಿಳುನಾಡಿನ ವಿಶ್ವ ಪಿ.ಆರ್ ಅವರು ಮಂಗಳೂರು ರೈಫಲ್ ಕ್ಲಬ್ ಆಯೋಜಿಸಿರುವ ಮಂಗಳೂರು ಓಪನ್ ಶೂಟಿಂಗ್ ಚಾಂಪಿಯನ್‌ಷಿಪ್‌ನ ನ್ಯಾಷನಲ್ ರೆಕಾರ್ಡ್ ವಿಭಾಗದ 10 ಮೀಟರ್ಸ್ ಏರ್ ರೈಫಲ್‌ನಲ್ಲಿ ಕ್ರಮವಾಗಿ ಮಹಿಳೆಯರ ಮತ್ತು ಪುರುಷರ ವಿಭಾಗದ ಪ್ರಶಸ್ತಿ ಜಯಿಸಿದರು.

ಕದ್ರಿಯಲ್ಲಿರುವ ಕ್ಲಬ್‌ನ ಅಂಗಣದಲ್ಲಿ ಶನಿವಾರ ರಾತ್ರಿ ನಡೆದ ಫೈನಲ್‌ನಲ್ಲಿ ಸನಿಕಾ ಅವರು ಸ್ಥಳೀಯ ಶೂಟರ್ ಲೆನೊ ಕ್ಯಾರೊಲಿನ್ ಅವರ ಸವಾಲು ಮೀರಿದರು. ಮಹಾರಾಷ್ಟ್ರದ ಜ್ಯೋತಿ ಅನಾ ಬಾಗೇಕೇರಿ ಮೂರನೇ ಸ್ಥಾನ ಗಳಿಸಿದರು. ಪುರುಷರ ವಿಭಾಗದಲ್ಲಿ ಕರ್ನಾಟಕದ ಪ್ರೀತಮ್ ಎರಡನೇ ಸ್ಥಾನ ಗಳಿಸಿದರೆ ಮೂರನೇ ಸ್ಥಾನ ಸುಶಾಂತ್ ನಿಂಬಣ್ಣವರ್ ಅವರ ಪಾಲಾಯಿತು.

ಸನಿಕಾ ಸುಲ್ತಾನ

ಇತರ ಫಲಿತಾಂಶಗಳು: ಪಿಸ್ತೂಲು ನ್ಯಾಷನಲ್ ರೆಕಾರ್ಡ್ ಮಾಸ್ಟರ್ಸ್ ವಿಭಾಗ: ಚಿಕ್ಕರಂಗಸ್ವಾಮಿ–1, ಶಂಕರ್ ಶೆಟ್ಟಿ–2, ಪ್ರಶಾಂತ್ ಪಾವಸ್ಕರ್–3 (ಕರ್ನಾಟಕ), 10 ಮೀ ಏರ್ ರೈಫಲ್ ನ್ಯಾಷನಲ್ ರೆಕಾರ್ಡ್ ಮಾಸ್ಟರ್ಸ್: ಅನ್ಸಲ್ ದಲಾಲ್–1, ಜಗದೀಶ್ ಕುಮಾರ್ ನಾಯಕ್–2 (ಇಬ್ಬರೂ ಕರ್ನಾಟಕ), ಪಿಸ್ತೂಲು, ಮಹಿಳೆಯರ ಸಬ್ ಯೂತ್: ಗಾಂಭೀರ್ಯ–1, ರಿಷಿಕಾ–2 (ಇಬ್ಬರೂ ಕರ್ನಾಟಕ), ಸಿಯೋನ (ತಮಿಳುನಾಡು)–3, ಯೂತ್: ಗಾಂಭೀರ್ಯ–1, ರಿಷಿಕಾ–2, ನಿಯಾ ಮೋಹನ್ (ಮೂವರೂ ಕರ್ನಾಟಕ), ಜೂನಿಯರ್: ಗಾಂಭೀರ್ಯ–1, ರಿಷಿಕಾ–2, ನಿಯಾ ಮೋಹನ್–3; ಪಿಸ್ತೂಲು, ಪುರುಷರ ಯೂತ್ ನ್ಯಾಷನಲ್ ರೆಕಾರ್ಡ್ ವಿಭಾಗ: ಧೀರಜ್–1, ಪ್ರಣವ್ ಮೋಹನ್–2, ಕೆನಜ್–3 (ಮೂವರೂ ಕರ್ನಾಟಕ); ಪಿಸ್ತೂಲು, ಪುರುಷರ ಸಬ್ ಜೂನಿಯರ್ ನ್ಯಾಷನಲ್ ರೆಕಾರ್ಡ್ ವಿಭಾಗ: ಪ್ರಣವ್ ಮೋಹನ್–1, ಕೆನಜ್–2, ಅಹಮ್ಮದ್ ನೂಹ್ (ಕೇರಳ)–3.